ಜೀವನದಲ್ಲಿ ಮತ್ತಷ್ಟು ನಿರಾಸೆಗೊಂಡ ಕವಿ ಕುಡಿತ ಮತ್ತು ವಿಷಯಾಸಕ್ತಿಗಳಲ್ಲಿ ಆಳವಾಗಿ ಮುಳುಗಿದ. ಮಗ ತನ್ನ ನಿರೀಕ್ಷೆಯಂತೆ ಮುಂದೆ ಬರಲಿಲ್ಲವೆಂದು ಮೊದಲೇ ಮುನಿದಿದ್ದ ತಂದೆ ಮಗನ ಇತರ ಹವ್ಯಾಸಗಳ ಬಗ್ಗೆ ಕೇಳಿ ತುಂಬ ವ್ಯಗ್ರನಾಗಿ, ತನ್ನ ಆಸ್ತಿಯಲ್ಲಿ ಯಾವ ಪಾಲನ್ನು ಕೊಡದೆ ಮನೆಯಿಂದ ಹೊರದೂಡಿದ. ತಂದೆಯ ಪ್ರೀತಿಯನ್ನು ಸಂಪಾದಿಸಿಕೊಳ್ಳಬೇಕೆಂದು ಗುಂಥರ್ ತಂದೆಯ ಮನಸ್ಸನ್ನು ಕರಗಿಸುವ ನಾನಾ ಪ್ರಯತ್ನಗಳನ್ನು ಮಾಡಿ ವಿಫಲನಾದ. ಕ್ಷಮೆ ಬೇಡುವ ಅನೇಕ ಕವನಗಳನ್ನು ರಚಿಸಿ ತಂದೆಗೆ ಕಳಿಸಿದ. ಅವು ಒಂದೊಂದು ಎಂಥವರ ಮನಸ್ಸನ್ನಾದರೂ ಕರಗಿಸುವಷ್ಟು ಕರುಣಾಜನಕವಾಗಿದೆ. ಆದರೆ ತಂದೆಯ ಮನಸ್ಸು ಮಾತ್ರ ಕರಗಲಿಲ್ಲ. 1723ರಲ್ಲಿ ತನ್ನ 28ನೆಯ ಹುಟ್ಟುಹಬ್ಬವನ್ನು ಕಾಣುವ ಮೊದಲೆ ಕವಿ ಕಣ್ಮುಚ್ಚಿದ. ಹೀಗಾಗಿ ಈತನ ಅಪೂರ್ವಕಾಂತಿಯ ಕಾವ್ಯಕುಸುಮ ಪೂರ್ಣವಾಗಿ ಅರಳುವ ಮುನ್ನವೇ ಬಾಡಿಹೋಯಿತು. ಕವಿಯ ಜೀವನ ಒಂದು ದಾರುಣಕತೆಯಾಯಿತು.



18ನೆಯ ಶತಮಾನದ ಜರ್ಮನ್ ಕವಿಗಳು ತಮ್ಮ ಇಂದಿನ ತಲೆಮಾರಿನವರ ಶಬ್ದಾಡಂಬರದ ಗೀಳಿಗೆ ಒಳಗಾಗದಂಥ ಸದಭಿರುಚಿಯನ್ನು ಬೆಳೆಸಿಕೊಂಡಿದ್ದರು. ಅವರಲ್ಲೆಲ್ಲ ಅಚ್ಚಕವಿ ಎಂದು ಗಣನೀಯನಾದವ ಗುಂಥರ್. ಪಾಲ್ ಫ್ಲೆಮಿಂಗ್ ಮತ್ತು ಆಂಡ್ರೀಸ್ ಗ್ರೈಫಿಯಸ್ ಈ ಇಬ್ಬರು ಕವಿಗಳನ್ನು ಬಿಟ್ಟರೆ ಮಧ್ಯಯುಗಕ್ಕೂ ಗಯಟೆಯ ಯುಗಕ್ಕೂ ನಡುವಿನ ಕಾಲದ ಅತ್ಯುತ್ತಮ ಕವಿ ಈತನೇ ಎಂದು ವಿಮರ್ಶಕರ ಅಭಿಪ್ರಾಯ. ತನ್ನ ಕಾಲದ ಎಲ್ಲ ತರುಣ ಕವಿಗಳಂತೆ ಈತನಿಗೂ ವಿಮರ್ಶಕ ಬೋಯ್ಲೊ ಬಗ್ಗೆ ಅಪಾರ ಗೌರವವಿತ್ತು. ಫೋಕ್ಸ್ ಲೀಡ್ ಕವಿಯ ಪ್ರಭಾವದಿಂದಾಗಿ ಸ್ವಲ್ಪಮಟ್ಟಿನ ಸರಳತೆ ಈತನ ಭಾವಗೀತೆಗಳಿಗೂ ಬಂತು. ಇತರ ಪ್ರಭಾವಗಳಿಗಿಂತ ತನ್ನ ಕಟು ಅನುಭವಗಳೇ ಹೆಚ್ಚಾಗಿದ್ದುದರಿಂದ ಈತನ ಜೀವನವೇ ಕಾವ್ಯದ ಶೈಲಿಯನ್ನು ರೂಪಿಸಿತು. ಹೃದಯಾಂತರಾಳದಿಂದ ಸಹಜವಾಗಿ ಹೊಮ್ಮಿದ ಈತನ ಭಾವಗೀತೆಗಳನ್ನು ಗಹನಕತೆಯಲ್ಲಾಗಲೀ ಸೊಬಗಿನಲ್ಲಾಗಲೀ ಮೀರಿಸುವ ಗುಣ ಫ್ಲೆಮಿಂಗನ ಕವನಗಳಲ್ಲೂ ಇಲ್ಲ. ಡಾಷ್‍ನ ಕವಿತೆಗಳಲ್ಲೂ ಇಲ್ಲ.

ಬಹು ಹಿಂದೆ ಜರ್ಮನಿಯಲ್ಲಿ ಶ್ರೇಷ್ಠವಾದ ಪ್ರೇಮಗೀತೆಗಳನ್ನು ಬರೆದು ಹೆಸರಾಗಿದ್ದ ಮಿನ್ನೆಸಾಂಗನ ಅನಂತರ ಜರ್ಮನಿಯ ವಿಶಿಷ್ಟವಾದ ಪ್ರೇಮಗೀತೆಗಳ ಎಳೆಯನ್ನು ಮತ್ತೆ ಎತ್ತಿಕೊಂಡ ಶ್ರೇಯಸ್ಸು ಗುಂಥರನಿಗೆ ಸಲ್ಲುತ್ತದೆ.

ಸುಲಲಿತವಾದ ಭಾವಧಾರೆ, ಸಾಂಪ್ರದಾಯಿಕತೆಯ ಕಟ್ಟನ್ನು ಕಿತ್ತು ಹೊರಬಂದ ಹೊಸತನ, ನಿಶಿತಮತಿಯಿಂದ ಮಿಂಚುವ ಪ್ರತಿಭೆ, ಚತುರತೆ ಹಾಗೂ ಹಾಸ್ಯ ಮನೋಧರ್ಮ ಈತನ ಕವನಗಳ ಕೆಲವು ಲಕ್ಷಣಗಳು. ಕೆಲವು ಕಡೆ ಮಾತ್ರ ಹಾಸ್ಯ ತೀರ ಕೆಳಮಟ್ಟಕ್ಕೂ ಇಳಿದು ಹೀನ ಅಭಿರುಚಿಯನ್ನು ತೋರಿಸುವುದುಂಟು.

ಈತನ ಮರಣಾನಂತರ 1724ರಲ್ಲಿ ಗೆದಿಷ್ಟೆ ಎಂಬ ಕವನ ಸಂಕಲನ ಪ್ರಕಟವಾಯಿತು. ಈತನ ಎಲ್ಲ ಕವನಗಳನ್ನೂ ಒಟ್ಟುಗೂಡಿಸಿ ನಾಲ್ಕು ಸಂಪುಟಗಳಲ್ಲಿ ಪ್ರಕಟಿಸಲಾಯಿತು. ಲಿಯೊ ನೊರೆನ್ ಲಿಡರ್ ಎಂಬಂಥ ಕವನಗಳಲ್ಲಿ ಕವಿ ತನ್ನ ಅಂತರಂಗದ ವೇದನೆಯನ್ನು ತೋಡಿಕೊಂಡಿದ್ದಾನೆ. ತನ್ನ ತಂದೆಗೆ ಬರೆದ ಕ್ಷಮಾಪರಾಧದ ಕವನಗಳಲ್ಲಿ ಈತನ ನಿಜವಾದ ಕಾವ್ಯಸಿದ್ಧಿಯನ್ನು ಕಾಣಬಹುದು. (ಕೆ.ಬಿ.ಟಿ.)

**ಗುಂಪುಗಳು** : ಸಾಮಾನ್ಯ ಆಸಕ್ತಿ, ಉದ್ದೇಶಗಳನ್ನು ಹೊಂದಿದ್ದು ಅವಕ್ಕಾಗಿ ಒಟ್ಟಾಗಿ ಕಾರ್ಯನಿರತವಾಗಬಲ್ಲ ಜನಸಮೂಹಕ್ಕೆ ಸಮಾಜಶಾಸ್ತ್ರದಲ್ಲಿ ಈ ಹೆಸರಿದೆ (ಗ್ರೂಪ್ಸ್). ನಾವು ಹೆಚ್ಚು ಕಡಿಮೆ ನಮ್ಮ ಇಡೀ ಆಯುಷ್ಯವನ್ನು ಗುಂಪುಗಳಲ್ಲಿಯೇ ಕಳೆಯುತ್ತೇವೆ. ಕುಟುಂಬದಲ್ಲಿ ಹುಟ್ಟಿ, ಬಳಗ, ನೆರೆಹೊರೆ, ಆಟದ ಗುಂಪು, ವಿದ್ಯಾಲಯ, ಮಠ, ವೃತ್ತಿ ಗುಂಪುಗಳು, ರಾಜಕೀಯ ಪಕ್ಷ ಮುಂತಾದ ಗುಂಪುಗಳನ್ನು ಸೇರುತ್ತ, ಕಟ್ಟುತ್ತ ಜೀವಿಸುತ್ತೇವೆ. ಈ ಗುಂಪುಗಳು ಅಸಂಖ್ಯ. ರಚನೆ ಮತ್ತು ಕ್ರಿಯೆಗಳಲ್ಲೂ ಇವು ಭಿನ್ನವಾಗಿವೆ. ವ್ಯಕ್ತಿಜೀವನದ ಮೇಲೆ ಇವು ಬೀರುವ ಪ್ರಭಾವದಲ್ಲಿಯೂ ಅಂತರವಿದೆ. ಈ ಬಗೆಗಿನ ಶಾಸ್ತ್ರೀಯ ಅಭ್ಯಾಸವನ್ನು ಸಮಾಜವಿಜ್ಞಾನಿಗಳು ಮಾಡುತ್ತಿದ್ದಾರೆ. ಇಲ್ಲಿ ಸಾಮಾಜಿಕವಾಗಿ ಅವುಗಳ ರಚನೆ ಮತ್ತು ಮನಶ್ಶಾಸ್ತ್ರರೀತ್ಯ ಅವುಗಳ ವರ್ತನೆಗಳ ಬಗ್ಗೆ ವಿವೇಚಿಸಿದೆ.

ಸಾಮಾಜಿಕ ಪ್ರಕಾರಗಳು, ಸಮಷ್ಟಿಗಳು ಮತ್ತು ಸಾಮಾಜಿಕ ಗುಂಪುಗಳು: ಗುಂಪು ಅಥವಾ ಸಮೂಹದ ವ್ಯಾಖ್ಯೆಯ ಬಗ್ಗೆ ಒಮ್ಮತವಿಲ್ಲ. ಒಬ್ಬರಿಗಿಂತ ಹೆಚ್ಚು ಜನರನ್ನು ಇದು ಸೂಚಿಸುತ್ತದೆ – ಎಂಬುದು ಮಾತ್ರ ನಿರ್ವಿವಾದವಾದ ಅಂಶ. ಸಮಾಜವಿಜ್ಞಾನಿ ಸ್ಮಾಲ್ ಹೇಳುವಂತೆ ಗುಂಪು ಎಂಬುದು ಸಮಾಜವಿಜ್ಞಾನಿಗಳು ಬಳಸುವ ಅತಿಸಾಮಾನ್ಯವಾದ ಮತ್ತು ವರ್ಣರಹಿತವಾದ ಶಬ್ದ. ಅನೇಕ ರೀತಿಯ ಮಾನವ ಸಮುಚ್ಚಯಗಳಿಗೆ ಇದನ್ನು ಅನ್ವಯಿಸಲಾಗುತ್ತದೆ. ಹಲವು ಸಂದರ್ಭಗಳಲ್ಲಿ ನಾವು ಕೆಲವು ಸಮಾನ ಗುಣವಿಶೇಷಗಳಿರುವ ಜನರನ್ನು ಗುಂಪುಗಳೆಂದು ಕರೆಯುತ್ತೇವೆ. ಉದಾಹರಣೆಗೆ ಮುದುಕರು, ಕಪ್ಪುವರ್ಣದವರು, ಗ್ರಾಮವಾಸಿಗಳು, ಪದವೀಧರರು, ಆದಾಯತೆರಿಗೆ ಕೊಡುವವರು, ಕ್ರಿಕೆಟ್ ಅಭಿಮಾನಿಗಳು, ವಿವಾಹಿತರು, ಚಪ್ಪಟೆ ಮೂಗಿನವರು ಇತ್ಯಾದಿ. ಇವರೆಲ್ಲ ಬೇರೆ ಬೇರೆ ಪ್ರಕಾರಗಳಿಗೆ ಸೇರಿದವರು. ಎಲ್ಲ ಮುದುಕರೂ ಅಥವಾ ಎಲ್ಲ ವಿವಾಹಿತರೂ ಅಥವಾ ಎಲ್ಲ ಚಪ್ಪಟೆ ಮೂಗಿನವರು ಒಂದೇ ಗುಂಪಿಗೆ ಸೇರಿದ ಸದಸ್ಯರಲ್ಲ. ಸಾಮಾಜಿಕ ಗುಂಪುಗಳಿಗೆ ಅವಶ್ಯವಾದ ಸಾಮಾನ್ಯ ಉದ್ದೇಶ, ಪರಸ್ಪರ ಸಂಬಂಧ, ಮಾನಸಿಕ ಸಂಪರ್ಕಗಳು ಇಲ್ಲದಿರುವುದರಿಂದ ಅವನ್ನು ಗುಂಪುಗಳು ಎನ್ನಲಾಗದು. ಅವು ಕೇವಲ ಸಾಮಾಜಿಕ ಪ್ರಕಾರಗಳು. ಅವು ಎಂದಾದರೊಮ್ಮೆ ಸಾಮಾನ್ಯ ಆಸಕ್ತಿಯನ್ನು ಹೊಂದಿ ಸಂಘಟಿತವಾಗಿ ಸಾಮಾಜಿಕ ಗುಂಪುಗಳಾಗಬಹುದು.

ವ್ಯಕ್ತಿಗಳು ಅನೇಕ ಸಂದರ್ಭಗಳಲ್ಲಿ ಭೌಗೋಳಿಕವಾಗಿ ಒಬ್ಬರಿಗೊಬ್ಬರು ಹತ್ತಿರ ಇರುವುದುಂಟು. ರೈಲು ನಿಲ್ದಾಣದಲ್ಲಿ ನೂರಾರು ಜನ ಒಂದೆಡೆ ಸೇರುತ್ತಾರೆ. ಅಷ್ಟರಿಂದಲೇ ಅದೊಂದು ಸಾಮಾಜಿಕ ಗುಂಪು ಆಗಲಾರದು. ಆದರೆ ಅದೊಂದು ಗುಂಪಾಗಿ ಪರಿವರ್ತನೆಗೊಳ್ಳಲು ಹೆಚ್ಚು ಹೊತ್ತು ಬೇಕಿಲ್ಲ. ಒಬ್ಬಿಬ್ಬರು ಜಗಳವಾಡಿದರೆನ್ನಿ. ಉಳಿದವರು ಹೇಳುತ್ತ, ಕೇಳುತ್ತ, ಕೈಕಾಲು ಬಾಯಿಗಳನ್ನು ಅಲುಗಾಡಿಸುತ್ತ ಕೂಡಿಕೊಳ್ಳುತ್ತಲೇ ಅದೊಂದು ಅಲ್ಪಾಯುವಾದ ಸಾಮಾಜಿಕ ಗುಂಪಾಗುವುದು. ಹಾಗೆಯೇ ಬೀದಿಗಳಲ್ಲಿ, ಮೂಲೆಗಳಲ್ಲಿ ಸಣ್ಣದೊಡ್ಡ ಸಮುದಾಯಗಳಲ್ಲಿ, ಪ್ರದೇಶಗಳಲ್ಲಿ, ರಾಷ್ಟ್ರಗಳಲ್ಲಿ ಇರುವ ಜನರೆಲ್ಲ ಗುಂಪುಗಳಲ್ಲ, ಕೇವಲ ಸಮಷ್ಟಿಗಳು. ಈ ಸಮಷ್ಟಿಗಳಲ್ಲಿ ಅಂತರ್ಗತವಾಗಿ ಕುಟುಂಬಗಳು, ಒಡನಾಡಿ ಗುಂಪುಗಳು, ಕಾರ್ಮಿಕ ಸಂಘಗಳು, ಪ್ರೇಕ್ಷಕ ವೃಂದದವರು, ಸೈನ್ಯ, ರಾಜಕೀಯ ಪಕ್ಷಗಳೇ ಮೊದಲಾದ ಅನೇಕ ಸಾಮಾಜಿಕ ಗುಂಪುಗಳಿರುತ್ತವೆ.

ಹಾಗಾದರೆ ಸಾಮಾಜಿಕ ಗುಂಪುಗಳೆಂಬ ಸಂಕಲನಗಳು ಯಾವುವು? ಪರಸ್ಪರ ಅಂತರಕ್ರಿಯೆಯಲ್ಲಿರುವ ಇಬ್ಬರು ಅಥವಾ ಹೆಚ್ಚು ಜನರ ಸಂಕಲನವೇ ಗುಂಪು ಎನ್ನಬಹುದು. ಸಮಾಜಶಾಸ್ತ್ರಜ್ಞರಾದ ರಾಬರ್ಟ್ ಮೆಕಾಯ್ವರ್ ಹೇಳುವಂತೆ ಪರಸ್ಪರ ಸಾಮಾಜಿಕ ಸಂಬಂಧಗಳಿಂದ ಬಿಗಿಯಲ್ಪಟ್ಟ ವ್ಯಕ್ತಿಗಳ ಸಂಕಲನಕ್ಕೆ ಸಾಮಾಜಿಕ ಗುಂಪು ಎಂಬ ಹೆಸರು ಸಲ್ಲುತ್ತದೆ. ಯುಬಾಂಕನ ಪ್ರಕಾರ ಮಾನಸಿಕ ಸಂಪರ್ಕದ ಮೂಲಕ ಪರಸ್ಪರ ಪ್ರಭಾವ ಬೀರುವ ಇಬ್ಬರು ಅಥವಾ ಹೆಚ್ಚು ಜನರಿದ್ದರೆ ಅದು ಗುಂಪು. ಬೋಗಾರ್ಡಸ್ ಕೊಟ್ಟ ವ್ಯಾಖ್ಯೆ ಹೀಗಿದೆ: ಸಾಮಾನ್ಯ ಉದ್ದೇಶಗಳನ್ನುಳ್ಳ, ಪರಸ್ಪರ ಪ್ರಚೋದಿಸುವ, ಸಮನಿಷ್ಠೆಯನ್ನು ಹೊಂದಿದ, ಒಂದೇ ತೆರನಾದ ಚಟುವಟಿಕೆಗಳಲ್ಲಿ ಪಾಲುಗೊಳ್ಳುತ್ತಿರುವ ಇಬ್ಬರು ಅಥವಾ ಹೆಚ್ಚು ಜನರನ್ನು ಗುಂಪೆನ್ನಬಹುದು; ಒಟ್ಟಿನಲ್ಲಿ, ಸಾಮಾಜಿಕ ಗುಂಪುಗಳಾಗಲು ಇಬ್ಬರು ಅಥವಾ ಹೆಚ್ಚು ವ್ಯಕ್ತಿಗಳು ಪರಸ್ಪರ ಸಾಮಾಜಿಕ ಸಂಬಂಧಗಳನ್ನು ಹೊಂದಿರಬೇಕು. ಭೌತಿಕ ಸಾಮೀಪ್ಯ ಬೇಕಾಗಿಲ್ಲ. ಆದರೆ ಮಾನಸಿಕ ಸಂಪರ್ಕವಿರಬೇಕು. ಕಿಂಚಿತ್ತಾದರೂ ಸದಸ್ಯತ್ವ ಹಾಗೂ ಪ್ರಭೇದದ ಅರಿವು ಹೊಂದಿರಬೇಕು; ಸಮಾನ ಉದ್ದೇಶ ಮತ್ತು ಒಮ್ಮನಸ್ಸು ಇರಬೇಕು. ಈ ಎಲ್ಲ ಲಕ್ಷಣಗಳು ಎಲ್ಲ ಗುಂಪುಗಳಲ್ಲಿ ಒಂದೇ ಸಮನಾಗಿ ಇರುವುದಿಲ್ಲ. ಹಾಗೆಂದೇ ಗುಂಪುಗಳ ಸ್ವರೂಪ, ರಚನೆ ಮತ್ತು ಕಾರ್ಯಗಳಲ್ಲಿ ವೈವಿಧ್ಯ ಕಂಡುಬರುತ್ತದೆ.

**ಗುಂಪಿನ ಹುಟ್ಟು** : ಗುಂಪುಗಳು ಹುಟ್ಟುವುದೇಕೆ ಎಂಬ ಪ್ರಶ್ನೆಯನ್ನು ಚಿಂತಕರು ಇಂದಿಗೂ ಸಮರ್ಪಕವಾಗಿ ಉತ್ತರಿಸಿಲ್ಲ. ಹಿಂದಿನ ಸಮಾಜಶಾಸ್ತ್ರಜ್ಞರು ಗುಂಪುಕಟ್ಟುವುದಕ್ಕೆ ನಮ್ಮಲ್ಲಿರುವ ಯೂಥ ಪ್ರವೃತ್ತಿಯೇ ಮೂಲವೆಂದು ನಂಬಿದ್ದರು. ಆ ಮೂಲಪ್ರವೃತ್ತಿಯನ್ನು ಕಂಡವರಿಲ್ಲ. ತಿಳಿಯದ ಕಾರಣವೊಂದಕ್ಕೆ ನಾಮಕರಣ ಮಾಡಿದಂತಾಯಿತು ಅಷ್ಟೆ. ಕೆಲವರ ಪ್ರಕಾರ ಗುಂಪಿನ ಸೃಷ್ಟಿ ಆಕಸ್ಮಿಕ. ಒಮ್ಮೆ ಅದು ಹುಟ್ಟಿತೋ ಅದರಿಂದ ನಮ್ಮ ಅಸ್ತಿತ್ವಕ್ಕೆ ಲಾಭವಿದೆಯೆಂದು ಗೋಚರಿಸಿ ನಾವು ಸಮೂಹ ಜೀವನವನ್ನು ಮುಂದುವರೆಸಿಕೊಂಡು ಬಂದೆವು. ಇನ್ನು ಕೆಲವರ ಪ್ರಕಾರ ಸಮೂಹ ಜೀವನ ಮಾನವನ ಅನುಭವದಿಂದ ಬಂದುದು. ಅದು ಕಲಿತ ಗುಣ. ಸೊರೋಕಿನ್ ಮತ್ತಿತರ ಲೇಖಕರು ಸಮೂಹರಚನೆಗೆ ಕಾರಣವಾದ ಕೆಲವು ಅಂಶಗಳನ್ನು ಗುರುತಿಸಿದ್ದಾರೆ. ಅವುಗಳಲ್ಲಿ ರಕ್ತಸಂಬಂಧ, ವಿವಾಹ, ಸಮಾನ ಧರ್ಮ ಮತ್ತು ಸಂಸ್ಕಾರಗಳು, ಭಾಷೆ, ಕಟ್ಟಳೆಗಳು, ಭೌಗೋಳಿಕ ಕಾರಣಗಳು,

ಪ್ರಭೇದದ ಅರಿವು, ಆರ್ಥಿಕ ಅಗತ್ಯಗಳು, ಸಾಮಾನ್ಯ ವೈರಿ ಮತ್ತು ಸಂಕಟಗಳಿಂದ ಸಂರಕ್ಷಣೆ, ಸಮಾನ ಅನುಭವ – ಇವು ಕೆಲವು. ಗುಂಪುಗಳ ಹುಟ್ಟಿನ ಬಗ್ಗೆ ಇನ್ನೂ ಒಂದು ವಿವಾದವಿದೆ. ಮಾನವರ ಮೊದಲ ಗುಂಪು ಯಾವುದು? ಬಣವೇ? ತಂಡವೇ? ಕುಟುಂಬವೇ? ಸಮಾಜವಿಜ್ಞಾನಿಗಳು ಈ ಪ್ರಶ್ನೆಗೆ ಇನ್ನೂ ಉತ್ತರಿಸಿಲ್ಲ. ಅನೇಕರು ಕುಟುಂಬವೇ ಆದಿಮ ಗುಂಪೆಂದು ನಂಬುತ್ತಾರೆ.

**ಮಹತ್ತ್ವ :** ನಮ್ಮ ದೈಹಿಕ ಮತ್ತು ಮಾನಸಿಕ ಆವಶ್ಯಕತೆಗಳನ್ನು ಪೂರೈಸಿಕೊಳ್ಳಲು ಗುಂಪುಗಳು ಬೇಕು. ಗುಂಪುಗೂಡುವಿಕೆ ಮೂಲಪ್ರವೃತ್ತಿಯಿಂದ ಬಂದಿರಲಿ ಅಥವಾ ಸಮಾಜಜನ್ಯವಿರಲಿ, ಅದು ಅನಿವಾರ್ಯ. ನಮ್ಮ ವಿಘ್ನಗಳಿಗೆ ಸಂಕಟಗಳಿಗೆ ಗುಂಪಿ ನಿಂದಲೇ ಪರಿಹಾರ ಸಾಧ್ಯ. ಏಕಾಕಿಯಾಗಿ ಬಾಳುವುದು ಒಂದು ಶಿಕ್ಷೆ ಎಂದು ಎಲ್ಲ ಸಮಾಜಗಳೂ ಭಾವಿಸುತ್ತವೆ. ನಮ್ಮ ಮೌಲ್ಯಗಳೂ ಒಳಿತು ಕೆಡಕುಗಳೂ ವ್ಯಕ್ತಿತ್ವದ ಹಾಸುಹೊಕ್ಕಗಳೂ ಗುಂಪಿನಿಂದಲೇ ಬರುತ್ತವೆ. ವ್ಯಕ್ತಿಗಳ ನಿಯಂತ್ರಣವೂ ಗುಂಪಿನ ಕೆಲಸ. ವಿವಿಧ ರೀತಿಯ ಗುಂಪುಗಳು ವ್ಯಕ್ತಿ ಮತ್ತು ವಿಸ್ತೃತ ಸಮಾಜದ ನಡುವೆ ಇರುವ ಕೊಂಡಿಗಳಂತಿವೆ. ಭಾವನಾತ್ಮಕ ಸ್ಥಿರತೆಯೂ ಗುಂಪುಗಳ ಕಾಣಿಕೆ. ಕುಟುಂಬದಂಥ ಆತ್ಮೀಯ ಗುಂಪುಗಳಿಲ್ಲದೆ ಮಕ್ಕಳು ದಾರಿ ತಪ್ಪುವುದನ್ನು ನೋಡಿದಾಗ ಈ ಮಾತಿನ ಅರ್ಥವಾಗುತ್ತದೆ. ಗುಂಪುಗಳಿಂದಲೇ ನಮ್ಮ ಅನೇಕ ಮಾನಸಿಕ ತೊಡಕುಗಳಿಗೂ ರೋಗಗಳಿಗೂ ಚಿಕಿತ್ಸೆ ಸಿಕ್ಕುವುದೆಂದು ನಾವೀಗ ತಿಳಿದಿದ್ದೇವೆ. ಅಪರಾಧ ನಿವಾರಣಾ ಕೇಂದ್ರಗಳಲ್ಲಿ ತಪ್ಪಿತಸ್ಥರನ್ನು ಆತ್ಮೀಯ ವೃಂದಗಳಲ್ಲಿ ತೊಡಗಿಸುವುದನ್ನು ನಾವು ಕಾಣುತ್ತೇವೆ. ದುಶ್ಚಟಗಳನ್ನು ಬಿಡಿಸುವಾಗ, ಮಾನಸಿಕ ರೋಗಗಳನ್ನು ನಿವಾರಿಸುವಾಗ ವೃಂದಗತ ಉಪಚಾರ ನೀಡುತ್ತಾರೆ. ಹೀಗೆ ಮಾನವನ ಮಾನವೀಕರಣಕ್ಕೆ ಗುಂಪುಗಳು ಅತ್ಯವಶ್ಯವಾಗಿವೆ.

**ಗುಂಪುಗಳ ವರ್ಗೀಕರಣ :** ಗುಂಪುಗಳನ್ನು ವಿವಿಧ ರೀತಿಗಳಲ್ಲಿ ವರ್ಗೀಕರಿಸುವುದು ಸಾಧ್ಯ. ಸದ್ಯಕ್ಕಂತೂ ಜೀವಶಾಸ್ತ್ರದಲ್ಲಿ ದೊರೆಯುವಂಥ ಸರ್ವಸಾಮಾನ್ಯವಾದ ಯಾವ ಒಂದು ವರ್ಗೀಕರಣವೂ ಲಭ್ಯವಿಲ್ಲ. ಗುಂಪುಗಳ ಗಾತ್ರವನ್ನು ಆಧರಿಸಿ ಜಾರ್ಜ್ ಸಿಮೆಲ್ ಎಂಬಾತ ದ್ವಯಗಳು, ತ್ರಯಗಳು, ವಿಸ್ತೃತ ಗುಂಪುಗಳು – ಎಂದು ವರ್ಗೀಕರಿಸಿದರೆ, ಜಾರ್ಜ ಮೆಕಾಯ್ವರ್ ಅವುಗಳ ಸಂಘಟನೆಯನ್ನು ಲಕ್ಷಿಸಿ ಸಂಘಟಿತ ಮತ್ತು ಅಸಂಘಟಿತ ಗುಂಪುಗಳೆಂದು ವಿಭಜಿಸುತ್ತಾನೆ. ಚಾರ್ಲ್ಸ್ ಹಾರ್ಟನ್ ಕೂಲೆ ವ್ಯಕ್ತಿಗಳ ನಡುವಿನ ಸಂಬಂಧಗಳನ್ನು ಆಧರಿಸಿ ಕುಟುಂಬ ಮುಂತಾದ ಕೆಲವನ್ನು ಪ್ರಾಥಮಿಕ ಗುಂಪುಗಳೆಂದೂ ಪಕ್ಷ, ಕಾರ್ಮಿಕ ಸಂಘಗಳಂಥ ಗುಂಪುಗಳನ್ನು ಮಾಧ್ಯಮಿಕ ಗುಂಪುಗಳೆಂದೂ ಕರೆದಿದ್ದಾನೆ. ನಾವು, ನಮ್ಮವರು ಎಂಬ ಆತ್ಮೀಯ ಭಾವನೆಯಿಂದ ಕೂಡಿದ ಗುಂಪುಗಳನ್ನು ವಿಲಿಯಮ್ ಗ್ರಹಾಮ್ ಸಮ್ನರ್ ಒಳಗುಂಪುಗಳೆಂದು ಕರೆದು, ಪರಕೀಯವೆಂದು ನಾವು ನೋಡುವ ಗುಂಪುಗಳನ್ನು ಹೊರಗುಂಪುಗಳೆಂದು ಕರೆದಿದ್ದಾನೆ. ಜನಸಂದಣಿ, ಪ್ರೇಕ್ಷಕ ವೃಂದಗಳಂಥ ಗುಂಪುಗಳನ್ನು ನೆರೆದ ಗುಂಪುಗಳೆಂದು ಕರೆಯುವುದಿದೆ. ಸಾರ್ವಜನಿಕರು ಚದರಿದ ಗುಂಪು, ಕಾಲಾವಧಿಯ ದೃಷ್ಟಿಯಿಂದ ಕೆಲವು ಶಾಶ್ವತ ಗುಂಪುಗಳಾದರೆ ಮತ್ತೆ ಕೆಲವು ಅಲ್ಪಕಾಲಿಕ ಗುಂಪುಗಳು. ಕೆಲವು ಗುಂಪುಗಳು ಏಕಕಾಲದಲ್ಲಿ ಒಂದಕ್ಕಿಂತ ಹೆಚ್ಚು ವರ್ಗೀಕರಣದಲ್ಲಿ ಸಿಕ್ಕಿಯಾವು. ಉದಾಹರಣೆಗೆ ಜನಸಂದಣಿ ಅಸಂಘಟಿತ ಗುಂಪು ಹೇಗೋ ಹಾಗೆಯೇ ಅಶಾಶ್ವತ ಗುಂಪೂ ಹೌದು, ನೆರೆದ ಗುಂಪೂ ಹೌದು, ಮುಖ್ಯವಾದ ಕೆಲವು ಪ್ರಭೇದಗಳನ್ನು ಮಾತ್ರ ಇಲ್ಲಿ ನೋಡಬಹುದು.

**ದ್ವಯಗಳು :** ಇಬ್ಬರೇ ಸದಸ್ಯರಿರುವ ದ್ವಯಗಳು (ಜೋಡಿಗಳು; ಜೊತೆ ಗುಂಪುಗಳು) ನಮಗೆ ಸುಪರಿಚಿತವಾದ ಗುಂಪುಗಳು. ಜರ್ಮನ್ ಸಮಾಜವಿಜ್ಞಾನಿ ಸಿಮೆಲ್ ಇಂಥ ಚಿಕ್ಕ ಗುಂಪುಗಳ ಅಭ್ಯಾಸಕ್ಕೆ ಶ್ರೀಕಾರ ಹಾಕಿದ. ಪ್ರಸಂಗವಶಾತ್ ಎಲ್ಲೋ ಒಮ್ಮೆ ಸಂಧಿಸುವ, ಸಂಭಾಷಿಸುವ ಇಬ್ಬರು ಮಾತ್ರ ಜೋಡಿಯಲ್ಲ. ಅದೇ ನಿರಂತರವಾಗಿ ಸಂಪರ್ಕ ಹೊಂದಿದ, ಆತ್ಮೀಯ ಸಂಬಂಧವುಳ್ಳ ಇಬ್ಬರು ಮಾತ್ರ ಜೋಡಿಯಾಗುತ್ತಾರೆ. ವಿವಾಹಿತ ದಂಪತಿಗಳು, ಆತ್ಮೀಯ ಗೆಳೆಯರಿಬ್ಬರು, ತಾಯಿ – ಮಗ, ತಂದೆ – ಮಗ, ಪ್ರೇಮಿಗಳು, ವೃತ್ತಿಯಲ್ಲಿ ಅಥವಾ ವ್ಯಾಪಾರದಲ್ಲಿ ಪಾಲುಗಾರರು ಮುಂತಾದ ಜೋಡಿಗುಂಪುಗಳನ್ನು ನಾವು ಕಾಣುತ್ತೇವೆ. ಪರಸ್ಪರ ಪೂರಕವಾದ ಆಸಕ್ತಿಗಳ ಪ್ರೇರಣೆಯಿಂದ, ನಿರಂತರ ಸಾಹಚರ್ಯದ ಬಲದಿಂದ ಜೋಡಿಗುಂಪು ಹುಟ್ಟುತ್ತದೆ; ಮುಂದುವರಿಯುತ್ತದೆ. ಜೋಡಿಯ ಒಬ್ಬರು ಇಲ್ಲವಾದಾಗ ಅದು ನಿಲ್ಲುತ್ತದೆ. ಒಮ್ಮೊಮ್ಮೆ ಮೂರನೆಯ ವ್ಯಕ್ತಿ ಮಧ್ಯ ಪ್ರವೇಶಿಸಿದಾಗಲೂ ಜೋಡಿಗೆ ಚ್ಯುತಿ ಬಂದಂತೆಯೇ ಸರಿ. ಆತ್ಮೀಯವಾದ ಸಂಬಂಧವಿರುವುದರಿಂದ ವ್ಯಕ್ತಿತ್ವದ ಮೇಲೆ ಪರಸ್ಪರ ಪ್ರಭಾವ ಇಲ್ಲಿ ಅತ್ಯಂತ ಹೆಚ್ಚು. ಹಾಗೆಯೇ ಈ ಸಂಬಂಧಗಳು ಕೆಟ್ಟರೆ ಉಂಟಾಗುವ ಕಹಿಯೂ ಹೆಚ್ಚು. ಈ ಜೋಡಿಗಳ ಹುಟ್ಟನ್ನೂ ಮುಕ್ತಾಯವನ್ನೂ ಸಮಾಜ ನಿಯಂತ್ರಿಸುವುದಿದೆ. ಉದಾಹರಣೆಗೆ ವಿವಾಹಿತರ ಜೋಡಿಯಾಗಲಿ ವ್ಯಾಪಾರದ ಪಾಲುಗಾರರಾಗಲೀ ಬೇರೆಯಾಗುವುದನ್ನು ನಾವು ನಿಯಮಬದ್ಧಗೊಳಿಸಿದ್ದೇವೆ. ಮ್ಯಾಲಿನಾಫ್‍ಸ್ಕಿಯ ಪ್ರಕಾರ ಕೆಲವು ಆದಿವಾಸಿ ಸಮಾಜಗಳಲ್ಲಿ ಕುಲಾವಿನಿಮಯ ಪದ್ಧತಿಯಂತೆ ಯಾರು ಯಾರ ಜೋಡಿಯಾಗಬೇಕೆಂಬುದನ್ನು ವಿಧಿಸುತ್ತಾರೆ.

**ತ್ರಯಗಳು :** ಜೋಡಿಯಂತೆಯೇ ಸ್ವಾರಸ್ಯಕರವಾದ ಇನ್ನೊಂದು ಪ್ರಕಾರ, ಮೂವರ ಈ ಗುಂಪಿನಲ್ಲಿ ಜೋಡಿಯ ಐಕ್ಯ ಅಸಂಭವ. ಜಾರ್ಜ ಸಿಮೆಲ್ ಹೇಳುವಂತೆ ಇಲ್ಲಿ ಮೂವರಲ್ಲಿ ಒಬ್ಬ ಮಧ್ಯಸ್ಥಿಕೆ ವಹಿಸಬಹುದು. ಸಮತೋಲ ಕಾಯುವ ಕೆಲಸ ಮಾಡಬಹುದು. ಅಥವಾ ಉಳಿದಿಬ್ಬರನ್ನು ಸದಾ ದೂರ ಇಡುವ ಪ್ರಯತ್ನ ಮಾಡಬಹುದು. ಅಲ್ಲದೆ, ಮೂವರಲ್ಲಿ ಒಬ್ಬ ಹೊರಗುಳಿದರೂ ಇಬ್ಬರ ಜೋಡಿ ಗುಂಪು ಉಳಿಯಲು ಸಾಧ್ಯವಿರುವುದರಿಂದ ಮುಕ್ಕೂಟದ ಮೂವರೂ ಐಕಮತ್ಯ ದಿಂದಿರುವುದು ಅತ್ಯಾವಶ್ಯಕವೆಂದೇನೂ ಅಲ್ಲ. ಹೀಗಾಗಿ ತ್ರಯಗಳು ಹೆಚ್ಚಾಗಿ ಒಬ್ಬನ ವಿರುದ್ಧವಿರುವ ಇಬ್ಬರ ತಾತ್ಪೂರ್ತಿಕ ಒಕ್ಕೂಟಗಳು. ಜೋಡಿಗಳಲ್ಲಿ ಮುಕ್ಕೂಟಗಳಿಗಿಂತ ಐಕ್ಯವೂ ಕಾರ್ಯಸಾಧನೆಯೂ ಚೆನ್ನಾಗಿ ಸಾಧ್ಯವೆಂದು ವಿವಿಧ ಪ್ರಯೋಗಗಳಿಂದ ಕಂಡುಬಂದಿದೆ. ಆದರೆ ತ್ರಯಗಳು ಚರ್ಚೆ, ಪರಾಮರ್ಶೆ, ಜಾಗರೂಕತೆಗಳಲ್ಲಿ ಮಿಗಿಲು. ಪ್ರಾಯಶಃ ಇದಕ್ಕಾಗಿಯೇ ಮೂವರು ಸದಸ್ಯರಿರುವ ಸಮಿತಿಗಳಿರುವುದೇ ಹೆಚ್ಚು.

**ಪ್ರಾಥಮಿಕ ಗುಂಪುಗಳು :** ಗುಂಪುಗಳ ವರ್ಗೀಕರಣದಲ್ಲಿ ಅತಿ ಹೆಚ್ಚು ಪ್ರಸಿದ್ಧವಾದ ಹಾಗೂ ಅರ್ಥವತ್ತಾದ ವರ್ಗೀಕರಣವೆಂದರೆ ಪ್ರಾಥಮಿಕ ಮತ್ತು ಮಾಧ್ಯಮಿಕ ಗುಂಪುಗಳೆಂಬುದು. ಪ್ರಾಥಮಿಕ ಗುಂಪುಗಳ ಕಲ್ಪನೆಯನ್ನು ಸಮಾಜಶಾಸ್ತ್ರೀಯ ಬರೆಹಗಳಲ್ಲಿ ಮೊದಲಿಗೆ ತಂದವ ಚಾರ್ಲ್ಸ್ ಹಾರ್ಟನ್ ಕೂಲೆ. ಆತನೇ ಹೇಳಿದಂತೆ ಅವು ಅನ್ಯೋನ್ಯವಾದ, ಮುಖಾಮುಖಿ ಸಂಬಂಧವುಳ್ಳ ಮತ್ತು ಸಹಕಾರ ಲಕ್ಷಣಗಳಿಂದ ಕೂಡಿದ ಗುಂಪುಗಳು. ಕುಟುಂಬ, ಮಕ್ಕಳ ಆಟದ ಗುಂಪು, ನೆರೆಹೊರೆ, ಹಿರಿಯರ ಸಮುದಾಯಗಳು ಇಂಥ ಗುಂಪುಗಳೆಂದು ಆತ ಹೇಳಿದ್ದಾನೆ. ಒಟ್ಟೊಟ್ಟಿಗೇ ಇರುವ, ಆತ್ಮೀಯ ಸಂಬಂಧಗಳನ್ನು ಹೊಂದಿದ ಸಹಪಾಠಿಗಳು, ಸಹವರ್ತಿಗಳು, ಕಾರ್ಖಾನೆ, ಕಚೇರಿ, ಸೈನ್ಯ, ಶಾಲೆ, ಕ್ಲಬ್ಬುಗಳಲ್ಲಿ ಕಾಣುವ ಆತ್ಮೀಯ ಗೆಳೆಯರ ಚಿಕ್ಕ ಗುಂಪುಗಳೂ ಇಂಥವೇ. ಅವು ಅನೇಕ ದೃಷ್ಟಿಗಳಿಂದ ಪ್ರಾಥಮಿಕವಾದರೂ ವ್ಯಕ್ತಿಯ ಸಾಮಾಜಿಕ ಸ್ವಭಾವ ಹಾಗೂ ಆದರ್ಶಗಳನ್ನೂ ರೂಪಿಸುವಲ್ಲಿ ಅತ್ಯಂತ ಮಹತ್ತ್ವ ಪಡೆದಿವೆ. ಇಲ್ಲಿನ ನಿರಂತರವಾದ ಅನ್ಯೋನ್ಯ ಸಹವಾಸಗಳಿಂದ ವ್ಯಕ್ತಿಗಳು ಒಬ್ಬರಿಗೊಬ್ಬರು ಬೆಸೆಯಲ್ಪಡುತ್ತಾರೆ. ಕೂಲೆ ಹೇಳಿದಂತೆ ನಾವು ಎಂಬ ತಾದಾತ್ಮ್ಯ ಭಾವನೆ ಈ ಗುಂಪುಗಳಲ್ಲಿ ಇರುತ್ತವೆ. ಪ್ರೇಮ, ಅನುಕಂಪ ಮತ್ತು ಸಹಕಾರ ಭಾವನೆ ಇಲ್ಲಿನ ಪ್ರಮುಖ ಲಕ್ಷಣಗಳು. ಕುಟುಂಬ ಮೊದಲುಗೊಂಡು ಈ ಎಲ್ಲ ಗುಂಪುಗಳೂ ಚಿಕ್ಕ ಗಾತ್ರದವು. ಇದರಿಂದಾಗಿ ಸದಸ್ಯರ ನಡುವೆ ನಿರಂತರವಾದ ಮುಖಾಮುಖಿ ಸಂಬಂಧ ಸಾಧ್ಯ. ತೀರ ಆತ್ಮೀಯರಾದ ವೈಯಕ್ತಿಕ ಸಂಬಂಧಗಳು ಬೆಳೆಯುತ್ತವೆ. ಸಮೋದ್ದೇಶಗಳು ಸಾಧ್ಯ. ಸಂಬಂಧಗಳು ಲಾಭಕ್ಕಾಗಿ ಹೆಣೆದುಕೊಂಡವುಗಳಲ್ಲ; ಸ್ವಾಭಾವಿಕವಾಗಿ, ನಿಃಸ್ವಾರ್ಥವಾಗಿ ಬಂದವು. ಯಾವುದೇ ಕಾರ್ಯ ನಿಮಿತ್ತ ಅಷ್ಟರಮಟ್ಟಿಗೆ ಮಾತ್ರ ಸದಸ್ಯರಾಗುವುದು ಇಲ್ಲಿ ಸಾಧ್ಯವಿಲ್ಲ. ನಮ್ಮನ್ನು ನಾವು ಇಡಿಯಾಗಿ ಇಲ್ಲಿ ತೊಡಗಿಸಿಕೊಳ್ಳುತ್ತೇವೆ. ಕುಟುಂಬವೆಂಬ ಅತಿ ಮಹತ್ತ್ವದ ಪ್ರಾಥಮಿಕ ಸಮೂಹದಲ್ಲಿ ಹುಟ್ಟಿ ಬಾಳಿನುದ್ದಕ್ಕೂ ಅನೇಕ ಪ್ರಾಥಮಿಕ ಸಮೂಹಗಳಿಂದ ಪ್ರಭಾವಿತರಾಗುತ್ತೇವೆ. ನಮ್ಮ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಅವು ಅನುಪಮ. ಹಾಗೆಂದೇ ಕೂಲೆ ಅವನ್ನು ಮಾನವನ ಸ್ವಭಾವದ ಸಂಪೋಷಣ ಸ್ಥಾನಗಳೆಂದು ಕರೆದಿದ್ದಾನೆ.

ಹಿಂದೆ ಪ್ರಾಥಮಿಕ ಗುಂಪುಗಳೆಂದರೆ ಸಮಾಜೀಕರಣದ ದೀಕ್ಷೆ ಕೊಡುವ ಕುಟುಂಬ. ಗೆಳೆಯರ ಆಟದ ಗುಂಪುಗಳಂಥ ಚಿಕ್ಕ ಗುಂಪುಗಳೆಂದು ತಿಳಿಯಲಾಗುತ್ತಿತ್ತು. ಆದರೆ ಮುಂದೆ ಅನೇಕ ಸಮಾಜವಿಜ್ಞಾನಿಗಳು ಬೇರೆ ಬೇರೆ ಕ್ಷೇತ್ರಗಳಲ್ಲಿ ಕಂಡುಬರುವ ಇಂಥ ಗುಂಪುಗಳನ್ನು ಗುರುತಿಸಿದ್ದಾರೆ. ಉದಾಹರಣೆಗೆ, ಎಲ್ಟನ್ ಮೇಯೊ ಮತ್ತು ಸಂಗಡಿಗರು ಬೃಹತ್ ವಿದ್ಯುತ್‍ಕಂಪನಿಯೊಂದರ ಕೆಲಸಗಾರರಲ್ಲಿ ಈ ಪುಟ್ಟ ಗುಂಪು ಗಳನ್ನು ಗುರುತಿಸಿ ಅವು ಹೇಗೆ ಉತ್ಪಾದನೆಯನ್ನು ನಿಯಂತ್ರಿಸುತ್ತವೆಂದು ತಿಳಿಸಿದ್ದಾರೆ. ವಿಲಿಯಂ ಹ್ವೈಟ್ ಅವರು ಬಾಸ್ಟನ್ ನಗರದ ಬೀದಿ ಮೂಲೆಯ ಎಳೆಯರ ಗುಂಪನ್ನು ಅಭ್ಯಾಸ ಮಾಡಿದ್ದಾರೆ. ಹಾಗೆಯೇ ಸ್ಟೌಫರ್ ಮತ್ತಿತರರು ಅಮೆರಿಕೆಯ ಯೋಧರಲ್ಲಿರುವ ಕೆಳಗುಂಪುಗಳ ಮಹತ್ತ್ವವನ್ನು ತಿಳಿಸಿದ್ದಾರೆ. ಹೀಗೆ ಚಿಕ್ಕಗಾತ್ರದ, ನಿರಂತರವಾದ ಆತ್ಮೀಯ ಸಂಬಂಧದ ಈ ಗುಂಪುಗಳು ಸಾರ್ವತ್ರಿಕವಾಗಿವೆ ಮತ್ತು ಅತ್ಯವಶ್ಯಕವಾಗಿದೆ.

ನಗರೀಕರಣ, ಯಾಂತ್ರೀಕರಣ, ಔದ್ಯೋಗೀಕರಣದೊಂದಿಗೆ ಬೃಹತ್ ಸಮೂಹ ಗಳು ಬೆಳೆದು ಪ್ರಾಥಮಿಕ ಸಮೂಹಗಳು ಕಣ್ಮರೆಯಾಗುತ್ತಿವೆಯೆಂದು ಅನೇಕರು ಹೇಳಿದ್ದಾರೆ. ಹಿಂದೊಮ್ಮೆ ಪ್ರಭಾವಶಾಲಿಯಾಗಿದ್ದ ಕುಟುಂಬ, ನೆರೆಹೊರೆ, ಆಟದ ಗುಂಪುಗಳು

ತಮ್ಮ ಮಹತ್ತ್ವ ಕಳೆದುಕೊಳ್ಳುತ್ತಿವೆ. ಎಂಬ ಹೆದರಿಕೆಯೂ ಇದೆ. ಆದರೆ ಒಂದೇ ಸಮನಾಗಿ ವೃದ್ಧಿಗೊಳ್ಳುತ್ತಿರುವ ಮಾಧ್ಯಮಿಕ ಗುಂಪುಗಳ ಒಡಲಿನಲ್ಲೇ ಹೊಸಹೊಸ ಪ್ರಾಥಮಿಕ ಗುಂಪುಗಳು ಹುಟ್ಟುತ್ತಿವೆಯೆಂದು ಇತ್ತೀಚಿನ ಲೇಖಕರು ನಂಬಿದ್ದಾರೆ.

**ಮಾಧ್ಯಮಿಕ ಗುಂಪುಗಳು :** ಮಾಧ್ಯಮಿಕ ಗುಂಪುಗಳನ್ನು ವರ್ಣಿಸುವ ಒಂದು ಸುಲಭ ಉಪಾಯವೆಂದರೆ ಅವನ್ನು ಪ್ರಾಥಮಿಕ ಗುಂಪುಗಳಿಗೆ ವ್ಯತಿರಿಕ್ತವಾದ ಲಕ್ಷಣಗಳುಳ್ಳ ಗುಂಪುಗಳೆಂದು ಹೇಳುವುದು, ವ್ಯಾಪಾರೀ ಸಂಘಟನೆಗಳು, ಬೃಹತ್ ರಾಜಕೀಯ ಪಕ್ಷಗಳು, ಕಾರ್ಮಿಕರ ಸಂಘ, ನಗರಗಳು ಬೇರೆ ಬೇರೆ ವೃತ್ತಿಯವರ ರಾಷ್ಟ್ರಿಯ ಸಂಘಟನೆಗಳು, ಏಣಿಶ್ರೇಣಿಗಳಿಂದ ಹಾಗೂ ಬಿಗುವಾದ ನಿಯಮಗಳಿಂದ ಕೂಡಿದ ಸೈನ್ಯ ಮತ್ತಿತರ ಗುಂಪುಗಳು ಮಾಧ್ಯಮಿಕ ಗುಂಪುಗಳು ಕೂಲೆ ಅವನ್ನು ಹೆಸರಿಸಿಲ್ಲವಾದರೂ ಅನಂತರದ ಲೇಖಕರು ಅವುಗಳ ಲಕ್ಷಣಗಳನ್ನು ತಿಳಿಸಿದ್ದಾರೆ. ದೊಡ್ಡ ಗಾತ್ರ, ಆಕಸ್ಮಿಕ ಮತ್ತು ಔಪಚಾರಿಕ ಸಂಬಂಧಗಳು, ಔಪಚಾರಿಕ ರಚನೆ, ಪರೋಕ್ಷ ಸಂಪರ್ಕ, ಉದ್ದೇಶಸಾಧನೆಗೆಂದೇ ಕಟ್ಟಿದ ಬಿಗುವು, ನಿಯಂತ್ರಣ ಇವು ಕೆಲವು ಲಕ್ಷಣಗಳು. ಸದಸ್ಯರ ನಡುವೆ ನಿರಂತರವಾದ ಮುಖಾಮುಖಿಯಾದ ಸಂಬಂಧಗಳಿಲ್ಲದೆ ಇರುವುದರಿಂದ ಅನ್ಯೋನ್ಯತೆ ಬೆಳೆಯುವುದು ದುಸ್ಸಾಧ್ಯ. ಹತ್ತಾರು ವರ್ಷಗಳ ತನಕ ಸದಸ್ಯರಾಗಿದ್ದರೂ ಒಬ್ಬರನ್ನೊಬ್ಬರು ನೋಡದಿರುವುದಿದೆ. ಇಲ್ಲಿ ಕೊಟ್ಟಷ್ಟೇ ಕೆಲಸ: ಒಪ್ಪಿಸಿದಷ್ಟೇ ಹೊಣೆಗಾರಿಕೆ. ವಿಶೇಷ ಆಸಕ್ತಿಗಳನ್ನು ಪೂರೈಸಲು ಬುದ್ಧಿಪೂರ್ವಕವಾಗಿ ಕಟ್ಟಿದ ವ್ಯವಸ್ಥೆಗಳೇ ಹೆಚ್ಚು ವ್ಯಕ್ತಿಗಳು ಇಲ್ಲಿ ಪೂರ್ಣವಾಗಿ ತೊಡಗಿಕೊಳ್ಳುವುದಿಲ್ಲ: ಅಷ್ಟಿಷ್ಟೇ ಮಾತ್ರ. ವ್ಯಕ್ತಿತ್ವದ ಪೂರ್ಣವಿಕಾಸ ಇಲ್ಲಿ ಅಸಾಧ್ಯ. ಆದರೆ ಕಾರ್ಯಸಾಧನೆಗೆ ಬೇಕಾದ ಕಾರ್ಯಕ್ಷಮತೆ, ಸುವ್ಯವಸ್ಥೆ ಮಾಧ್ಯಮಿಕ ಸಮೂಹಗಳಲ್ಲಿ ಮಾತ್ರ ಇರುತ್ತದೆ. ಆಧುನಿಕ ಜಗತ್ತಿನಲ್ಲಿ ಅವು ಬಹಳ ಮಹತ್ತ್ವ ಪಡೆದಿದೆ.

**ಒಳಗುಂಪು :** ವಿಲಿಯಮ್ ಗ್ರಹಾಮ್ ಸಮ್ನರ್ ತನ್ನ ಲೋಕಾಚಾರಗಳನ್ನು ಕುರಿತ ಗ್ರಂಥದಲ್ಲಿ ಒಳಗುಂಪುಗಳೂ (ಸ್ವಜನರು) ಮತ್ತು ಹೊರಗುಂಪುಗಳು ಎಂಬ ವಿಭೇದಗಳನ್ನು ಹೇಳಿದ್ದಾನೆ. ಆತ ಹೇಳುವಂತೆ ಸದಸ್ಯರ ದೃಷ್ಟಿಯಲ್ಲಿ ಗುಂಪುಗಳಲ್ಲಿ ಎರಡೇ ಎರಡು ವಿಧಗಳು. ನಾವು ನಮ್ಮವರು. ಸ್ವಜನ ಸ್ವಕೀಯರು, ಇರುವ ಒಳಗುಂಪೊಂದು: ಆ ಜನ, ಪರಜನ, ಪರಕೀಯರು ಇರುವ ಹೊರಗುಂಪೊಂದು. ತಮ್ಮ ಕುಟುಂಬ, ಶಾಲೆ, ನೆರೆಹೊರೆ, ಆಟದ ಗುಂಪು, ಊರು, ಧರ್ಮ ಪಕ್ಷ, ಜಾತಿಗಳು ಅವರಿಗೆ ಒಳಗುಂಪುಗಳು ಕನ್ನಡಿಗರಿಗೆ ಉಳಿದೆಲ್ಲ ಕನ್ನಡಿಗರು ಒಳಗುಂಪುಗಳು. ಮಿಕ್ಕವರು ಹೊರಗಿನವರು. ಹಾಗೆಯೇ ಹಿಂದೂ ಧರ್ಮಾನುಯಾಯಿಗಳಿಗೆ ತಮ್ಮ ಧರ್ಮ ಬಾಂಧವರು ಒಳ ಗುಂಪಿಗೆ ಸೇರಿದವರು; ಉಳಿದ ಧರ್ಮಗಳ ಜನರು ಹೊರಗುಂಪಿನವರು. ಸ್ವಜನರ ಬಗ್ಗೆ ಸದಸ್ಯರಿಗೆ ಅಭಿಮಾನ, ಅಕ್ಕರೆ, ಸಹಾನುಭೂತಿ, ಸಹಕಾರ, ವಿಶ್ವಾಸ, ನಿಷ್ಠೆ, ವಿಧೇಯತೆ ಮತ್ತು ಸಾಮರಸ್ಯದ ಭಾವನೆಗಳಿರುತ್ತದೆ. ತಮ್ಮ ಭಾಷೆಯೇ ಇಂಪಾದ ಭಾಷೆಯೆಂದೂ ತಮ್ಮ ದೇವರುಗಳೇ ಸರ್ವಶ್ರೇಷ್ಠರೆಂದೂ ಅಭಿಮಾನ ಪಡುವುದು ಸಾಮಾನ್ಯ ದೇಶಭಕ್ತಿಯ ಗೀತೆಗಳೂ ರಾಷ್ಟ್ರಧ್ವಜವೂ, ಸ್ಥಳಪುರಾಣಗಳೂ, ವೀರರ ಕಥೆಗಳೂ, ಪವಿತ್ರ ಸಂಕೇತಗಳೂ ಸ್ವಜನಾಭಿಮಾನದ ದ್ಯೋತಕಗಳು. ಒಳಗುಂಪಿಗೆ ಹೊರಗಿನವರು ಸುಲಭವಾಗಿ ಸೇರಲಾರರು. ಪ್ರವೇಶಕ್ಕೆ ಅನೇಕ ನಿರ್ಬಂಧನೆಗಳಿವೆ. ಕುಲ, ಜಾತಿ, ವೃತ್ತಿ, ಅಭಿರುಚಿ, ಧರ್ಮ, ಭಾಷೆ, ರಾಷ್ಟ್ರೀಯತೆ ಮುಂತಾದ ಆಧಾರಗಳ ಮೇಲೆ ಒಳಗುಂಪಿನವರಾಗುತ್ತಾರೆ. ಸದಸ್ಯರಲ್ಲಿ ತಮ್ಮ ಗುಂಪಿನ ರಕ್ಷಣೆ ತಮ್ಮ ಹೊಣೆಯೆಂಬ ಭಾವನೆಯೂ ಹಾಗೆಯೇ ತಮ್ಮ ರಕ್ಷಣೆ ಗುಂಪಿನ ಹೊಣೆ ಎಂಬ ಭಾವನೆಯೂ ಇರುತ್ತದೆ. ಅವರು ಆಪತ್ಕಾಲದಲ್ಲಿ ಒಳಗುಂಪಿಗಾಗಿ ಯಾವ ತ್ಯಾಗಕ್ಕೂ ಸಿದ್ಧ. ಹಾಗೆಯೇ ಶತ್ರುಗಳ ವಿರುದ್ಧ ಅವರು ತೋರುವ ವರ್ತನೆಯೂ ಕ್ಷಮ್ಯ. ಸ್ವಜನರ ಬಗೆಗಿನ ಅಭಿಮಾನ ಕೆಲವೊಮ್ಮೆ ಅತಿರೇಕಕ್ಕೆ ಹೋಗುವುದಿದೆ. ಈ ಸ್ವಜನ ದುರಭಿಮಾನವೇ ಯುದ್ಧಗಳಿಗೂ ಬೇರೆ ರೀತಿಯ ಸಂಘರ್ಷಣೆಗಳಿಗೂ ಮೂಲವಾಗ ಬಹುದು. ವಾಸ್ತವಿಕ ಅಥವಾ ಕಾಲ್ಪನಿಕ ಗಂಡಾಂತರಗಳು ಬಂದಾಗಲೆಲ್ಲ ಈ ಒಳಗುಂಪಿನ ಭಾವನೆ ಜಾಗ್ರತವಾಗಿ ಗುಂಪಿನ ಐಕಮತ್ಯ ಬಲಿಯುವುದನ್ನು ಕಾಣುತ್ತೇವೆ.

**ಹೊರಗುಂಪು :** ನಾವು ಸದಸ್ಯರಲ್ಲದ ಗುಂಪುಗಳೆಲ್ಲ ನಮಗೆ ಹೊರಗುಂಪುಗಳು (ಪರರು) ನಾವು ಸದಸ್ಯರಲ್ಲದ ಕ್ಲಬ್ಬು, ನೆರೆಹೊರೆ, ನಗರ, ದೇಶಗಳ ಜನ ನಮಗೆ ಪರಕೀಯರು, ಈ ಗುಂಪುಗಳ ಬಗ್ಗೆ ನಾವು ಕೆಲವೊಮ್ಮೆ ಅನಾಸ್ಥೆ, ಅಸಡ್ಡೆಗಳಿಂದ ನೋಡಿದರೆ, ಕೆಲವೊಮ್ಮೆ ಸ್ಪರ್ಧೆ, ಜುಗುಪ್ಸೆ ಹಾಗೂ ಸಂಘರ್ಷದ ಭಾವನೆಗಳನ್ನು ಹೊಂದಿರುತ್ತೇವೆ. ಹೊರಗುಂಪಿನವರ ಆಚಾರವಿಚಾರಗಳು ದೇವರುಗಳು ತುಂಬ ವಿಚಿತ್ರವಾಗಿ ಕಂಡರೆ ಆಶ್ಚರ್ಯವಿಲ್ಲ. ಕೆಲವೊಮ್ಮೆ ಅವು ಅರ್ಥಹೀನ, ಅನಾಗರಿಕ ಇಲ್ಲವೆ ಕ್ರೂರ ಎನ್ನಿಸಲೂ ಬಹುದು. ಹೊರಗುಂಪಿನ ಸದಸ್ಯರನ್ನು ವ್ಯಕ್ತಿಗಳೆಂದು ಪರಿಗಣಿಸುವ ಗೋಜಿಗೆ ನಾವು ಹೋಗುವುದಿಲ್ಲ. ಅವರೆಲ್ಲರೂ ಒಟ್ಟಿನಲ್ಲಿ ಒಂದೇ ರೀತಿಯ ಜನ ಎಂಬುದೇ ನಮ್ಮ ಭಾವನೆ. ಒಟ್ಟಿನಲ್ಲಿ ಎಲ್ಲ ಆಂಗ್ಲರೂ ನಗೆಗಾರಿಕೆ ತಿಳಿಯದ ಗೊಡ್ಡುಗಳು; ಪಾಶ್ಚಾತ್ಯರ ದೃಷ್ಟಿಯಲ್ಲಿ ಎಲ್ಲ ಭಾರತೀಯರೂ ಸಂಪ್ರದಾಯ ಶರಣರು; ಬಿಳಿಯರಿಗೆ ಎಲ್ಲ ನೀಗ್ರೊ ಜನರೂ ಮೈಗಳ್ಳರು. ಸುದೈವದಿಂದ ನಾವು ಏಕಕಾಲಕ್ಕೆ ಅನೇಕ ಒಳ ಹಾಗೂ ಹೊರ ಗುಂಪುಗಳಿಗೆ ಸೇರಿರುತ್ತೇವೆ. ಒಬ್ಬ ಭಾರತೀಯನಿಗೆ ಉಳಿದ ಭಾರತೀಯರೆಲ್ಲ ಒಂದು ದೃಷ್ಟಿಯಿಂದ ಒಳಗುಂಪಿನವರು. ಅವರಲ್ಲಿ ಕೆಲವರು ಬೇರೆ ಧರ್ಮಕ್ಕೆ, ಭಾಷೆಗೆ, ಇಲ್ಲವೆ ಜಾತಿಗೆ ಸೇರಿರುವುದರಿಂದ ಹೊರಗಿನವರೂ ಹೌದು. ಇದರಿಂದಾಗಿ ಯಾವ ಗುಂಪೂ ನಮ್ಮ ನಿಷ್ಠೆಯನ್ನು ನೂರಕ್ಕೆ ನೂರು ಸಂಪೂರ್ಣವಾಗಿ ಪಡೆಯಲಾರದು.

ಸಮಸ್ತರ ಮತ್ತು ಲಂಬಸ್ತರ ಗುಂಪುಗಳು: ಸಮಾಜಶಾಸ್ತ್ರಜ್ಞ ಪಿಟಿರಿಮ್ ಸೊರೊಕಿನ್ ಸಮಾಜ ವ್ಯವಸ್ಥೆಯ ಎರಡು ಪ್ರಭೇದಗಳನ್ನು ವಿವೇಚಿಸಿದ್ದಾನೆ. ಬೃಹತ್ ಸಮಾಜವನ್ನು ಉದ್ದವಾಗಿ ಸೀಳುವುದು ಸಾಧ್ಯ ಎಂದು ಊಹಿಸೋಣ. ಆಗ ವಿಶಾಲವೂ ಸರ್ವಾಂಗೀಣವೂ ಆದ ರಾಷ್ಟ್ರಗಳೂ ಧಾರ್ಮಿಕ ಗುಂಪುಗಳೂ ರಾಜಕೀಯ ಪಕ್ಷಗಳೂ ಕುಲನಿಷ್ಟೆ ವರ್ಗಗಳೂ ಕಾಣುತ್ತದೆ. ಇಂಥ ರಾಷ್ಟ್ರಗಳಲ್ಲಿ, ಪಕ್ಷಗಳಲ್ಲಿ ಮತ್ತಿತರ ಗುಂಪುಗಳಲ್ಲಿ ವಿವಿಧ ವೃತ್ತಿಗಳಿಗೆ, ಅಂತಸ್ತುಗಳಿಗೆ, ವರಮಾನ, ವಯೋಮಾನ, ದರ್ಜೆಗಳಿಗೆ ಸೇರಿದ ಜನರಿರುತ್ತಾರೆ. ಹೀಗೆ ಮೇಲು ಕೆಳಗಿನ ಸ್ತರಗಳಿಂದ ಕೂಡಿದ ಜನರಿರುವ ಈ ಗುಂಪುಗಳನ್ನು ಸೊರೊಕಿನ್ ಲಂಬಸ್ತರ ಅಥವಾ ಊರ್ಧ್ವಮುಖಿ (ವರ್ಟಿಕಲ್ ಗ್ರೂಪ್ಸ್) ಗುಂಪುಗಳೆಂದು ಕರೆದಿದ್ದಾನೆ. ಅನೇಕ ಸಮಸ್ತರ ಗುಂಪುಗಳನ್ನು ವಿಷಮಸ್ತರ ಗುಂಪುಗಳೆಂದೂ ಕರೆಯಬಹುದು.

ಸಮಾಜರಚನೆಯನ್ನು ಅಡ್ಡ ಸೀಳಿ ನೋಡುವಾಗ ಬೇರೆಬೇರೆ ಸಮತಲ ಗುಂಪುಗಳನ್ನು ಕಾಣಬಹುದು. ಒಂದೇತೆರನಾದ ಆದಾಯವಿರುವ ಸಾವಿರಾರು ಜನರಿದ್ದಾರೆ. ಒಂದೇ ವೃತಿಗೆ ಸೇರಿದ ಲಕ್ಷಾವಧಿ ಜನರಿದ್ದಾರೆ. ಸಮಾನ ಅಂತಸ್ತುಗಳಿಗೆ ಸೇರಿದ ಜನರ ಗುಂಪುಗಳಿವೆ. ಇವನ್ನು ಸಮತಲ ಅಥವಾ ಸಮಸ್ತರ ಗುಂಪುಗಳೆಂದು (ಹಾರಿಜಾಂಟಲ್ ಗ್ರೂಪ್) ಕರೆಯಬಹುದು. ಆರ್ಥಿಕ ವರ್ಗಗಳು, ಸಾಮಾಜಿಕ ಶ್ರೇಣಿಗಳು ಇಂಥ ಗುಂಪುಗಳು, ಒಂದೇ ವೃತ್ತಿ ಆದಾಯ, ಅಂತಸ್ತು ಇರುವ ಜನರೆಲ್ಲ ಸಮಯ ಬಂದಾಗಲೆಲ್ಲ ಸುಸಂಘಟಿತವಾಗಿ ತಮ್ಮ ಆಸ್ಥೆಗಳನ್ನು ಸಂರಕ್ಷಿಸಿಕೊಳ್ಳುವುದನ್ನು ನೋಡುತ್ತೇವೆ.

**ಜನಸಂದಣಿ :** ಸಮಾಜ ವಿಜ್ಞಾನಿಗಳ, ರಾಜಕಾರಣಿಗಳ, ಆಡಳಿತಗಾರರ ಹಾಗೂ ಸಾಮಾನ್ಯ ಪ್ರಜೆಗಳ ಗಮನವನ್ನು ಸೆಳೆಯುವ ಇನ್ನೊಂದು ಗುಂಪೆಂದರೆ ಜನಸಂದಣಿ. ಹತ್ತಾರು ಜನರಿಂದ ಹಿಡಿದು ಸಾವಿರಗಟ್ಟಲೆ ಜನರು ಒಂದೆಡೆ ಸೇರಿ ಯಾವುದಾದ ರೊಂದು ವಸ್ತು ಅಥವಾ ಸನ್ನಿವೇಶದ ಬಗ್ಗೆ ಪ್ರತಿಕ್ರಿಯೆ ವ್ಯಕ್ತಪಡಿಸುತ್ತ ಕೆಲಕಾಲದ ಮಟ್ಟಿಗೆ ಪರಸ್ಪರ ಪ್ರಚೋದಿಸುತ್ತಿದ್ದರೆ ಅದು ಜನಸಂದಣಿಯಾಗುತ್ತದೆ. ಅದು ಅಲ್ಪಾಯುವೂ ಹೆಚ್ಚುಕಡಿಮೆ ಅಸಂಘಟಿತವೂ ಆಗಿರುವ ಗುಂಪು, ಒಂದಿಷ್ಟು ಜನ ಒಂದೇ ಕಡೆಯಲ್ಲಿ ಕೂಡಿದರೆ ಸಂದಣಿಯಾಗುವುದಿಲ್ಲ. ಅದು ಸಮಷ್ಟಿ. ಬಸ್ಸಿನಲ್ಲಿ ಕುಳಿತ ಪ್ರಯಾಣಿಕರು, ಪಾರ್ಕಿನಲ್ಲಿ ಚದರಿ ಕುಳಿತು ವಿರಮಿಸುತ್ತಿರುವ ಜನ, ಬೀದಿಯ ಅಂಚಿನಲ್ಲಿ ತಮ್ಮಷ್ಟಕ್ಕೆ ತಾವು ಓಡಾಡುವ ದಾರಿಹೋಕರು ಸಂದಣಿಯಲ್ಲ. ಎಲ್ಲರನ್ನು ಪ್ರಚೋದಿಸುವ ಸಾಮಾನ್ಯ ವಸ್ತು ಇಲ್ಲಿಲ್ಲ. ಅಂತರಕ್ರಿಯೆಗಳೂ ಇಲ್ಲವೆನ್ನಿಸುವ ಮಟ್ಟಿಗೆ ಅತ್ಯಲ್ಪ. ಆದರೆ ಇಂಥ ಸಮಷ್ಟಿಗಳೇ ಏನಾದರೊಂದು ನೆವದಿಂದಾಗಿ ಕ್ಷಣಾರ್ಧದಲ್ಲಿ ಸಂದಣಿಗಳಾಗುವುದಿದೆ. ಜನಸಂದಣಿಗೆ ನಿಶ್ಚಿತ ಗಾತ್ರವಿಲ್ಲ. ಆದರೂ ಸಾಕಷ್ಟು ದೊಡ್ಡ ಸಂಖ್ಯೆಯಲ್ಲಿ ಸೇರುವುದೂ ಜನಸಂದಣಿಯ ಭೌತಿಕ ಲಕ್ಷಣಗಳು. ಕಾಲಾವಧಿಯ ದೃಷ್ಟಿಯಿಂದ ಅದು ಕ್ಷಣಿಕವಾದ ಗುಂಪೂ ಹೌದು. ಈಗಿರುವ ಸದಸ್ಯರು ಅರೆಗಳಿಗೆಯೊಳಗೆ ಇಲ್ಲದಿರುವುದರಿಂದ ಅದಕ್ಕೆ ಭೂತ ಭವಿಷ್ಯತ್ತುಗಳೆರಡೂ ಇಲ್ಲ. ಸಂದಣಿಯನ್ನು ಸೇರಲೂ ಬಿಡಲೂ ಹೆಚ್ಚಿನ ನಿಯಮಗಳಿಲ್ಲ. ಏಣಿಶ್ರೇಣಿಯ ವ್ಯವಸ್ಥೆಯಿಲ್ಲ. ಸರ್ವಮಾನ್ಯವಾದ ನಾಯಕತ್ವವಿಲ್ಲ. ಎಲ್ಲ ರೀತಿಯ ಜನ ನುಗ್ಗಿಕೊಳ್ಳಬಹುದು. ಹೆಗಲಿಗೆ ಹೆಗಲು ತಿಕ್ಕಿದರೂ ಒಬ್ಬರ ಪರಿಚಯ ಇನ್ನೊಬ್ಬರಿಗೆ ಇರಲಿಕ್ಕಿಲ್ಲ. ಎಲ್ಲರೂ ನಾವು ಸಾವಿರದಲ್ಲಿ ಒಬ್ಬರು ಎಂಬ ಅನಾಮಧೇಯತ್ವವನ್ನು ಪಡೆಯುತ್ತಾರೆ. ಉಳಿದವರಂತೆ ಕೂಗುವುದು, ಓಡುವುದು ಮುಂತಾಗಿ ವರ್ತಿಸುತ್ತ ಸಮಾನ ಲಕ್ಷಣಗಳನ್ನು ಹೊಂದುತ್ತಾರೆ. ಭಾವೋದ್ರೇಕವು ಇಲ್ಲಿಯ ಒಂದು ಮುಖ್ಯ ಲಕ್ಷಣ. ಕೆಲವೊಮ್ಮೆ ಮುಷ್ಕರ, ಮೆರವಣಿಗೆ, ಮತಪ್ರದರ್ಶನಗಳಲ್ಲಿ ಆಗುವಂತೆ ಭಾವೋದ್ರೇಕದಿಂದ ಕೆರಳಿದ ಜನ ವಿಧ್ವಂಸಕ ಕಾರ್ಯಗಳಲ್ಲಿ ನಿರತರಾಗುತ್ತಾರೆ. ಆಗ ಅದು ದೊಂಬಿ ಗುಂಪು ಎನ್ನಿಸಿಕೊಳ್ಳುತ್ತದೆ. ಅಸಂಖ್ಯ ಜನರ ಬೆಂಬಲ ಇರುವುದರಿಂದ ತಮ್ಮನ್ನು ಯಾರೂ ಕೆಣಕಲಾರರು ಎಂಬ ಧೈರ್ಯವೂ ಸಾವಿರ ಸಾವಿರ ಸಂಖ್ಯೆಯ ತಾವು ತಪ್ಪು ಮಾಡಲಾರೆವು ಎಂಬ ಭರವಸೆಯೂ ಜನಸಂದಣಿಗಳ ಶಕ್ತಿಯ ಮೂಲ, ಜನಸಂದಣಿಯ ಅಭ್ಯಾಸಕ್ಕೆ ಶ್ರೀಕಾರ ಹಾಕಿದ ಫ್ರೆಂಚ್ ಚಿಂತಕನಾದ ಗಸ್ಟಾವ್ ಲೆ ಬಾನ್ ಅವನ್ನು ವಿನಾಶಕಾರಿ ಹಾಗೂ ನೀತಿಹೀನ ಎಂದು ಅಭಿಪ್ರಾಯಪಟ್ಟಿದ್ದರೂ ಅವು ಹಾಗಿರಬೇಕೆಂದೇನೂ ಇಲ್ಲ. ಕೆಡುಕು ಮಾಡದ, ಶಾಂತರೀತಿಯಲ್ಲಿ ವರ್ತಿಸುವ ನೂರಾರು

ವಿಧದ ಸಂದಣಿಗಳಿವೆ. ವೀರರನ್ನು ಸ್ವಾಗತಿಸುವ, ವಿಜಯವನ್ನು ಆಚರಿಸುವ, ಹಬ್ಬಹುಣ್ಣಿಮೆಗಳಲ್ಲಿ ಪಾಲುಗೊಳ್ಳುವ, ತಮ್ಮ ಸಂತೋಷವನ್ನು ವ್ಯಕ್ತಗೊಳಿಸಲು ನೆರೆವ ಸಂದಣಿಗಳೂ ಕಡಿಮೆಯಿಲ್ಲ.

ಸಂದಣಿಗಳಲ್ಲಿ ನಾವು ಅನೇಕ ವಿಧಗಳನ್ನು ಗುರುತಿಸಬಹುದು. ಕೆಲವು ಆಕಸ್ಮಿಕ ಸಂದಣಿಗಳು (ಕ್ಯಾಷುಅಲ್ ಕ್ರೌಡ್ಸ್). ದೈನಂದಿನ ಜೀವನದ ಯಾವುದೇ ಘಟನೆ ಆಕಸ್ಮಿಕವಾಗಿ ಅನೇಕ ಜನರನ್ನು ಒಂದೆಡೆಗೆ ತರಬಹುದು. ಬೀದಿಯಲ್ಲಿ ಜಗಳವಾಡುವುದಾಗಲಿ ರೈಲು ಹಳಿ ತಪ್ಪುವುದಾಗಲಿ ಅಥವಾ ಬೇರೊಂದು ಘಟನೆಯಾಗಲಿ ನೂರಾರು ಜನರನ್ನು ಹತ್ತಿರ ತರುತ್ತದೆ. ಕೆಲವು ಸಾಂಪ್ರದಾಯಿಕ ಸಂದಣಿಗಳು (ಕನ್ವೆನ್ಷನಲ್ ಕ್ರೌಡ್ಸ್) ಪ್ರೇಕ್ಷಕ ವೃಂದಗಳಂತೆ ಹೆಚ್ಚು ವ್ಯವಸ್ಥಿತವಾಗಿವೆ. ಇವಲ್ಲದೆ ಭಾವನೆಗಳನ್ನು ವ್ಯಕ್ತಗೊಳಿಸುವ (ಎಕ್ಸ್‌ಪ್ರೆಸಿವ್) ಜನಸಂದಣಿಗಳೂ ಇವೆ. ಇವುಗಳಲ್ಲಿ ಜನರು ತಮ್ಮ ಸಂತೋಷ, ಭಯ, ಉತ್ಸಾಹ, ಭಕ್ತಿ ಮೊದಲಾದ ಭಾವನೆಗಳನ್ನು ತೋಡಿಕೊಳ್ಳುತ್ತಾರೆ. ಭಜನೆ ಮಾಡುವುದು, ಕುಣಿಯುವುದು, ಹಾಡುವುದು, ಕೈಬೀಸುವುದು ಮುಂತಾದವುಗಳ ಮೂಲಕ ಇದು ನಡೆಯುತ್ತದೆ. ಮತ್ತೆ ಕೆಲವು ಕೋಪೋದ್ರಿಕ್ತ ಸಂದಣಿಗಳು. ಥಳಿಸುವ, ಹಿಂಸೆ ಕೊಡುವ, ಲೂಟಿ ಮಾಡುವ, ಬೆಂಕಿ ಹಚ್ಚುವ ಇಂಥ ಗುಂಪುಗಳನ್ನು ಕ್ರಿಯಾಶೀಲ (ಆಕ್ಟಿವ್) ಗುಂಪುಗಳೆಂದು ದೊಂಬಿಗುಂಪುಗಳೆಂದೂ (ಮಾಬ್) ಕರೆಯುತ್ತಾರೆ.

ಜನಸಂದಣಿಗಳಲ್ಲಿ ವ್ಯಕ್ತಿಗಳ ವರ್ತನೆ ಬೇರೆ ಸನ್ನಿವೇಶಗಳಲ್ಲಿನ ವರ್ತನೆಗಿಂತ ಭಿನ್ನವಾದುದೆಂದು ಅನೇಕರು ಗುರುತಿಸಿದ್ದಾರೆ. ಈ ವಿಪರೀತ ವರ್ತನೆಗೆ ಕಾರಣಗಳೇನೆಂದು ಕೆದಕಿದ್ದಾರೆ. ಗಸ್ಟಾವ್ ಲೆ–ಬಾನ್ ಜನಸಂದಣಿಯಲ್ಲಿ ವ್ಯಕ್ತಿಗಳ ಮನಸ್ಸಿಗಿಂತ ಭಿನ್ನವಾದ ಸಾಮೂಹಿಕ ಮನಸ್ಸು ಉದ್ಭವಿಸುವುದೇ ಕಾರಣವೆಂದು ಪ್ರತಿಪಾದಿಸಿದ್ದಾರೆ. ಅವನ ಪ್ರಕಾರ ಜನಸಂದಣಿಯ ಸದಸ್ಯರು ಅಮಿತ ಶಕ್ತಿಯ ಭಾವನೆ, ಭಯನಿವೃತ್ತಿ, ಹೆಚ್ಚಿನ ಸೂಚ್ಯತೆ ಹಾಗೂ ಅನುಕರಣಗಳ ಸಹಾಯದಿಂದ ವಿಪರೀತ ವರ್ತನೆಯಲ್ಲಿ ತೊಡಗುತ್ತಾರೆ. ಆಲ್‌ಪೋರ್ಟ್ ಮೊದಲಾದ ಅನಂತರದ ಲೇಖಕರು ಈ ಸಾಮೂಹಿಕ ಮನಸ್ಸಿನ ಸಿದ್ಧಾಂತವನ್ನು ಖಂಡಿಸಿ ಬರೆದಿದ್ದಾರೆ.

**ಪ್ರೇಕ್ಷಕ ವೃಂದ :** ಇದು ಜನಸಂದಣಿಯಿಂದ ಸ್ವಲ್ಪ ಭಿನ್ನವಾದ ಇನ್ನೊಂದು ಅಶಾಶ್ವತ ಗುಂಪು. ಭಾಷಣ, ಸಂಗೀತ, ಕೀರ್ತನೆ, ಧಾರ್ಮಿಕ ಪ್ರವಚನ ಮುಂತಾದುವನ್ನು ಕೇಳಲು ಒಂದೆಡೆಗೆ ಕಲೆತ ಜನರೂ ನರ್ತನ, ನಾಟಕ, ಜಾದೂ ಆಟಗಳನ್ನು ನೋಡಲು ಕಲೆತ ಜನರೂ ಪ್ರೇಕ್ಷಕ ವೃಂದಕ್ಕೆ ಸೇರಿದವರು. ಗೊತ್ತಾದ ಜಾಗದಲ್ಲಿ, ಗೊತ್ತಾದ ಕಾಲದಲ್ಲಿ ಅವರು ಕೂಡುತ್ತಾರೆ. ಅವರೆಲ್ಲರನ್ನೂ ಪ್ರಚೋದಿಸುವ ಒಂದು ವ್ಯಕ್ತಿ, ವಸ್ತು ಅಥವಾ ಸನ್ನಿವೇಶ ಕೇಂದ್ರಬಿಂದುವಾಗಿರುತ್ತದೆ. ಸದಸ್ಯರೆಲ್ಲ ಈ ಬಿಂದುವಿನ ಕಡೆಗೆ ಗಮನ ಕೊಡುತ್ತಾರೆಯೇ ವಿನಾ ಉಳಿದ ಸದಸ್ಯರ ಕಡೆಗಲ್ಲ. ಗಂಟೆ ಬಾರಿಸುವುದು, ಪರದೆ ಎಳೆಯುವುದು, ದೀಪವಾರಿಸುವುದು, ವೇದಿಕೆ ಸಿದ್ಧಪಡಿಸುವುದು ಮುಂತಾದ ಚಟುವಟಿಕೆಗಳಿಂದ ಸದಸ್ಯರ ಗಮನ ಆಕಡೆಗೆ ಆಕರ್ಷಿತವಾಗುತ್ತದೆ. ಪ್ರೇಕ್ಷಕ ವೃಂದದಲ್ಲಿ ಸದಸ್ಯರು ಅನುಸರಿಸಬೇಕಾದ ನೀತಿನಿಯಮಾವಳಿಗಳು ಇವೆ. ಜನಸಂದಣಿಗಳಂತೆ ಇವು ಅಸ್ಥಿರವಿದ್ದರೂ ಅಸಂಘಟಿತವಿದ್ದರೂ ಇಲ್ಲಿ ಸಂಪ್ರದಾಯದ ಅಂಶವಿದೆ. ಸಭೆಯನ್ನು ಪ್ರವೇಶಿಸುವುದು ಅಥವಾ ಸಭೆಯಿಂದ ಹೊರಬರುವುದು, ಕುಳಿತುಕೊಳ್ಳುವುದು ಅಥವಾ ಎದ್ದು ನಿಲ್ಲುವುದು, ಕೈಚಪ್ಪಾಳೆ ತಟ್ಟುವುದು ಅಥವಾ ಪ್ರಶ್ನೆ ಕೇಳುವುದು ಎಲ್ಲವೂ ಕ್ರಮಬದ್ಧ. ಹಾಗೆಂದೇ ಕೆಲವರು ಇಂಥ ಗುಂಪುಗಳನ್ನು ಸಾಂಪ್ರದಾಯಿಕ ಜನಸಂದಣಿಗಳೆಂದು ಕರೆದಿದ್ದಾರೆ. ಪ್ರೇಕ್ಷಕ ವೃಂದಗಳ ಇನ್ನೊಂದು ಲಕ್ಷಣವೆಂದರೆ ಭೌತಿಕ ಸಾಮೀಪ್ಯ. ಪ್ರೇಕ್ಷಕರಾಗಲು ಒಂದೆಡೆ ಕೂಡಲೇಬೇಕು. ರೇಡಿಯೋ ಕೇಳುವ ಚದರಿದ ಶ್ರೋತೃವರ್ಗ ಅಥವಾ ಟೆಲಿವಿಷನ್ ನೋಡುತ್ತಿರುವ ಜಗತ್ತಿನ ಲಕ್ಷಾವಧಿ ಜನರು ಪ್ರೇಕ್ಷಕರಲ್ಲ. ಅವರನ್ನು ಸಾರ್ವಜನಿಕರು ಎನ್ನಬಹುದು ಅಷ್ಟೆ. ಪ್ರೇಕ್ಷಕ ವೃಂದಗಳಲ್ಲಿಯೂ ವೈವಿಧ್ಯವಿದೆ. ಕೆಲವು ಮಾಹಿತಿ ಬಯಸುವ ವೃಂದಗಳಾದರೆ ಮತ್ತೆ ಕೆಲವು ಮನೋರಂಜನೆ ಬಯಸುವ ವೃಂದಗಳು. ಇನ್ನು ಕೆಲವು ಗುಂಪುಗಳಲ್ಲಿ ಸದಸ್ಯರನ್ನು ಬೇರೊಂದು ಧರ್ಮಕ್ಕೆ ಸೇರಲು ಅಥವಾ ಬೇರೊಂದು ವಿಚಾರ ಇಲ್ಲವೆ ಆದರ್ಶವನ್ನು ಒಪ್ಪಲು ಮನವೊಲಿಸುವ ಪ್ರಯತ್ನ ನಡೆಯುತ್ತದೆ. ಪಾದ್ರಿಯ ಉಪದೇಶ, ಮುಂದಾಳುವಿನವಾದ, ಹಿರಿಯರ ಹಿತವಚನ ಮುಂತಾದುವನ್ನು ಕೇಳುವ ಈ ಗುಂಪುಗಳನ್ನು ಪರಿವರ್ತನೆಗೆ ಪಕ್ಕಾಗುತ್ತಿರುವ ವೃಂದಗಳೆನ್ನಬಹುದು. ಪ್ರೇಕ್ಷಕ ವೃಂದಗಳಲ್ಲಿ ಶಾಂತ ರೀತಿಯಿಂದ ಕೇಳುವ ನೋಡುವ ಜಡಗುಂಪುಗಳೂ ಇವೆ; ಸಂಪ್ರದಾಯಕ್ಕೆ ಗೌರವ ನೀಡಲು ಹಾಗೂ ಹೆಚ್ಚು ಕ್ರಿಯಾಶೀಲವಾಗಿ ವರ್ತಿಸುವ ಪಟುಗುಂಪುಗಳೂ ಇವೆ.

**ದೊಂಬಿ ಗುಂಪುಗಳು :** ಜನಸಂದಣಿಗಳಲ್ಲಿ ಕೆಲವು ಹೆಚ್ಚು ತೀವ್ರಗತಿಯ ಅಂತರ ಕ್ರಿಯೆಗಳಿಂದ ಕೂಡಿದ್ದು ಕ್ರಿಯಾಶೀಲವಾಗಿರುತ್ತವೆ. ಬೇರೆ ಸಂದಣಿಗಳಂತೆ ಅವು ಅಲ್ಪಾಯುವಾಗಿದ್ದರೂ ಒಮ್ಮೊಮ್ಮೆ ಮಾತ್ರ ಸೇರಿ ಮಾಯವಾಗುವಂಥ ಗುಂಪುಗಳಾಗಿದ್ದರೂ ಅಲ್ಲಿನ ಸದಸ್ಯರ ಭಾವನೆಗಳು ತೀಕ್ಷ್ಣವಾಗಿದ್ದು ಪರಸ್ಪರ ಅಂತರಕ್ರಿಯೆಗಳು ತೀವ್ರವಾಗಿರುತ್ತವೆ. ವರ್ಗಕಲಹ, ರಾಜಕೀಯ ಸಂಘರ್ಷ, ಕಾರ್ಮಿಕರ ಜಗಳ, ಜನಾಂಗದ್ವೇಷ ಮುಂತಾದ ಕಾರಣಗಳಿಗಾಗಿ ಇಂಥ ದೊಂಬಿಗಳು ಹುಟ್ಟುತ್ತವೆ. ಹಾಗೆ ನೋಡಿದರೆ, ಅನೇಕ ಸಲ ಮೊದ ಮೊದಲು ಆಕಸ್ಮಿಕವಾಗಿ ಕೂಡಿದ ಜನರು ಇಲ್ಲವೆ ಸಾಂಪ್ರದಾಯಿಕವಾಗಿ ಸೇರಿದ ಜನರು ಮುಂದೆ ದೊಂಬಿಗುಂಪಾಗಿ ಮಾರ್ಪಡಲೂಬಹುದು. ಆಗ ನಾವು ಮತ್ತು ಅವರು ಎಂಬ ಭಾವನೆಗಳು ತೀವ್ರಗತಿಯಿಂದ ಹುಟ್ಟಿಕೊಳ್ಳುತ್ತವೆ. ಸ್ನೇಹಿತರು ಯಾರು, ವೈರಿಗಳು ಯಾರು ಎಂದು ನಿರ್ಣಯವಾಗುತ್ತದೆ. ದೊಂಬಿ ಗುಂಪುಗಳಲ್ಲಿ ತಪ್ಪು ಒಪ್ಪುಗಳ ಚರ್ಚೆ ಅಸಾಧ್ಯ. ಆಲೋಚನೆಗೆ ವ್ಯವಧಾನವಿಲ್ಲ. ಎಲ್ಲ ವ್ಯಕ್ತಿಗಳೂ ತಮ್ಮ ಸ್ವತಂತ್ರವಾದ ಅಸ್ತಿತ್ವವನ್ನು ಕಳೆದುಕೊಂಡು ಅನಾಮಧೇಯರಾಗುತ್ತಾರೆ. ಗುಂಪಿನಲ್ಲಿ ಪೂರ್ಣವಾಗಿ ತಾದಾತ್ಮ್ಯ ಹೊಂದುತ್ತಾರೆ. ಅವರಿಗೆ ಕೆಲವು ವ್ಯಕ್ತಿಗಳು ಇಲ್ಲವೆ ವಸ್ತುಗಳು ಇಲ್ಲವೆ ಗುಂಪುಗಳು ಆಕ್ರಮಣದ ಕೇಂದ್ರಗಳಾಗುತ್ತವೆ. ಉಲ್ಬಣಿಸಿದ ಭಾವೋದ್ರೇಕದಿಂದ ಜನ ವರ್ತಿಸುತ್ತಾರೆ. ಕಲ್ಲು ತೂರುವುದು, ಕೊಳ್ಳೆ ಹೊಡೆಯುವುದು, ಬೆಂಕಿ ಹಚ್ಚುವುದು, ಥಳಿಸುವುದು ಇತ್ಯಾದಿ ಹಿಂಸಾತ್ಮಕ ಕಾರ್ಯಗಳಲ್ಲಿ ತೊಡಗುತ್ತಾರೆ. ತತ್ಕಾಲಕ್ಕೆ ದೊಂಬಿ ಗುಂಪಿಗೊಬ್ಬ ನಾಯಕನಿರಬಹುದು. ಆತ ಎಲ್ಲ ಜನರ ಗಮನ ಆಕ್ರಮಣದ ಕಡೆಗೆ ಕೇಂದ್ರೀಕೃತವಾಗುವಂತೆ ನೋಡಿಕೊಳ್ಳುತ್ತಾನೆ. ದೊಂಬಿಗುಂಪನ್ನು ಚದರಿಸಬೇಕಾದರೆ ಈ ನಾಯಕನನ್ನು ಗುಂಪಿನಿಂದ ಬೇರ್ಪಡಿಸುತ್ತಾರೆ. ಇಲ್ಲವೆ ಜನರ ಗಮನ ಬೇರೆ ಕಡೆಗೆ ಹರಿಯುವಂತೆ ಮಾಡುತ್ತಾರೆ ಎಂಬುದು ಸರ್ವವಿದಿತವಾದ ವಿಷಯ. ಗಾಳಿಸುದ್ದಿ, ಕಟ್ಟುಕತೆಗಳು, ವದಂತಿಗಳು ದೊಂಬಿಗುಂಪುಗಳಲ್ಲಿ ಮಹತ್ತ್ವದ ಪಾತ್ರ ವಹಿಸುತ್ತವೆ. ಮುಷ್ಕರ, ಪಿಕೆಟಿಂಗ್, ಮತಪ್ರದರ್ಶನ, ಮೆರವಣಿಗೆ, ಕಪ್ಪುಬಾವುಟ ತೋರಿಸುವುದು ಹೀಗೆ ಪ್ರಾರಂಭವಾಗುವ ಕಾರ್ಮಿಕರ, ಮತ್ತಿತರರ ಗುಂಪುಗಳು ನಮಗೆ ಪರಿಚಿತವಾದ ದೊಂಬಿಗುಂಪುಗಳು. ಈಚೆಗೆ ಜನಾಂಗೀಣ ದೊಂಬಿಗುಂಪುಗಳು ಮತ್ತು ಯುವಜನರ ದೊಂಬಿಗುಂಪುಗಳು ಕೂಡ ಹೆಚ್ಚುತ್ತಿರುವುದನ್ನು ನೋಡುತ್ತೇವೆ. ಇವುಗಳ ಮೂಲ ಎಲ್ಲಿ ಎಂದು ಹೇಳುವುದು ಕಷ್ಟ. ಮಾರ್ಟಿನ್ ಹೇಳುವಂತೆ ನಾವೆಲ್ಲ ತಾತ್ಕಾಲಿಕವಾಗಿ ಸಾಮೂಹಿಕವಾಗಿ ಹುಚ್ಚರಾಗುವುದರ ಪರಿಣಾಮವೇ ದೊಂಬಿಗುಂಪು. ಏನಾದರೂ ಹೊಸತು ಬೇಕೆಂಬ ಹಂಬಲಕ್ಕಾಗಿ, ಏಕತಾನ ಮೀರುವುದಕ್ಕಾಗಿ, ನಮ್ಮಲ್ಲಿ ಅದುಮಿ ಹಿಡಿದಿಟ್ಟಿರುವ ಭಯ, ರಾಗ ದ್ವೇಷಗಳನ್ನು ಹೊರಗೆಡಹುವುದಕ್ಕಾಗಿ ಹೀಗೆ ಬಗೆ ಬಗೆಯ ಸಾಮೂಹಿಕ ಉನ್ಮಾದದಲ್ಲಿ ಪಾಲುಗೊಳ್ಳುತ್ತೇವೆ. ಸಾಮಾಜಿಕ ಬದಲಾವಣೆ ಮತ್ತು ಅಶಾಂತಿಯ ಕಾಲದಲ್ಲಿ ದೊಂಬಿಗುಂಪುಗಳಿಗೆ ಅವಕಾಶ ಹೆಚ್ಚು.

**ಪಲಾಯನ ಗುಂಪುಗಳು :** ಭೂಕಂಪ, ನೆರೆಹಾವಳಿ, ಬೆಂಕಿ ಹೊತ್ತಿಕೊಳ್ಳುವುದು, ಬಾಂಬ್ ದಾಳಿ, ವೈರಿಗಳ ಆಕ್ರಮಣ ಮುಂತಾದ ಆಕಸ್ಮಿಕಗಳಲ್ಲಿ ಹಾಗೂ ಸಂಕಟಗಳಲ್ಲಿ ಜನ ತಮ್ಮ ಮಾನಸಿಕ ಸ್ಥೈರ್ಯವನ್ನು ಕಳೆದುಕೊಳ್ಳುವುದನ್ನೂ ಕೈಕಾಲು ಕಳೆದುಕೊಂಡವರಂತೆ ವರ್ತಿಸುವುದನ್ನೂ ದಿಙ್ಮೂಢರಂತೆ ಅಳುವುದನ್ನೂ, ಪಲಾಯನ ಮಾಡುವುದನ್ನೂ ನಾವು ನೋಡಿದ್ದೇವೆ. ಇಂಥ ಗುಂಪುಗಳನ್ನು ಪಲಾಯನ ಗುಂಪುಗಳೆಂದೂ ಭಯಗ್ರಸ್ತ ಜನಸಂದಣಿಗಳೆಂದೂ ಕರೆಯುತ್ತಾರೆ. ದೊಂಬಿಗುಂಪುಗಳಂತೆ ಇವು ಕೂಡ ಕ್ರಿಯಾಶೀಲ ಸಂದಣಿಗಳು. ಆದರೆ ಕೋಪೋದ್ರಿಕ್ತವಾದ ದೊಂಬಿಗುಂಪುಗಳಲ್ಲಿ ಜನರು ವಿಧ್ವಂಸಕ ಕೃತ್ಯಗಳಿಗೆ ಮುನ್ನುಗ್ಗಿದರೆ ಪಲಾಯನ ಗುಂಪುಗಳಲ್ಲಿ ಸ್ವರಕ್ಷಣೆಗಾಗಿ ಚೆಲ್ಲಾಪಿಲ್ಲಿಯಾಗಿ ಓಡುತ್ತಾರೆ. ದೊಂಬಿಗುಂಪುಗಳಲ್ಲಿ ಜನ ತಮ್ಮ ಸ್ವಂತ ಅಸ್ತಿತ್ವವನ್ನು ಸಂಪೂರ್ಣವಾಗಿ ಮರೆತರೆ ಪಲಾಯನ ಗುಂಪುಗಳಲ್ಲಿ ಸ್ವಂತ ರಕ್ಷಣೆಗಾಗಿ ಉಳಿದ ಎಲ್ಲರನ್ನೂ ಮರೆಯುತ್ತಾರೆ. ದೇಶ ಬಿಟ್ಟು ಓಡಿಬರುವ ನಿರಾಶ್ರಿತರು ಮಕ್ಕಳು ಮರಿಗಳನ್ನೂ ಬಂಧುಗಳನ್ನೂ ಬಿಟ್ಟು ಜೀವದಾಸೆಯಿಂದ ಓಡಿಬರುವುದನ್ನು ನೋಡಿದ್ದೇವೆ. ಸಮಾಜ ವಿಜ್ಞಾನಿಗಳು ಚೆನ್ನಾಗಿ ವಿಶ್ಲೇಷಿಸಿದ ಒಂದು ಪಲಾಯನ ಗುಂಪಿನ ಉದಾಹರಣೆಯೆಂದರೆ ಕ್ಯಾಂಟ್ರಿಲ್ ಮತ್ತು ಸಂಗಡಿಗರು 1938ರಲ್ಲಿ ಅಮೆರಿಕೆಯಲ್ಲಿ ನಡೆಸಿದ ಪ್ರಯೋಗ. ಆರ್ಸನ್ ವೆಲ್ಸ್ ಎಂಬ ಪ್ರಸಿದ್ಧ ನಟ ಅಭಿನಯಿಸಿದ ಮಂಗಳ ಲೋಕದಿಂದ ಆಕ್ರಮಣ ಎಂಬ ನಾಟಕವನ್ನು ರೇಡಿಯೋದಿಂದ ಬಿತ್ತರಿಸಲಾಯಿತು. ಅದು ನಾಟಕದಂತೆ ಇರದೆ ವೀಕ್ಷಕ ವಿವರಣೆಯಂತೆ ಇದ್ದುದರಿಂದ ಜನ ಅದನ್ನು ಮಂಗಳ ಲೋಕದವರ ನಿಜವಾದ ಆಕ್ರಮಣವೆಂದು ನಂಬಿ ಭಯಗ್ರಸ್ತರಾಗಿ ವರ್ತಿಸಿದರು. ಸಾವಿರಾರು ಜನ ರಸ್ತೆಗಳಲ್ಲಿ ನೆರೆದರು; ಪೋಲಿಸ್ ಕಚೇರಿಗಳಿಂದ ಮಾಹಿತಿ ಕೇಳಿದರು; ಕೈಗೆ ಸಿಕ್ಕ ಕಾರುಗಳಲ್ಲಿ ಕೂತು ಪಲಾಯನ ಮಾಡಿದರು; ಚರ್ಚುಗಳಲ್ಲಿ ಪ್ರಾರ್ಥನೆ ಸಲ್ಲಿಸಿದರು; ಅತ್ತರು. ಒಟ್ಟಿನಲ್ಲಿ ಪಲಾಯನ ಗುಂಪುಗಳಲ್ಲಿ ಸುವ್ಯವಸ್ಥಿತ ಜೀವನಕ್ಕೆ ಬೇಕಾದ ವಿವೇಚನೆ ಮತ್ತು ಹತೋಟಿಗಳು ಇರುವುದಿಲ್ಲ.

**ಸಾರ್ವಜನಿಕರು :** ಸಾರ್ವಜನಿಕರೆಂದರೆ ಸಮಾಜದ ಪ್ರತಿಯೊಬ್ಬರೂ ಎಂದು ಅರ್ಥವಲ್ಲ. ಅದು ಯಾವುದಾದರೊಂದು ಸಮಾನ ಆಸಕ್ತಿಯನ್ನು ಉಳ್ಳ ಜನರ ಅಸಂಘಟಿತ ಮತ್ತು ಚದರಿದ ಗುಂಪು. ಸಾಮಾನ್ಯವಾಗಿ ವಿವಾದಾಸ್ಪದ ವಿಷಯವೊಂದಕ್ಕೆ ಸಂಬಂಧಿಸಿದಂತೆ ಇರುವ ಅನೇಕ ವ್ಯಕ್ತಿಗಳ ಚದರಿದ ಮತ್ತು ಅಸಂಘಟಿತ ಸಂಕಲನಕ್ಕೆ ಸಾರ್ವಜನಿಕರು ಎನ್ನಬಹುದು. ಇಲ್ಲಿ ಸುಸಂಘಟಿತವಾದ ಗುಂಪಿನ ರಚನೆಯಿಲ್ಲ; ಅಧಿಕಾರಿಗಳಿಲ್ಲ; ಏಣಿಶ್ರೇಣಿಯಿಲ್ಲ. ಜನಸಂದಣಿಯಲ್ಲಿರುವಂತೆ ವ್ಯಕ್ತಿಗಳು ಒಂದೆಡೆಗೆ ಸೇರಿರುವುದಿಲ್ಲ. ಒಬ್ಬ ದೇಶದ ಒಂದು ಮೂಲೆಯಲ್ಲಿದ್ದರೆ ಇನ್ನೊಬ್ಬ ನೂರಾರು ಮೈಲಿಗಳ ದೂರದ ಮತ್ತೊಂದು ಮೂಲೆಯಲ್ಲಿ ಇರಬಹುದು. ಅವರ ನಡುವಿನ ಸಂಪರ್ಕ ತೀರ ಅತ್ಯಲ್ಪ; ಇರುವಷ್ಟು ಸಂಪರ್ಕ ಕೂಡ ಪರೋಕ್ಷವಾದುದು. ಸಾರ್ವಜನಿಕ ಸಂಪರ್ಕದ ಮಾಧ್ಯಮಗಳಾದ ರೇಡಿಯೊ, ಟೆಲಿವಿಷನ್, ವಾರ್ತಾಪತ್ರಿಕೆಗಳ ಮೂಲಕವೇ ಅವರು ತಮ್ಮ ಸಮಾನ ಆಸಕ್ತಿಗಳನ್ನು ಗುರುತಿಸಿಕೊಳ್ಳುತ್ತಾರೆ. ಆ ಕಾರಣದಿಂದಲೇ ಗ್ಯಾಬ್ರಿಯೆಲ್ ತಾರ್ಡ್ ಎಂಬಾತ ಸಾರ್ವಜನಿಕರು ಮುದ್ರಣಾಲಯದ ಸೃಷ್ಟಿಗಳೆಂದು ಕರೆದಿದ್ದಾನೆ. ಸಾರ್ವಜನಿಕರು ಹೆಚ್ಚು ಕಡಿಮೆ ಜನಸಂದಣಿಯಂತೆಯೇ ವರ್ತಿಸುತ್ತಾರೆ. ಆದರೂ ಈ ಎರಡು ಗುಂಪುಗಳ ನಡುವೆ ಕೆಲವು ಭೇದಗಳಿವೆ. ಭಾವೋದ್ವೇಗ, ಚಂಚಲತೆಗಳಂಥ ಗುಣಗಳಿದ್ದರೂ ಸಾರ್ವಜನಿಕರಲ್ಲಿ ವಾದಮಂಡನೆ, ಚರ್ಚೆ, ವಿವೇಚನೆ, ಭಿನ್ನಾಭಿಪ್ರಾಯಗಳಿಗೆ ಸಾಕಷ್ಟು ಅವಕಾಶವಿದೆ. ಜನಸಂದಣಿಯಲ್ಲಿ ಇದು ಸಾಧ್ಯವಿಲ್ಲ. ಅಲ್ಲಿ ಮನಸ್ಸಿಗೆ ಅವೇಗ ಹೆಚ್ಚು; ರಭಸ ಹೆಚ್ಚು. ಇದಲ್ಲದೆ ನಾವು ಏಕಕಾಲಕ್ಕೆ ಅನೇಕ ಸಾರ್ವಜನಿಕ ಗುಂಪುಗಳಿಗೆ ಸೇರುವ ಸಾಧ್ಯತೆ ಇದೆ. ಆದರೆ ಒಮ್ಮೆಗೆ ಒಂದೇ ಜನಸಂದಣಿಯನ್ನು ಸೇರಲು ಮಾತ್ರ ಸಾಧ್ಯ. ನಮ್ಮ ಆಸ್ಥೆಗಳು ಬೆಳೆಯುತ್ತಿರುವ ಹಾಗೆಯೇ ನಾವು ಅನೇಕ ಸಾರ್ವಜನಿಕರ ಗುಂಪುಗಳ ಸದಸ್ಯರಾಗುತ್ತೇವೆ. ಯುದ್ಧ ತೆರಿಗೆ, ಸಾರ್ವಜನಿಕ ಆರೋಗ್ಯ, ಬೆಲೆನಿಯಂತ್ರಣ, ಚಂದ್ರಲೋಕ ಯಾತ್ರೆ, ನದಿಗಳ ನೀರಿನ ಹಂಚಿಕೆ, ರಾಜ್ಯಗಳ ಪುನರ್ಘಟನೆ –ಹೀಗೆ ಅನೇಕ ಸಾರ್ವಜನಿಕ ವಿಚಾರಗಳು ತತ್ಸಂಬಂಧದ ಸಾರ್ವಜನಿಕರನ್ನು ಸೃಷ್ಟಿಸುತ್ತವೆ. ಒಟ್ಟಿನಲ್ಲಿ ಸಾರ್ವಜನಿಕರೆಂದರೆ ಸಾರ್ವಜನಿಕ ವಿಚಾರವೊಂದರ ಸುತ್ತ ಇರುವ ಜನರ ಗುಂಪು. ಸಾರ್ವಜನಿಕ ಸಂಪರ್ಕ ಮಾಧ್ಯಮಗಳಿಂದ ಈ ಗುಂಪು ಹೆಣೆಯಲ್ಪಟ್ಟಿದೆ. ಇಲ್ಲಿ ಚರ್ಚೆ ವಿವೇಚನೆಗಳಿಗೆ ಹೆಚ್ಚು ಅವಕಾಶವಿದೆ. ಪ್ರಜಾಪ್ರಭುತ್ವದಲ್ಲಿ ಈ ಗುಂಪುಗಳು ಬಹಳ ಮಹತ್ತ್ವ ಪಡೆದಿವೆ. ಈಗ ಅಭಿಪ್ರಾಯಗಳು ಒಂದು ಚಿಕ್ಕ ಸಮುದಾಯಕ್ಕಷ್ಟೇ ಸೀಮಿತವಾಗದೆ ವಿಶ್ವವ್ಯಾಪ್ತಿಯಾಗುತ್ತಿವೆ. ಮುದ್ರಣಾಲಯ ಮತ್ತು ಸಾರ್ವಜನಿಕ ಸಂಪರ್ಕ ಮಾಧ್ಯಮಗಳು ಬೆಳೆದಂತೆಲ್ಲ ಸಾರ್ವಜನಿಕರ ಗುಂಪುಗಳು ವಿಸ್ತಾರವಾಗುತ್ತಲೂ ವೈವಿಧ್ಯಮಯ ವಾಗುತ್ತಲೂ ಇವೆ. ಇವರ ಅಭಿಪ್ರಾಯವೇ ಉದ್ದಿಮೆಯೊಂದನ್ನು ಉಳಿಸಬಹುದು ಅಥವಾ ಅಳಿಸಬಹುದು. ಯುದ್ಧದ ಕಿಡಿ ಹೊತ್ತಿಸಬಹುದು ಅಥವಾ ಸರಕಾರವೊಂದನ್ನು ಉರುಳಿಸಬಹುದು.

**ಜನಸ್ತೋಮಗಳು :** ಜನಸಂದಣಿಗಳಂತಿರುವ, ಆದರೆ ಕೆಲವು ಸಂಗತಿಗಳಲ್ಲಿ ಅವುಗಳಿಗಿಂತ ಭಿನ್ನವಾಗಿರುವ, ಕೆಲವು ಸಂಕಲನಗಳನ್ನು ಜನಸ್ತೋಮಗಳೆಂದು ಕರೆಯುತ್ತಾರೆ. ಅನೇಕ ಜನ ಒಂದು ಸಾಮಾನ್ಯವಾದ ಪ್ರಚೋದಕ ವಸ್ತುವಿನ ಬಗೆಗೆ ಒಂದೇ ರೀತಿಯಲ್ಲಿ ವ್ಯಕ್ತಿಗತವಾಗಿ ವರ್ತಿಸುತ್ತಾರೆ. ಉದಾಹರಣೆಗೆ, ಎಲ್ಲೋ ಒಂದೆಡೆ ಧಾರಾಳವಾಗಿ ವಜ್ರವೋ ಚಿನ್ನವೋ, ಪುಕ್ಕಟೆ ಭೂಮಿಯೋ ಸಿಗುತ್ತದೆಂದು ವಂದತಿ ಹಬ್ಬಿ ಲಕ್ಷಗಟ್ಟಲೆ ಜನ ಉಳಿದವರ ಹಾಗೆ ಅವುಗಳ ಬೆನ್ನು ಹತ್ತಿ ಓಡಿಹೋದದ್ದನ್ನು, ವಿಚಿತ್ರವಾಗಿ ವರ್ತಿಸಿದ್ದನ್ನು ಕೇಳಿದ್ದೇವೆ. ಹಾಗೆಯೇ ತಾತ್ಕಾಲಿಕ ಫ್ಯಾಷನ್ನುಗಳನ್ನು ವಿಚಿತ್ರ ಪದ್ಧತಿಗಳನ್ನು ಇತರರಂತೆ ಅನುಸರಿಸುವ ಸಾವಿರಾರು ಜನರಿದ್ದಾರೆ. ಇತರರು ದೇಶ ಬಿಟ್ಟರೆಂದು ತಾವೂ ಬಿಡುವ ಜನರಾಶಿಗಳಿವೆ. ಇತರರಂತೆ ಸುದ್ದಿಗಳಿಗೆ ಕಾಯುವ ಲಕ್ಷಗಟ್ಟಲೆ ಜನರಿದ್ದಾರೆ. ಇವರೆಲ್ಲ ಒಂದು ಸುಸಂಘಟಿತ ಗುಂಪಿಗೆ ಸೇರಿದ ಜನರಲ್ಲ. ಇವರು ಬೇರೆ ಬೇರೆ ವರ್ಗಗಳಿಗೆ ಹಾಗೂ ಸಾಂಸ್ಕೃತಿಕ ಮಟ್ಟಗಳಿಗೆ ಸೇರಿದವರು. ಇವರು ಪರಸ್ಪರ ಸಂಪರ್ಕ ಹೊಂದಿರುವುದಿಲ್ಲ. ಅನಾಮಧೇಯರಾಗಿದ್ದು, ಒಬ್ಬರಿಗೊಬ್ಬರು ಅಪರಿಚಿತರಾಗಿದ್ದು, ತಮ್ಮಷ್ಟಕ್ಕೆ ನಾವು ಸಮಾನರೀತಿಯಿಂದ ವರ್ತಿಸುತ್ತಾರೆ. ಇವರು ಜನಸಂದಣೀಯ ವ್ಯಕ್ತಿಗಳಂತೆ ಏಕತ್ರವಿರುವುದಿಲ್ಲ. ಸಾಮೂಹಿಕವಾಗಿ ವರ್ತಿಸುವುದೂ ಇಲ್ಲ. ಒಬ್ಬ ವ್ಯಕ್ತಿ ಇನ್ನೊಬ್ಬನಿಗೆ ಯಾವುದೇ ರೀತಿಯಿಂದ ಅಂಟಿಕೊಂಡಿಲ್ಲ. ಅವನಿಗೆ ನಿಶ್ಚಿತ ಅಂತಸ್ತು ಪಾತ್ರಗಳಿಲ್ಲ. ಆತ ಪ್ರತ್ಯೇಕಿತ, ಅನಾಮಧೇಯ, ಹೀಗಾಗಿ ತನ್ನಷ್ಟಕ್ಕೆ ನಾನು ವರ್ತಿಸಲು ಸ್ವತಂತ್ರ. ನಗರೀಕರಣ ಮತ್ತು ಔದ್ಯೋಗೀಕರಣದೊಡನೆ ಬಂದ ಸಾಮಾಜಿಕ ಸನ್ನಿವೇಶಗಳಲ್ಲಿ ಜನಸ್ತೋಮಗಳು ಬೆಳೆದಿವೆಯೆಂದು ಹೇಳುತ್ತಾರೆ. ರೇಡಿಯೊ, ಟೆಲಿವಿಷನ್, ಚಲನಚಿತ್ರಗಳು, ಹೊಸ ವಿದ್ಯಾಕ್ರಮಗಳು, ಪ್ರಚಾರ ಸಾಧನಗಳು, ವಲಸೆಗಳು, ದೊಡ್ಡದೊಡ್ಡ ಕಾರ್ಖಾನೆಗಳು, ಬೀದಿಗಳು ನಮ್ಮನ್ನು ಚಿಕ್ಕ ಪರಿಚಿತ ಲೋಕಗಳಿಂದ ವಿಶಾಲವಾದ ಅಪರಿಚಿತ ಲೋಕಗಳತ್ತ ಒಯ್ಯುತ್ತಿವೆಯೆಂದೂ ನಾವು ಹತ್ತಿರದ ಕುಟುಂಬ, ನೆರೆಹೊರೆಗಳಂಥ ಸಾಮುದಾಯಿಕ ಸನ್ನಿವೇಶಗಳನ್ನು ಬಿಟ್ಟು ಬೃಹತ್ ಸಂಘಟನೆಗಳನ್ನು ಸೇರುತ್ತಿರುವೆವೆಂದೂ ಫರ್ಡಿನೆಂಡ್ ಟೊನ್ನೀಸ್ ಮತ್ತು ಅನಂತರದ ಲೇಖಕರು ಹೇಳುತ್ತ ಬಂದಿದ್ದಾರೆ. ಇವರಲ್ಲಿ ಅನೇಕರ ಪ್ರಕಾರ (ಅ) ಜನಸ್ತೋಮಗಳು ಹೆಚ್ಚುತ್ತಿವೆ; (ಆ) ಹಿಂದಿನ ಸ್ಥಳೀಯ ಗುಂಪುಗಳು ಧಾರ್ಮಿಕ ಹಾಗೂ ಕುಲನಿಷ್ಠ ಗುಂಪುಗಳು ಮಾಯವಾಗುತ್ತಿವೆ; (ಇ) ಸಂಘಟನೆ ಪ್ರಬಲವಾಗುತ್ತಿದೆ; (ಈ) ರಾಷ್ಟ್ರೀಯ ಮಾರುಕಟ್ಟೆ, ರಾಷ್ಟ್ರೀಯ ಚುನಾವಣೆ ಮುಂತಾಗಿ ನಮ್ಮ ಸಾಮಾಜಿಕ ವಲಯಗಳು ವಿಸ್ತರಿಸುತ್ತಿವೆ; (ಉ) ಸಾರ್ವಜನಿಕ ಸಂಪರ್ಕ ಮಾಧ್ಯಮಗಳು ಮಹತ್ತ್ವ ಪಡೆಯುತ್ತಿವೆ. (ಎಚ್.ವಿ.ಎನ್.)

**ಗುಂಪುಮದುವೆ :** ಒಂದು ಗಂಡಸರ ಗುಂಪು ಮತ್ತೊಂದು ಹೆಂಗಸರ ಗುಂಪನ್ನು ವಿವಾಹವಾದಲ್ಲಿ ಆ ಸಂಬಂಧವನ್ನು ಈ ಹೆಸರಿನಿಂದ ಕರೆಯುತ್ತಾರೆ. (ಗ್ರೂಪ್ ಮ್ಯಾರೇಜ್, ಕಮ್ಯೂನಲ್ ಮ್ಯಾರೇಜ್). ಇದರ ಪ್ರಕಾರ ಗುಂಪಿನ ಪ್ರತಿಯೊಬ್ಬ ಗಂಡಸಿಗೂ ಇನ್ನೊಂದು ಗುಂಪಿನ ಪ್ರತಿ ಹೆಂಗಸೂ ಹೆಂಡತಿಯಾಗುತ್ತಾಳೆ. ರಾಬರ್ಟ್ ಎಚ್ ಲೋವಿ ಎಂಬ ಪ್ರಸಿದ್ಧ ಸಮಾಜಶಾಸ್ತ್ರಜ್ಞ ಈ ಬಗ್ಗೆ ಇರುವ ವಿವಿಧ ಅಭಿಪ್ರಾಯಗಳನ್ನು ಪರಿಶೀಲಿಸಿ ತನ್ನದೇ ಆದ ಇತ್ಯರ್ಥಕ್ಕೆ ಬರುತ್ತಾನೆ.

ಬಹುಪತ್ನೀತ್ವ (ಪಾಲಿಗಮಿ), ಬಹುಪತಿತ್ವ (ಪಾಲಿಯಾಂಡ್ರಿ). ಏಕ ಪತ್ನಿತ್ವ ಅಥವಾ ಏಕಪತಿತ್ವ (ಮಾನೊಗಮಿ), ಒಬ್ಬ ಹೆಂಡತಿ ಬದುಕಿರುವಾಗಲೆ ಮತ್ತೊಬ್ಬಳನ್ನೊ ಮತ್ತೆ ಅನೇಕರನ್ನೊ ಮದುವೆಯಾಗುವುದು (ಪಾಲಿಜಿನಿ)– ಈ ವಿಷಯಗಳನ್ನು ಎಲ್ಲ ಶಾಸ್ತ್ರಜ್ಞರೂ ಒಪ್ಪಿದ್ದಾರಾದರೂ ಗುಂಪು ಮದುವೆಯ ವ್ಯಾಪ್ತಿ ಮತ್ತು ಅದರಲ್ಲಿನ ದಾಂಪತ್ಯ ಸಂಬಂಧದ ಬಗ್ಗೆ ಅವರಲ್ಲಿ ಏಕಮತವಿಲ್ಲ.

ಎಲ್ಲಿ ವ್ಯಕ್ತಿಗಳ ಇಚ್ಛೆಗೆ ಪುರಸ್ಕಾರವಿಲ್ಲದೆ ಸಂಪೂರ್ಣವಾಗಿ ಗುಂಪೊಂದು ಮದುವೆಗಳನ್ನು ಏರ್ಪಡಿಸುತ್ತದೆಯೋ ಅಂಥ ವಿವಾಹಗಳನ್ನು ಗುಂಪು ಮದುವೆಗಳೆಂದು ರಾಬರ್ಟ್ ಬ್ರಿಫಾಲ್ಟ್ ಎಂಬಾತ ಕರೆದಿದ್ದಾನೆ. ಅಂದರೆ ವ್ಯಕ್ತಿ ತನಗೆ ಒಪ್ಪಿಗೆಯಾದ ಸಂಗಾತಿಯನ್ನು ತಾನೇ ಹುಡುಕಿ ಮದುವೆಯಾಗುವಂತಿಲ್ಲ. ಕುಟುಂಬ ಅಥವಾ ಗುಂಪು ಅವನ ಪರವಾಗಿ ಆ ಕೆಲಸವನ್ನು ತಾನು ಮಾಡುತ್ತದೆ. ಇನ್ನೊಂದು ಪದ್ಧತಿಯ ಪ್ರಕಾರ ಸಮುದಾಯ ತನಗಾಗಿ ಆರಿಸಿಟ್ಟ ಹೆಣ್ಣುಗಳಲ್ಲಿ ಒಂದನ್ನು ಗಂಡು ಆರಿಸಬೇಕಾಗುತ್ತದೆ. ಸಮುದಾಯ ಆರಿಸಿದ ಹುಡುಗಿಯರನ್ನು ಬಿಟ್ಟು ಬೇರಾವ ಗುಂಪಿನ ಹುಡುಗಿಯನ್ನು ಆಯ್ದು ಮದುವೆಯಾದರೂ ಅಂಥವರಿಗೆ ಮರಣದಂಡನೆ ವಿಧಿಸಲ್ಪಡುತ್ತದೆ. ಅರವಾಕರಲ್ಲಿ ಈ ಪದ್ಧತಿಯನ್ನು ಕಾಣುತ್ತೇವೆ. ಕಾದಿರರಲ್ಲಿ ಒಂದು ಹಳ್ಳಿಯ ಒಬ್ಬ ಯುವಕ ಬೇರೊಂದು ಗೊತ್ತಾದ ಹಳ್ಳಿಯ ಹುಡುಗಿಯ ಸಂಗಡ ವಿವಾಹವಾಗಬೇಕಾದ ಅಗತ್ಯವಿತ್ತು. ಯುವಕ ಆ ಹಳ್ಳಿಗೆ ಹೋಗಿ ಒಂದು ವರ್ಷ ದುಡಿದು, ಅಲ್ಲಿಯ ಹುಡುಗಿಯರನ್ನು ಪರಿಶೀಲಿಸಿ, ಒಬ್ಬಳನ್ನು ಮದುವೆಯಾಗಲು ನಿರ್ಧರಿಸುತ್ತಿದ್ದ. ಆದರೆ ವಿವಾಹದ ವಿಚಾರದಲ್ಲಿ ಹುಡುಗಿಯ ನಂಟರಲ್ಲಿ ಯಾವ ಮಾತುಕತೆಯನ್ನೂ ಆತ ಆರಂಭಿಸುವಂತಿರಲಿಲ್ಲ. ತನ್ನ ಸ್ವಂತ ಗ್ರಾಮಕ್ಕೆ ಹೋಗಿ ಅಲ್ಲಿ ಗ್ರಾಮಸ್ಥರ ಅನುಮತಿಯನ್ನು ಪಡೆದು ಅನಂತರ ಮದುವೆಯಾಗಬೇಕಿತ್ತು. ಈ ಸಂದರ್ಭಗಳಲ್ಲಿ ಒಂದು ಗ್ರಾಮದಲ್ಲಿ ವಾಸವಾಗಿರುವವರೆಲ್ಲರೂ ಒಂದೇ ಬುಡಕಟ್ಟಿಗೆ ಸೇರಿದವರಾಗಿರುತ್ತಿದ್ದರು ಎಂಬುದನ್ನು ಮರೆಯಬಾರದು.

ಪೂರ್ವ ಮಂಗೋಲರಲ್ಲಿ ಮದುವೆಯ ವಿಷಯವಾಗಿ ವ್ಯವಹಾರ ಮಾಡಲು ವಿವಾಹವಾಗುವ ವ್ಯಕ್ತಿಗಳಿಗಾಗಲೀ ಅಥವಾ ಅವರ ಕುಟುಂಬದವರಿಗಾಗಲೀ ಸ್ವಲ್ಪವೂ ಸ್ವಾತಂತ್ರ್ಯವಿರಲಿಲ್ಲ. ಹುಡುಗನ ಬಂಧುಗಳೆಲ್ಲರೂ ಹುಡುಗಿಯ ಬಂಧುಗಳ ಸಂಗಡ ಒಂದು ಸಂತೆಯ ದಿವಸ ಚರ್ಚಿಸಿ ಒಪ್ಪಂದಕ್ಕೆ ಬರುತ್ತಿದ್ದರು. ಅಂದು ಒಪ್ಪಂದವಾಗದಿದ್ದರೆ ಮುಂದಿನ ಸಂತೆಗೆ ತಮ್ಮ ಚರ್ಚೆಯನ್ನು ಮುಂದೆ ಹಾಕುತ್ತಿದ್ದರು.

ಗಿಲಿಯಾಕರಲ್ಲಿರುವ ಪದ್ಧತಿಯನ್ನು ಬ್ರಿಫಾಲ್ಟ್ ವಿವರಿಸಿದ್ದಾನೆ. ಇವರಲ್ಲಿ ಒಂದೂರಿನಲ್ಲಿ ಒಂದೇ ಕುಟುಂಬದ ಸದಸ್ಯರು ವಾಸಿಸುತ್ತಿದ್ದರು. ಅಲ್ಲಿದ್ದ ದೊಡ್ಡವರೆಲ್ಲರೂ ತಂದೆತಾಯಿಗಳು, ಸಣ್ಣವರೆಲ್ಲರೂ ಮಕ್ಕಳು ಮತ್ತು ಕಿರಿಯರು; ಪರಸ್ಪರವಾಗಿ ಅಕ್ಕತಂಗಿಯರು ಅಣ್ಣತಮ್ಮಂದಿರು. ಆದುದರಿಂದ ಮದುವೆಯ ಕಾರ್ಯ ಅವರವರಲ್ಲೇ ನಡೆಯುವಂತಿರಲಿಲ್ಲ. ಒಂದು ಬುಡಕಟ್ಟಿನವರು ಮತ್ತೊಂದು ಬುಡಕಟ್ಟಿನವರೊಡನೆ ಸಂಬಂಧ ಬೆಳೆಸುತ್ತಿದ್ದರು. ಒಬ್ಬ ವಿವಾಹವಾಗಬಹುದಾದ ಹುಡುಗಿಗೆ ಅಂಗೆಜ್ ಎಂದು ಹೆಸರು; ಹುಡುಗನಿಗೆ ಪೂ ಎಂದು ಹೆಸರು. ವಿವಾಹ ಪ್ರಮುಖವಾಗಿ ಆರ್ಥಿಕ ದೃಷ್ಟಿಯಿಂದ ಜರಗುತ್ತಿತ್ತು. ಇಂಥ ಮದುವೆಯಲ್ಲಿ ಪತಿಗೆ ವಿವಾಹವಾದ ಹುಡುಗಿಯ ಮೇಲೆ ಸಂಪೂರ್ಣವಾದ ಲೈಂಗಿಕ ಅಧಿಕಾರವಿಲ್ಲ. ಆಕೆಯ ಮೇಲೆ ಎಲ್ಲ ಪೂಗಳಿಗೂ ಲೈಂಗಿಕ ಸಂಬಂಧದ ಅಧಿಕಾರವಿರುತ್ತದೆ. ಒಟ್ಟಿನಲ್ಲಿ ಪೂ ಮತ್ತು

ಅಂಗೇಜ್ ವಿವಾಹ ಪೂರ್ವದಲ್ಲಿ ಹೇಗೋ ಹಾಗೆ ವಿವಾಹವಾದ ಮೇಲೆಯೂ ಲೈಂಗಿಕ ವಿಚಾರವಾಗಿ ಸ್ವತಂತ್ರರು ಒಂದು ಬುಡಕಟ್ಟಿನವರೆಲ್ಲರೂ ಸೋದರಸೋದರಿಯರೆಂದು ಪರಿಗಣಿಸಲ್ಪಟ್ಟಿರುವುದರಿಂದ ಆ ಬುಡಕಟ್ಟಿನ ಯುವಕರೆಲ್ಲರೂ ಪೂ ಗಳಾಗುತ್ತಾರೆ; ಅದರಂತೆ ಮದುವೆಯಾಗ ಬೇಕಾದ ಬುಡಕಟ್ಟಿನ ಯುವತಿಯರೆಲ್ಲ ಅಂಗೇಜ್‌ಗಳಾಗುತ್ತಾರೆ.

ಈ ಗಿಲಿಯಾಕರಲ್ಲಿ ಪೂರ್ವ ಪ್ರದೇಶದಲ್ಲಿ ವಾಸಿಸುವ ಬುಡಕಟ್ಟಿನವರಿಗೂ ಪಶ್ಚಿಮ ಪ್ರದೇಶದಲ್ಲಿ ವಾಸಿಸುವ ಬುಡಕಟ್ಟಿನವರಿಗೂ ಒಂದು ವ್ಯತ್ಯಾಸವಿದೆ. ಪೂರ್ವ ಗಿಲಿಯಾಕರಲ್ಲಿ ತಮ್ಮಂದಿರು ಅಣ್ಣಂದಿರ ಹೆಂಡತಿಯರೊಡನೆ ಲೈಂಗಿಕ ಸಂಬಂಧವನ್ನು ಬೆಳೆಸುವ ಹಕ್ಕಿದೆ. ಆದರೆ ಅಣ್ಣಂದಿರು ತಮ್ಮಂದಿರ ಹೆಂಡತಿಯರ ಮೇಲೆ ಅಂಥ ಅಧಿಕಾರವನ್ನು ಹೊಂದಿಲ್ಲ.

ಆಸ್ಟ್ರೇಲಿಯ ಡೈಯರಿ ಜನಾಂಗದಲ್ಲಿ ಇದೇ ಪದ್ಧತಿಗಳಿವೆ. ಸ್ತ್ರೀಗೆ ಗಂಡನೊಬ್ಬನೇ ಆದರೂ ಅನೇಕ ಪುರುಷರು ಆಕೆಯ ಸಂಗಡ ಲೈಂಗಿಕ ಸಂಬಂಧವನ್ನು ಹೊಂದಿರುತ್ತಾರೆ. ಆದರೆ ಉರಬನ್ನರಲ್ಲಿ, ಸ್ಪೆನ್ಸರ್ ಮತ್ತು ಗಿಲ್ಲಿನ್ನರ ಪ್ರಕಾರ, ವೈಯಕ್ತಿಕ ವಿವಾಹ ಹೆಸರಿಗಾಗಲೀ ನಡವಳಿಕೆಯಲ್ಲಾಗಲೀ ಇಲ್ಲ. ಯಾವ ಹೆಂಗಸಿನ ಮೇಲೆ ಯಾವ ಗಂಡಸಿಗೂ ಲೈಂಗಿಕ ವಿಚಾರದಲ್ಲಿ ಪ್ರತ್ಯೇಕ ಅಧಿಕಾರವಿಲ್ಲ ಎಂಬುದು ಅವರ ಅಭಿಪ್ರಾಯ.

ಬ್ರಿಫಾಲ್ಟ್ ಮತ್ತು ಮಾರ್ಗನರು ವಿವಾಹದ ಬೆಳವಣಿಗೆಯನ್ನು ವಿಕಾಸವಾದದ ಹಿನ್ನೆಲೆಯಲ್ಲಿ ನಿರೂಪಿಸಿದ್ದಾರೆ. ಇವರ ಪ್ರಕಾರ ಲೈಂಗಿಕ ಸಾಮ್ಯವಾದ ಮಾನವ ಸಮಾಜದಲ್ಲಿ ಮೊಟ್ಟಮೊದಲು, ಇತರ ಪ್ರಾಣಿಗಳಲ್ಲಿದ್ದಂತೆ ಇದ್ದಿತೆಂದು ತಿಳಿಸಿ, ಎರಡನೆಯ ಹಂತ ಗುಂಪು ವಿವಾಹವೆಂದೂ ಅನಂತರ ಕ್ರಮವಾಗಿ ಬಹುಪತಿವಿವಾಹ ಬಹುಪತ್ನಿ ವಿವಾಹ ಕೊನೆಗೆ ಏಕಪತ್ನಿ ವಿವಾಹ. ಹೀಗೆ ವಿವಾಹ ಪದ್ಧತಿಯ ಬೆಳವಣಿಗೆಯಾಗಿದೆ ಎಂದೂ ಅವರ ಅಭಿಪ್ರಾಯ.

ಸತ್ತವನ ಹೆಂಡತಿಯನ್ನು ಅವನ ತಮ್ಮ ಅಥವಾ ಹತ್ತಿರದ ಸಂಬಂಧಿ ಮದುವೆಯಾಗುವುದು (ಲೀವಿರೆಟ್), ಹೆಂಡತಿ ಇರುವಾಗಲೂ ಆಕೆ ಸತ್ತ ಮೇಲೋ ಅವಳ ತಂಗಿಯನ್ನು ಮದುವೆಯಾಗುವುದು (ಸೊರೊರೆಟ್). ಹವಾಯಿ ಜನರಲ್ಲಿ ಬಳಕೆಯಲ್ಲಿದ್ದಂತೆ ಸಹೋದರರು ಒಟ್ಟಾಗಿ ಬೇರೊಂದು ಗುಂಪಿನ ಸಹೋದರಿಯನ್ನು ವರಿಸುವುದು (ಪುನಾಲ), ಆಸ್ಟ್ರೇಲಿಯದ ಆದಿವಾಸಿಗಳಲ್ಲಿದ್ದಂತೆ ಮದುವೆಯಾದ ಗಂಡ ಅಥವಾ ಹೆಂಡತಿಯಲ್ಲದೆ ಬೇರೊಬ್ಬ ಸಂಗಾತಿಯನ್ನು ಹೊಂದುವುದು (ಪಿರೌರ) – ಇವು ಕೂಡ ವಿವಾಹ ವಿಕಾಸದಲ್ಲಿನ ಕೆಲವು ಮುಖ್ಯ ಸ್ತರಗಳು.

ಬ್ರಿಫಾಲ್ಟ್, ಮಾರ್ಗನ್ ಸ್ಪೆನ್ಸರ್ ಮತ್ತು ಗಿಲಿನ್ನರ ಅಧ್ಯಯನಗಳು ಲೈಂಗಿಕ ಸಂಬಂಧದಲ್ಲಿನ ವಿವಿಧ ಹಂತಗಳನ್ನು ತೋರುತ್ತವೆಯೇ ಹೊರತು ಅವು ಗುಂಪು ಮದುವೆಯ ಅಸ್ತಿತ್ವಕ್ಕೆ ಸಾಕಷ್ಟು ಆಧಾರಗಳನ್ನು ಒದಗಿಸುವುದಿಲ್ಲ – ಎಂಬುದು ಲೋವಿಯ ಅಭಿಮತ. (ಎಚ್.ಎಂ.ಎಸ್.)

**ಗುಗ್ಗುಳದ ಮರ :** ಬರ್‌ಸೆರೇಸೀ ಕುಟುಂಬಕ್ಕೆ ಸೇರಿದ ಬಾಸ್‌ವೆಲಿಯ ಸೆರ್ರೇಟ ಎಂಬ ವೈಜ್ಞಾನಿಕ ಹೆಸರುಳ್ಳ ಒಂದು ಮರ. ಮಡ್ಡಿ ಮರ ಇದರ ಪರ್ಯಾಯನಾಮ. ಭಾರತದಲ್ಲಿ ಬಿಹಾರ, ಒರಿಸ್ಸ, ರಾಜಾಸ್ತಾನ ಮತ್ತು ಪೂರ್ವ ಪ್ರಾಂತ್ಯಗಳ ಒಣ ಹವೆಯಿರುವ ಬೆಟ್ಟಗಾಡುಗಳಲ್ಲಿ ಸಾಮಾನ್ಯವಾಗಿ ಬೆಳೆಯುತ್ತದೆ. ಸುಮಾರು 7–9 ಮೀ ಎತ್ತರಕ್ಕೆ ಬೆಳೆಯುವ ಮರ ಇದು. ಮುಖ್ಯ ಕಾಂಡವೇ ಸಾಮಾನ್ಯವಾಗಿ 4–5 ಮೀ ಉದ್ದ ಇರುತ್ತದೆ. ಎಲೆಗಳು ಸಂಯುಕ್ತ ಮಾದರಿಯವು. ಎಲೆಗಳ ಮೇಲೆಲ್ಲ ತುಪ್ಪಳದಂಥ ಕೂದಲುಗಳ ಹೊದಿಕೆ ಉಂಟು. ಎಲೆಗಳ ಅಂಚು ಗರಗಸದಂತೆ ಇದೆ.

ಗುಗ್ಗುಳದ ಮರದ ಕಾಂಡದಿಂದ ಪಾರದರ್ಶಕವಾದ ಅಂಟುದ್ರವ ಸ್ರವಿಸುತ್ತದೆ. ಇದನ್ನು ಗುಗ್ಗುಳ ಎಂದು ಕರೆಯುತ್ತಾರೆ. ಸುವಾಸನೆಯುಳ್ಳ ಈ ದ್ರವ ತೆಳುಹಳದಿ ಬಣ್ಣದ್ದು. ಗಾಳಿಯ ಸಂಪರ್ಕಕ್ಕೆ ಬಂದಾಗ ನಿಧಾನವಾಗಿ ಗಟ್ಟಿಯಾಗುತ್ತದೆ. ಒಂದು ಮರದಿಂದ ವರ್ಷಕ್ಕೆ ಸುಮಾರು ಎರಡು ಪೌಂಡುಗಳಷ್ಟು ಗುಗ್ಗುಳ ದೊರೆಯುತ್ತದೆ. ಸಾಮಾನ್ಯವಾಗಿ 75 ಸೆಂ.ಮೀ ಮತ್ತು ಅದಕ್ಕಿಂತ ಹೆಚ್ಚು ದಪ್ಪದ ಕಾಂಡಗಳಿರುವ ಮರಗಳಿಂದ ಗುಗ್ಗುಳವನ್ನು ತೆಗೆಯುತ್ತಾರೆ. ಗುಗ್ಗುಳವನ್ನು ತೆಗೆಯಲು ಸುಮಾರು 30 ಸೆಂಮೀ ಗಳಷ್ಟು ಅಗಲದ ತೊಗಟೆಯನ್ನು ಮರದ ಬುಡದಿಂದ 60–75 ಸೆಂಮೀ ಗಳ ಎತ್ತರದಲ್ಲಿ ಕೆತ್ತುತ್ತಾರೆ. ಇದರಿಂದ ಸ್ರವಿಸುವ ಅಂಟು ದ್ರವವನ್ನು ಶೇಖರಿಸುತ್ತಾರೆ. ಅಂಟನ್ನು ತೆಗೆಯುವ ಕಾಲ ನವೆಂಬರಿನಿಂದ ಜುಲೈವರೆಗೆ. ಗುಗ್ಗುಳವನ್ನು ಧೂಪ ಹಾಕಲು ಬಳಸುತ್ತಾರೆ. ಗುಗ್ಗುಳದಲ್ಲಿ ಶೇ. 10–11ರಷ್ಟು ತೇವಾಂಶ. ಶೇ. 8–9ರಷ್ಟು ಚಂಚಲ ತೈಲ, ಶೇ. 55–57ರಷ್ಟು ರಾಳ ಮತ್ತು ಶೇ. 4–5ರಷ್ಟು ಕರಗದಿರುವ ವಸ್ತುಗಳಿವೆ. ಗುಗ್ಗುಳದಲ್ಲಿ ಕೆಲವು ಉಪಯುಕ್ತ ಸಾರತೈಲಗಳಿರುವುದರಿಂದ ಇದನ್ನು ಸಂಧಿವಾತ ಮತ್ತು ನರದೌರ್ಬಲ್ಯಗಳನ್ನು ಗುಣಪಡಿಸಲು ಆಯುರ್ವೇದ ಚಿಕಿತ್ಸೆಗಳಲ್ಲಿ ಉಪಯೋಗಿಸುತ್ತಾರೆ.

ಗುಗ್ಗುಳದ ಮರದ ಚೌಬೀನೆ ಮೃದುವಾಗಿಯೂ ಸಾಕಷ್ಟು ಗಟ್ಟಿಯಾಗಿಯೂ ಇರುವುದರಿಂದ ಹಲಗೆ, ಸಾಧಾರಣ ದರ್ಜೆಯ ಪೀಠೋಪಕರಣಗಳು, ಪೆಟ್ಟಿಗೆಗಳು, ಎರಡನೆಯ ದರ್ಜೆಯ ಪ್ಲೈವುಡ್ ಮುಂತಾದವನ್ನು ತಯಾರಿಸಲು ಬಳಸುತ್ತಾರೆ. (ಎಸ್.ಆರ್.ಜಿ.)

**ಗುಜರಾತ್ :** ಭಾರತದ ಒಂದು ರಾಜ್ಯ. ಅರಬ್ಬೀ ಸಮುದ್ರದ ತೀರದಲ್ಲಿ, ಉ. ಅ. $20^0 1'$ – $24^0 7'$ ಮತ್ತು ಪೂ. ರೇ. $68^0 4'$ – $74^0 4'$ ನಡುವೆ ಇದೆ. ಉತ್ತರದಲ್ಲಿ ಪಾಕಿಸ್ತಾನ, ಈಶಾನ್ಯದಲ್ಲಿ ರಾಜಸ್ತಾನ, ಪೂರ್ವದಲ್ಲಿ ಮಧ್ಯಪ್ರದೇಶ ಮತ್ತು ದಕ್ಷಿಣದಲ್ಲಿ ಮಹಾರಾಷ್ಟ್ರ ಪಶ್ಚಿಮ, ನೈರುತ್ಯ ಮತ್ತು ದಕ್ಷಿಣದಲ್ಲಿ ಅರಬ್ಬೀ ಸಮುದ್ರ ಮತ್ತು ಖಂಭತ್ ಹಾಗೂ ಕಚ್ ಖಾರಿ ಸುತ್ತುವರೆದಿವೆ. ಈ ರಾಜ್ಯದ ವಿಸ್ತೀರ್ಣ 1,96,024 ಚ.ಕಿಮೀ. ಜನಸಂಖ್ಯೆ 6,03,83,628 (2011).

ಗುಜರಾತಿನ ಒಂದು ವೈಶಿಷ್ಟ್ಯವೆಂದರೆ ಅದರ ಕರಾವಳಿ. ಭಾರತದ ಬೇರಾವ ರಾಜ್ಯಕ್ಕೂ ಇಷ್ಟು ಉದ್ದವಾದ ಸಮುದ್ರತೀರವಿಲ್ಲ. ಇದು ಗುಜರಾತಿನ ವಾಯುಗುಣ, ಆರ್ಥಿಕತೆ ಮತ್ತು ಸಾಮಾಜಿಕ ವ್ಯವಸ್ಥೆಗಳ ಮೇಲೆ ಬಹಳ ಹೆಚ್ಚಿನ ಪ್ರಭಾವ ಬೀರಿದೆ. ಭಾರತದ ಒಟ್ಟು ವಿಸ್ತೀರ್ಣದಲ್ಲಿ ಶೇ. 6.1 ರಷ್ಟಿರುವ ಈ ರಾಜ್ಯದ ಜನಸಂಖ್ಯೆ ಭಾರತದ್ದರ ಶೇ.4.8 ರಷ್ಟಿದೆ. ಗುಜರಾತಿನ ಭಾಷೆ ಗುಜರಾತಿ. ರಾಜಧಾನಿ ಗಾಂಧಿನಗರ. (ಬಿ.ಎ.ಎಸ್.)


**ಭೂವೈಜ್ಞಾನಿಕ ಲಕ್ಷಣ :** ಪ್ರಪಂಚದ ಎಂಟು ಸ್ಥಿರಭಾಗಗಳಲ್ಲಿ ಒಂದಾದ ಭಾರತ ಪರ್ಯಾಯದ್ವೀಪ ಭೂಇತಿಹಾಸದ ಯಾವ ಕಾಲದಲ್ಲೂ ಸಂಪೂರ್ಣವಾಗಿ ಸಮುದ್ರಾಕ್ರಮಣಕ್ಕೆ ಒಳಪಟ್ಟಿರಲಿಲ್ಲ. ಜುರಾಸಿಕ್, ಕ್ರಿಟೇಷಸ್ ಮತ್ತು ತೃತೀಯ ಭೂಕಾಲ ಯುಗಗಳಲ್ಲಿ ಗುಜರಾತಿನ ಕೆಲವು ಭಾಗಗಳು ಮಾತ್ರ ಸಮುದ್ರಾಕ್ರಮಣಕ್ಕೆ ಒಳಪಟ್ಟಿದ್ದವು. ಆದ್ದರಿಂದ ಗುಜರಾತಿನ ಭೂಇತಿಹಾಸ ಈ ಕಾಲಗಳ ಶಿಲೆಗಳಿಂದ ಮಾತ್ರ ಪ್ರತಿನಿಧಿತವಾಗಿದೆ. ಇವನ್ನು ಹೀಗೆ ವರ್ಗೀಕರಿಸಬಹುದು. ತೃತೀಯ ಭೂಕಾಲ ಯುಗದ ಶಿಲಾವರ್ಗಗಳು – ಡೆಕ್ಕನ್ ಟ್ರ್ಯಾಪ್; ನರ್ಮದಾ ಕಣಿವೆಯ ಬಾಗ್ ಪದರಗಳು – ಕ್ರಿಟೇಷಸ್ ಅಂತ್ಯಕಾಲ; ಕಚ್ಛ್ ಪ್ರದೇಶದ ತೀರ ನಿಕ್ಷೇಪಗಳು – ಜುರಾಸಿಕ್ ಮಧ್ಯಕಾಲದಿಂದ ಕ್ರಿಟೇಷಸ್ ಆದಿಯವರೆಗೆ; ಚಾಂಪ್ನರ್ ಶಿಲಾವರ್ಗ – ಆರ್ಷೇಯ ಕಲ್ಪ.

**ಚಾಂಪ್ನರ್ ಶಿಲಾವರ್ಗ :** ವಡೋದರಕ್ಕೆ ಸುಮಾರು 65ಕಿಮೀ ಪೂರ್ವದಲ್ಲಿ ನೈಸ್ ಶಿಲೆಯಿಂದೊಡಗೂಡಿದ ಅತ್ಯಂತ ಪುರಾತನ ಕಾಲದ ಪದರಶಿಲೆಗಳು ಹೊರಕಂಡಿವೆ. ಡಬ್ಲ್ಯು. ಟಿ. ಬ್ಲ್ಯಾನ್‌ಫೋರ್ಡ ಎಂಬಾತ ಇವನ್ನು ಚಾಂಪ್ನರ್ ಶಿಲಾವರ್ಗ ಎಂದು ಕರೆದು, ಇವು ರಾಜಸ್ತಾನದ ಆರಾವಳಿ ಶಿಲಾವರ್ಗಕ್ಕೆ ಸಮಕಾಲೀನವಾದವುಗಳೆಂದು ಸ್ಥಾಪಿಸಿದ. ಚಾಂಪ್ನರ್ ಶಿಲಾವರ್ಗಕ್ಕೂ ಈಗ ಕರ್ನಾಟಕದಲ್ಲಿರುವ ಮಾದರಿ ಧಾರವಾಡ ಶಿಲಾವರ್ಗಕ್ಕೂ ಬಹಳ ಸಾಮ್ಯವಿರುವುದರಿಂದ, ಇವೆರಡು ಶಿಲಾವರ್ಗಗಳು ಡೆಕ್ಕನ್ ಟ್ರ್ಯಾಪಿನ ಕೆಳಗೆ ಒಂದಾಗಿವೆ ಎಂಬುದರಲ್ಲಿ ಸಂಶಯವಿಲ್ಲ.

ಕಚ್ಛ್ ತೀರ ನಿಕ್ಷೇಪಗಳು: ವಿಂಧ್ಯನ್ ಕಾಲದಿಂದಲೂ ಸಮುದ್ರ ನಿಕ್ಷೇಪಗಳನ್ನೇ ಕಾಣದಿದ್ದ ಪರ್ಯಾಯ ದ್ವೀಪಭಾಗ ಜುರಾಸಿಕ್ ಮಧ್ಯಕಾಲದಲ್ಲಿ ಸಮುದ್ರಾಕ್ರಮಣಕ್ಕೆ ಒಳಪಟ್ಟಿತು. ಕಾಠಿಯಾವಾಡದ ಉತ್ತರಭಾಗ ಸಮುದ್ರದ ಅಡಿಯಲ್ಲಿ ಮುಳುಗಿ ಅಲ್ಲಿ ಸುಮಾರು 1829 ಮೀ ದಪ್ಪದ ನಿಕ್ಷೇಪಗಳು ಸಂಚಯನವಾಗಿವೆ. ಇವು ಪೂರ್ವ – ಪಶ್ಚಿಮವಾಗಿ ಹಬ್ಬಿರುವ ಮೂರು ಶೃಂಗಮಡಿಕೆಗಳಾಗಿ ಹೊರಕಂಡಿವೆ. ಈ ಶಿಲಾಪರಂಪರೆಯನ್ನು ಪಚಂ, ಚಾರಿ, ಕಟ್ರೋಲ್ ಮತ್ತು ಉಮಿಯ ಎಂದು ನಾಲ್ಕು ಭಾಗಗಳಾಗಿ ವಿಭಜಿಸಲಾಗಿದೆ. ಇದು ಜುರಾಸಿಕ್ ಯುಗದ ಬಾಕೋನಿಯನ್ ಕಾಲದಿಂದ ಕ್ರಿಟೇಷಸ್ ಯುಗದ ನಿಯೊಕೋಮಿಯನ್ ಅಥವಾ ಅಪ್ಪಿಯನ್ ಕಾಲದವರೆಗಿನ ಶಿಲಾನಿಕ್ಷೇಪ ಗಳಿಂದ ಕೂಡಿದೆ. ಈ ಶಿಲಾಸಮುದಾಯದ ಮೇಲೆ ಡೆಕ್ಕನ್ ಟ್ರ್ಯಾಪ್ ಅಥವಾ ಇಯೊಸೀನ್ ಯುಗದ ಶಿಲೆಗಳಿವೆ. ಪಚಂ ಶ್ರೇಣಿ ಕಚ್ ಖಾರಿಯಲ್ಲಿರುವ ಪಚಂ ದ್ವೀಪದಲ್ಲಿ ಹೊರಕಂಡಿರುವುದರಿಂದ ಈ ಹೆಸರು ಬಂದಿದೆ. ಈ ಶಿಲೆಗಳ ದಪ್ಪ ಸುಮಾರು 305 ಮೀ. ಭೂಜ್‌ಗೆ ಸುಮಾರು 49 ಕಿಮೀ. ವಾಯವ್ಯದಲ್ಲಿ ಚಾರಿ ಎಂಬ ಹಳ್ಳಿಯ ಹತ್ತಿರ ಪಚಂ ಶ್ರೇಣಿಗಿಂತ ಕಿರಿಯ ಶಿಲೆಗಳು ಹೊರಕಂಡಿವೆ. ಆದ್ದರಿಂದ ಇವನ್ನು ಚಾರಿ ಶ್ರೇಣಿ ಎಂದು ಹೆಸರಿಸಲಾಗಿದೆ. ಕಟ್ರೋಲ್ ಶಿಲಾಶ್ರೇಣಿ ಅನೇಕ ವಿಧದ ಮರಳುಶಿಲೆಗಳು ಮತ್ತು ಜೇಡುಶಿಲೆಗಳಿಂದಾಗಿದೆ. ಇವನ್ನು ಆರೋಹಣ ಕ್ರಮದಲ್ಲಿ ಕಂಟ್ಕೋಟ್ ಮರಳು ಶಿಲೆ, ಕಟ್ರೋಲ್ ಶಿಲೆ ಮತ್ತು ಗಾಜನ್ಸಾರ್ ಪದರಗಳಾಗಿ ವಿಂಗಡಿಸಿದೆ. ಇವು ಆರ್ಗೋವಿಯನ್ ಕಾಲದ ಅಂತ್ಯದಿಂದ ಪೋರ್ಟ್ ಲ್ಯಾಂಡಿಯನ್ ಕಾಲದವು. ಕಂಟ್ಕೋಟ್ ಮರಳು ಶಿಲೆ ವಾಗಡ್ ಸುತ್ತಮುತ್ತ ಹೊರಕಂಡಿದೆ. ಇದರಲ್ಲಿ ಎಪಿಮಾಯ್ಯೆಟಿಸ್ ಟ್ರಾನ್ಸಿಯನ್ಸ್, ಪ್ರಾಸ್ಫೊದಿಸ್ಪಿಂಕ್ಟೆಸ್ ವಿರ್ಗುಲಾಯಿಡ್ಸ್, ಟಾರ್ಕುಟಿಸ್ಫಿಂಕ್ಟೆಸ್ ಟಾರ್ಕುಟಿಸ್ ಎಂಬ ಅವಶೇಷಗಳಿವೆ. ಕಟ್ರೋಲ್ ಶಿಲಾಪದರದ ಕೆಳ ಮತ್ತು

ಮಧ್ಯಭಾಗಗಳಲ್ಲಿ ಒಪ್ಪಲೈಡ್ಸ್, ಕಟ್ರೋಲಿಸೆರಾಸ್, ಅಸ್ಪಿಡೊಸೆರಾಸ್, ಸ್ಪೆಬ್ಲೈಟಿಸ್ ಮತ್ತು ವಾಗೆನಿಯಗಳ ಅವಶೇಷಗಳಿವೆ. ಕಟ್ರೋಲ್ ಶಿಲಾಶ್ರೇಣಿಯ ಮೇಲ್ಭಾಗ ಅವಶೇಷರಹಿತ ವಾಗಿದೆ. ಗಾಜನ್ಸಾರ್ ಪದರಗಳಲ್ಲಿ ಗ್ಲೋಕಿಸೆರಾಸ್ ಮತ್ತು ಪಿಲ್ಲೊಸೆರಾಸ್‌ಗಳಿವೆ. ಈ ಶಿಲಾಶ್ರೇಣಿಗಿಂತ ಕಿರಿಯ ಶಿಲೆಗಳು ಭೂಜ್‌ಗೆ ವಾಯವ್ಯಕ್ಕೆ ಸುಮಾರು 80 ಕಿಮೀ ದೂರದಲ್ಲಿರುವ ಉಮಿಯ ಎಂಬ ಹಳ್ಳಿಯ ಹತ್ತಿರ ಉತ್ತಮವಾಗಿ ಹೊರಕಂಡಿವೆ. ಇವುಗಳಿಗೆ ಉಮಿಯ ಶ್ರೇಣಿ ಎಂದು ಹೆಸರು. ಇದರ ದಪ್ಪ ಸುಮಾರು 915 ಮೀಟರುಗಳು. ರಾಜನಾಥ್ ಎಂಬವರು ಈ ಇದೇ ಕಾಲವನ್ನು ಸೂಚಿಸುತ್ತವೆ. ಭೂಜ್‌ಪಾದದಲ್ಲಿ ಝುಮಿಯ ಟೀಲೋಫಿಲ್ಲಂ ಮತ್ತು ಪಾಮೊಕ್ಸೈಲಾನ್ ಮುಂತಾದ ಸಸ್ಯಗಳು ಇವೆ. ಈ ಸಸ್ಯಗಳು ಜುರಾಸಿಕ್ ಅಂತ್ಯಕಾಲವನ್ನು ಸೂಚಿಸುತ್ತವೆ. ಆದರೆ ಇವುಗಳ ಕೆಳಗಿನ ಶಿಲೆಗಳು ಕ್ರಿಟೇಷಸ್ ಆದಿಕಾಲದವುಗಳಾದ್ದರಿಂದ ಇವು ಸಹ ಕ್ರಿಟೇಷಸ್ ಆದಿಕಾಲದವೆಂದು ನಿರ್ಧರಿಸಲಾಗಿದೆ.

**ಬಾಗ್ ಪದರಗಳು :** ನರ್ಮದಾ ನದಿ ಕಣಿವೆಯಲ್ಲಿ ಗ್ವಾಲಿಯರ್ ಹತ್ತಿರವಿರುವ ಬಾಗ್ ಎಂಬ ಪಟ್ಟಣದಿಂದ ಪೂರ್ವಪಶ್ಚಿಮವಾಗಿ ಕಾಠಿಯಾವಾಡದವರೆಗೆ ಪರಸರ





ಶಿಲಾಶ್ರೇಣಿಯನ್ನು ಉಮಿಯ, ಉಕ್ರ ಮತ್ತು ಭೂಜ್ ಎಂದು ಮೂರು ಶಿಲಾಪಾದಗಳಾಗಿ ವಿಂಗಡಿಸಿದ್ದಾರೆ. ಉಮಿಯ ಪಾದದಲ್ಲಿ ಫಾಸಿಲ್ ಮರಳುಶಿಲೆ ಮತ್ತು ಜೇಡುಶಿಲೆಗಳು ಇವೆ. ಇವುಗಳ ಮಧ್ಯದ ಒಂದು ಪದರದಲ್ಲಿ ಟ್ರೈಗೋನಿಯ ಎಂಬ ಲೆಮಲಿಬ್ರ್ಯಾಂಕಿನ ಅವಶೇಷಗಳಿವೆ. ಇವು ಜುರಾಸಿಕ್ ಅಂತ್ಯದಿಂದ ಕ್ರಿಟೇಷಸ್ ಯುಗದ ಆದಿಕಾಲವನ್ನು ಸೂಚಿಸುತ್ತವೆ. ಉಮಿಯಪಾದದ ಮೇಲಿರುವ ಉಕ್ರಪಾದವೂ ಸಾಗರಜನಿತವಾದುದು. ಇದರಲ್ಲಿರುವ ಅಮ್ಮೊನೈಟುಗಳು ಕೂಡ ಬೇರ್ಪಟ್ಟ ನಿಕ್ಷೇಪಗಳು ಅನೇಕ ಕಡೆ ರೂಪುಗೊಂಡಿವೆ. ಚೆರ್ಟ್ ಮತ್ತು ಚಿಪ್ಪುಗಳಿಂದ ಕೂಡಿದ ಅಶುದ್ಧ ಸುಣ್ಣ ಶಿಲೆ, ಬೆಣಚುಶಿಲೆ, ಮತ್ತು ಜೇಡುಶಿಲೆಗಳು ಇಲ್ಲಿನ ಪ್ರಮುಖ ಶಿಲೆಗಳು. ಇವು ಡೆಕ್ಕನ್ ಟ್ರ್ಯಾಪ್ ಶಿಲೆಗಳ ಕೆಳಗಿದ್ದು ಅವು ಶಿಥಿಲೀಕರಿಸಿದ ಮೇಲೆ ಹೊರಕಂಡಿವೆ. ಸಿನಮೇನಿಯನ್ ಕಾಲದಲ್ಲಿ ಟೆತಿಸ್ ಸಾಗರ ನರ್ಮದಾ ನದಿಕಣಿವೆಯನ್ನು ಆಕ್ರಮಿಸಿದಾಗ ಇವು ನಿಕ್ಷೇಪಗೊಂಡವು. ಇವುಗಳಲ್ಲಿ ಫಾಸಿಲುಗಳು ಸುಮಾರು 18–22 ಮೀ ನಷ್ಟು ಶಿಲೆಗಳಲ್ಲಿ ಮಾತ್ರ ಇವೆಯಷ್ಟೆ. ಇವನ್ನು ಈ ರೀತಿ ವರ್ಗೀಕರಿಸಲಾಗಿದೆ:

| | | |
|---|---|---|
| ಬಾಗ್ ಪದರಗಳು | ಮೇಲ್ಭಾಗ– | ಹವಳದ ಸುಣ್ಣಶಿಲೆ<br>ದಿಯೋಲ ಸುಣ್ಣಮಿಶ್ರಜೇಡು<br>ಗಂಟುಜೇಡುಮಿಶ್ರ ಸುಣ್ಣಶಿಲೆ |
| | ಕೆಳಭಾಗ– | ನಿಮಾರ್ ಮರಳುಶಿಲೆಗಳು |

ನಿಮಾರ್ ಮರಳುಶಿಲೆ ಪಶ್ಚಿಮಕ್ಕೆ ಹೋದಹಾಗೆಲ್ಲ ದಪ್ಪವಾಗುತ್ತದೆ. ಇದು ಉತ್ತಮ ಕಟ್ಟಡ ಶಿಲೆ. ಇದನ್ನು ವಡೋದರ ಹತ್ತಿರದ ಸಾಂಘಿರ್ ಎಂಬಲ್ಲಿ ತೆಗೆಯುತ್ತಾರೆ. ಗಂಟು ಜೇಡು ಮಿಶ್ರ ಸುಣ್ಣಶಿಲೆ ಬಹುಗಟ್ಟಿ. ದಿಯೋಲ ಸುಣ್ಣ ಮಿಶ್ರ ಜೇಡು 3 ಮೀ ದಪ್ಪವಿದ್ದರೂ ಫಾಸಿಲುಗಳು ವಿಶೇಷವಾಗಿವೆ. ಇದರ ಮೇಲೆ ಹವಳದ ಸುಣ್ಣಶಿಲೆ ಇದೆ. ಇದರಲ್ಲಿ ಬ್ರಿಯೊಜ಼ೋವಗಳ ಅವಶೇಷಗಳು ಹೆಚ್ಚಾಗಿವೆ. ಬಾಗ್ ಪದರಗಳಲ್ಲಿರುವ ಫಾಸಿಲುಗಳು ಕ್ರಿಟೇಷಸ್ ಯುಗದ ಸಿನಮೇನಿಯನ್ ಕಾಲದಿಂದ ಸಿನೋನಿಯನ್ ಕಾಲದವರೆಗಿನ ಅವಧಿಯನ್ನು ಸೂಚಿಸುತ್ತವೆ. ಆದರೆ ಈ ಫಾಸಿಲುಗಳು ಸಮೀಪದ ತಿರುಚನಾಪಲ್ಲಿ ಶಿಲಾಸ್ತೋಮಗಳಲ್ಲಿನ ಸಮಕಾಲೀನ ಅವಶೇಷಗಳಿಗಿಂತ ತೀರ ಭಿನ್ನವಾಗಿವೆ; ಬದಲು ಅರೇಬಿಯ ಮತ್ತು ಯುರೋಪಿನ ಕ್ರಿಟೇಷಸ್ ಅವಶೇಷಗಳನ್ನು ಹೋಲುತ್ತವೆ. ಅಂದರೆ ಇವೆರಡು ಪ್ರದೇಶಗಳು ಬೇರೆ ಬೇರೆ ಸಾಗರಗಳ ಆಕ್ರಮಣಕ್ಕೆ ಒಳಪಟ್ಟಿದ್ದುದೇ ಅಲ್ಲದೆ, ಆ ಎರಡು ಸಾಗರಗಳು ಅಗಲವಾದ ಭೂಭಾಗದಿಂದ ಬೇರ್ಪಟ್ಟಿದ್ದುವೆಂದು ಸಹ ಅರಿವಾಗುತ್ತದೆ. ಒಂದು ಟೆತಿಸ್ ಸಾಗರದ ಶಾಖೆ, ಮತ್ತೊಂದು ದಕ್ಷಿಣ ಸಮುದ್ರದ ಶಾಖೆ.

**ಡೆಕ್ಕನ್ ಟ್ರ್ಯಾಪ್ :** ಕ್ರಿಟೇಷಸ್ ಯುಗದ ತರುವಾಯ ಮಹಾ ಭೂ ಪ್ರಳಯವಾಯಿತು. ಆಗ ಮಹತ್ತರ ಬದಲಾವಣೆಗಳಾದವು: ಅಗಾಧ ಪ್ರಮಾಣದ ಭೂ ಚಲನೆಯಾಯಿತು. ಅದುವರೆಗೂ ಅಸ್ತಿತ್ವದಲ್ಲಿದ್ದ ಗೊಂಡವಾನ ಭೂಭಾಗ ಭಾರತ ಪರ್ಯಾಯದ್ವೀಪ, ಆಸ್ಟ್ರೇಲಿಯ, ಆಫ್ರಿಕ, ದಕ್ಷಿಣ ಅಮೆರಿಕ ಮತ್ತು ಅಂಟಾರ್ಕ್‌ಟಿಕ್ ಎಂಬ ಖಂಡಗಳಾಗಿ ಬೇರ್ಪಟ್ಟಿತು. ಬೇರ್ಪಟ್ಟ ಭೂಭಾಗಗಳನ್ನೆಲ್ಲ ಹಿಂದೆಂದೂ ಕಂಡರಿಯದ (ನಿರ್ಜೀವಕಲ್ಪವನ್ನುಳಿದು) ಶಿಲಾರಸದ ಉಗುಳುವಿಕೆ ಆಯಿತು. ಆ ಕಾಲದಲ್ಲಿ ಹೊರಹೊಮ್ಮಿದ ಶಿಲಾರಸದಿಂದ ಡೆಕ್ಕನ್ ಟ್ರ್ಯಾಪ್ ಆಯಿತು. ಈ ಶಿಲಾವರ್ಗ ಗುಜರಾತಿನ ಬಹುಭಾಗವನ್ನು ಆಕ್ರಮಿಸಿದೆ. ಶಿಲಾರಸ ಹೊರಹೊಮ್ಮುವಿಕೆ ಸಾಮಾನ್ಯರೀತಿಯ ಅಗ್ನಿಪರ್ವತದಿಂದಾದುದಲ್ಲ. ನೂರಾರು ಮೀಟರ್ ಅಗಲ, ಅನೇಕ ಕಿಲೋಮೀಟರ್ ಉದ್ದದ ಕವಲಾಗಿದ್ದ ಬಿರುಕುಗಳ ಮೂಲಕ ಹೊರಹೊಮ್ಮುವಿಕೆ. ಇದು ಘನೀಭವಿಸಿರುವ ಬಿರುಕುಗಳು ಈಗಲೂ ಬ್ರೋಚ್‌ನ ಸಮೀಪದ ರಾಜಪಿಪ್ಲ ಬೆಟ್ಟಗಳು, ಕಚ್ಛ್, ಕಾಠಿಯಾವಾಡ ಮತ್ತಿತರ ಪ್ರದೇಶಗಳಲ್ಲಿವೆ. ಇವುಗಳಿಗೆ ಡೈಕುಗಳೆಂದು ಹೆಸರು. ಸೌರಾಷ್ಟ್ರ ಪ್ರದೇಶದ



ಅಮ್ರೋಲಿ ಮತ್ತು ಜಾಸ್‌ಡನ್ ಸುತ್ತಲಿರುವ ಡೈಕುಗಳು ಹೊರಗಾಮಿಯಾಗಿ ಹಂಚಿವೆ. ಗಿರ್ನಾರ್ ಮತ್ತು ಚೋಗತ್ ಚಮರ್ಡಿಗಳಲ್ಲಿ ನಿರ್ದಿಷ್ಟದ್ವಾರದ ಸಾಮಾನ್ಯ ಅಗ್ನಿಪರ್ವತಗಳಿವೆ. ಪೂರ್ವಸೌರಾಷ್ಟ್ರ ಮತ್ತು ನರ್ಮದಾ ಕಣಿವೆಗಳಲ್ಲಿಯೂ ಡೈಕುಗಳಸಮೂಹಗಳಿವೆ. ಕಚ್ಛ್ ಮತ್ತು ಕಾಠಿಯಾವಾಡ ಪ್ರದೇಶದ ಡೆಕ್ಕನ್ ಟ್ರ್ಯಾಪಿನಲ್ಲಿ ಆಮ್ಲೀಯ, ಮಧ್ಯವರ್ತಿ ಮತ್ತು ಪ್ರತ್ಯಾಮ್ಲೀಯ ಶಿಲಾ ವಿಧಗಳಿವೆ. ಇವೆಲ್ಲ ಶಿಲಾರಸ ಪ್ರಭೇದಗೊಳ್ಳುವಿಕೆಯಿಂದಾದವು. ಗಿರ್ನಾರ್ ಮತ್ತು ಓಷಮ್ ಬೆಟ್ಟಗಳಲ್ಲಿ ಸಾಮಾನ್ಯ ಬೆಸಾಲ್ಟ್ ವಿಧವಲ್ಲದೆ ಲಿಂಬರ್ಗೈಟ್, ಆಂಡೆಸೈಟ್, ರೈಯೊಲೈಟ್, ಆಬ್ಸಿಡಿಯಾನ್, ಪಿಚ್‌ಸ್ಟೋನ್ ಮುಂತಾದ ಜ್ವಾಲಾಮುಖಜ ಶಿಲೆಗಳೂ ಲ್ಯಾಂಪ್ರೋಫೈರ್ ಆಲಿವೀನ್, ಗ್ಯಾಬ್ರೊ, ಮಾನ್‌ಜೊನೈಟ್, ನೆಫೆಲೀನ್ ಸಯನೈಟ್, ಗ್ರ್ಯಾನೋಫೈರ್ ಮುಂತಾದ ಮಧ್ಯಾಂತರ ಶಿಲೆಗಳೂ ಇವೆ. ನರ್ಮದಾ ಕಣಿವೆಯಲ್ಲಿ ಡೆಕ್ಕನ್ ಟ್ರ್ಯಾಪ್ ಶಿಲೆ ಬಾಗ್ ಪದರಗಳ ಮೇಲೆ ಅನನುರೂಪವಾಗಿರುವುದನ್ನೂ ಸೂರತ್ ಮತ್ತು ಭಡೋಚ ಪ್ರದೇಶದಲ್ಲಿ ಡೆಕ್ಕನ್ ಟ್ರ್ಯಾಪ್ ಮೇಲೆ ನಮ್ಮುಲಿಟಿಕ್ ಸುಣ್ಣಶಿಲೆ ಅನನುರೂಪತೆಯಿಂದ ನಿಕ್ಷೇಪಗೊಂಡಿರುವುದನ್ನೂ ಬ್ಲ್ಯಾನ್ ಫೋರ್ಡ್ ಗುರುತಿಸಿದ (1879). ಕಚ್ಛ್ ಪ್ರದೇಶದಲ್ಲಿ ಡೆಕ್ಕನ್ ಟ್ರ್ಯಾಪ್ ಶಿಲೆ ಜುರಾಸಿಕ್ ಕಾಲದ ತೀರನಿಕ್ಷೇಪಗಳ ಮೇಲೆ ಮತ್ತು ನಮ್ಮುಲಿಟಿಕ್ ಸುಣ್ಣಶಿಲೆಯ ಕೆಳಗಿರುವುದನ್ನೂ ವರದಿ ಮಾಡಿದ. ಆದ್ದರಿಂದ ಟ್ರ್ಯಾಪ್ ಶಿಲೆ ಮಧ್ಯ ಕ್ರಿಟೇಷಸ್ ಕಾಲದಿಂದ ಅಂತ್ಯ ಕ್ರಿಟೇಷಸ್ ಕಾಲದ್ದಾಗಿರಬೇಕೆಂದು ಆತನ ಅಭಿಪ್ರಾಯ.

**ತೃತೀಯ ಭೂಕಾಲಯುಗದ ನಿಕ್ಷೇಪಗಳು :** ಸೂರತ್ , ಭಡೋಚ, ನರ್ಮದಾ ಕಣವೆ ಪ್ರದೇಶಗಳಲ್ಲಿ ಇಯೋಸೀನ್ ಕಾಲದ ನಮ್ಮುಲಿಟಿಕ್ ಸುಣ್ಣಶಿಲೆ ಎರಡು ಕಡೆಗಳಲ್ಲಿ ಹೊರಕಂಡಿದೆ. ಇವೆರಡರ ಮಧ್ಯ ಕಿಮ್ ನದಿಯ ಮೆಕ್ಕಲು ನಿಕ್ಷೇಪವಾಗಿದೆ. ಇವೆರಡರಲ್ಲಿ ಕಿಮ್ ಮತ್ತು ನರ್ಮದಾಗಳ ನಡುವೆ ಇರುವುದು ದೊಡ್ಡದು. ಇದರ ಉದ್ದ 48ಕಿಮೀ. ಅಗಲ ಸು. 19ಕಿಮೀ. ಇನ್ನೊಂದು ತಪತಿ ನದಿಯ ಉತ್ತರಕ್ಕೆ 16 ಕಿಮೀ ವಿಸ್ತರಿಸಿದೆ. ಇದರ ಅಗಲ 24 ಕಿಮೀ. ಇವು ಲಾಕಿ ಮತ್ತು ಕಿರ್ತಾರ್ ಶಿಲಾವರ್ಗಗಳಿಗೆ ಸಮದೂಗುತ್ತವೆ. ಈ ಶಿಲೆಗಳ ಮೇಲೆ ಕಾಕಿ ಬಣ್ಣದ ಜೇಡುಶಿಲೆಗಳಿವೆ. ಇವುಗಳ ಮಧ್ಯೆ ಜೇಡು ಮತ್ತು ಸುಣ್ಣಮಿಶ್ರ ಜೇಡು ಪದರಗಳಿವೆ. ಗುಜರಾತಿನಲ್ಲಿ ಇದೇ ಕಾಲದ ಶಿಲೆಗಳು ಮರಳು ಶಿಲೆ, ನೊರಜುಗಳು ಮತ್ತು ಜೇಡುಶಿಲೆಗಳಿಂದ ಕೂಡಿ 1220 – 1525 ಮೀಟರುಗಳಷ್ಟು ದಪ್ಪ ರೂಪುಗೊಂಡಿವೆ. ಇವು ನಾರಿ ಮತ್ತು ಗಾಜ್ (ಆಲಿಗೋಸೀನ್ ಮತ್ತು ಮಯೋಸೀನ್ ಆದಿಕಾಲ) ಶಿಲಾವರ್ಗಗಳಿಗೆ ಸರಿದೂಗುತ್ತವೆ. ಇವುಗಳಲ್ಲಿ ಪೊರಮಿನಿಫೆರಗಳ ಅವಶೇಷಗಳು ಅಧಿಕವಾಗಿವೆ. ಇವು ತೈಲಭರಿತ ಶಿಲೆಗಳು. ಭೂಜ್, ಅಂಕಲೇಶ್ವರ್ ಮುಂತಾದ ಕಡೆಗಳಲ್ಲಿ ತೈಲಬಾವಿಗಳಿವೆ. ಕ್ಯಾಂಬೆ ಮತ್ತು ರಾಜಪಿಪ್ಲಗಳಲ್ಲಿ ಗುಂಡುಶಿಲೆಗಳಲ್ಲಿರುವ ಜಾಸ್ಪರಿನಿಂದ ಸಾಧಾರಣ ರತ್ನ ಶಿಲೆಗಳನ್ನು ತಯಾರಿಸಲಾಗುತ್ತಿದೆ. ಸೌರಾಷ್ಟ್ರದ ಅತ್ಯಂತ ಪಶ್ಚಿಮಭಾಗದಲ್ಲಿ ಗಾಜ್ ಕಾಲದ ಶಿಲೆಗಳ ಮೇಲೆ ಜಿಪ್ಸಂನಿಂದ ಕೂಡಿದ ಜೇಡು ಮತ್ತು ಪೊರಮಿನಿಫೆರಗಳಿಂದ ಕೂಡಿದ ಸುಣ್ಣಶಿಲೆಗಳಿವೆ. ಇವಕ್ಕೆ ದ್ವಾರಕಾಪದರಗಳೆಂದು ಹೆಸರು. ಇವು ಮಯೋಸೀನ್ ಯುಗದ ಮಧ್ಯ ಮತ್ತು ಅಂತ್ಯಕಾಲದವು. ಕ್ಯಾಂಬೆ ಖಾರಿಯಲ್ಲಿರುವ ಪಿರಾಂನಲ್ಲಿ ಮಧ್ಯಶಿವಾಲಿಕ್ ಕಾಲದ ಶಿಲೆಗಳಿವೆ. ಇವುಗಳಲ್ಲಿ ಸಸ್ತನಿಗಳ ಅವಶೇಷಗಳಿವೆ. ಅಹಮದಾಬಾದಿನ ಸಮೀಪದಲ್ಲಿರುವ ತಗ್ಗುಪ್ರದೇಶದಲ್ಲಿ ನೆರಿತಿಯಂ, ಪೊಟಮೈಡಿಸ್‌ಗಳ ಅವಶೇಷಗಳಿರುವ ನಿಕ್ಷೇಪಗಳಿವೆ. ಆದ್ದರಿಂದ ಈ ಪ್ರದೇಶ ಪ್ಲೀಸ್ಟೊಸೀನ್ ಕಾಲದಲ್ಲಿ ಸಮುದ್ರ ಅಳಿವೆಯಾಗಿತ್ತೆಂದು ಭಾವಿಸಬಹುದು. ಕಾಠಿಯಾವಾಡ ಪೂರ್ವಭಾಗದಲ್ಲಿ ಮಿಲಿಯೊಲೈಟ್ ಪೊರಮಿನಿಫೆರಗಳಿಂದ ಕೂಡಿದ ವರ್ತಮಾನಕಾಲದ ಸುಣ್ಣಶಿಲೆ ಇದೆ. ಇದಕ್ಕೆ ಪೋರ್ಬಂದರ್ ಶಿಲೆ ಎಂದು ಹೆಸರು. ಈ ಪ್ರದೇಶ ಇತ್ತೀಚೆಗೆ ಮೇಲೆದ್ದಿರುವುದರ ಕುರುಹು ಈ ಶಿಲೆ.

ರಾಜಪುತಾನ ಮರುಭೂಮಿ ನೈಋತ್ಯದಲ್ಲಿ ಒಂದು ವಿಶಾಲವಾದ ತಗ್ಗುಭೂಮಿ ಯೊಂದಿಗೆ ಸೇರಿಕೊಳ್ಳುತ್ತದೆ. ಇದಕ್ಕೆ ಕಚ್ಛಿನ ರಣ್ ಪ್ರದೇಶ ಎಂದು ಹೆಸರು. ವರ್ಷದ ಕೆಲವು ದಿವಸಗಳಲ್ಲಿ ಇದು ಕೆಸರು ಪ್ರದೇಶವಾಗಿದ್ದು, ಬೇಸಗೆಯಲ್ಲಿ ಒಣಗಿರುತ್ತದೆ. ಹಿಂದೆ ಇದು ಅರಬ್ಬೀ ಸಮುದ್ರದ ಒಂದು ಕೋವೆಯಾಗಿತ್ತು. ಅನೇಕ ಚಿಕ್ಕ ನದಿಗಳು ಮೆಕ್ಕಲನ್ನು ತಂದು ಇದರಲ್ಲಿ ತುಂಬಿ ಕೋವೆಯನ್ನು ಮುಚ್ಚಿವೆ. (ಡಿ.ಆರ್.)

**ಭೌತಲಕ್ಷಣ :** ಗುಜರಾತ್ ರಾಜ್ಯವನ್ನು ಸ್ಥೂಲವಾಗಿ ಐದು ಭಾಗಗಳಾಗಿ ವಿಂಗಡಿಸಬಹುದು : 1. ತೀರದ ತಗ್ಗುನೆಲ, ರಣ್ ಪ್ರದೇಶ ಮತ್ತು ಒಳನಾಡಿನ ಸರೋವರಗಳು; 2. ಗುಜರಾತಿನ ಮೈದಾನ; 3. ಸೌರಾಷ್ಟ್ರ ಪ್ರಸ್ಥಭೂಮಿ; 4. ಬೆಟ್ಟಗಳಂಚಿನ ಬರಡು ನೆಲಪಟ್ಟಿ; 5. ಬೆಟ್ಟಗಳ ಪ್ರದೇಶ, ತೀರದ ತಗ್ಗುನೆಲ ಸಾಮಾನ್ಯವಾಗಿ ಜವುಗಿನಿಂದ ಕೂಡಿದ್ದು; ಸಮುದ್ರತಳದಿಂದ ಈಚೆಗೆ ಮೇಲೆದ್ದ ಈ ಪ್ರದೇಶದ ಜಲೋತ್ಸಾರಣ ಇನ್ನೂ ಕ್ರಮಬದ್ಧವಾಗಿಲ್ಲ. ಇಲ್ಲಿಯ ಅನೇಕ ನದಿ ತೊರೆಗಳು ಬಲು ಸಣ್ಣವು. ಕಚ್ಛಿಗೆ ಉತ್ತರದಲ್ಲೂ ಕಚ್ಛಿನ ಮತ್ತು ಗುಜರಾತಿನ ಮುಖ್ಯ ಭೂಮಿಯ ನಡುವೆಯೂ ಇರುವ ರಣ್‌ಗಳೂ ಕರಾವಳಿಯ ಜವುಗು ನೆಲದಂತೆ ಉದ್ಭವವಾದಂಥವು. ಕಚ್ಛ್ ರಣದ ವಿಸ್ತೀರ್ಣ 11,270 ಕಿಮೀ. ಚಿಕ್ಕ ರಣ್ ಕಿರಿದು. ಇದರ ವಿಸ್ತೀರ್ಣ 4,000 ಚ. ಕಿಮೀ ಗಿಂತ ಹೆಚ್ಚಿಲ್ಲ. ಮಳೆಯಿಲ್ಲದಾಗ ಇವೆರಡೂ ಪ್ರದೇಶಗಳೂ ಒಣನೆಲಗಳಾಗಿರುತ್ತವೆ. ಮಳೆಗಾಲದಲ್ಲಿ ಜಲೋತ್ಸಾರಣ ಕ್ರಿಯೆ ಸರಿಯಾಗಿ ನಡೆಯದೆ ಇವು ಜಲಭರಿತವಾಗುತ್ತವೆ.

ಕರಾವಳಿಯ ಜವುಗು ನೆಲಕ್ಕೂ ಒಳನಾಡಿನ ಪ್ರಸ್ಥಭೂಮಿ ಮತ್ತು ಪರ್ವತಗಳಿಗೂ ನಡುವೆ ಗುಜರಾತಿನ ಮೈದಾನ ಹಬ್ಬಿದೆ. ಇದು ಸಾಬರ್ಮತೀ, ಮಾಹೀ, ನರ್ಮದಾ, ತಾಪಿ ಮತ್ತು ಅವುಗಳ ಉಪನದಿಗಳಿಂದ ಕೂಡಿದ್ದು. ಮಧ್ಯಭಾರತದ ಎತ್ತರದ ನೆಲದಿಂದ ಥಟ್ಟನೆ ಕೆಳಕ್ಕೆ ಇಳಿಯುವ ನದಿಗಳು ಇಲ್ಲಿ ನಿಧಾನವಾಗಿ, ಅಂಕುಡೊಂಕಾಗಿ, ಅಲ್ಲಲ್ಲಿ ನಿಂತು ಸಾಗುತ್ತವೆ. ನದಿಗಳು ತಂದುಹಾಕಿದ ಮೆಕ್ಕಲು ಮಣ್ಣಿನಿಂದ ಮೈದಾನ ಆವೃತವಾಗಿದೆ. ಇಲ್ಲಿಯ ಮಣ್ಣು ವೈವಿಧ್ಯಮಯ.

ಸೌರಾಷ್ಟ್ರ ಪ್ರಸ್ಥಭೂಮಿ 75 ಮೀ ನಿಂದ 300 ಮೀ ವರೆಗೆ ಎತ್ತರವಾಗಿದೆ. ಪಶ್ಚಿಮ ಭಾರತದ ಬಹುಭಾಗವನ್ನು ಒಮ್ಮೆ ಆವರಿಸಿದ್ದ ಲಾವದ ಉಳಿಕೆಯ ನೆಲವಿದು. ಕವಿಚಿಟ್ಟ ಸಕ್ಕರೆ ಪೊಟ್ಟಣದ ರೀತಿಯಲ್ಲಿ ಪ್ರಸ್ಥಭೂಮಿ ಸ್ವಲ್ಪ ಸ್ವಲ್ಪವಾಗಿ ಮೇಲೇರಿ, ಮಧ್ಯ ಭಾಗದಲ್ಲಿ ಬೆಟ್ಟಗುಡ್ಡಗಳಾಗಿ ಪರಿಣಮಿಸಿದೆ. ಇದರ ಉತ್ತರದಲ್ಲಿ ಮಂಡ ಬೆಟ್ಟಗಳೂ ದಕ್ಷಿಣದಲ್ಲಿ ಗಿರ್ ಬೆಟ್ಟಗಳೂ ಇವೆ. ಇವೆರಡನ್ನೂ ಕೂಡಿಸುವ ಕಿರಿದಾದ ಪ್ರದೇಶ ಈ ಪ್ರಸ್ಥಭೂಮಿಯ ಉಳಿದ ಭಾಗಕ್ಕಿಂತ ಎತ್ತರವಾದ್ದು. ಪ್ರಸ್ಥಭೂಮಿಯ ಒಂದು ಮುಖ್ಯ ವೈಶಿಷ್ಟ್ಯವೆಂದರೆ 60 ಮೀ ವರೆಗೆ ಅಗಲವಾಗಿರುವ, 60 ಕಿಮೀ ವರೆಗಿನ ಉದ್ದದ ಡೈಕುಗಳು. ನದಿಗಳು ಮಧ್ಯದ ಎತ್ತರದ ನೆಲದಲ್ಲಿ ಹುಟ್ಟಿ ಎಲ್ಲ ದಿಕ್ಕುಗಳಲ್ಲೂ ಹರಿಯುತ್ತವೆ. ಮಚ್ಛೂ, ಆಜಿ, ಭಾದರ್, ಶತ್ರುಂಜೀ, ಮತ್ತು ಭಗವಾ ಇಲ್ಲಿಯ ಮುಖ್ಯ ನದಿಗಳು.

ಕಚ್ಛಿನ ಪ್ರಸ್ಥಭೂಮಿ ಪ್ರದೇಶ ಪೂರ್ವದಿಂದ ಪಶ್ಚಿಮದ ಕಡೆಗೆ ಇಳಿಜಾರಾಗಿದೆ. ಇಲ್ಲಿಯ ನದಿಗಳು ಕಚ್ಛ್ ಖಾರಿಯೊಳಕ್ಕೆ ಹರಿಯುತ್ತವೆ.

ಬೆಟ್ಟಗಳ ಸಾನುಪ್ರದೇಶ 75 ಮೀ. – 150 ಮೀ, ಎತ್ತರದ ಕಿರು ಅಗಲದ ನಡುಪಟ್ಟಿ, ನರ್ಮದಾ ತಾಪಿಗಳ ನಡುವೆ ಕಿರಿದಾಗಿರುವ ಈ ಪ್ರದೇಶ ನರ್ಮದೆಯಿಂದ ಉತ್ತರಕ್ಕೆ 25 ಕಿಮೀ. ಮತ್ತು ಇನ್ನೂ ಹೆಚ್ಚಿನ ಅಗಲವಾಗುತ್ತದೆ. ಈ ಇಳಿಜಾರು ನೆಲದ ಪ್ರದೇಶದಲ್ಲಿ ಮಣ್ಣು ಶೇಖರವಾಗಲು ಅವಕಾಶವಿಲ್ಲ. ಇದು ನುರುಜು ಕಲ್ಲಿನಿಂದ ಕೂಡಿದೆ. ಅಲ್ಲಲ್ಲಿ ಮಾತ್ರ ಹುಲ್ಲೂ ಕಾಡೂ ಉಂಟು. ಬೆಟ್ಟಗಳ ಪ್ರದೇಶದಲ್ಲಿ ವಾಸಿಸುವ ಕೆಲವು ಹಿಂದುಳಿದ ಬುಡಕಟ್ಟುಗಳ ಜನ ಇಲ್ಲಿ ಬೆಳೆಯುವ ಸಾವೆ, ರಾಗಿ ಮುಂತಾದ ಧಾನ್ಯ ವಿನಾ ಬೇರೇನೂ ಇಲ್ಲಿ ಬೆಳೆಯುವುದಿಲ್ಲ.

ಗುಜರಾತಿನ ಬೆಟ್ಟಗಳ ಪ್ರದೇಶ ಕಚ್ಛ್, ಕಾಠಿಯಾವಾಡ್‌ಗಳ ಮಧ್ಯಭಾಗಗಳಲ್ಲೂ ರಾಜ್ಯದ ಪೂರ್ವ ಎಲ್ಲೆಯಲ್ಲೂ ಇದೆ. ಇದು 300 ಮೀ.ಗಿಂತ ಎತ್ತರದ ಪ್ರದೇಶ. ಇದು ಬಹುತೇಕ ಶಿಲಾಮಯ; ಹೆಚ್ಚು ಮಳೆ ಬೀಳುವಲ್ಲಿ ಕಾಡುಗಳಿವೆ. ಇದು ದೀರ್ಘಕಾಲದ ಸವೆತಕ್ಕೆ ಒಳಗಾಗಿದೆ. ಕಚ್ಛಿನ ಬೆಟ್ಟಗಳು ಪೂರ್ವಪಶ್ಚಿಮವಾಗಿ ಹಬ್ಬಿವೆ. ಇವುಗಳಲ್ಲಿ ಅತ್ಯಂತ ಎತ್ತರವಾದ್ದು ಧಿನೋಧರ್ (388 ಮೀ.) ಇತರ ಬೆಟ್ಟಗಳು ಉಮಿಯ (274 ಮೀ.), ಝುರಾ (316 ಮೀ.), ವರಾದ್ (344 ಮೀ.) ಮತ್ತು ರತ್ನಾಲ್ (349 ಮೀ.).

ಕಾಠಿಯಾವಾಡದ ಉನ್ನತ ಪ್ರದೇಶದ ಉತ್ತರ ಭಾಗದಲ್ಲಿ ಮಂಡ ಬೆಟ್ಟಗಳೂ ದಕ್ಷಿಣದಲ್ಲಿ ಗಿರ್ ಶ್ರೇಣಿಯೂ ಇವೆ. ದಕ್ಷಿಣದ ಶ್ರೇಣಿ ಹೆಚ್ಚು ಎತ್ತರ. ಇದರ ಉನ್ನತ ಬೆಟ್ಟ ಸರ್ಕಲ (643 ಮೀ.). ನಂದಿವೇಲ 529 ಮೀ. ಎತ್ತರವಾಗಿದೆ. ಗಿರ್ ಶ್ರೇಣಿ ಅರಣ್ಯಮಯ. ಇಲ್ಲಿ ಸಿಂಹಗಳಿವೆ (**ನೋಡಿ– ಗಿರ್ ಅರಣ್ಯ**).

ಗುಜರಾತಿನ ಅತ್ಯುನ್ನತ ಬೆಟ್ಟ ಗಿರ್ನಾರ್ (**ನೋಡಿ– ಗಿರ್ನಾರ್**). ಇದರ ಗರಿಷ್ಠ ಎತ್ತರ 1,117 ಮೀ. (ಗೋರಖ್ ನಾಥ್ ಶಿಖರ). ಇದು ಜುನಾಗಢದ ಬಳಿ ಇದೆ. ಪೋರ್ಬಂದರಿಗೆ ಪೂರ್ವದಲ್ಲಿರುವ ಬಾರ್ದ, ಅದಕ್ಕೂ ಪೂರ್ವದ ಅಲೆಚ್ ಇವು ಇತರ ಬೆಟ್ಟಗಳು.

ರಾಜ್ಯದ ಉತ್ತರ, ಈಶಾನ್ಯ ಮತ್ತು ಪೂರ್ವ ಗಡಿಗಳನ್ನು ಬಳಸಿರುವ ಶ್ರೇಣಿಗಳು ಉನ್ನತವಾದವು. ಇವು ಗಡಿಯಾಚೆಗಿನ ಶ್ರೇಣಿಗಳ ಅಂಚಿನ ಭಾಗಗಳು. ಸಬರಕಂಟ, ಪಂಚಮಹಲ, ವಡೋದರ, ಸೂರತ್ ಮತ್ತು ಭಡೋಚ ಜಿಲ್ಲೆಗಳಲ್ಲಿ ಇವು ಚಾಚಿವೆ. ಉತ್ತರದ ಬೆಟ್ಟಗಳು ಆರಾವಳಿಯ ಭಾಗ. ಇವು ಹಿಮ್ಮತ ನಗರದಿಂದ ಉತ್ತರಕ್ಕೆ ಕ್ರಮಕ್ರಮವಾಗಿ ಏರುತ್ತ ನಡೆಯುತ್ತವೆ. ರಾಜ್ಯದಿಂದ ಹೊರಕ್ಕೆ ಅಬು ಶಿಖರದ ಗುಂಪಿನಲ್ಲಿ ಗುರುಶಿಖರ ಅತ್ಯಂತ ಎತ್ತರವಾದ್ದು. ಸಸ್ಯ ರಹಿತವಾದ ಈ ಪ್ರದೇಶದ ಮುಖ್ಯ ಬೆಟ್ಟಗಳು ರತನ್‌ಮಲ್ ಮತ್ತು ಪಾವಗಢ ಪಶ್ಚಿಮ ಭಾಗದಲ್ಲಿ ಬನಾಸ್ ನದಿಯೂ ಪೂರ್ವದಲ್ಲಿ ಸಾಬರ್ಮತಿಯೂ ಹುಟ್ಟುತ್ತವೆ. ಛೋಟಾ ಉದಯಪುರಕ್ಕೆ ದಕ್ಷಿಣಕ್ಕಿರುವ

ಶ್ರೇಣಿ ನರ್ಮದಾ ಮತ್ತು ತಾಪಿ ನದಿಗಳ ಉಗಮದ ಪ್ರದೇಶ. ನರ್ಮದೆಯ ಉತ್ತರದ ಪ್ರದೇಶ ವಿಂಧ್ಯಪರ್ವತಗಳ ಭಾಗ. ಅದಕ್ಕೆ ವನಮಾಲಾ ಬೆಟ್ಟಗಳೆಂಬ ಹೆಸರಿದೆ. ನರ್ಮದೆಗೆ ದಕ್ಷಿಣದಲ್ಲಿರುವುದು ಸಾತ್ಪುರ ಬೆಟ್ಟಗಳ ಪಶ್ಚಿಮದ ಚಾಚು. ಇದು ರಾಜಪಿಪ್ಲ ಎನಿಸಿಕೊಂಡಿದೆ. ತಾಪಿಗೆ ದಕ್ಷಿಣದ್ದು ಸಹ್ಯಾದ್ರಿಯ ಅಂಚು. ಇಲ್ಲಿಂದ ಹಲವು ಸಣ್ಣ ನದಿಗಳು ಹರಿದು ಬಂದು ನೆಟ್ಟಗೆ ಸಮುದ್ರ ಸೇರುತ್ತವೆ. ಇವುಗಳ ಪೈಕಿ ಪೂರ್ಣಾ,ಅಂಬಿಕಾ, ಪಾರ್ ಮತ್ತು ದಮಣಗಂಗಾ ಮುಖ್ಯವಾದವು.



ಸೂರತ್‌ನ ಕೋಟೆ

ಗುಜರಾತಿನ ಸಹಜ ಜಲೋತ್ಸಾರಣ ವ್ಯವಸ್ಥೆ ಏಕಮುಖವಾದ್ದಲ್ಲ. ಕಚ್ಚಿನಲ್ಲಿ ನದಿಗಳು ಮಧ್ಯದ ಎತ್ತರ ಪ್ರದೇಶದಿಂದ ಉತ್ತರಕ್ಕೂ ದಕ್ಷಿಣಕ್ಕೂ ಹರಿಯುತ್ತವೆ. ದಕ್ಷಿಣಕ್ಕೆ ಹರಿಯುವ ನದಿಗಳಲ್ಲಿ ಮುಖ್ಯವಾದವು ಮತೀ, ನಯೀರಾ, ಕನಕಮತೀ ಮತ್ತು ರುಕ್ಮಮತೀ. ಇವಕ್ಕೆ ಉಪನದಿಗಳು ಹೆಚ್ಚಾಗಿಲ್ಲ. ಪ್ರತಿಯೊಂದು ತೊರೆಯೂ ರಣನಲ್ಲೋ ಕಚ್ಛ್ ಖಾರಿಯಲ್ಲೋ ಕೊನೆಗೊಳ್ಳುತ್ತದೆ. ನದಿಗಳು ಬೇಸಗೆಯಲ್ಲಿ ಒಣಗಿಹೋಗುತ್ತವೆ; ಮಳೆಗಾಲದಲ್ಲಿ ತುಂಬಿ ಹರಿಯುತ್ತವೆ.

ಸೌರಾಷ್ಟ್ರದಲ್ಲಿ ಮಧ್ಯದ ದಿಣ್ಣೆನೆಲದಿಂದ ಎಲ್ಲ ದಿಕ್ಕುಗಳಿಗೂ ನದಿಗಳು ಪ್ರವಹಿಸುತ್ತವೆ. ಭಾದರ್ ಅತ್ಯಂತ ಉದ್ದವಾದ ನದಿ (260 ಕಿಮೀ). ಇದು ಪಶ್ಚಿಮಕ್ಕೆ ಹರಿದು ಪೋರ್ಬಂದರಿನ ಬಳಿಯ ನವೀಬಂದರಿನಲ್ಲಿ ಅರಬ್ಬೀ ಸಮುದ್ರವನ್ನು ಸೇರುತ್ತದೆ. ಶತ್ರುಂಜೀ, ಮಚ್ಛೂ ಮತ್ತು ಆಜೀ ಇತರ ಮುಖ್ಯ ನದಿಗಳು. ಶತ್ರುಂಜೀ ನದಿ ಗಿರ್ ಶ್ರೇಣಿಯಲ್ಲಿ ಉಗಮಿಸಿ ಪೂರ್ವಾಭಿಮುಖವಾಗಿ ಹರಿದು ಸುಲ್ತಾನ್‌ಪುರದಲ್ಲಿ ಕ್ಯಾಂಬೇ ಖಾರಿಯನ್ನು ಸೇರುತ್ತದೆ. ಮಚ್ಛೂ ಮತ್ತು ಆಜೀ ನದಿಗಳು ಅನುಕ್ರಮವಾಗಿ ಚಿಕ್ಕ ರಣ್ ಮತ್ತು ಕಚ್ಛ್ ಖಾರಿಯನ್ನು ಸೇರುತ್ತವೆ. ಇವುಗಳಲ್ಲದೆ ಹಲವಾರು ಸಣ್ಣ ಹೊಳೆಗಳು ಸೌರಾಷ್ಟ್ರದ ಕರಾವಳಿಯಲ್ಲಿ ಹರಿಯುತ್ತವೆ. ಕಚ್ಛ್ ಖಾರಿ ಮತ್ತು ಅರಬ್ಬೀ ಸಮುದ್ರದ ಕರಾವಳಿಗಳೇ ಅಲ್ಲದೆ ಕ್ಯಾಂಬೇ ಖಾರಿಯ ಕರಾವಳಿಯಲ್ಲಿ ಕೂಡ ಜಲೋತ್ಸಾರಣ ಸಮರ್ಪಕವಾಗಿಲ್ಲದೆ ನೀರು ನಿಂತು ಜವುಗುಂಟಾಗಿದೆ.

ಗುಜರಾತ್ ಮೈದಾನದ ನದಿಗಳು ದೂರದ ಬೆಟ್ಟಗಳಲ್ಲಿ ಹುಟ್ಟಿ ಹರಿದುಬರುತ್ತವೆ. ಬನಾಸ್, ಸರಸ್ವತಿ ಮತ್ತು ರೂಪೆನ್ ನದಿಗಳು ಚಿಕ್ಕ ರಣ್ ಅನ್ನು ಸೇರುತ್ತವೆ. ಉಳಿದವು ಸಮುದ್ರ ಸೇರುವುದು ಕ್ಯಾಂಬೇ ಖಾರಿಯಲ್ಲಿ. ಚಿಕ್ಕ ರಣ್ ಸೇರುವ ನದಿಗಳು ಬೇಸಗೆಯಲ್ಲಿ ಒಣಗಿರುತ್ತವೆ. ಬೆಟ್ಟದಿಂದ ಹೊತ್ತು ತಂದ ಮಣ್ಣನ್ನು ಹೊರಲಾರದೆ ಮೈದಾನದಲ್ಲಿ ಬಿಟ್ಟು ಹೊರಳುತ್ತವೆ. ಇವುಗಳ ಪಾತ್ರಗಳು ಬಲು ವಿಶಾಲ.

ಸಾಬರ್ಮತಿಯ ಉದ್ದ 300 ಕಿಮೀ. ಅಹಮದಾಬಾದಿನಿಂದ ಮುಂದಕ್ಕೆ ನದಿಯ ಪಾತ್ರ ಪದೇ ಪದೇ ಬದಲಾಗುತ್ತಿರುವುದುಂಟು. ಮಾಹೀನದಿ 500 ಕಿಮೀ. ಉದ್ದವಾಗಿದೆ. ಅದು ಗುಜರಾತಿನಲ್ಲಿ 180 ಕಿಮೀ.ಗಿಂತಲೂ ಉದ್ದವಾಗಿ ಹರಿದು ಸಮುದ್ರ ಸೇರುತ್ತದೆ. ಸಾಬರ್ಮತಿ ಮತ್ತು ಮಾಹೀ, ಇವೆರಡೂ ನದಿಗಳ ಉಪನದಿಗಳು ಇವುಗಳ ಎಡ ದಂಡೆಗಳಲ್ಲಿ ಬಂದು ಸೇರುತ್ತವೆ.

ಗುಜರಾತಿನ ಅತ್ಯಂತ ಮುಖ್ಯ ನದಿಗಳು ನರ್ಮದಾ ಮತ್ತು ತಾಪಿ. ಗುಜರಾತಿನಲ್ಲಿ ನರ್ಮದಾ ನದಿ ಹರಿಯುವ ದೂರ 150 ಕಿಮೀ. ಇದು ಭಡೋಚದ ಬಳಿ ಕ್ಯಾಂಬೇ ಖಾರಿಯನ್ನು ಸೇರುತ್ತದೆ. ಓರ್ಸಂಗ್, ಕರ್ಜನ್, ಅಮರಾವತಿ, ಭೂಖಿ ಇವು ನರ್ಮದೆಯ ಮುಖ್ಯ ಉಪನದಿಗಳು. ಸಮುದ್ರ ಸಂಗಮದ ಕಡೆಯಿಂದ ಮೇಲಣ ನೂರು ಕಿಮೀ.ಗಳ ದೂರ ಇದು ಗುಜರಾತಿನ ಅತ್ಯಂತ ಫಲವತ್ತಾದ ಮೈದಾನದ ಮೂಲಕ ಹರಿಯುತ್ತದೆ. ನದೀಪಾತ್ರ ಬದಲಿಸಿದ್ದರ ಪರಿಣಾಮವಾಗಿ, ಇದರಲ್ಲಿ ಕೆಲವು ದ್ವೀಪಗಳು ಸಂಭವಿಸಿವೆ. ಭಡೋಚದಿಂದ ಮೇಲಕ್ಕೆ ಸು. 23 ಕಿಮೀ ದೂರದಲ್ಲಿರುವ ಶುಕ್ಲತೀರ್ಥ, ನದೀಮುಖಜ ಭೂಮಿಯಲ್ಲಿರುವ ಆಲಿಯ ಮುಖ್ಯವಾದವು.

ತಾಪೀ ನದಿ ನರ್ಮದೆಗಿಂತ ಚಿಕ್ಕದಾದರೂ ಗುಜರಾತಿನಲ್ಲಿ ಇದರ ಹರಿವಿನ ಉದ್ದ ನರ್ಮದೆಯದಕ್ಕಿಂತ ಹೆಚ್ಚು. ಗುಜರಾತಿನಲ್ಲಿ ಅತಿ ಹೆಚ್ಚು ಮಳೆಯಾಗುವ ಪ್ರದೇಶ ಇದರ ಜಲಾನಯನ ಭೂಮಿಯಾದ್ದರಿಂದ ನೀರಾವರಿ ಮತ್ತು ವಿದ್ಯುತ್ತಿನ ದೃಷ್ಟಿಯಲ್ಲಿ ಇದರ ವಿಭವ ಅಧಿಕ. ಪೂರ್ವದ ಬೆಟ್ಟಸೀಮೆಯನ್ನು ಕಕ್ರ ಪಾರದ ಬಳಿ ಬಿಟ್ಟು 100 ಕಿಮೀ ದೂರ ಸಾಗಿ ಸೂರತ್ತಿನಿಂದ ಮುಂದೆ ಇದು ಸಮುದ್ರವನ್ನು ಕೂಡಿಕೊಳ್ಳುತ್ತದೆ. ಇದರ ಪಾತ್ರ ನರ್ಮದೆಯದರಷ್ಟು ವಿಶಾಲವಲ್ಲ. ಈ ನದಿಯ ಕೆಳಭಾಗದ ನೆಲ ಹತ್ತಿ ಬೆಳೆಯಬಲ್ಲ ಫಲವತ್ತಾದ ಕಪ್ಪು ಮಣ್ಣಿನಿಂದ ಕೂಡಿದೆ.

ಒಟ್ಟಿನಲ್ಲಿ ದಕ್ಷಿಣ ಗುಜರಾತಿನ ನದಿಗಳು ಸಮಾನಾಂತರಗಳಲ್ಲಿ ಹರಿದು ಸಮುದ್ರ ಸೇರುತ್ತವೆ. ಸಾತ್ಪುರಾ ಮತ್ತು ಪಶ್ಚಿಮ ಘಟ್ಟಗಳ ಸಣ್ಣ ಚಾಚುಗಳು ಈ ನದಿಗಳು ಪರಸ್ಪರ ಕೂಡದಂತೆ ಪ್ರತ್ಯೇಕಿಸಿವೆ. ನರ್ಮದಾ, ಕಿಂ, ತಾಪಿ, ಪೂರ್ಣಾ, ಅಂಬಿಕಾ, ಪಾರಾ ಮತ್ತು ದಮಣಗಂಗಾ – ಇವು ಮುಖ್ಯ ನದಿಗಳು. ಸಮುದ್ರದ ಭರತದಿಂದಾಗಿ ಇವುಗಳ ಮುಖಭಾಗಗಳಲ್ಲಿ ಉಪ್ಪು ನೀರು ಒಳಗೆ ನುಗ್ಗುತ್ತದೆ. ಆದ್ದರಿಂದ ಈ ನದಿಗಳ ತಳಭಾಗದ ಬಳಿ ಇರುವ ಪಟ್ಟಣಗಳಿಗೆ ಇವುಗಳ ನೀರು ಕುಡಿಯಲು ಉಪಯುಕ್ತವಾಗಿಲ್ಲ. ಕರಾವಳಿಯ ಬಳಿ ನೆಲ ಬಹಳ ತಗ್ಗಾಗಿರುವುದರಿಂದ ಜಲೋತ್ಸಾರಣಕ್ಕೆ ತಡೆಯುಂಟಾಗಿದೆ.



ಜಾಗ್ ಮತ್ತು ಗರಬಾ ನೃತ್ಯ

**ವಾಯುಗುಣ :** ಉತ್ತರದಲ್ಲಿ ರಾಜಸ್ತಾನದಿಂದ ದಕ್ಷಿಣದಲ್ಲಿ ಕೊಂಕಣ ಸೀಮೆಯ ವರೆಗೆ ಹಬ್ಬಿರುವ ಗುಜರಾತು ಅತಿ ಹೆಚ್ಚಿನ ಮಳೆ ಪ್ರದೇಶದಿಂದ ಮರುಭೂಮಿಯ ವರೆಗಿನ ನಾನಾ ವಾಯುಗುಣಗಳಿಂದ ಕೂಡಿದ ಭಾಗಗಳನ್ನೊಳಗೊಂಡಿದೆ. ರಾಜ್ಯದ ದಕ್ಷಿಣ ಭಾಗದಲ್ಲಿ 2,000 ಮಿಮೀ ಗಳಷ್ಟು ಮಳೆಯಾದರೆ, ಅತ್ಯಂತ ಉತ್ತರದಲ್ಲಿ, ಬನಾಸ್ಕಂಟಾ ಜಿಲ್ಲೆಯ ಕೆಲವು ಭಾಗಗಳಲ್ಲಿ, 300 – 400 ಮಿಮೀ ಗಳಿಗಿಂತ ಹೆಚ್ಚು ಮಳೆಯಿಲ್ಲ. ಇಡೀ ರಾಜ್ಯ ಮಾನ್ಸೂನ್ ವಲಯದಲ್ಲಿದೆ. ಜೂನ್ ನಡುಗಾಲದಿಂದ ಅಕ್ಟೋಬರ್ ನಡುಗಾಲದವರೆಗೆ ಮಳೆ – ನೈಋತ್ಯ ಮಾನ್ಸೂನಿನಿಂದ. ಚಳಿಗಾಲದಲ್ಲಿ ಹವೆ ಶುಷ್ಕವಾಗಿಯೂ ಹಿತವಾಗಿಯೂ ಇರುತ್ತದೆ. ಆದರೆ ಉತ್ತರ ಭಾರತದಲ್ಲಿ ಬೀಸುವ ಶೀತಮಾರುತಗಳು ಗುಜರಾತನ್ನೂ ಒಮ್ಮೊಮ್ಮೆ ಪ್ರವೇಶಿಸುವುದುಂಟು. ವರ್ಷದಲ್ಲಿ ಜನವರಿ ಅತ್ಯಂತ ಶೀತಮಾಸ. ನವೆಂಬರಿನ ಮಧ್ಯದಿಂದ ಫೆಬ್ರವರಿಯ ಮಧ್ಯದವರೆಗೆ ಚಳಿಗಾಲ. ಅಲ್ಲಿಂದ ಮುಂದೆ ಉಷ್ಣತೆ ಏರುತ್ತ ಸಾಗಿ, ಮೇ ತಿಂಗಳಲ್ಲಿ ಗರಿಷ್ಠವಾಗುತ್ತದೆ. ನೈಋತ್ಯ ಮಾನ್ಸೂನಿನ ಆಗಮನದಿಂದಾಗಿ ಜೂನ್ ತಿಂಗಳು ಥಟ್ಟನೆ ತಂಪಾಗುತ್ತದೆ. ಆದರೆ ಮುಖ್ಯವಾಗಿ ಕರಾವಳಿಯಲ್ಲಿ ವಾತಾವರಣದ ತೇವದಿಂದಾಗಿ ಹವೆ ಅಷ್ಟೇನೂ ಹಿತಕರವಾಗಿರುವುದಿಲ್ಲ. ಚಳಿಗಾಲವೇ ಹೆಚ್ಚು ಚೈತನ್ಯದಾಯಕ ಕಾಲ. ರಾಜ್ಯದ ಕೆಲವು ಭಾಗಗಳಲ್ಲಿ ಮೇ ತಿಂಗಳಲ್ಲಿ ಉಷ್ಣತೆ $45^0$ ಸೆಂ. ಮುಟ್ಟುವುದುಂಟು. ರಾಜ್ಯದ ಬಹುಭಾಗ $35^0$ ಮತ್ತು $42.5^0$ ಸೆಂ. ಸಮಶಾಖರೇಖೆಯ ನಡುವೆ ಬರುತ್ತದೆ. ಕಚ್ಛ್, ಸೌರಾಷ್ಟ್ರಗಳ ಕರಾವಳಿಯಲ್ಲಿ ಉಷ್ಣತೆ ಕನಿಷ್ಠ. ಇದು ಕಡಲಿನ ಪ್ರಭಾವ. ಸಮುದ್ರದ ಗಾಳಿ ಒಳನಾಡಿನಲ್ಲಿ 30 – 40 ಕಿಮೀವರೆಗೆ ಬೀಸುವುದುಂಟು. ಜನವರಿಯಲ್ಲಿ ಎಲ್ಲೂ ಗರಿಷ್ಠ ಉಷ್ಣತೆ $30^0$ ಸೆಂ.ನ್ನು ದಾಟುವುದಿಲ್ಲ. ದಕ್ಷಿಣಕ್ಕೆ ಬಂದಂತೆ ಉಷ್ಣತೆ ಅಧಿಕವಾಗುತ್ತದೆ.

ಗುಜರಾತಿನಲ್ಲಿ ಮಳೆಯ ಪರಿಮಾಣ ಒಂದೆಡೆಯಿಂದ ಇನ್ನೊಂದೆಡೆಗೆ ತೀವ್ರವಾಗಿ ವ್ಯತ್ಯಾಸವಾಗುತ್ತದೆ. ದಕ್ಷಿಣದಲ್ಲಿರುವ ಬಲ್ಸಾರ್ ಜಿಲ್ಲೆಯಲ್ಲಿ 2,000 ಮಿಮೀ. ಮಳೆ. ಉತ್ತರಕ್ಕೆ ಹೋದಂತೆ ಇದು ಥಟ್ಟನೆ ಇಳಿಯುತ್ತದೆ. ಕೇವಲ 100 ಕಿಮೀ. ಉತ್ತರದಲ್ಲೆ (ಉದಾ : ಸೂರತ್) ಇದು 1,040 ಮಿಮೀ. ಅಲ್ಲಿಂದ ಮುಂದಕ್ಕೆ ಕ್ರಮಕ್ರಮವಾಗಿ ಕಡಿಮೆಯಾಗುತ್ತದೆ. ಸೌರಾಷ್ಟ್ರದಲ್ಲಿ 500 ಮಿಮೀ.ಗಿಂತ ಕಡಿಮೆ ಮಳೆ. ಗಿರ್ನಾರಿನಲ್ಲಿ ಮಾತ್ರ 700 ಮಿಮೀ. ಮಳೆಯಾಗುತ್ತದೆ. ಅದು ಹಸಿರು ತುಂಬಿದ ಪ್ರದೇಶ. ಕಚ್ಛ್ ಅರೆ – ಮರುಭೂಮಿ. ಅಲ್ಲಿ ಬಹುಭಾಗದಲ್ಲಿ 400 ಮಿಮೀ.ಗಿಂತ ಕಡಿಮೆ ಮಳೆಯಾಗುತ್ತದೆ. ಭುಜನಲ್ಲಿ ಕೇವಲ 340 ಮಿಮೀ. ಗುಜರಾತಿನ ಬಯಲುಸೀಮೆಯಲ್ಲಿ ಉತ್ತರಕ್ಕೆ ಹೋದಂತೆ ಮಳೆ ಕಡಿಮೆ. ವಡೋದರದಲ್ಲಿ 910 ಮಿಮೀ. ಅಹಮದಾಬಾದಿನಲ್ಲಿ 730 ಮಿಮೀ. ಭಾವನಗರದಲ್ಲಿ 500 ಮಿಮೀ. ದೀಸದಲ್ಲಿ 60 ಮಿಮೀ. ಎಲ್ಲೆಲ್ಲಿ ಬೆಟ್ಟಗಳಿವೆಯೊ ಅಲ್ಲಿ ನೆರೆಯ ನೆಲದ್ದಕ್ಕಿಂತ ಹೆಚ್ಚು ಮಳೆಯಾಗುತ್ತದೆ. ಬನಾಸ್ಕಂಟಾದಲ್ಲಿ ಆರಾವಳಿ ಮತ್ತು ಅಬು ಶ್ರೇಣಿಗಳ ನೆರೆಯ ಪ್ರದೇಶದಲ್ಲಿ 800 ಮಿಮೀ ಗಿಂತ ಹೆಚ್ಚು ಮಳೆಯಾಗುತ್ತದೆ.

ಮಳೆಯ ದೃಷ್ಟಿಯಿಂದ ಗುಜರಾತ್ ರಾಜ್ಯದ ಮುಖ್ಯ ವಲಯಗಳು ಇವು : 1) ವರ್ಷಕ್ಕೆ 1,000 ಮಿಮೀ ಗಿಂತ ಹೆಚ್ಚು ಮಳೆಯಾಗುವ ಪ್ರದೇಶಗಳು – ಬಲ್ಸಾರ್, ಡಾಂಗ್ಸ್ ಜಿಲ್ಲೆಗಳು, ರಾಜಪಿಪ್ಲಾ ಬೆಟ್ಟವೂ ಸೇರಿದಂತೆ ಭಡೋಚ ಜಿಲ್ಲೆಯ ಪೂರ್ವಭಾಗ; 2) ವರ್ಷಕ್ಕೆ 800 – 1,000 ಮಿಮೀ ಮಳೆಯಾಗುವ ಪ್ರದೇಶಗಳು – ವಡೋದರ, ಪಂಚಮಹಲ್, ಖೇಡಾ ಜಿಲ್ಲೆಗಳು, ಅಹಮದಾಬಾದಿನ ಒಂದು ಭಾಗ; 3) ವರ್ಷಕ್ಕೆ 400 – 800 ಮಿಮೀ ಮಳೆ ಬೀಳುವ ಪ್ರದೇಶಗಳು – ಸೌರಾಷ್ಟ್ರ, ಅಹಮದಾಬಾದಿನಿಂದ ಉತ್ತರಕ್ಕಿರುವ ಗುಜರಾತಿನ ಭಾಗ; 4) ವರ್ಷಕ್ಕೆ 400 ಮಿಮೀ ಗಿಂತ ಕಡಿಮೆ ಮಳೆಯಾಗುವ ಪ್ರದೇಶಗಳು – ಕಚ್ಛ್, ಸಬರಕಂಟಾ ಜಿಲ್ಲೆಯ ಪಶ್ಚಿಮ ಭಾಗ.

**ಸ್ವಾಭಾವಿಕ ಸಸ್ಯಸಂಪತ್ತು :** ಗುಜರಾತಿನ ಸಸ್ಯಸಂಪತ್ತು ಮಳೆಗೆ ಅನುಸಾರವಾಗಿ ವ್ಯತ್ಯಾಸಗೊಳ್ಳುತ್ತದೆ. ಸಾಕಷ್ಟು ಮಳೆಯಾಗಿಯೂ ಕೃಷಿಗೆ ಉಪಯೋಗವಿಲ್ಲದ ಪ್ರದೇಶಗಳಲ್ಲಿ ಕಾಡುಗಳು ಇವೆ. ಗುಜರಾತಿನಲ್ಲಿ ಮೈದಾನಕ್ಕಿಂತ ಬೆಟ್ಟಗಳ ಪ್ರದೇಶದಲ್ಲಿ ಉತ್ತರಕ್ಕಿಂತ ದಕ್ಷಿಣದಲ್ಲಿ ಮಳೆ ಹೆಚ್ಚಾಗಿರುವುದರಿಂದ ರಾಜ್ಯದ ಆಗ್ನೇಯ ಭಾಗದ ಮತ್ತು ಸೌರಾಷ್ಟ್ರದ ಬೆಟ್ಟಗಳಲ್ಲಿ ಕಾಡುಗಳು ಸಾಂದ್ರಿಕರಿಸಿವೆ. ಕಚ್ಛಿನ ಬೆಟ್ಟಗಳು ಉತ್ತರದಲ್ಲಿರುವುದರಿಂದಲೂ ಮಳೆ ಮಾರುತಗಳಿಗೆ ಹೆಚ್ಚಿನ ಅಡಚಣೆ ಒಡ್ಡದಿರುವುದರಿಂದಲೂ ಅಲ್ಲಿ ಕಾಡುಗಳಿಲ್ಲ. ಗುಜರಾತಿನ ಶೇ. 8.99 ಪ್ರದೇಶ ಅರಣ್ಯಗಳಿಂದ ಆವೃತವಾಗಿದೆ. ಪ್ರತಿಯೊಂದು ಜಿಲ್ಲೆಯಲ್ಲೂ ಕಾಡಿನ ಪ್ರದೇಶ ಅಲ್ಪಸ್ವಲ್ಪವಾದರೂ ಇದ್ದೇ ಇರುವುದಾದರೂ ಆರ್ಥಿಕ ದೃಷ್ಟಿಯಿಂದ ಮುಖ್ಯವಾದ ಜಿಲ್ಲೆಗಳು ಇವು : ಡಾಂಗ್ಸ್, ಪಂಚಮಹಲ್, ಭಡೋಚ, ಸೂರತ್, ಬಲ್ಸಾರ್, ಜುನಾಗಢ, ಸಬರಕಂಟಾ ಮತ್ತು ಬನಾಸ್ಕಂಟಾ. ದಕ್ಷಿಣದ ಮೂರು ಜಿಲ್ಲೆಗಳಾದ ಡಾಂಗ್ಸ್, ಸೂರತ್, ಭಡೋಚಗಳಲ್ಲಿ ರಾಜ್ಯದ ಶೇ. 40 ರಷ್ಟು ಅರಣ್ಯ ಪ್ರದೇಶವಿದೆ. 1,250 ಮಿಮೀ ಗಳಿಗಿಂತ ಹೆಚ್ಚು ಮಳೆ ಬೀಳುವ ಪ್ರದೇಶಗಳಲ್ಲಿ ತೇಗ, ಮತ್ತಿ, ಮತ್ತು ದಿಂಡಲು ಮುಖ್ಯ ಮರಗಳು. ಮಳೆ ಕಡಿಮೆಯಾದಂತೆ ತೇಗ ಕಡಿಮೆಯಾಗಿ ಎಲಚಿ, ಮುತ್ತುಗ, ಕಾಚು ಮರಗಳು ಬೆಳೆಯುತ್ತವೆ. ಮಳೆ ಇನ್ನೂ ಕಡಿಮೆಯಾಗಿರುವ ಉತ್ತರ ಭಾಗದಲ್ಲಿ ಕರಿಜಾಲಿ, ಬಿಳಿಗೊಬ್ಬಳಿ, ಚಿಪ್ಪೂರಿ, ಎಲಚಿ, ಕಳ್ಳಿ ಜಾತಿಯ ಗಿಡಗಳು ಬೆಳೆಯುತ್ತವೆ. ಹೆಚ್ಚು ಅಥವಾ ಸಾಮಾನ್ಯ ಮಳೆಯ ಪ್ರದೇಶಗಳಲ್ಲಿ ಬಿದಿರು ಒಂದು ಮುಖ್ಯ ಸಸ್ಯ. ಗುಜರಾತಿನಲ್ಲಿ ಬಿದಿರು ಕಾಡುಗಳ ಒಟ್ಟು ವಿಸ್ತೀರ್ಣ 1927.5 ಚ.ಕಿಮೀ ಉತ್ತರಕ್ಕಿಂತ ದಕ್ಷಿಣದಲ್ಲಿ ಬಿದಿರು ಕಾಡುಗಳು ಹೆಚ್ಚು.

ಗುಜರಾತಿನ ಕಾಡುಗಳ ಪ್ರಯೋಜನವನ್ನು ಸಂಪೂರ್ಣವಾಗಿ ಪಡೆದಿಲ್ಲ. ಅವನ್ನು ಸರಿಯಾಗಿ ರಕ್ಷಿಸುವ ಕ್ರಮವನ್ನು ಕೈಗೊಂಡಿಲ್ಲ. ಅರಣ್ಯಗಳ ವಿಸ್ತೀರ್ಣ ಕ್ರಮ ಕ್ರಮವಾಗಿ ಕಡಿಮೆಯಾಗುತ್ತಿದೆ. ಗಿರ್ ಅರಣ್ಯ ಕಳೆದ 140 ವರ್ಷಗಳಲ್ಲಿ ಅರ್ಧಕ್ಕೆ ಕುಗ್ಗಿದೆ. ರಾಜ್ಯದ ವಾರ್ಷಿಕ ಸಾಗುವಾನಿ ಉತ್ಪಾದನೆ 36ಲಕ್ಷ ಘ. ಅಡಿ. ಗುಜರಾತಿನ ಬಿದಿರಿನ ವಿಭವ 2 ಲಕ್ಷ ಟನ್ ಎಂದು ಅಂದಾಜು ಮಾಡಲಾಗಿದೆ. ಅದರಲ್ಲಿ 80,000 ಟನ್ ಬಿದಿರು ಡಾಂಗ್ಸ್ ಮತ್ತು ರಾಜಪಿಪ್ಲ ಪ್ರದೇಶದಲ್ಲಿದೆ.

**ಜನವಸತಿ :** ಗುಜರಾತಿಗಳು ಹೆಚ್ಚು ಮೈಕಟ್ಟಿನ ಜನರಲ್ಲವಾದರೂ ಸ್ವಭಾವತಃ ಸಜ್ಜನರು, ಸೌಜನ್ಯಶೀಲರು, ಶಾಂತಿಪ್ರಿಯರು, ಧೈರ್ಯ, ಶೌರ್ಯ, ಔದಾರ್ಯ, ದೇಶಭಕ್ತಿ ಮತ್ತು ಅತಿಥಿಸತ್ಕಾರಗಳಿಗಾಗಿ ಹೆಸರಾದವರು. ಉದ್ಯೋಗ ಪ್ರಿಯತೆಯೊಡನೆ ಉಲ್ಲಾ ಪ್ರವೃತ್ತಿಯನ್ನೂ ಹೊಂದಿದವರು. ಸಮುದ್ರದ ಸಾಮೀಪ್ಯ ಮತ್ತು ಆರ್ಥಿಕ ಅನುಕೂಲತೆಗಳಿಗಾಗಿ ಸ್ವಾಭಾವಿಕವಾಗಿಯೇ ಈ ಜನರಲ್ಲೊಂದು ವಿಶೇಷ ಸಾಹಸ ಮತ್ತು ಸಂಚರೋತ್ಸಾಹ ಕಂಡುಬರುತ್ತದೆ.

2011ರ ಜನಗಣತಿ ಪ್ರಕಾರ ಈ ರಾಜ್ಯದ 6,03,83,628 ಪ್ರಜೆಗಳಲ್ಲಿ ಪುರುಷರು 26,385,577 ಮಂದಿ. ಮಹಿಳೆಯರು 24,285,440 ಮಂದಿ ಇದ್ದಾರೆ. ಚ.ಕಿಮೀ. ಜನಸಾಂದ್ರತೆ 258 ಮಂದಿ. ನಗರವಾಸಿಗಳು ಶೇ 37.4 ಮಂದಿ ಇದ್ದಾರೆ.

ಗುಜರಾತ್ ರಾಜ್ಯದಲ್ಲಿ 25 ಜಿಲ್ಲೆಗಳೂ, 242 ಪಟ್ಟಣಗಳೂ 18,539 ಗ್ರಾಮಗಳೂ ಇವೆ. ಜಿಲ್ಲಾವಾರು ಜನಸಂಖ್ಯೆಯ ವಿವರಗಳು ಕೆಳಗಿನಂತಿವೆ :


| ಜಿಲ್ಲೆ | ವಿಸ್ತೀರ್ಣ ಚ.ಕಿಮೀ | ಜನಸಂಖ್ಯೆ (2011) | ಆಡಳಿತ ಕೇಂದ್ರ ನಗರ |
|---|---|---|---|
| 1. ಅಹಮದಾಬಾದ್ | 8087 | 72,08,200 | ಅಹಮದಾಬಾದ್ |
| 2. ಅಮ್ರೇಲಿ | 7397 | 15,13,614 | ಅಮ್ರೇಲಿ |
| 3. ಆನಂದ್ | 2941 | 20,90,276 | ಆನಂದ್ |
| 4. ಬನಾಸ್ಕಂಟ | 10,757 | 31,16,045 | ಪಾಲನ್‌ಪುರ್ |
| 5. ಬರೂಚ್ | 6527 | 15,50,822 | ಬರೂಚ್ |
| 6. ಭಾವನಗರ್ | 9981 | 28,77,961 | ಭಾವನಗರ್ |
| 7. ದಾಹೋದ್ | 3,646 | 21,26,558 | ದಾಹೋದ್ |
| 8. ದಾಂಗ್ | 1764 | 2,26,769 | ಆಹ್ವಾ |
| 9. ಗಾಂದಿನಗರ್ | 2163 | 13,87,478 | ಗಾಂಧಿನಗರ್ |
| 10. ಜಾಮ್‌ನಗರ್ | 14125 | 21,59,130 | ಜಾಮ್‌ನಗರ್ |
| 11. ಜುನಾಘಢ್ | 8846 | 27,42,291 | ಜುನಾಘಢ್ |
| 12. ಖೇಡ | 4219 | 22,98,934 | ನಡಿಯಾಡ್ |
| 13. ಮೆಹಸಾನ | 4384 | 20,27,727 | ಮೆಹಸಾನ |
| 14. ಕಚ್ಛ್ | 45652 | 20,90,313 | ಭುಜ್ |
| 15. ನರ್ಮದ | 2755 | 5,90,379 | ರಾಜ್‌ಪಿಪ್ಲ |
| 16. ನೌಸಾರಿ | 2209 | 13,30,711 | ನೌಸಾರಿ |
| 17. ಪಂಚಮಹಲ್ | 5220 | 23,88,267 | ಗೋಧ್ರಾ |
| 18. ಪಠಾಣ | 5730 | 13,42,746 | ಪಠಾಣ |
| 19. ಪೋರ್‌ಬಂದರ್ | 2298 | 5,86,062 | ಪೋರ್‌ಬಂದರ್ |
| 20. ರಾಜ್‌ಕೋಟ್ | 1203 | 37,99,770 | ರಾಜ್‌ಕೋಟ |
| 21. ಸಬರ್‌ಕಾಂಟ | 7390 | 24,27,346 | ಹಿಮ್ಮತ್‌ನಗರ್ |
| 22. ಸೂರತ್ | 7657 | 60,79,231 | ಸೂರತ್ |
| 23. ಸುರೇಂದ್ರ ನಗರ್ | 10489 | 17,55,873 | ಸುರೇಂದ್ರನಗರ್ |
| 24. ವಡೋದರ | 7549 | 41,57,568 | ವಡೋದರ |
| 25. ವಾಲ್ಸದ್ | 3035 | 17,03,068 | ವಾಲ್ಸದ್ |

ಗುಜರಾತಿನ ಪ್ರಾದೇಶಿಕ ಭಾಷೆ ಗುಜರಾತಿ. ಬಹುಜನರು ಹಿಂದಿಯನ್ನು ಸುಲಭವಾಗಿ ಮಾತನಾಡಬಲ್ಲರು. ಬಲು ದೀರ್ಘವಾದ ಐತಿಹಾಸಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಯುಳ್ಳ ಇಲ್ಲಿಯ ಜನಜೀವನಕ್ಕೆ ತನ್ನದೇ ಆದ ಮೆರುಗು ಬಂದಿದೆ. ಶ್ರೀಕೃಷ್ಣ, ದಯಾನಂದ ಸರಸ್ವತೀ, ನರಸಿಂಹ ಮೆಹ್ತಾ, ಮಹಾತ್ಮ ಗಾಂಧೀ ಮತ್ತಿತರರ ಜೀವನ ದರ್ಶನ ಸಾಹಿತ್ಯಗಳು ಗುಜರಾತಿನ ಸಾಂಸ್ಕೃತಿಕ ಶ್ರೀಮಂತಿಕೆ ಹೆಚ್ಚಿಸಲು ಕಾರಣವಾಗಿದೆ. ಶ್ರೀಕೃಷ್ಣನ ಮೊಮ್ಮಗನಾದ ಅನಿರುದ್ಧನ ಮಡದಿ ಉಷಾ ಆರಂಭಿಸಿದ ಲಾಸ್ಯ ಪರಂಪರೆ ಇಂದಿಗೂ ಈ ರಾಜ್ಯದ ಹಬ್ಬಹುಣ್ಣಿಮೆಗಳಲ್ಲಿ, ಮುಖ್ಯವಾಗಿ ನವರಾತ್ರಿ ಹಬ್ಬದಲ್ಲಿ, ಗರಬಾ ನೃತ್ಯದಲ್ಲಿ ಉಳಿದುಬಂದಿದೆ.

**ಕೃಷಿ ಮತ್ತು ನೀರಾವರಿ :** ಭಾರತದಲ್ಲಿ ಪ್ರಗತಿಪರ ಬೇಸಾಯಕ್ಕೆ ಹೆಸರಾದ ಪ್ರದೇಶಗಳಲ್ಲಿ ಗುಜರಾತ್ ರಾಜ್ಯವೂ ಒಂದು. ಹತ್ತಿ ಮತ್ತು ನೆಲಗಡಲೆ ಬೆಳೆಗಳಲ್ಲಿ ಇಡಿಯ ರಾಷ್ಟ್ರದಲ್ಲಿ ಈ ರಾಜ್ಯ ಪ್ರಮುಖವಾಗಿದೆ. ಈ ಬೆಳೆಗಳು ರಾಜ್ಯದ ಅನೇಕ ಕೈಗಾರಿಕೆಗಳ ಅಭಿವೃದ್ಧಿಗೂ ತನ್ಮೂಲಕ ರಾಜ್ಯದ ಆರ್ಥಿಕ ಪ್ರಗತಿಗೂ ಬುನಾದಿಯಾಗಿ ಪರಿಣಮಿಸಿದೆ. ಒಟ್ಟು 1,95,93,000 ಹೆಕ್ಟೇರ್ ಭೂವಿಸ್ತಾರವುಳ್ಳ ಈ ರಾಜ್ಯದಲ್ಲಿ 35.15 ಲಕ್ಷ ಹೆಕ್ಟೇರ್ (2003) ಭೂಮಿ ಕೃಷಿಗೆ ಉಪಯುಕ್ತವಾದ್ದು. ಅದರಲ್ಲಿ 16,27,000 ಹೆಕ್ಟೇರ್ ಅರಣ್ಯಪ್ರದೇಶ; 5,37,000 ಹೆಕ್ಟೇರ್ ಬೇಸಾಯವಲ್ಲದ ಇತರ ಉದ್ದೇಶಗಳಿಗೆ ಬಳಸಲಾದ ಜಮೀನು; 43,41,000 ಹೆಕ್ಟೇರ್ ಸಾಗುವಳಿ ಮಾಡಲಾಗದ ಬಂಜರು ಭೂಮಿ; 1,11,000 ಹೆಕ್ಟೇರ್ ಹುಲ್ಲುಗಾವಲು; 22,000 ಹೆಕ್ಟೇರ್ ವಿವಿಧ ಗಿಡಮರಗಳುಳ್ಳ ಪ್ರದೇಶ; 5,08,000 ಹೆಕ್ಟೇರ್ ಸಾಗುವಳಿ ಮಾಡಬಹುದಾದ ಪಾಳುಭೂಮಿ; 685 ಹೆಕ್ಟೇರ್ ಉತ್ತು ಬಿತ್ತದೆ ಬಿಟ್ಟ ನಿರ್ಲಕ್ಷಿತ ಭೂಮಿ. ಸುಮಾರು 1,05,00,000 ಹೆಕ್ಟೇರ್ ಭೂಮಿ ಮಾತ್ರವೇ ನೀರಾವರಿಗೆ ಒಳಪಟ್ಟಿದ್ದು. ಶೇ. 90ರಷ್ಟು ಭೂಮಿ ಮುಂಗಾರು ಮಳೆಯನ್ನೇ ಅವಲಂಬಿಸಿದೆ.

ಈ ರಾಜ್ಯದಲ್ಲಿ ನೀರಾವರಿಯ ವಿಶೇಷ ಸೌಲಭ್ಯಗಳಿಲ್ಲದಿದ್ದರೂ ಬೇಸಾಯಕ್ಕೆ ಬಳಸುವ ಶಾಸ್ತ್ರೀಯ ಪದ್ಧತಿಗಳಿಂದಾಗಿ ಆಹಾರಧಾನ್ಯಗಳ ಉತ್ಪಾದನೆಯಲ್ಲಿ ಕಾಲಕಾಲಕ್ಕೆ ಹೆಚ್ಚಳವನ್ನೇ ಸಾಧಿಸಲಾಗಿದೆ.

ನೆಲಗಡಲೆ ಮತ್ತು ಹತ್ತಿ ಈ ರಾಜ್ಯದ ಎರಡು ಮುಖ್ಯ ಬೆಳೆಗಳು. ಇಡೀ ದೇಶದಲ್ಲಿ ನೆಲಗಡಲೆಯ ಬೆಳೆಗೆ ಒಳಪಟ್ಟ ಭೂಮಿಯ ಶೇ. 25 ಭಾಗವೂ ಹತ್ತಿಯ ಬೆಳೆಗೊಳಪಟ್ಟ ಭೂಮಿಯ ಶೇ. 21 ಭಾಗವೂ ಈ ರಾಜ್ಯದಲ್ಲಿದೆ. ನೆಲಗಡಲೆ ಮತ್ತು ಹತ್ತಿಯ ಇಡೀ ದೇಶದ ವಾರ್ಷಿಕ ಉತ್ಪನ್ನಗಳಲ್ಲಿ ಅನುಕ್ರಮವಾಗಿ ಶೇ. 23 ಮತ್ತು ಶೇ. 29 ಗುಜರಾತಿನಲ್ಲಿ ಬೆಳೆಯುತ್ತವೆ.



**ಅರಳೆ, ಗುಜರಾತಿನ ಒಂದು ಮುಖ್ಯ ಉತ್ಪನ್ನ**

ಬೇಸಾಯ ಶಿಕ್ಷಣ ಪ್ರಸಾರಕ್ಕಾಗಿ ಜುನಾಗಢ, ಆನಂದ್, ನವಸಾರಗಳಲ್ಲಿ ವ್ಯವಸಾಯದ ಮಹಾವಿದ್ಯಾಲಯಗಳನ್ನು ತೆರೆಯಲಾಗಿದೆ. ಅಹಮದಾಬಾದಿನಲ್ಲಿ 1972 ರಲ್ಲಿ ಕೃಷಿ ವಿಶ್ವವಿದ್ಯಾಲಯ ಆರಂಭವಾಯಿತು. ರಾಜ್ಯದಲ್ಲಿ 13 ಕೃಷಿ ಶಾಲೆಗಳಿವೆ. ಸೂರತ್, ವಡೋದರ, ಆನಂದ್ ಮತ್ತು ಜುನಾಗಢದಲ್ಲಿ ಗ್ರಾಮ ಸೇವಕರ ತರಬೇತು ಕೇಂದ್ರಗಳಿವೆ.

ಗುಜರಾತಿನಲ್ಲಿ ಬಾವಿ ಕೆರೆಗಳಲ್ಲದೆ ಸುಮಾರು 50 ಮಧ್ಯಮ ಗಾತ್ರದ ನೀರಾವರಿ ಯೋಜನೆಗಳೂ ಮುಂದಿನ ಪುಟದಲ್ಲಿ ಕಾಣಿಸಿರುವ ದೊಡ್ಡ ಗಾತ್ರದ ನೀರಾವರಿ ಯೋಜನೆಗಳೂ ಉಂಟು. ಯೋಜನೆಗಳಿಂದ ದೊರೆಯುವ ನೀರು ರಾಜ್ಯದ ಒಟ್ಟು ಸಾಗುವಳಿ ಕ್ಷೇತ್ರದ ಶೇ. 11 ಭಾಗವನ್ನು ಮಾತ್ರ ತಣಿಸಬಲ್ಲದು. ರಾಜ್ಯದ ನದಿಗಳಿಂದ ಇನ್ನೂ ಹೆಚ್ಚಿನ ಪ್ರಯೋಜನ ಪಡೆಯುವ ಪ್ರಯತ್ನಗಳಲ್ಲದೆ, ಸಹಸ್ರಾರು ನೀರಾವರಿ ಬಾವಿಗಳನ್ನು ತೋಡಿಸುವ ಕಾರ್ಯ ನಡೆದಿದೆ. ಜೊತೆಗೆ ಒಣ ಬೇಸಾಯದ ವ್ಯವಸ್ಥಿತ ಕ್ರಮಗಳಿಗಾಗಿಯೂ ವಿಶೇಷ ಗಮನ ಕೊಡುವುದು ಅನಿವಾರ್ಯವೆನಿಸಿದೆ. ಅದಕ್ಕಾಗಿ 1949ರಿಂದ ಜಮೀನಿನಲ್ಲಿ ಸಮಪಾತಳೀ ಒಡ್ಡು ರಚಿಸುವ ಯೋಜನೆಯನ್ನಾರಂಭಿಸಿ ಮೊದಲೆರಡು ದಶಕಗಳಲ್ಲಿಯೇ 22 ಲಕ್ಷ ಎಕರೆಗಳ ಜಮೀನಿನಲ್ಲಿ ಇಂಥ ಒಡ್ಡುಗಳನ್ನು ಹಾಕಲಾಯಿತು. ಖೇಡಾ ಜಿಲ್ಲೆಯ ಕೋಠಿಯಖಾಡ ಒಣ ಬೇಸಾಯದ ಪ್ರಾತ್ಯಕ್ಷಿಕಾ ಕೇಂದ್ರದಲ್ಲಿ ಭೂ ಸಂರಕ್ಷಣೆಯ ವಿವಿಧ ಪ್ರಾತ್ಯಕ್ಷಿಕೆಗಳನ್ನು ಕೈಗೊಂಡು ರೈತರಿಗೆ ಮಾರ್ಗದರ್ಶನ ನೀಡಲಾಗುತ್ತದೆ. ಜುನಾಗಢ, ಮಂಗ್ರೋಲ, ಮುಂದ್ರಾ, ಊನಾ, ಕೋಡಿನಾರ್, ಧಾರಿ, ಮಾಹುವಾ, ಮೊಟೇರಾ, ದೇಹಗಾಮ್, ವಡೋದರ, ನವಸಾರಿ, ಗಾಂಡೇವಿ, ಪಾರ್ಡಿ, ಪಾರಿಯಗಳಲ್ಲಿರುವ ಸರ್ಕಾರಿ ಸಸಿದೋಟಗಳಿಂದ ಹೂ – ಹಣ್ಣುಗಳು ಸಸಿಗಳನ್ನು ರೈತರಿಗೆ ಹಂಚಲಾಗುತ್ತದೆ. ಅಲ್ಲದೆ ರಾಜ್ಯದ ವಿವಿಧ ಭಾಗಗಳಲ್ಲಿರುವ ಸಂಶೋಧನ ಕೇಂದ್ರಗಳ ಮೂಲಕ ತೋಟಗಾರಿಕೆಯ ಅಭಿವೃದ್ಧಿಯ ಮಾಹಿತಿಯನ್ನು ಪೂರೈಸಲಾಗುತ್ತಿದೆ.

**ವಿದ್ಯುತ್ ಉತ್ಪಾದನೆ :** ಈ ರಾಜ್ಯದಲ್ಲಿರುವ ವಿದ್ಯುದುತ್ಪಾದನ ಕೇಂದ್ರಗಳಿವು:

| | | | |
|---|---|---|---|
| 1. | ಧುವರನ್ ವಿದ್ಯುತ್ ಕೇಂದ್ರ | ... | 254.0 |
| 2. | ಧುವರನ್ ವಿದ್ಯುತ್ ಕೇಂದ್ರ ( 2ನೆಯ ಹಂತ) | ... | 280.0 |
| 3. | ಉಗಿಚಕ್ರ ವಿದ್ಯುತ್ ಕೇಂದ್ರ | ... | 54.0 |
| 4. | ಉತ್ರನ್ ವಿದ್ಯುತ್ ಕೇಂದ್ರ | ... | 67.5 |
| 5. | ಶಹಾಪುರ | ... | 16.0 |
| 6. | ಪೋರ್ಬಂದರ್ | ... | 15.0 |
| 7. | ಸಿಕ್ಕಾ | ... | 16.0 |
| 8. | ಕಾಂಡ್ಲಾ | ... | 16.0 |
| 9. | ಭಾವನಗರ | ... | 16.0 |
| 10. | ಸಾಬರ್ಮತಿ | ... | 217.5 |
| 11. | ತಾರಾಪುರ್ ಪರಮಾಣು ವಿದ್ಯುತ್ ಕೇಂದ್ರ | ... | 190.0 |
| 12. | ಉಕಾಯಿ ಜಲವಿದ್ಯುತ್ ಕೇಂದ್ರ | ... | 300.00 |

ರಾಜ್ಯದ ನಗರಗಳಲ್ಲದೆ ಸು. 3,500 ಗ್ರಾಮಗಳಿಗೂ 52,000 ನೀರಿನ ಪಂಪ್‌ಸೆಟ್‌ಗಳಿಗೂ ವಿದ್ಯುತ್ ಪೂರೈಕೆಯಾಗಿದೆ. ಲಕ್ಷ ಮನೆಗಳಿಗೆ ವಿದ್ಯುತ್ತನ್ನೊದಗಿಸಲಾಗಿದೆ. ರಾಜ್ಯದಲ್ಲಿ ಉತ್ಪಾದನೆಯಾಗುವ ವಿದ್ಯುತ್‌ಚ್ಛಕ್ತಿಯ ಅರ್ಧಕ್ಕಿಂತ ಹೆಚ್ಚು ಭಾಗವನ್ನು ಕೈಗಾರಿಕೆಗಳಲ್ಲಿ ಬಳಸಲಾಗುತ್ತಿದೆ. 2005ರಲ್ಲಿ ಒಟ್ಟು 8763 ಮೆ.ವ್ಯಾ. ವಿದ್ಯುತ್ ಉತ್ಪಾದನೆಯಾಗಿತ್ತು.

**ಮೀನುಗಾರಿಕೆ :** ಗುಜರಾತಿಗೆ 1,600 ಕಿಮೀ ಕರಾವಳಿ ಇರುವುದರಿಂದ ಮೀನುಗಾರಿಕೆಯ ಅಭಿವೃದ್ಧಿಗೆ ಇಲ್ಲಿ ಸಾಕಷ್ಟು ಅವಕಾಶವುಂಟು. ಒಳನಾಡಿನಲ್ಲಿರುವ ನಾಲ್ಕು ದೊಡ್ಡ ನದಿಗಳೂ ಕೆರೆ ಕಾಲುವೆಗಳೂ ಇದಕ್ಕೆ ಉಪಯುಕ್ತವಾಗಿವೆ. ರಾಜ್ಯದಲ್ಲಿ ವರ್ಷಕ್ಕೆ ಸರಾಸರಿ 2 ಲಕ್ಷ ಟನ್ ಮೀನಿನ ಉತ್ಪಾದನೆಯಾಗುತ್ತದೆ. ಇದರ ಅಭಿವೃದ್ಧಿಗಾಗಿ ವೀರಾವಲ, ಪೋರ್ಬಂದರ್, ಬಲಸಾರ್, ಮಧವಾಡ ಮತ್ತು ಅಂಬರ್‌ಗಾಂವ್‌ಗಳಲ್ಲಿ ಸೇವಾಕೇಂದ್ರಗಳನ್ನೂ ಅಂಬರ್‌ಗಾಂವ್, ವೀರಾವಲ ಮತ್ತು ಬಲ್‌ಸಾರ್‌ಗಳಲ್ಲಿ ಆಧುನಿಕ ದೋಣಿಗಳ ನಿರ್ಮಾಣ ಕೇಂದ್ರಗಳನ್ನೂ ತೆರೆಯಲಾಗಿದೆ. ವೀರಾವಲ, ಜಾಫರಾಬಾದ್, ಅಂಬರಗಾಂವ್, ಪೋರ್‌ಬಂದರ್, ಮಂಗ್ರೋಲ್ ಮತ್ತು ಹೀರಾತೋಟ್ ಬಂದರುಗಳಲ್ಲಿ ಈ ಉದ್ಯಮ ದೊಡ್ಡ ಗಾತ್ರದಲ್ಲಿ ನಡೆಯುತ್ತಿದೆ. ಗುಜರಾತಿನಿಂದ ಹೊರದೇಶಗಳಿಗೆ ಸು.1 ಕೋಟಿ ರೂ. ಮೌಲ್ಯದ ಮೀನು ರಫ್ತಾಗುತ್ತದೆ.

**ಖನಿಜಗಳು :** ಗುಜರಾತಿನಲ್ಲಿ ಉಪ್ಪು, ಸುಣ್ಣದಕಲ್ಲು, ಮ್ಯಾಂಗನೀಸ್, ಜಿಪ್ಸಮ್, ಪಿಂಗಾಣಿ ಮಣ್ಣು, ಕ್ಯಾಲ್ಸೈಟ್, ಬಾಕ್ಸೈಟ್, ಪೆಟ್ರೋಲಿಯಂ, ಅಮೂಲ್ಯ ಶಿಲೆ, ಬಣ್ಣಕ್ಕೆ ಬಳಸುವ ಕೆಮ್ಮಣ್ಣು ಅಗೇಟ್ ಶಿಲೆ ಮುಂತಾದ ಖನಿಜಗಳು ವಿಪುಲವಾಗಿ ದೊರೆಯುತ್ತದೆ. ಸೌರಾಷ್ಟ್ರ ಮತ್ತು ಕಚ್ಛ್ ಉತ್ತಮ ದರ್ಜೆಯ ಬಾಕ್ಸೈಟ್ ಮತ್ತು ಸುಣ್ಣದ ಕಲ್ಲುಗಳಿಗೆ ಹೆಸರಾಗಿದ್ದರೆ, ವಡೋದರ ಜಿಲ್ಲೆಯ ಛೋಟಾ ಉದಯಪುರದ ಬಳಿ ಫ್ಲೂರೈಟ್ ದೊರೆಯುತ್ತದೆ. ವಡೋದರ, ಬನಾಸ್ಕಂಟ, ಭಡೋಚ, ಭಾವನಗರ, ಕಚ್ಛ, ರಾಜಕೋಟೆ ಜಿಲ್ಲೆಗಳಲ್ಲಿ ದೊರೆಯುವ ಬೆಲೆ ಬಾಳುವ ಕಲ್ಲುಗಳು ಗುಜರಾತಿನ ಮುಖ್ಯವಾಗಿ ಖಂಬಾತ್ ಮತ್ತು ಸೂರತಿನ, ಕಲಾವಿದರ ಕೈಗಳಲ್ಲಿ ವಿವಿಧ ಆಕರ್ಷಕ ರೂಪ ತಳೆದು ದೇಶವಿದೇಶಗಳಲ್ಲಿ ವಿಶೇಷ ಬೇಡಿಕೆಗೆ ಪಾತ್ರವಾಗಿದೆ. ಗುಜರಾತಿನ ತೈಲ ಮತ್ತು ಅನಿಲ ಸಂಪತ್ತಿನ ಸರ್ವೇಕ್ಷಣೆ ನಡೆಸಿ ಅದನ್ನು ಹೊರತೆಗೆಯುವ ಕೆಲಸ ನಡೆದಿದೆ. ತೈಲ ಮತ್ತು ನೈಸರ್ಗಿಕ ಅನಿಲ ಆಯೋಗದ ನೇತೃತ್ವದಲ್ಲಿ 530 ಬಾವಿಗಳನ್ನು ತೋಡಲಾಗಿದೆ. ಪ್ರತಿವರ್ಷ 11.275 ಟನ್ ತೈಲ ತೆಗೆಯುವ ಉದ್ದೇಶವಿರಿಸಿಕೊಂಡು ಕಾರ್ಯ ನಡೆದಿದೆ. ಅಂಕಲೇಶ್ವರ, ಕಲೋಲ, ನವಾಗಾಮ್‌ಗಳು ತೈಲೋತ್ಪಾದನೆಯ ಮುಖ್ಯ ಕೇಂದ್ರಗಳು.

**ಸಹಕಾರ, ಕೈಗಾರಿಕೆ :** ಸಹಕಾರೀ ಆಂದೋಲನದಲ್ಲೂ ಈ ರಾಜ್ಯ ಸಾಕಷ್ಟು ಪ್ರಗತಿ ಸಾಧಿಸಿದೆ. ಗ್ರಾಮ ಮಟ್ಟದಲ್ಲಿ 28 ಲಕ್ಷ ಸದಸ್ಯರುಳ್ಳ 9.885 ಪ್ರಾಥಮಿಕ ಸಂಘಗಳುಂಟು. 325 ಸಹಕಾರೀ ಬೇಸಾಯ ಸಂಘಗಳೂ. 58 ಸಂಯುಕ್ತ ಸಹಕಾರೀ ಬೇಸಾಯ ಸಂಘಗಳೂ 450 ನೀರೆತ್ತುವ ಸಹಕಾರೀ ಸಂಘಗಳೂ ಕಾರ್ಯನಿರತವಾಗಿವೆ. ಇವಲ್ಲದೆ ವರ್ಷಕ್ಕೆ ಸರಾಸರಿ 1,000–1.250 ದಶಲಕ್ಷ ಟನ್ ಕಬ್ಬಿನಿಂದ ಸಕ್ಕರೆ ತಯಾರಿಸುವ 11 ಸಹಕಾರಿ ಸಕ್ಕರೆ ಕಾರ್ಖಾನೆಗಳುಂಟು. 63 ಪ್ರಾಥಮಿಕ ಮೀನುಗಾರಿಕೆ ಸಂಘಗಳೂ 14 ಒಣ ಮೀನುಗಳ ಮಾರಾಟ ಸಂಘಗಳೂ 8 ತಾಜಾ ಮೀನುಗಳ ಮಾರಾಟ ಸಂಘಗಳೂ ಇವೆ. ಹಾಲಿನ ಉತ್ಪಾದನೆ, ಪೂರೈಕೆ, ಗೃಹ ನಿರ್ಮಾಣ ಮತ್ತು ವಸತಿ ವ್ಯವಸ್ಥೆಗಳಿಗಾಗಿ ಈ ರಾಜ್ಯದಲ್ಲಿ ಆಗಿರುವ ಸಹಕಾರೀ ಸಂಘಟನೆ

ವಿಶಿಷ್ಟವಾದ್ದು. 2.88.399 ಸದಸ್ಯರುಳ್ಳ 1.552 ಹಾಲುಪೂರೈಕೆಯ ಸಹಕಾರೀ ಸಂಘಗಳೂ 1.43.522 ಸದಸ್ಯರುಳ್ಳ 4.215 ಗೃಹನಿರ್ಮಾಣ ಸಂಘಗಳೂ ಈ ರಾಜ್ಯದಲ್ಲಿವೆ. 166 ನೇಕಾರರ ಸಂಘಗಳೂ 779 ಇತರ ಕೈಗಾರಿಕೆಗಳ ಸಂಘಗಳೂ 959 ಗ್ರಾಹಕರ ಸಂಘಗಳೂ, 89 ವ್ಯವಸಾಯೇತರ ಸಂಘಗಳೂ ರಾಜ್ಯದಲ್ಲಿವೆ.

**ದೊಡ್ಡ ಗಾತ್ರದ ನೀರಾವರಿ ಯೋಜನೆಗಳು**

| ಹೆಸರು | ಯೋಜನೆಯ ವಿವರ | ಉದ್ದ (ಮೀಗಳಲ್ಲಿ) | ಎತ್ತರ (ಮೀಗಳಲ್ಲಿ) | ಕಾಲುವೆ (ಕಿಮೀ) | ಪ್ರಯೋಜನ ಪಡೆದ ಕ್ಷೇತ್ರ (ಹೆ.ಗಳಲ್ಲಿ) |
|---|---|---|---|---|---|
| ಬನಾಸ್ | ಬನಾಸ್ಕಾಂಟಾ ಜಿಲ್ಲೆಯಲ್ಲಿ ದಂತಿವಾಡಾ ಗ್ರಾಮದ ಬಳಿಬನಾಸ್ ನದಿಗೆ ಕಟ್ಟೆ. | 4.815.00 | 61.00 | 651.77 | 44.517 |
| ಹಾತ್ಮತಿ | ಸಬರ ಕಾಂಟಾ ಜಿಲ್ಲೆಯಲ್ಲಿ ಫತೆಹಪುರ ಬಳಿಯಲ್ಲಿ ಹಾತ್ಮತಿ ನದಿಗೆ ಕಟ್ಟೆ. | 1,411.3 | 23.5 | 191.2 | 37.604 |
| ಕಕ್ರಪಾರ | ಕಕ್ರಪಾರ ಗ್ರಾಮದ ಬಳಿ ತಾಪಿ ನದಿಗೆ ಅಡ್ಡ ಕಟ್ಟೆ. | 621.00 | 14.00 | 435.00 | 2,27,543 |
| ಮಾಹೀ (1ನೆಯ ಹಂತ) | ವಾಣಕಬೋರಿ ಗ್ರಾಮದ ಬಳಿ ಮಾಹೀ ನದಿಗೆ ಅಡ್ಡಕಟ್ಟೆ. | 790.00 | 20.6 | 304.00 | 1,86,162 |
| ಮಾಹೀ (2ನೆಯ ಹಂತ) | ವಾಣಕ ಬೋರಿಯಿಂದ 70 ಕಿಮೀ. ಅಂತರದಲ್ಲಿ ಕಡಣಾದ ಬಳಿ ಮಾಹೀ ನದಿಗೆ ಕಟ್ಟೆ. | 2,225.00 | 58.2 | 106.00 | 2,86,554 |
| ನರ್ಮದಾ | ನವಾಗಾಮದ ಬಳಿ ನರ್ಮದಾ ನದಿಗೆ ಕಟ್ಟೆ. | 2,012.00 | 69.2 | 143 | 4,03,688 |
| ಶತ್ರುಂಜೀ | ಫಾಲಿತಾಣಾ ಬಳಿ ಶತ್ರುಂಜೀ ನದಿಗೆ ಕಟ್ಟೆ. | 3,126.00 | 38.10 | 154.5 | 34,804 |
| ಉಕಾಯಿ | ಸೂರತ್ ಜಿಲ್ಲೆಯ ಉಕಾಯಿ ಗ್ರಾಮದ ಬಳಿ ತಾಪಿ ನದಿಗೆ ಕಟ್ಟೆ. | 4,928.00 | 68.6 | 949.00 | 1,52,400 |

ಇಲ್ಲಿ 14.123 ಸಣ್ಣ ಕೈಗಾರಿಕೆಗಳಿವೆ. ಗೃಹ-ಗುಡಿ ಕೈಗಾರಿಕೆಗಳು ಮಾತ್ರವಲ್ಲದೆ ದೊಡ್ಡ ಮತ್ತು ಮಧ್ಯಮ ಗಾತ್ರಗಳ ಕೈಗಾರಿಕೆಗಳಲ್ಲೂ ರಾಜ್ಯ ಮುಂದುವರಿದಿದೆ.

ಅಹಮದಾಬಾದ್ ಸೂರತ್, ವಡೋದರ, ಖೇಡಾ, ಭಾವನಗರ, ಸುರೇಂದ್ರ ನಗರ, ರಾಜಕೋಟೆ, ಜಾಮ್‍ನಗರಗಳಲ್ಲಿ ಕಾರ್ಖಾನೆಗಳು ಹೆಚ್ಚಾಗಿ ಬೆಳೆದಿವೆಯಾದರೂ ಇತರ ಕಡೆಗಳಲ್ಲೂ ಕೆಲವು ಕೈಗಾರಿಕೆಗಳುಂಟು. ಜವಳಿ ಕೈಗಾರಿಕೆ ಅತ್ಯಂತ ಮುಖ್ಯವಾದ್ದು. ಎಂಜಿಯರಿಂಗ್, ರಸಾಯನವಸ್ತು, ಔಷಧಗಳು, ಸಿಮೆಂಟ್, ಕುಂಭ, ಗಾಜು, ಗೊಬ್ಬರ, ಕಾಗದ ಇವು ಇತರ ಕೈಗಾರಿಕೆಗಳು. ವಡೋದರದಲ್ಲಿ ಪೆಟ್ರೋಲಿಯಂ ಪರಿಷ್ಕರಣ ಕೇಂದ್ರವಿದೆ. ಭಾರತದ ಔದ್ಯೋಗಿಕ ನಕ್ಷೆಯಲ್ಲಿ ಈ ರಾಜ್ಯಕ್ಕೊಂದು ಮಹತ್ತ್ವದ ಸ್ಥಾನ ಪ್ರಾಪ್ತವಾಗಿದೆ. 2002ರ ಅಂತ್ಯದಲ್ಲಿ 19,696 ಕಾರ್ಯನಿರತ ಕೈಗಾರಿಕಾ ಘಟಕಗಳಿದ್ದವು. ಸೆಪ್ಟೆಂಬರ್ 2003ರಲ್ಲಿ 2.83 ಲಕ್ಷ ಸಣ್ಣ ಕೈಗಾರಿಕೆಗಳಿದ್ದವು. ಸರಾಸರಿ 8.40 ಲಕ್ಷ ಮಂದಿಗೆ ಉದ್ಯೋಗಾವಕಾಶವಿತ್ತು.

**ಪಂಚಾಯತಿ ರಾಜ್ಯ :** ಈ ರಾಜ್ಯದಲ್ಲಿ 11.928 ಗ್ರಾಮ ಪಂಚಾಯತಿಗಳೂ 56 ಪಟ್ಟಣ ಪಂಚಾಯತಿಗಳೂ 182 ತಾಲ್ಲೂಕು ಪಂಚಾಯತಿಗಳೂ 17 ಜಿಲ್ಲಾ ಪಂಚಾಯತಿಗಳೂ (ಗಾಂಧೀನಗರ ಮತ್ತು ಡಾಂಗ್ಸ ಜಿಲ್ಲೆಗಳ ಹೊರತಾಗಿ) ಇವೆ. ಗಿರಿಜನರ ಜೀವನಾಭಿವೃದ್ಧಿಗಾಗಿ 53 ವಿಶೇಷ ಅಭಿವೃದ್ಧಿ ಘಟಕಗಳನ್ನು ರಾಜ್ಯದಲ್ಲಿ ರಚಿಸಲಾಗಿದೆ. ತಮ್ಮ ಸೇವಾ ಸಿಬ್ಬಂದಿಯನ್ನು ತಾವೇ ಆಯ್ದುಕೊಳ್ಳುವ ಅಧಿಕಾರವನ್ನಲ್ಲದೆ ಆಯಾ ಪ್ರದೇಶಗಳ ಅಭಿವೃದ್ಧಿಗಾಗಿ ನೂರಕ್ಕೆ ನೂರರಷ್ಟು ಭೂಕಂದಾಯವನ್ನು ಬಳಸಿಕೊಳ್ಳುವ ಸವಲತ್ತನ್ನೂ ಈ ಪಂಚಾಯತ್ ರಾಜ್ ಸಂಸ್ಥೆಗಳಿಗೆ ನೀಡಲಾಗಿದೆ.



ಉಕಾಯಿ ಕಟ್ಟೆ

**ಸಮಾಜ ಕಲ್ಯಾಣ :** ಹಿಂದುಳಿದ ಜನಗಳ ಕಲ್ಯಾಣ ದೃಷ್ಟಿಯಿಂದ ರಾಜ್ಯದಲ್ಲಿ ಹಲವಾರು ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ. ರಾಜ್ಯದಲ್ಲಿ ಸುಮಾರು 120 ಲಕ್ಷ ಜನ ಹಿಂದುಳಿದ ಸಮಾಜಕ್ಕೆ ಸೇರಿದ್ದು ಅವರಲ್ಲಿ ಸುಮಾರು 36 ಲಕ್ಷ ಜನ ಪರಿಶಿಷ್ಟ ಜಾತಿಯವರೂ 75 ಲಕ್ಷ ಜನ ಪರಿಶಿಷ್ಟ ಜನಾಂಗದವರೂ 4 ಲಕ್ಷ ಜನ ಅಲೆಮಾರಿ ಜನಾಂಗಕ್ಕೆ ಸೇರಿದವರೂ, 4 ಲಕ್ಷ ಜನ ಇತರರೂ ಇದ್ದಾರೆ. ಈ ಜನರ ಶಿಕ್ಷಣ ಆರ್ಥಿಕ ಅಭಿವೃದ್ಧಿ. ಆರೋಗ್ಯ ವಸತಿಸೌಕರ್ಯ ಇತ್ಯಾದಿ ಕಾರ್ಯಯೋಜನೆಗಳ ಮೂಲಕ ಸಮಾಜಕಲ್ಯಾಣದ ಪ್ರಯತ್ನಗಳು ನಡೆದಿದೆ. ಹಿಂದುಳಿದ ಜನರ ಮಕ್ಕಳಿಗೆ ಉಚಿತವಾದ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ದೊರೆಯುತ್ತದೆ. ಬಾಲಕಿಯರ ಹೆಚ್ಚಿನ ಶಿಕ್ಷಣಕ್ಕಾಗಿ 117 ಆಶ್ರಮ ಶಾಲೆಗಳನ್ನು ತೆರೆಯಲಾಗಿದೆ. ಸರ್ಕಾರಿ ಭೂಮಿಯ ವಿತರಣೆ, ಭೂಸುಧಾರಣೆ ಬೇಸಾಯದ ಸಲಕರಣೆಗಳ ಪೂರೈಕೆ ಕೈಗಾರಿಕೆಗಳಲ್ಲಿ ತರಬೇತು ಮತ್ತು ಆರ್ಥಿಕ ನೆರವುಗಳ



ಕೋಯಲಿ ತೈಲಶೋಧನ ಕೇಂದ್ರ

ಮೂಲಕ ಹಿಂದುಳಿದ ಜನಾಂಗಗಳ ಜನ ಮುಂದುವರಿಯುವಂತೆ ಯತ್ನಿಸಲಾಗುವುದು. ಅವರ ಶಾರೀರಿಕ ದುಡಿಮೆಗೆ ತಕ್ಕ ಫಲ ಸಿಗಬೇಕೆಂಬ ದೃಷ್ಟಿಯಿಂದ ಈ ಜನಾಂಗಗಳ ಜನರುಳ್ಳ ಸಹಕಾರಿ ಸಂಘಗಳ ರಚನೆಗೆ ಪ್ರೋತ್ಸಾಹ ನೀಡಲಾಗುತ್ತಿದೆ. ಅಹಮದಾಬಾದ್ ಸೂರತ್, ರಾಜಕೋಟೆ, ಡಾಹೋದ ವಡೋದರ, ಸುರೇಂದ್ರನಗರ, ಜುನಾಗಢ, ಪೋರ್ಬಂದರ್, ಫಾನ್ಸಾ, ಮೆಹಸಾನಾ, ಮಾಂಡವಿ ಮತ್ತು ಭಾವನಗರಗಳಲ್ಲಿರುವ

ಅಂಗವಿಕಲರ ಮತ್ತು ಕುರುಡ ಕಿವುಡ–ಮೂಕರ ಶಿಕ್ಷಣ ಸಂಸ್ಥೆಗಳು ಸಮಾಜಕಲ್ಯಾಣ ಕಾರ್ಯಕ್ರಮದಲ್ಲಿ ಮಹತ್ತ್ವದ ಪಾತ್ರವಹಿಸುತ್ತವೆ.

**ಆರೋಗ್ಯ :** ಈ ರಾಜ್ಯದ ನಗರಗಳಲ್ಲದೆ ಗ್ರಾಮಾಂತರ ಪ್ರದೇಶದ ಜನರ ಆರೋಗ್ಯ ರಕ್ಷಣೆಗಾಗಿ 60–80 ಸಾವಿರ ಜನಕ್ಕೊಂದರಂತೆ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ತೆರೆಯಲಾಗಿದೆ. ಒಟ್ಟು 251 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಈ ರಾಜ್ಯದಲ್ಲಿವೆ.

ಅಹಮದಾಬಾದ್, ವಡೋದರ, ಜಾಮ್‌ನಗರ ಮತ್ತು ಸೂರತ್‌ಗಳಲ್ಲಿ ವೈದ್ಯಕೀಯ ಕಾಲೇಜುಗಳೂ ಜಾಮ್‌ನಗರದಲ್ಲಿ ಗುಜರಾತ್ ಆಯುರ್ವೇದ ವಿಶ್ವವಿದ್ಯಾಲಯವೂ ಇವೆ. ಜಾಮ್‌ನಗರದಲ್ಲಿರುವ ಸೂರ್ಯಕಿರಣ ಚಿಕಿತ್ಸಾಕೇಂದ್ರ ರಾಷ್ಟ್ರದಲ್ಲಿಯೇ ಅನನ್ಯಸದೃಶವಾದ್ದು.



ರಾಸಾಯನಿಕ ಗೊಬ್ಬರ ಕಾರ್ಖಾನೆ, ವಡೋದರ

**ಶಿಕ್ಷಣ :** ಈ ರಾಜ್ಯದಲ್ಲಿ ಕಡ್ಡಾಯ ಪ್ರಾಥಮಿಕ ಶಿಕ್ಷಣ ಕಾಯಿದೆ 1961ರಲ್ಲಿ ಸ್ವೀಕೃತವಾಗಿ 1964ರಿಂದ ಜಾರಿಗೆ ಬಂತು. ರಾಜ್ಯದ ಒಟ್ಟು 21,900 ಪ್ರಾಥಮಿಕ ಶಾಲೆಗಳಲ್ಲಿ 86,000 ಶಿಕ್ಷಕರು ದುಡಿಯುತ್ತಿದ್ದಾರೆ. 2,150 ಮಾಧ್ಯಮಿಕ ಶಾಲೆಗಳೂ 134 ವಿವಿಧೋದ್ದೇಶ ಶಾಲೆಗಳೂ 270 ಉಚ್ಚ ಶಿಕ್ಷಣ ಶಾಲೆಗಳೂ ಇವೆ. ಬೆಳಕಿಯರ ಶಿಕ್ಷಣ ಪ್ರಸಾರಕ್ಕಾಗಿ ಮಾಧ್ಯಮಿಕ ಹಂತದಲ್ಲಿ ವಿಶೇಷ ಸವಲತ್ತುಗಳನ್ನು ನೀಡಲಾಗಿದೆ. ರಾಜ್ಯದ ಮಾಧ್ಯಮಿಕ ಶಿಕ್ಷಣ ಮಂಡಲಿ ಮಾಧ್ಯಮಿಕ ಶಿಕ್ಷಣ ರೂಪರೇಷೆಗಳನ್ನು ಹಾಕುವುದಲ್ಲದೆ ವಿದ್ಯಾರ್ಥಿಗಳ ಪರೀಕ್ಷೆಗಳ ಏರ್ಪಾಡು ಮಾಡುತ್ತದೆ.

ಈ ರಾಜ್ಯದಲ್ಲಿ 13 ವಿಶ್ವವಿದ್ಯಾಲಯಗಳಿವೆ. ಅವುಗಳಲ್ಲಿ ಅಹಮದಾಬಾದಿನಲ್ಲಿ ಗಾಂಧಿಯವರು ಸ್ಥಾಪಿಸಿದ ಗುಜರಾತ್ ವಿದ್ಯಾಪೀಠವೂ ಒಂದು. ಗುಜರಾತ್‌ನಲ್ಲಿ 4 ಕೃಷಿ ವಿಶ್ವವಿದ್ಯಾಲಯಗಳಿವೆ. ರಾಜ್ಯದಲ್ಲಿರುವ ಕಾಲೇಜುಗಳ ಸಂಖ್ಯೆ 255 ವಡೋದರ



ಗೋಪುರ ಗಡಿಯಾರ, ಗುಜರಾತ್ ವಿಶ್ವವಿದ್ಯಾಲಯ, ಅಹಮದಾಬಾದ್

ನಗರದಲ್ಲಿರುವ ಕೇಂದ್ರ ವಾಚನಾಲಯವಲ್ಲದೆ ರಾಜಕೋಟೆ. ಜಾಮ್‌ನಗರ ಸುರೇಂದ್ರನಗರ. ಜುನಾಗಢ, ಭಾವನಗರ, ಮತ್ತು ಭುಜ್‌ಗಳಲ್ಲಿರುವ ಸರ್ಕಾರಿ ಜಿಲ್ಲಾ ವಾಚನಾಲಯಗಳೂ ಇನ್ನಿತರ ಸಾರ್ವಜನಿಕ ವಾಚನಾಲಯಗಳೂ ಜನರಿಗೆ ವಾಚನ ಸೌಕರ್ಯ ಒದಗಿಸುತ್ತವೆ. ಈ ರಾಜ್ಯದಲ್ಲಿ ಒಟ್ಟು 34 ನಗರ ವಾಚನಾಲಯಗಳೂ 235 ಪಟ್ಟಣ ವಾಚನಾಲಯಗಳೂ, 40 ಮಹಿಳಾ ವಾಚನಾಲಯಗಳೂ 34 ಬಾಲ ವಾಚನಾಲಯಗಳೂ 4,027 ಗ್ರಾಮ ವಾಚನಾಲಯಗಳು ರಾಜಪಿಪ್ಲಾ ಮತ್ತು ತ್ರಾಪಜಗಳಲ್ಲಿ ಎರಡು ಸರ್ಕಾರಿ ಸಂಚಾರಿ ವಾಚನಾಲಯಗಳೂ ಇವೆ. ಗುಜರಾತ್ ವಾಚನಾಲಯ ಸಮಿತಿ ಮತ್ತು ಗುಜರಾತ್ ವಾಚನಾಲಯ ಸಹಕಾರಿ ಸಂಘಗಳು ಸರ್ಕಾರದ ಸಹಾಯದಿಂದ ರಾಜ್ಯದ ವಾಚನಾಲಯಗಳು ಅಭಿವೃದ್ಧಿಗಾಗಿ ಪ್ರಯತ್ನಿಸುತ್ತಿವೆ. ರಾಜ್ಯದಲ್ಲಿ ಒಟ್ಟು 46 ದಿನಪತ್ರಿಕೆಗಳೂ 132 ವಾರಪತ್ರಿಕೆಗಳೂ 70 ಪಕ್ಷಪತ್ರಿಕೆಗಳೂ 241 ಮಾಸಪತ್ರಿಕೆಗಳು 22 ತ್ರೈಮಾಸಿಕಗಳೂ ಪ್ರಕಟವಾಗುತ್ತಿದ್ದುವು.




ಅಹಮದಾಬಾದಿನ ಆಧುನಿಕ ಕಟ್ಟಡಗಳಲ್ಲೊಂದು: ಕ್ಷೀರೋತ್ಪಾದಕರ ಸಂಘದ ಕಟ್ಟಡ. ಶಿಲ್ಪಿ: ಲ ಕಾರ್ಬೂಸಿಯೇ

**ಸಾರಿಗೆ ಸಂಪರ್ಕ:** ಈ ರಾಜ್ಯದಲ್ಲಿ ವಿವಿಧ ಮಾರ್ಗಗಳ ಸೌಕರ್ಯ ಸಾಕಷ್ಟಿದೆ. ರಾಷ್ಟ್ರೀಯ ಮತ್ತು ರಾಜ್ಯದ ಹೆದ್ದಾರಿಗಳನ್ನೊಳಗೊಂಡು 2002–03ರ ಅಂತ್ಯದಲ್ಲಿ ನಗರ ಪಾಲಿಕೆ ರಸ್ತೆಗಳನ್ನು ಬಿಟ್ಟು ಒಟ್ಟು 74,075 ಕಿಮೀ ರಸ್ತೆಯಿದ್ದು ಇದರಲ್ಲಿ 70,743 ಕಿಮೀ ಉತ್ತಮ ರಸ್ತೆಯಿತ್ತು. ರಾಜ್ಯದಲ್ಲಿ 1,134 ಕಿಮೀ ಬ್ರಾಡ್ ಗೇಜ್, 3,381 ಕಿಮೀ ಮೀಟರ್ ಗೇಜ್, 1,141 ಕಿಮೀ ನ್ಯಾರೋ ಗೇಜ್ ರೈಲುಮಾರ್ಗಗಳಿವೆ. ಅಹಮದಾಬಾದ್–ಗಾಂಧಿನಗರಗಳಲ್ಲಿ ಮೆಟ್ರೋ ರೈಲಿನ ಯೋಜನೆಗಳು 2011ರಿಂದ ಪ್ರಾರಂಭವಾಗಿದೆ. ಇಡೀ ದೇಶದ 21 ಮಧ್ಯಮ ಮತ್ತು 150 ಸಣ್ಣ ಬಂದರುಗಳು ಇದೊಂದೇ ರಾಜ್ಯದಲ್ಲಿವೆ. ಕಾಂಡ್ಲಾ ದೊಡ್ಡ ಬಂದರು. ಓಖಾ, ಭಾವನಗರ, ಖೇಡಿ ಸಿಕ್ಕ ವಿರಾವಲ್, ನವಲಾಖಿ, ಪೋರ್‌ಬಂದರ್, ಭಡೋಚ್, ಸೂರತ್, ಜಾಖಾನ್, ಮುಂದ್ರ ಪುಂಧರ, ದ್ವಾರಕಾ, ಮುಂಗ್ರೋಳ್, ಮಾಧವಾಡ, ಜವಾಬಂದರ್, ರಾಜ್‌ಪಾರಾ, ಜಾಫರಾಬಾದ್, ರಜುಲಾ, ಮಹುವಾ. ತಲಾಜ, ಘೋಘಾ, ಭಗ್ಡವಾ, ವಾನ್ಸಿ, ವೋರ್ಸಿ, ಬಿಲಿವೋರಾ, ಬಲ್ಸಾರ್, ಉಮರ್ಸಾದಿ, ಕೋಲಾಕ್, ಮರೋಳಿ ಉಮರ್‌ಗಾಂವ್–ಇವು ಇತರ ಬಂದರುಗಳು. ಅಹಮದಾಬಾದ್, ಭಾವನಗರ, ರಾಜಕೋಟೆ, ಪೋರ್‌ಬಂದರ್, ಜಾಮ್‌ನಗರ ಕೇಶೋದ್, ಭುಜ್, ಸೂರತ್, ವಡೋದರ, ಮತ್ತು ಕಾಂಡ್ಲಾಗಳಲ್ಲಿ ವಿಮಾನ ನಿಲ್ದಾಣಗಳಿವೆ. ದೆಹಲಿ ಮುಂಬಯಿಗಳೊಂದಿಗೆ ನೇರ ವಾಯುಸಂಪರ್ಕವೇರ್ಪಟ್ಟಿದೆ.

**ಮುಖ್ಯ ಸ್ಥಳಗಳು :** 1411ರಲ್ಲಿ ಸುಲ್ತಾನ್ ಅಹಮ್ಮದ್ ಷಹ ಕಟ್ಟಿಸಿದ ಅಹಮದಾಬಾದ್ ಪಶ್ಚಿಮ ಭಾರತದ ಎರಡನೆಯ ಅತಿ ದೊಡ್ಡ ನಗರ. ಇದು ಬಟ್ಟೆಯ ಉತ್ಪಾದನೆಯ ದೃಷ್ಟಿಯಿಂದ ಭಾರತದ ಮ್ಯಾಂಚೆಸ್ಟರ್ ಎನಿಸಿಕೊಂಡಿದೆ. 1615ರಲ್ಲಿ ಈ ನಗರವನ್ನು ಕಣ್ಣಾರೆ ಕಂಡ ಥಾಮಸ್ ರೋ ಈ ನಗರ ಲಂಡನ್ನಿನಷ್ಟು ದೊಡ್ಡದೆಂದೂ ಹಿಂದೂಸ್ತಾನದಲ್ಲೇ ಅಲ್ಲದೆ ಜಗತ್ತಿನಲ್ಲೆ ಸುಂದರ ನಗರಗಳಲ್ಲೊಂದೆನಿಸಿದೆಯೆಂದೂ ಅಭಿಪ್ರಾಯ ಪಟ್ಟಿದ್ದ. ಇಲ್ಲಿರುವ ಹಿಂದು ಮತ್ತು ಜೈನಮಂದಿರಗಳ ಶಿಲ್ಪಕಲಾ ವೈಭವವನ್ನು ಮೆರೆಸುವ ಮಸೀದಿ ಮತ್ತು ಸ್ಮಾರಕಗಳೂ ನೋಡುವಂತಿವೆ. ಗಾಂಧಿಯವರು ಸ್ಥಾಪಿಸಿದ ಸಾಬರಮತಿ ಆಶ್ರಮ ಬಳಿಯಲ್ಲೇ ಇದೆ. ಬಾಲವನ, ಪ್ರಾಣಿಸಂಗ್ರಹಾಲಯ, ಮತ್ಸ್ಯಾಲಯಗಳಿಂದ ಕೂಡಿದ ಕಂಕರಿಯಾ ಸರೋವರ ಸುಂದರವಾಗಿದೆ. ಇಲ್ಲಿಯ ಜುಮ್ಮಾ ಮಸೀದಿ ಶಹಾ ಅಲಮ್ ಸ್ಮಾರಕ, ಮೊಹಮ್ಮದ್ ಬೇಗ್ಡಾ ಮತ್ತು ಗಾಂಜ ಬಕ್ಷರ ಸ್ಮಾರಕಗಳು ಪ್ರೇಕ್ಷಣೀಯ, ಅಹಮದಾಬಾದಿನಿಂದ 80 ಕಿಮೀ ಅಂತರದಲ್ಲಿ ಇರುವ ಲೋಥಾಲ್‌ನಲ್ಲಿ ದೊರೆತ ಅವಶೇಷಗಳು ಗುಜರಾತಿನ ನಾಗರಿಕತೆ ಹರಪ್ಪ

ನಾಗರಿಕತೆಯಷ್ಟು ಹಿಂದಿನದಿರಬಹುದೆಂದು ಸೂಚಿಸುತ್ತವೆ. ಈ ಬೆಟ್ಟವನ್ನು ಅಗೆದು ತೆಗೆದ ಸುಯೋಜಿತ ನಗರರಚನೆ ಮತ್ತು ಬಂದರಿನ ವ್ಯವಸ್ಥೆ ಅಖಿಲಭಾರತ ಮಹತ್ತ್ವ ಪಡೆದಿವೆ. ಅಹಮದಾಬಾದಿನಿಂದ 106 ಕಿಮೀ ದೂರದಲ್ಲಿರುವ ಮೊಧೇರದ ಸೂರ್ಯಮಂದಿರ ಸೋಳಂಕಿ ದೊರೆ 1026–27 ರಲ್ಲಿ ಕಟ್ಟಿಸಿದ್ದು. ಇದರ ಶಿಲ್ಪ ಒರಿಸ್ಸದ ಕೊನಾರ್ಕದ ಪ್ರಖ್ಯಾತ ಸೂರ್ಯಮಂದಿರವನ್ನು ಹೋಲುತ್ತದೆ. ಜುನಾಗಢದ ಬಳಿಯ ಗಿರ್ನಾರದಲ್ಲಿ ಜೈನಮಂದಿರಗಳಿವೆ. ಸಿಂಹಗಳಿಂದಾಗಿ ಗಿರ್ ಅರಣ್ಯ ಪ್ರಸಿದ್ಧವಾದ್ದು. ಸೌರಾಷ್ಟ್ರದಲ್ಲಿ ಕೃಷ್ಣಲೀಲೆಯ ಕೇಂದ್ರಗಳಾಗಿದ್ದ ದ್ವಾರಕಾ ಮತ್ತು ವೀರಾವಲಗಳಲ್ಲಿ ಸುಂದರವಾದ ಮಂದಿರಗಳಿವೆ. ಸೋಮನಾಥ ದೇವಾಲಯವು



ಕೃಷ್ಣದೇವಾಲಯ, ದ್ವಾರಕಾ

ಸೌರಾಷ್ಟ್ರದ ಆಕರ್ಷಣೆಗಳಲ್ಲೊಂದು. ಗಾಂಧಿಯವರ ಜನ್ಮ ಸ್ಥಳವಾದ ಪೋರ್‌ಬಂದರ್ ತನ್ನ ಹಳೆಯ ಮತ್ತು ಹೊಸ ನಾಗರಿಕತೆಗಳ ಕುರುಹುಗಳಿಗಾಗಿ ಹೆಸರಾಗಿದೆ. ಪಾಲಿಟಾಣಾ ಜೈನಮಂದಿರಗಳ ನಗರ. ಉತ್ತರ ಗುಜರಾತಿನಲ್ಲಿ ಪಾಟಣ ಮತ್ತು ಸಿದ್ಧಪುರಗಳು ಸಹಸ್ರಲಿಂಗ ದೇವಾಲಯ ಮತ್ತು ರುದ್ರ ಮಹಲುಗಳಿಗಾಗಿ ಪ್ರಸಿದ್ಧವಾದಂಥವು. ವಡೋದರ, ಸೂರತ್, ಜಾಮ್‌ನಗರ, ಭಾವನಗರ, ಖಂಬಾತ್, ರಾಜಕೋಟೆ, ಜುನಾಗಢ ಮುಂತಾದ ನಗರಗಳು ತಮ್ಮ ಐತಿಹಾಸಿಕ ಪರಂಪರೆಯಿಂದಲೂ ಆಧುನಿಕ ಸಾಧನೆಗಳಿಂದಲೂ ಮಹತ್ತ್ವದ ನಗರಗಳೆನಿಸಿವೆ. ಗಾಂಧೀನಗರ **(ನೋಡಿ)** ಆಧುನಿಕ ರೀತಿಯಲ್ಲಿ ನಿರ್ಮಿತವಾದ ರಾಜಧಾನಿ, ನಲ್ ಸರೋವರ ಪಕ್ಷಿಧಾಮ. (ಬಿ.ಎ.ಎಸ್.)

**ಗುಜರಾತ್ ಕದನ :** 1848–49ರಲ್ಲಿ ನಡೆದ ಎರಡನೆಯ ಸಿಖ್–ಇಂಗ್ಲಿಷ್ ಯುದ್ಧದ ಪ್ರಮುಖ ಮತ್ತು ಕೊನೆಯ ಕದನ. ಸಿಕ್ಖರು ಸಂಘಟಿತರಾಗಿ ಇಂಗ್ಲಿಷರನ್ನು ಪಂಜಾಬಿನಿಂದ ಹೊಡೆದೋಡಿಸುವ ಪಣತೊಟ್ಟಿದ್ದರು. ಹ್ಯೂಗಾಫನ ನೇತೃತ್ವದಲ್ಲಿ ಬ್ರಿಟಿಷರ ಸೈನ್ಯ ಚೀನಾಬ್ ನದಿಯನ್ನು ದಾಟಿ ಸಿಕ್ಖರ ಮೇಲೆ ಧಾಳಿ ಮಾಡಿತು. ಸಿಕ್ಖರು ಚಿಲಿಯನ್‌ವಾಲ ಬಳಿ ಸಂಘಟಿತರಾಗಿ ಭೀಕರವಾಗಿ ಹೋರಾಡಿದರು. ಬ್ರಿಟಿಷರು ಅಂತಿಮವಾಗಿ ಜಯ ಗಳಿಸಿದರೂ ಅಪಾರ ಸಾವು ನೋವು ನಷ್ಟ ಅನುಭವಿಸಿದರು.

ಈ ನಷ್ಟದ ಸುದ್ದಿ ಈಸ್ಟ್ ಇಂಡಿಯ ಕಂಪನಿಯ ನಿರ್ದೇಶಕರಿಗೆ ಮುಟ್ಟಿದಾಗ ಅವರು ಇದಕ್ಕೆಲ್ಲ ಹ್ಯೂ ಗಾಫನೇ ಜವಾಬ್ದಾರನೆಂದು ನಿರ್ಧರಿಸಿ, ಅವನ ಬದಲು ಚಾರ್ಲ್ಸ್ ನೇಪಿಯರನನ್ನು ಸೇನಾಪತಿಯಾಗಿ ನೇಮಿಸಿದರು. ಆದರೆ ಆತ ಭಾರತಕ್ಕೆ ಬರುವ ಮೊದಲೇ ಗಾಫ್ ಸಿಕ್ಖರನ್ನೂ ಅವರ ಮಿತ್ರರಾಗಿದ್ದ ಆಫ್ಘನರನ್ನೂ ಚೀನಾಬ್ ನದಿಯ ಬಳಿಯ ಗುಜರಾತ್ ಎಂಬ ಸ್ಥಳದಲ್ಲಿ ಸಂಪೂರ್ಣವಾಗಿ ಸೋಲಿಸಿದ. ಚಿಲಿಯನ್‌ವಾಲ ಕದನದ ಅನಂತರ ಸಿಕ್ಖರು ಆಫ್ಘನ್ ಸೇನೆಯೊಡನೆ ಗುಜರಾತಿನ ಬಳಿ ತಂಗಿದ್ದರು.

1849ರ ಫೆಬ್ರವರಿ 21 ರಂದು ನಡೆದ ಗುಜರಾತ್ ಕದನದಲ್ಲಿ ಬ್ರಿಟಿಷರು ಅತ್ಯಲ್ಪಕಾಲದಲ್ಲಿ ಸಿಕ್ಖರನ್ನೂ ಆಫ್ಘನರನ್ನೂ ಸೋಲಿಸಿದರು. ಈ ಕದನದಲ್ಲಿ ಫಿರಂಗಿಗಳ ಪಾತ್ರವೇ ಮುಖ್ಯವಾಗಿದ್ದುದರಿಂದ ಇದನ್ನು ಫಿರಂಗಿ ಕದನವೆಂದು ಇತಿಹಾಸಕಾರರು ಕರೆದಿದ್ದಾರೆ.

ಗುಜರಾತ್ ಯುದ್ಧದಲ್ಲಿ ಸುಮಾರು 50,000 ಸಿಕ್ಖರು ಭಾಗವಹಿಸಿದ್ದರು. ಆದರೆ ಬ್ರಿಟಿಷ್ ಸೇನಾಪತಿ ಗಾಫ್ ಮೊದಲು ಗುಜರಾತಿನ ಪೂರ್ಣ ಪರಿಚಯ ಮಾಡಿಕೊಂಡು ಸಿಕ್ಖರ ಸೇನಾ ಶಿಬಿರಗಳನ್ನು ಗುರ್ತಿಸಿಕೊಂಡು, ತನ್ನ ಕಡೆಯ ಫಿರಂಗಿ ಪಡೆಯನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿ, ಸಿಕ್ಖರ ಬತೇರಿಗಳನ್ನು ಸ್ತಬ್ಧಗೊಳಿಸಿ ಅನಂತರ ಸಿಕ್ಖರನ್ನು ಸೆದೆಬಡಿಯಲು ಕಾಲಾಳು ಪಡೆಯನ್ನು ಉಪಯೋಗಿಸಿದ. ಗಾಫನ ಚಾಕಚಕ್ಯವನ್ನು ನೋಡಿ ಧೃತಿಗೆಟ್ಟ ಸಿಕ್ಖರನ್ನು ಜೀಲಂ ನದಿಯವರೆಗೂ ಅಟ್ಟಿಸಿಕೊಂಡು ಹೋಗಿ ಅವರನ್ನು ಸದೆಬಡಿದ. ಸಿಕ್ಖರು ಅತ್ಯುತ್ತಮ ಧೈರ್ಯಸಾಹಸಗಳಿಂದ ಹೋರಾಡಿದರು. ಅವರ ಕಡೆ ದಕ್ಷ ನಾಯಕತ್ವ ಇಲ್ಲದಿದ್ದುದು ಸೋಲಿಗೆ ಕಾರಣವಾಯಿತು. ಯಾವ ಸೇನೆಯೂ ಅಷ್ಟರಮಟ್ಟಿಗೆ ಹೋರಾಡಲಾರದು. ನಾಯಕತ್ವದ ಅಷ್ಟೊಂದು ಕೊರತೆಯನ್ನೂ ಹೊಂದಿರಲಾರದು ಎಂದು ಮಾಲಿಸನ್ ಅಭಿಪ್ರಾಯಪಟ್ಟಿದ್ದಾನೆ. ಅವರು ಮತ್ತೆ ಬ್ರಿಟಿಷರನ್ನು ಎದುರಿಸುವ ಚೈತನ್ಯವನ್ನು ಸಂಪೂರ್ಣವಾಗಿ ಕಳೆದುಕೊಂಡರು. ಬ್ರಿಟಿಷರ ಕಡೆ ಕೇವಲ 69 ಸೈನಿಕರು ಸತ್ತು, 670 ಸೈನಿಕರು ಗಾಯಗೊಂಡರು. ಬ್ರಿಟಿಷರು ಭಾರತದಲ್ಲಿ ನಡೆಸಿದ ಯುದ್ಧಕಾರ್ಯಾಚರಣೆಗಳ ಚರಿತ್ರೆಯಲ್ಲಿ ಗುಜರಾತ್ ಕದನ ಸ್ಮರಣೀಯವೆಂದೂ ಆ ಸಂದರ್ಭದ ಮಹತ್ತ್ವ ಮತ್ತು ಆ ಸಮರದ ಅಂತ್ಯ ಈ ಎರಡು ದೃಷ್ಟಿಗಳಿಂದಲೂ ಇದನ್ನು ನೆನಪಿನಲ್ಲಿಡಬೇಕೆಂದು ಗವರ್ನರ್–ಜನರಲ್ ಡಾಲ್ ಹೌಸಿ ಹೇಳಿದ.

ಗುಜರಾತ್ ಕದನದ ಅನಂತರ, 1849ರ ಮಾರ್ಚ್ 12ರಂದು, ಷೇರ್‌ಸಿಂಗ್, ಛತ್ತರ್‌ಸಿಂಗ್ ಮೊದಲಾದ ಸಿಖ್ ನಾಯಕರು ಮತ್ತು ಯೋಧರು ಬ್ರಿಟಿಷರಿಗೆ ಶರಣಾಗತರಾದರು. ದೋಸ್ತ್ ಮಹಮ್ಮದನ ನಾಯಕತ್ವದಲ್ಲಿದ್ದ ಆಫ್ಘನರನ್ನು ಬ್ರಿಟಿಷರು ಖೈಬರ್ ಕಣಿವೆಯ ಕಡೆಗೆ ಓಡಿಸಿದರು. ಪಂಜಾಬು ಬ್ರಿಟಿಷರ ಆಡಳಿತಕ್ಕೊಳ ಪಟ್ಟಿದೆಯೆಂದು 1849ರ ಮಾರ್ಚ್ 30ರಂದು ಘೋಷಿಸಲಾಯಿತು. (ಕೆ.ಟಿ.ಆರ್.)

**ಗುಜರಾತ್ ಸಮಾಚಾರ್ :** ಗುಜರಾತ್ ರಾಜ್ಯದ ಅಹಮದಾಬಾದಿನಿಂದ ಪ್ರಕಟವಾಗುತ್ತಿರುವ ಗುಜರಾತಿ ಭಾಷಾಪತ್ರಿಕೆ. ಪ್ರತಿದಿನ ಬೆಳಗ್ಗೆ ಹೊರಡುತ್ತದೆ. ಪ್ರಸಾರದ ದೃಷ್ಟಿಯಿಂದ ಇದು ಗುಜರಾತಿ ಪತ್ರಿಕೆಗಳಲ್ಲಿ ಎರಡನೆಯದು. ಲೋಕ ಪ್ರಕಾಶನ ಲಿಮಿಟೆಡ್ ಸಂಸ್ಥೆ 1932ರಲ್ಲಿ ಈ ಪತ್ರಿಕೆಯ ಪ್ರಕಾಶನವನ್ನು ಪ್ರಾರಂಭಿಸಿತು. ರಾಷ್ಟ್ರೀಯ ಧೋರಣೆಯುಳ್ಳ ಈ ಪತ್ರಿಕೆಯ ವ್ಯವಸ್ಥಾಪಕ ಸಂಪಾದಕ ಶಾಂತಿಲಾಲ ಎ.ಶಹಾ. ಶ್ರೇಯಾಂಸ ಎಸ್. ಶಹಾ ಸಂಪಾದಕರು. ಅಗ್ರಲೇಖನ, ರಾಜಕೀಯ, ಆರ್ಥಿಕ, ಸಾಮಾಜಿಕ ಲೇಖನಗಳು ಇವು ನಿತ್ಯದ ವೈಶಿಷ್ಟ್ಯಗಳು. ಭಾನುವಾರದ ಸಂಚಿಕೆಯಲ್ಲಿ ಸಾಹಿತ್ಯಕ ಲೇಖನಗಳಿರುತ್ತವೆ. ಅಹಮದಾಬಾದ್ ಅಲ್ಲದೆ ವಡೋದರ, ಸೂರತ್, ರಾಜ್‌ಕೋಟ್, ಭಾವನಗರ ಮತ್ತು ಮುಂಬೈನಿಂದಲೂ ಪ್ರಕಟವಾಗುತ್ತಿದೆ. (ಪಿ.ಆರ್.ಪಿ.)


**ಗುಜರಾತಿನ ಇತಿಹಾಸ :** 1. ಪ್ರಾಗಿತಿಹಾಸ : ಶಿಲಾಯುಗದಿಂದಲೂ ಗುಜರಾತು ಮಾನವನ ನೆಲೆಯಾಗಿತ್ತೆಂಬುದು 1890ರ ದಶಕದಲ್ಲಿ ಬ್ರೂಸ್‌ಫುಟ್‌ನಿಂದ ಮತ್ತು ಇತ್ತೀಚೆಗೆ ಶೋಧವಾದ ಆದಿಶಿಲಾಯುಗದ ನೆಲೆಗಳಿಂದ ತಿಳಿದುಬಂದಿದೆ. ಕಚ್ಛ್ ಪ್ರದೇಶದ ವಿರಾಣಿ ನದಿಯ ಬಯಲಿನಲ್ಲಿ ಬಲ್‌ಸಾರ್ ಜಿಲ್ಲೆಯಲ್ಲಿಯ ಮಾನ್, ತಾನ್ ನದಿಗಳ ಪ್ರದೇಶದಲ್ಲಿ ಆದಿಶಿಲಾಯುಗದ ಕೈಗೊಡಲಿ, ಮಚ್ಚು, ಸೀಳುಗತ್ತಿ, ಹೆರೆಯುವ ಚಕ್ಕೆಗಳು ಮುಂತಾದ ಶಿಲಾ ಉಪಕರಣಗಳು ದೊರೆತಿವೆ. ರಾಜಕೋಟೆ ಜಿಲ್ಲೆಯಲ್ಲಿರುವ ಭದರ್ ಹತ್ತಿರ ನದಿದಂಡೆಯ ಕೆಳಭಾಗದ ಮರಳಿನ ಪದರದಲ್ಲಿ ಆದಿಶಿಲಾಯುಗದ ಕಲ್ಲಿನ ಉಪಕರಣಗಳೂ ಮೇಲಿನ ಮರಳಿನ ಪದರದಲ್ಲಿ ಮಧ್ಯ ಶಿಲಾಯುಗದ ಕಲ್ಲಿನ ಉಪಕರಣಗಳೂ ದೊರೆತಿವೆ. ಇವುಗಳಿಂದ ಗುಜರಾತಿನ ಶಿಲಾಯುಗ ಸಂಸ್ಕೃತಿಗಳ ಅನುಕ್ರಮ ತಿಳಿದಿದೆ.

ಕಚ್ಛ್‌ನಲ್ಲಿರುವ ರೋಜ್‌ಡಿಯದ ಹತ್ತಿರದ ನದಿಯ ದಡದಲ್ಲಿಯ ಮೇಲಿನ ಪದರಗಳಲ್ಲಿ ಮಧ್ಯಶಿಲಾಯುಗದ ನೀಳ ಚಕ್ಕೆಗಳು, ಮೊನೆಗಳು, ತಿರುಳುಗಲ್ಲು ಮುಂತಾದ ಟರ್ಫ್ ಮತ್ತು ಕ್ವಾರ್ಟ್‌ಜೈಟ್ ಕಲ್ಲಿನಲ್ಲಿ ಮಾಡಿದ ಉಪಕರಣಗಳು ದೊರೆತಿರುವುದು ಗಮನಾರ್ಹ. ಆದಿ ಹಾಗೂ ಮಧ್ಯಶಿಲಾಯುಗದ ಇನ್ನೂ ಕೆಲವು ನೆಲೆಗಳ ಶೋಧವಾಗಿದೆ.

ನರ್ಮದಾ ಮತ್ತು ಅದರ ಉಪನದಿಗಳ ಪ್ರದೇಶದಲ್ಲಿ ತೋರಿಬಂದ ಶಿಲಾಯುಗ ಸಂಸ್ಕೃತಿಗಳು ಮತ್ತು ಅವುಗಳ ಕಾಲದ ಬಗ್ಗೆ ಗಮನಾರ್ಹವಾದ ವೈಜ್ಞಾನಿಕ ಅಧ್ಯಯನ ನಡೆದಿದೆ.

ಈ ಸಂಶೋಧನೆಯ ಕಾರ್ಯ ಸಂಕಾಳಿಯಾ ಅವರಿಂದ 1946ರ ಪೂರ್ವದಲ್ಲಿ ಪ್ರಾರಂಭವಾಗಿ, ಅನಂತರ ಎಫ್.ಇ. ಝಾಯ್‌ನರರ ನೇತೃತ್ವದಲ್ಲಿ ಭಾರತ ಸರ್ಕಾರದ ಪುರಾತತ್ತ್ವ ಸರ್ವೇಕ್ಷಣ ಶಾಖೆ ಮತ್ತು ಪುಣೆಯ ಡೆಕ್ಕನ್ ಕಾಲೇಜ್ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನ ಸಂಸ್ಥೆಯ ಪುರಾತತ್ತ್ವ ಶಾಖೆಯಿಂದ ಮುಂದುವರಿಯಿತು. ಪುನಃ ಡಾ. ಝಾಯ್‌ನರ್ 1960ರಲ್ಲಿ ಮಾಹೀ ನದಿಯ ಪ್ರದೇಶದಲ್ಲಿ ಸಂಶೋಧನೆ ನಡೆಸಿ, ಪ್ಲೀಸ್ಟೊಸೀನ್ ಯುಗದಲ್ಲಿ ಉಂಟಾದ ಸಮುದ್ರದ ಏರಿಳಿತಗಳ ಕುರುಹುಗಳಿಂದ ಗುಜರಾತಿನ ಶಿಲಾಯುಗ ಸಂಸ್ಕೃತಿಗಳ ಕಾಲವನ್ನು ಗೊತ್ತು ಮಾಡುವ

ಸಾಧ್ಯತೆಯನ್ನು ತೋರಿಸಿಕೊಟ್ಟರು. ಮುಂದೆ ಜಿ. ಜೆ.ವೈನ್‌ರೈಟ್ ನರ್ಮದಾ ನದಿತೀರದ ಚಂದೋಡ್‌ನಿಂದ ಅರಬ್ಬೀ ಸಮುದ್ರದವರೆಗೆ, ಅಂದರೆ ಸುಮಾರು 110 ಕಿಮೀ ದೂರದ ನದಿ ಪ್ರದೇಶವನ್ನು ಕೂಲಂಕುಷವಾಗಿ ಪರೀಕ್ಷಿಸಿದರು. ಯುರೋಪಿನ ಅಶೂಲಿಯನ್ ಪದ್ಧತಿಯ ಶಿಲಾ ಉಪಕರಣಗಳಂತಿರುವ ಆದಿಶಿಲಾಯುಗದ ಕೈಗೊಡಲಿ ಮತ್ತು ಮಚ್ಚುಗತ್ತಿಯಂಥವು ಮತ್ತು ಲೆವಾಲ್ವ ಪದ್ಧತಿಯ ಗಟ್ಟಿಗಳು ದೊರೆತುವು. ಇವು ಯುರೋಪಿನ ಕೊನೆಯ ಮಧ್ಯಂತರ ಹಿಮ ಪ್ರವಾಹ ಕಾಲದ ಒಂದು ಭಾಗಕ್ಕೆ ಸೇರಿದವೆಂದು ಕಾಣುತ್ತದೆ.



ರಂಗಪುರ ಉತ್ಖನನ

ಸಾಬರಮತಿ, ಮಾಹಿ ಮತ್ತು ನರ್ಮದಾ ನದಿಗಳ ಪ್ರದೇಶದಲ್ಲಿ ಸೂಕ್ಷ್ಮ ಶಿಲಾಯುಗದ ಅನೇಕ ನೆಲೆಗಳು 1941ರಿಂದ ಈಚೆಗೆ ಬೆಳಕಿಗೆ ಬಂದಿವೆ. ಇವುಗಳಲ್ಲಿ ಲಾಂಘನಾಜ್ ಎಂಬ ಒಂದು ನೆಲೆಯನ್ನು ವಿಶೇಷವಾಗಿ ಸಂಕಾಳಿಯಾ ಮತ್ತು ಅವರ ಸಹೋದ್ಯೋಗಿಗಳು ಪರೀಕ್ಷಿಸಿ 1944–63ರ ನಡುವೆ ಇಲ್ಲಿ ಉತ್ಖನನ ನಡೆಸಿ, ಅಲ್ಲಿಯ ಸೂಕ್ಷ್ಮ ಶಿಲಾಯುಗದ ಜನಜೀವನದ ಕೆಲವೊಂದು ವಿಷಯಗಳನ್ನು ಬೆಳಕಿಗೆ ತಂದಿದ್ದಾರೆ. ಈ ಜನ ಅಲ್ಲಲ್ಲಿ ಮರುಳುದಿಣ್ಣೆಗಳ ಮೇಲೆ ಹಾಗೂ ನದಿಗಳ ದಂಡೆಗಳ ಮೇಲೆ ವಾಸಿಸುತ್ತಿದ್ದರು. ಆದರೆ ಇವರ ವಸತಿಗೃಹಗಳ ಅವಶೇಷಗಳೇನೂ ದೊರೆತಿಲ್ಲ. ಪ್ರಾಯಶಃ ಮಣ್ಣು ಬಳಿಯದ, ಗಿಡ ಸೊಪ್ಪುಗಳ ತಡಿಕೆಯುಳ್ಳ ಗುಡಿಸಿಲುಗಳನ್ನು ಕಟ್ಟಿಕೊಂಡಿದ್ದರೆಂದು ತೋರುತ್ತದೆ. ಇವರು ಮೊದಲು ಅಗೇಟ್, ಜಾಸ್ಪರ್, ಬೆಣಚುಕಲ್ಲು ಮುಂತಾದವುಗಳಿಂದ ಅತಿ ಸಣ್ಣ, ತ್ರಿಕೋಣಾಕೃತಿಯ, ನೀಳವಾದ ಚಕ್ಕೆಗಳ ವಿವಿಧ ಉಪಕರಣಗಳನ್ನೂ ಕ್ರಮೇಣ, ಅಪರೂಪವಾಗಿ ಮಧ್ಯೆ ತೂತುಳ್ಳ ಕವಣೆಗಲ್ಲುಗಳನ್ನೂ ನಯಮಾಡಿದ ಮೇಲ್ಮೈಯುಳ್ಳ ಕೊಡಲಿಗಳನ್ನೂ ಮಾಡಿಕೊಳ್ಳುತ್ತಿದ್ದರು. ಈ ಕಲ್ಲುಗಳನ್ನು 50 ರಿಂದ 150 ಕಿಮೀ ದೂರದ ಪ್ರದೇಶಗಳಿಂದ ತರಿಸಿಕೊಳ್ಳುತ್ತಿದ್ದಾರೆಂದು ಕಾಣುತ್ತದೆ. ಇವರು ಆಹಾರಕ್ಕಾಗಿ ಖಡ್ಗಮೃಗ, ಕಾಡುಹಂದಿ, ನೀಲ್ಗಾಯ್, ಚಿಗರಿ ಮುಂತಾದ ಪ್ರಾಣಿಗಳನ್ನು ಬೇಟೆಯಾಡುತ್ತಿದ್ದರು. ಮಜ್ಜೆಗಾಗಿ ಎಲುಬುಗಳನ್ನು ಸೀಳಿದ, ಮಿದುಳಿಗಾಗಿ ತಲೆಬರುಡೆಗಳನ್ನು ಒಡೆದ ಗುರುತುಗಳು ಇಲ್ಲಿ ದೊರೆತ ಪ್ರಾಣಿಗಳ ಎಲುಬುಗಳಲ್ಲಿ ತೋರಿಬಂದಿವೆ. ಮೀನು ಆಮೆಗಳೂ ಇವರ ಆಹಾರವಾಗಿದ್ದುವು. ಇವರು ಅರ್ಧಗೋಲಾಕೃತಿಯ ಗುಡಾಣದಂಥ ಮತ್ತು ಇತರ ಅರೆಸುಟ್ಟ ಮಣ್ಣಿನ ಪಾತ್ರೆಗಳನ್ನು ಮಾಡುತ್ತಿದ್ದರು. ಇವುಗಳಲ್ಲಿ ಕೆಲವು ಪಾತ್ರೆಗಳ ಮೇಲೆ, ಅವು ಅರೆಹಸಿಯಾಗಿದ್ದಾಗ, ಮೊನೆಚಾದ ಕಡ್ಡಿಯಿಂದ ರೇಖಾಚಿತ್ರಗಳನ್ನು ಕೊರೆಯುತ್ತಿದ್ದರು. ಕೆಮ್ಮಣ್ಣನ್ನು ನೀರಿನಲ್ಲಿ ಕದಡಿಕೆಲವು ಪಾತ್ರೆಗಳ ಮೇಲೆ ಬಳಿಯುತ್ತಿದ್ದರು. ಶವಗಳ ಕಾಲುಗಳನ್ನು ಹಿಂದಕ್ಕೆ ಮಡಿಚಿ, ತಲೆ ಬಲಮಗ್ಗುಲಿಗೆ ಬರುವಂತೆ ಮಾಡಿ ಪೂರ್ವ ಪಶ್ಚಿಮವಾಗಿ ಅವನ್ನು ಕುಣಿಗಳಲ್ಲಿ ಮಲಗಿಸಿ ಮುಚ್ಚುತ್ತಿದ್ದರು. ಈ ಜನ ಮಿಶ್ರಜನಾಂಗದವರಾಗಿದ್ದು ಇವರಲ್ಲಿ ಮೆಡಿಟರೆನಿಡ್ ಮತ್ತು ವೆಡಿಡ್ ಜನಾಂಗಗಳ ಲಕ್ಷಣಗಳಿದ್ದುವೆಂಬುದು ಉತ್ಖನನದಲ್ಲಿ ದೊರೆತ ಅಸ್ಥಿಪಂಜರಗಳ ಅವಶೇಷಗಳಿಂದ ತಿಳಿದುಬರುತ್ತದೆ. ಈ ಸಂಸ್ಕೃತಿ ಪ್ರ.ಶ.ಪೂ. ಸುಮಾರು 2000ಕ್ಕೆ ಇತ್ತೆಂದು ಹೇಳಬಹುದು. ರಂಗಪುರದಲ್ಲೂ, ಹರಪ್ಪ ಸಂಸ್ಕೃತಿಯ ಅವಶೇಷಗಳ ಕೆಳಭಾಗದಲ್ಲಿ, ಈ ಶಿಲಾಯುಗದ ಅವಶೇಷಗಳು ತೋರಿಬಂದಿವೆ.

ಸಿಂಧೂ ಬಯಲಿನ (ಹರಪ್ಪ) ನಾಗರಿಕತೆಯ ಅನೇಕ ನೆಲೆಗಳು 1934ರಿಂದ ಈಚೆಗೆ ಬೆಳಕಿಗೆ ಬಂದಿವೆ. ಮುಖ್ಯವಾಗಿ ರಂಗಪುರ, ರೋಜ್‌ಡಿ, ದೇಸಲ್‌ಪುರ, ಸೋಮನಾಥ, ಲೋಥಾಲ್ ಮತ್ತು ಸುರಕೋಟಡ ನೆಲೆಗಳಲ್ಲಿ ಉತ್ಖನನಗಳನ್ನು ನಡೆಸಿ, ಈ ನಾಗರಿಕತೆಯ ಬಗ್ಗೆ ಕೆಲವು ಹೊಸ ವಿಷಯಗಳನ್ನು ತಿಳಿದುಕೊಳ್ಳಲಾಗಿದೆ. ಲೋಥಾಲ್‌ನಲ್ಲಿ ದೊರೆತ ಈ ನಾಗರಿಕತೆಯ ಅವಶೇಷಗಳಲ್ಲಿ ಹಡಗು ಕಟ್ಟೆ ಬಹು ಮುಖ್ಯವಾದ್ದು. ಇದು ಆ ಜನರ ಸಮುದ್ರ ವ್ಯಾಪಾರದ ಸಾಮರ್ಥ್ಯವನ್ನು ತೋರಿಸುತ್ತದೆ. ಪ್ರಪಂಚದಲ್ಲಿಯೇ ಇದು ಅತ್ಯಂತ ಪ್ರಾಚೀನವಾದ್ದು. ಹರಪ್ಪ, ಮೊಹೆಂಜೋದಾರೊಗಳ ಅನಂತರ, ಭಾರತದಲ್ಲಿ ದೊರೆತ ಈ ನಾಗರಿಕತೆಯ ದೊಡ್ಡ ನಗರಗಳಲ್ಲಿ ಲೋಥಾಲ್ ಒಂದು. ಇದು ಅಹಮದಾಬಾದ್ ಜಿಲ್ಲೆಯಲ್ಲಿದೆ; ಆ ನಗರದ ದಕ್ಷಿಣಕ್ಕೆ, ಸು. 100 ಕಿಮೀ ದೂರದಲ್ಲಿ ಇದೆ. ಈ ಪ್ರಾಚೀನ ನಗರ ಉನ್ನತಿಯಲ್ಲಿದ್ದಾಗ ಅರಬ್ಬಿ ಸಮುದ್ರ ಇದರ ಸಮೀಪದವರೆಗೂ ವಿಸ್ತರಿಸಿತ್ತು. ಕ್ರಮೇಣ ಸಮುದ್ರದ ಮಟ್ಟದ ಇಳಿತದಿಂದ ಈ ಪ್ರದೇಶ ಸಮುದ್ರದಿಂದ ದೂರವಾಯಿತು. ಇಲ್ಲಿಯ ನಗರ ಸಂಸ್ಕೃತಿಯ ಬೆಳವಣಿಗೆಯಲ್ಲಿ ಎರಡು ಹಂತಗಳು ತೋರುತ್ತವೆ. ಪೂರ್ವದ ಹಂತದಲ್ಲಿ ಇದು ಹರಪ್ಪ ನಗರದ ಹಾಗೆ, ಆದರೆ ಸಣ್ಣ ಗಾತ್ರದಲ್ಲಿ, ಕ್ರಮಬದ್ಧವಾಗಿ ಕಟ್ಟಲಾದ ನಗರವಾಗಿತ್ತು. ನಗರದ ಪ್ರಮುಖ ಭಾಗ ಬಲವಾದ ಗೋಡೆಯಿಂದ ಆವೃತವಾಗಿತ್ತು. ಹೊರಭಾಗದಲ್ಲಿ ಸುಮಾರು ಒಂದೂವರೆ ಕಿಮೀ ದೂರದಲ್ಲಿ ವಾಯವ್ಯದ ಕಡೆಗೆ ಒಂದು ಸ್ಮಶಾನವೂ ಪೂರ್ವಭಾಗದಲ್ಲಿ ಚತುರ್ಭುಜಾಕೃತಿಯ ಹಡಗುಕಟ್ಟೆಯೂ (213 ಮೀ X 36 ಮೀ) ಇದ್ದುವು. ಇದು 4.20 ಮೀ ಎತ್ತರವಿತ್ತೆಂಬುದಾಗಿ ಉತ್ಖನನದಲ್ಲಿ ಕಂಡುಬಂದಿದೆ; ಇನ್ನೂ ಎತ್ತರವಿದ್ದಿರಬಹುದು.




ಹಡಗು ಕಟ್ಟೆ

ನಗರದಲ್ಲಿ ಆರು ಭಾಗಗಳಿದ್ದವು. ಪ್ರತಿಯೊಂದು ಭಾಗದಲ್ಲೂ ವಿಶಾಲವಾದ ಇಟ್ಟಿಗೆ ಕಟ್ಟೆಯ ಮೇಲೆ ಮನೆಗಳನ್ನು ಕಟ್ಟಲಾಗಿತ್ತು. ಪೂರ್ವಪಶ್ಚಿಮ ಮತ್ತು ಉತ್ತರದಕ್ಷಿಣವಾಗಿ ಹಾದುಹೋಗುವ ಎರಡೆರಡು ಬೀದಿಗಳಿದ್ದುವು ಮತ್ತು ಎರಡೆರಡು ಓಣಿಗಳಿದ್ದುವು. ಒಂದು ಬೀದಿಯ ಬದಿಯಲ್ಲಿ ಸಾಲಾಗಿ ಮನೆಗಳಿದ್ದುವು. ಇವಲ್ಲದೆ ಎದುರುಬದುರಾಗಿರುವ ಎರಡು ಮೂರು ಕೋಣೆಗಳುಳ್ಳ ಮನೆಗಳಿದ್ದುವು. ಇವು ಅಂಗಡಿಗಳಾಗಿದ್ದಿರಬಹುದು. ದೊಡ್ಡ ಮನೆಗಳು ಮುಂಭಾಗದಲ್ಲಿ ಅಂಗಳಗಳಿಂದ ಕೂಡಿದ್ದವು. ಮತ್ತೆ ಕೆಲವು ಮನೆಗಳ ಮಧ್ಯದಲ್ಲಿ ಅಂಗಳಗಳಿದ್ದು ಸುತ್ತಲೂ ಕೋಣೆಗಳಿದ್ದುವು. ಚಿನಿವಾರರ, ಇತರ ಲೋಹ ಕೆಲಸ ಮಾಡುವವರ ಮನೆಗಳು ಸಣ್ಣವಿದ್ದುವು. ನಗರನೈರ್ಮಲ್ಯ ವ್ಯವಸ್ಥೆ ಚೆನ್ನಾಗಿತ್ತು. ಈ ಬೀದಿಯ ಬದಿಯ ದೊಡ್ಡ ಚರಂಡಿಗಳಿಗೆ ಮನೆಯ ಒಳ ಚರಂಡಿಗಳನ್ನು ಸೇರಿಸಲಾಗಿತ್ತು. ಮನೆಗಳಲ್ಲಿ ಬಿಟುಮೆನ್ ಸವರಿದ ನೆಲವುಳ್ಳ ಸ್ನಾನಗೃಹಗಳು, ಶೌಚಗೃಹ ಮತ್ತು ಹಿಂಗುಣಿಗಳಿದ್ದುವು. ನಗರದ ದಕ್ಷಿಣ ಭಾಗದಲ್ಲಿ ಎತ್ತರದ ಕಟ್ಟೆಯ ಮೇಲೆ ನಿರ್ಮಿಸಿದ ದೊಡ್ಡದೊಂದು ಮನೆಗೆ ಸುವ್ಯವಸ್ಥಿತವೂ ವಿಶಾಲವೂ ಆದ ಚರಂಡಿಯೂ ಪ್ರತ್ಯೇಕ ಬಾವಿಯೂ ಇದ್ದುವು. ರೋಜ್‌ಡಿಯಲ್ಲಿ ಈ ನಾಗರಿಕತೆಯ ಕೊನೆಯ ಹಂತದಲ್ಲಿ ತುಂಡುಕಲ್ಲುಗಳಿಂದ ಮನೆಗಳನ್ನು ಕಟ್ಟಲಾಗಿತ್ತು. ಸುರ್‌ಕೋಟಡದಲ್ಲಿ ನಗರದ ಸುತ್ತಲೂ ರಕ್ಷಣಾರ್ಥವಾಗಿ ಬಲವಾದ ಗೋಡೆಗಳಿದ್ದುವು.

ಹರಪ್ಪದಲ್ಲಿಯ ಹಾಗೆ ಲೋಥಾಲಿನಲ್ಲಿ ಕೆಂಪುವರ್ಣದ ಮೃಣ್‌ಪಾತ್ರೆಗಳು ವೈವಿಧ್ಯಪೂರಿತವಾಗಿದ್ದು, ಕಪ್ಪು ನೀಲಿ ಬಣ್ಣಗಳ ಚಿತ್ರಗಳಿಂದ ಅಲಂಕೃತವಾಗಿದ್ದುವು; ದೇಸಲ್‌ಪುರದಲ್ಲಿ ಕಪ್ಪು ನೀಲಿ ಮತ್ತು ಕೆಂಪು ಕೂಡಿದ ಚಿತ್ರಗಳಿಂದ ಅಲಂಕೃತ ವಾಗಿದ್ದುವು. ಜೊತೆಗೆ ಇಲ್ಲಿ ಮಾತ್ರ ಮತ್ತೊಂದು ವಿಧವಾದ, ಕೆಂಪು ಕಪ್ಪು ಬಣ್ಣವುಳ್ಳ ದ್ವಿವರ್ಣ ಪಾತ್ರೆಗಳು ಉಪಯೋಗದಲ್ಲಿದ್ದುವು. ಕಂಚು ಅಥವಾ ತಾಮ್ರದ ಉಪಕರಣಗಳ ಜೊತೆಗೆ ಫ್ಲಿಂಟ್ ಕಲ್ಲಿನ ನೀಳ ಚಕ್ಕೆಗಳು ನಿತ್ಯ ಕೆಲಸಗಳಿಗೆ ಬೇಕಾಗುವ ಉಪಕರಣಗಳಾಗಿ ಉಪಯೋಗದಲ್ಲಿದ್ದುವು.

ಸುಟ್ಟ ಮಣ್ಣಿನಿಂದ, ಆನೆಯ ಮತ್ತು ಇತರ ದಂತಗಳಿಂದ, ಒಳ್ಳೆಯ ಜಾತಿಯ ಕಲ್ಲುಗಳಿಂದ, ತಾಮ್ರ, ಚಿನ್ನ ಮುಂತಾದವುಗಳಿಂದ ಮಾಡಿದ ವಿವಿಧ ಆಕಾರಗಳ ಆಭರಣಗಳು ಅಲ್ಲಿಯ ಜನರ ಕುಶಲಕೆಲಸಕ್ಕೆ, ಸೌಂದರ್ಯಪ್ರಿಯತೆಗೆ ಸಾಕ್ಷಿಗಳಾಗಿವೆ. ಒಂದು ಚಿನ್ನದ ಸರದಲ್ಲಿ 5 ಲಕ್ಷ ಅತಿ ಸಣ್ಣ ಗುಂಡುಗಳು ಮತ್ತು ಕೊಳವೆಗಳಿದ್ದುವು. ಒಂದು ತಾಮ್ರದ ನಾಯಿಯ ಗೊಂಬೆಯ ಮುಖಭಾವ ಮಾರ್ಮಿಕವಾಗಿದೆ. ತಾಮ್ರ, ಕಂಚಿನ ಕೊರೆಯುವ ತಂತಿ ಒಂದು ಮುಖ್ಯವಾದ ಶೋಧ. ಚದುರಂಗದ ಕಾಯಿಗಳಾಗಿದ್ದಿರ ಬಹುದಾದ, ಹೋತದ ತಲೆಯುಳ್ಳ, ಪ್ರಾಣಿ, ಎತ್ತು ಮುಂತಾದ ಗೊಂಬೆಗಳು ಆಕರ್ಷಕವಾಗಿವೆ. ಸು. 17.5 ಸೆಂಮೀ ಉದ್ದದ, 1.7 ಮಿಮೀ ಅಂತರದಲ್ಲಿ ಎಳೆದ ಗೆರೆಗುಳುಳ್ಳ ದಂತದ ಅಳತೆಪಟ್ಟಿ, ಸುಣ್ಣ ಮಣ್ಣಿನ ಅಳತೆಗುಂಡುಗಳು ಇವು ಇವರ



ಪ್ರಾಣಿಗಳ ಮಣ್ಣಿನ ಪ್ರತಿಮೆಗಳು, ಲೋಥಾಲ್

ಮಾಪನ ಜ್ಞಾನದ ಗುರುತುಗಳಾಗಿವೆ. ಮಣ್ಣಿನ ಗೊಂಬೆಗಳಲ್ಲಿ ಒಂದು ಕುದುರೆಯ ಹಾಗೆ ಇದೆ. ಇದು ಕುದುರೆಯೋ ಹೇಸರಗತ್ತೆಯೋ ಅಷ್ಟು ಸ್ಪಷ್ಟವಾಗಿಲ್ಲ. ಕುದುರೆಯಾಗಿದ್ದಲ್ಲಿ ಈ ನಾಗರಿಕತೆಯ ಜನರಲ್ಲಿ ಈ ಪ್ರಾಣಿ ಉಪಯೋಗದಲ್ಲಿದ್ದುದು ಪ್ರಥಮ ಬಾರಿಗೆ ತಿಳಿದ ಹಾಗಾಗುತ್ತದೆ. ಹರಪ್ಪ, ಮೊಹೆಂಜೋದಾರೊಗಳಲ್ಲಿ ದೊರೆತ ಹಾಗೆ ಲೋಥಾಲಿನಲ್ಲಿಯೂ ಅಕ್ಷರಗಳುಳ್ಳ ಚಿತ್ರಿತ ಮುದ್ರಿಕೆಗಳು ದೊರೆತಿವೆ; ಪರ್ಷಿಯನ್ ಕೊಲ್ಲಿ ಪ್ರದೇಶದಲ್ಲಿಯ ಸಮಕಾಲೀನ ಸಂಸ್ಕೃತಿಯ ಗುರುತುಗಳಲ್ಲಿ ಒಂದಾದ ದುಂಡು ಮುದ್ರಿಕೆಗಳು ಒಂದೆರಡು ಇಲ್ಲಿ ದೊರೆತು ಈ ಎರಡೂ ಪ್ರದೇಶಗಳ ನಡುವಿನ ಸಮುದ್ರವ್ಯಾಪಾರ ಸಂಬಂಧವನ್ನು ಇವು ಪುಷ್ಟೀಕರಿಸಿವೆ. ಹರಪ್ಪ ಮೊಹೆಂಜೋದಾರೊ ಪ್ರದೇಶಕ್ಕೆ ಮತ್ತು ಗುಜರಾತಿನ ಸೌರಾಷ್ಟ್ರಭಾಗಕ್ಕೆ ಭೂಮಾರ್ಗ ಸಂಪರ್ಕವೂ ಇತ್ತು ಎಂಬುದು ಕಚ್ಛ್ ಪ್ರದೇಶದ ಉತ್ಖನನದಿಂದ ತಿಳಿದುಬಂದಿದೆ.

ಅಲ್ಲಿ ಎರಡು ವಿಧವಾದ ಶವಸಂಸ್ಕಾರ ಪದ್ಧತಿಗಳು ಇದ್ದುವು : ಶವವನ್ನು ಉತ್ತರ ದಕ್ಷಿಣವಾಗಿ ಅಥವಾ ಕ್ವಚಿತ್ತಾಗಿ ಪೂರ್ವ ಪಶ್ಚಿಮವಾಗಿ ಹುಗಿಯುವುದು; ಇಲ್ಲವೇ ಶವದ ಅಸ್ಥಿಗಳನ್ನು ಕಾಲಕ್ರಮದಲ್ಲಿ ಸಂಗ್ರಹಿಸಿ ಮೃಣ್‍ಪಾತ್ರೆಯಲ್ಲಿ ಹಾಕಿ ಅವನ್ನು ಕ್ರಮವಾಗಿ ಹುಗಿಯುವುದು. ಅಪರೂಪವಾಗಿ ಶವದ ಕುಣಿಯ ಬದಿಯನ್ನು ಇಟ್ಟಿಗೆಗಳಿಂದ ಭದ್ರ ಮಾಡುತ್ತಿದ್ದದ್ದುಂಟು.

ಎರಡನೆಯ ಹಂತದಲ್ಲಿ ಹರಪ್ಪ ನಾಗರಿಕತೆ ಇಳಿಮುಖವಾದ ಲಕ್ಷಣಗಳು ತೋರುವುವು. ಅಲ್ಲದೆ ಫ್ಲಿಂಟ್ ಬದಲು ಜಾಸ್ಪರ್ ಮತ್ತು ಅಗೇಟ್ ಕಲ್ಲಿನ ನೀಳ ಚಕ್ಕೆಗಳನ್ನು ಉಪಕರಣಗಳಾಗಿ ಉಪಯೋಗಿಸುತ್ತಿದ್ದ ಬೇರೆ ಜನವರ್ಗದವರು ಇಲ್ಲಿ ಬಂದು ನೆಲೆಸಿದ ಹಾಗೆ ಕಾಣುತ್ತದೆ. ಈ ಹಂತದ ಮೃಣ್‍ಪಾತ್ರೆಗಳು ಹಿಂದಿನವುಗಳಿಗಿಂತ ತೀರ ಭಿನ್ನವಾಗಿವೆ; ಮತ್ತು ಈ ಸಂಸ್ಕೃತಿಯ ಲಕ್ಷಣಗಳಲ್ಲಿ ದಖನ್ ಪ್ರಸ್ಥಭೂಮಿಯ ಶಿಲಾ ತಾಮ್ರಯುಗದ ಸಂಸ್ಕೃತಿಗೆ ಹೆಚ್ಚು ಹೋಲಿಕೆಯಿದೆ. ಈ ಸಾಧಾರಣ ಸಂಸ್ಕೃತಿಯ ಲಕ್ಷಣಗಳು ರಂಗಪುರದಲ್ಲಿಯೂ ಕಂಡಿವೆ. ಆದರೆ ಲೋಥಾಲ್‍ನಲ್ಲಿ ಇದು ಸರಿಯಾಗಿ ಬೇರೂರುವುದರಲ್ಲಿಯೇ ಅಲ್ಲಿಯ ನದಿಪ್ರವಾಹದಿಂದ ಹಾಳಾಯಿತು. ರಂಗಪುರದಲ್ಲಿ ಸುಡದ ಮಣ್ಣಿನ ಇಟ್ಟಿಗೆ ಮನೆಗಳಿದ್ದುವು. ಬಿಳಿಬಣ್ಣದ ರೇಖಾಚಿತ್ರಗಳಿಂದ ಅಲಂಕರಿಸಲ್ಪಟ್ಟ ಕಪ್ಪು ಕೆಂಪು ಬಣ್ಣಗಳ ಮಣ್ಣಿನ ಪಾತ್ರೆಗಳು ಉಪಯೋಗದಲ್ಲಿದ್ದುವು. ಕ್ರಮೇಣ ವಿಶೇಷ ಹೊಳಪುಳ್ಳ ಬಣ್ಣದ ಮೃಣ್‍ಪಾತ್ರೆಗಳು ಬಳಕೆಯಲ್ಲಿದ್ದುವು.




ಮುದ್ರೆಗಳು, ಲೋಥಾಲ್ ಉತ್ಖನನ

ಸೋಮನಾಥದಲ್ಲಿ ಹರಪ್ಪ ನಾಗರಿಕತೆಯ ಕೊನೆಯ ಹಂತದ ಗುರುತುಗಳುಂಟು. ಈ ಹಂತದಲ್ಲಿ ಕಂದುಬಣ್ಣದ ರೇಖಾಚಿತ್ರಗಳಿಂದ ಅಲಂಕರಿಸಿದ ಬಿಳಿ ಅಥವಾ ಸ್ವಲ್ಪ ಬಿಳಿಹಳದಿ ಬಣ್ಣದ ಮೃಣ್‍ಪಾತ್ರೆಗಳೂ ಬಳಕೆಯಲ್ಲಿದ್ದುದು ಒಂದು ವೈಶಿಷ್ಟ್ಯ. ಜೊತೆಗೆ ಹೊಸ ಮಾದರಿಯ ಮೃಣ್‍ಪಾತ್ರೆಯ ಬಟ್ಟಲುಗಳು (ಪ್ರಭಾಸ್ ಅಥವಾ ಸೋಮನಾಥ್ ಬೋಲ್) ಇದ್ದವು. ಇದಕ್ಕೂ ಪೂರ್ವದಲ್ಲಿ, ಕೊರೆದ ಗೆರೆಚಿತ್ರಗಳಿಂದ ಅಲಂಕರಿಸಿದ, ಒರಟಾದ, ಬೂದು ಮತ್ತು ಕೆಂಪುಬಣ್ಣಗಳ ಮೃಣ್‍ಪಾತ್ರೆಗಳನ್ನು ಉಪಯೋಗಿಸುತ್ತಿದ್ದ ಜನರಿದ್ದರು. ಹರಪ್ಪ ನಾಗರಿಕತೆಯ ತರುವಾಯ ಅನುಕ್ರಮವಾಗಿ ವಿಶೇಷ ಹೊಳಪುಳ್ಳ ಕೆಂಪು ಮೃಣ್‍ಪಾತ್ರೆಗಳನ್ನು, ಬಿಳಿ ಬಣ್ಣದ ರೇಖಾಚಿತ್ರಗಳುಳ್ಳ ಕಪ್ಪು – ಕೆಂಪು ವರ್ಣದ ಪಾತ್ರೆಗಳನ್ನು ಹಾಗೂ ಕಬ್ಬಿಣವನ್ನು, ಅನಂತರ ವಿಶೇಷ ಹೊಳಪುಳ್ಳ ಕಪ್ಪು ವರ್ಣದ ಪಾತ್ರೆಗಳನ್ನು (ನಾರ್ದರನ್ ಬ್ಲಾಕ್ ಪಾಲಿಷ್ಡ್ ವೇರ್) ಉಪಯೋಗಿಸುತ್ತಿದ್ದ ಜನ ಇಲ್ಲಿ ನೆಲೆಸಿದ್ದರು.

ಸೂಕ್ಷ್ಮಶಿಲಾಯುಗದ ಅನಂತರದ ಈ ವಿವಿಧ ಸಂಸ್ಕೃತಿಗಳು ಅನುಕ್ರಮವಾಗಿ ಪ್ರ.ಶ.ಪೂ. 2000–100ರವರೆಗೆ ಬೆಳೆದು ನಶಿಸಿಹೋದುವು. ಇವುಗಳಲ್ಲಿ ಮುಖ್ಯವಾಗಿ ಹರಪ್ಪ ನಾಗರಿಕತೆ ಪ್ರ.ಶ.ಪೂ. 2000–1700ರವರೆಗೆ ಊರ್ಜಿತವಾಗಿತ್ತು. ಗಿರ್ನಾರದಲ್ಲಿರುವ ಅಶೋಕನ ಕಲ್ಲುಬಂಡೆ ಶಾಸನವೇ ಮುಂತಾದ ಐತಿಹಾಸಿಕ ಆಧಾರಗಳಿಂದ ಪ್ರ.ಶ.ಪೂ 3ನೆಯ ಶತಮಾನದಲ್ಲಿ ಗುಜರಾತು ಮೌರ್ಯ ಸಾಮ್ರಾಜ್ಯಕ್ಕೆ ಸೇರಿತ್ತೆಂದು ಹೇಳಬಹುದು. ಇಲ್ಲಿ ಇತಿಹಾಸಯುಗ ಪ್ರಾರಂಭವಾಯಿತು. **(ಎ.ಎಸ್)**

**2. ಇತಿಹಾಸ :** ಅಥರ್ವವೇದ ಹಾಗೂ ಐತರೇಯ ಬ್ರಾಹ್ಮಣಗಳಲ್ಲಿ ಭಾರತವನ್ನು ಐದು ಭಾಗಗಳಾಗಿ – ಪ್ರಾಚ್ಯ, ದಕ್ಷಿಣ, ಪ್ರತೀಚಿ, ಉದೀಚಿ, ಮತ್ತು ಧ್ರುವಾಮಧ್ಯಮಾ ಎಂದು – ವಿಂಗಡಿಸಲಾಗಿದೆ. ಇದರಲ್ಲಿ ಪ್ರತೀಚಿ ಅಥವಾ ಪಶ್ಚಿಮ ಭಾಗಕ್ಕೆ ಅಪರಾಂತ

ವೆಂಬ ಹೆಸರೂ ಇದೆ. ಪ್ರ.ಶ.ಪೂ 6ನೆಯ ಶತಮಾನದಿಂದ ಮೌರ್ಯರ ಕಾಲದ ಅಂತ್ಯದವರೆಗೂ ಉಜ್ಜಯಿನಿಯಿಂದ ಸಿಂಧಿನ ಮತ್ತು ಸಿಂಧಿನಿಂದ ಸುರ್ಪಾರಕದ (ಸೋಪಾರಾ) ವರೆಗಿನ ಭಾಗಕ್ಕೆ ಅಪರಾಂತವೆಂಬ ಹೆಸರಿತ್ತು. ಅನಂತರ ಮಾಹೆಯಿಂದ ಗೋವದವರೆಗಿನ ಭಾಗಕ್ಕೂ ಈ ಹೆಸರೂ ಹಲವು ಬಾರಿ ಅನ್ವಯವಾಗುತ್ತಿತ್ತು. ಪ್ರ.ಶ.ಪೂ 1ನೆಯ ಶತಮಾನದ ಬಳಿಕ ಲಾಟ, ಉತ್ತರ, ಮತ್ತು ದಕ್ಷಿಣ ಕೊಂಕಣ ಪ್ರದೇಶಗಳನ್ನೊಳಗೊಂಡ ಭಾಗಕ್ಕೆ ಅಪರಾಂತವೆಂಬ ಹೆಸರಾಯಿತು. ಅನಂತರ ಈ ಪ್ರದೇಶಗಳಿಗೆ ಬೇರೆ ಬೇರೆ ಹೆಸರುಗಳು ಬಂದುವಾದರೂ ಈಗಿನ ಗುಜರಾತಿನ ಪ್ರದೇಶದಲ್ಲಿ ಹಿಂದೆ ಆನರ್ತ, ಸೌರಾಷ್ಟ್ರ ಮತ್ತು ಲಾಟವೆಂಬ ಮೂರು ಭೌಗೋಳಿಕ ಭಾಗಗಳಿದ್ದುವು. ಆನರ್ತವೆಂಬುದು ಗುಜರಾತಿನ ಉತ್ತರ ಭಾಗ. ಇದರ ರಾಜಧಾನಿ ಕುಶಸ್ಥಲೀ ಎಂದು ಮಹಾಭಾರತದಲ್ಲಿ ಹೇಳಿದೆ. ಈ ನಗರ ನಾಶವಾದ ಬಳಿಕ ದ್ವಾರಕಾನಗರವನ್ನು ಹೊಸದಾಗಿ ಸ್ಥಾಪಿಸಲಾಯಿತೆಂದೂ ಅದು ಯಾದವರ ರಾಜಧಾನಿಯಾಯಿತೆಂದೂ ದ್ವಾರಕಾ ಮತ್ತು ಪ್ರಭಾಸಗಳೆರಡೂ ಸೌರಾಷ್ಟ್ರದಲ್ಲಿದ್ದುವೆಂದು ಆ ಗ್ರಂಥದಲ್ಲಿಯೇ ಹೇಳಿದೆ. ಇದರಿಂದ ಬಹುಶಃ ರುದ್ರದಾಮನ ಕಾಲಕ್ಕೂ ಹಿಂದೆ ಸೌರಾಷ್ಟ್ರ ಹಾಗೂ ಗುಜರಾತಿನ ಉತ್ತರ ಭಾಗಗಳು ಕೂಡಿ ಆನರ್ತವಾಗಿದ್ದುವೆಂದು ಊಹಿಸಬಹುದು. ರುದ್ರದಾಮನ ಜುನಾಗಢ ಶಾಸನದಲ್ಲಿ ಆನರ್ತ ಎಂಬ ಹೆಸರೇ ಉಲ್ಲೇಖಿಸಲ್ಪಟ್ಟಿದೆ. ಆನರ್ತದ ಮುಖ್ಯಪಟ್ಟಣ ಆನಂದ (ಆನರ್ತ್ತ) ಪುರ, ಈಗಿನ ವಡ್ನಗರ. ಸೌರಾಷ್ಟ್ರವೆಂಬುದು ಈಗಿನ ಕಾಠಿಯಾವಾಡಕ್ಕೆ 18ನೆಯ ಶತಮಾನದವರೆಗೂ ಇದ್ದ ಹೆಸರು. ಈ ಹೆಸರು ಸುರಠ ಎಂಬ ಹೆಸರಿನಿಂದ ಬಂದಿರಬಹುದೆಂದೂ ಅಭಿಪ್ರಾಯಪಡಲಾಗಿದೆ. ಈಚೆಗೆ ಕಾಠಿಯಾವಾಡದ ದಕ್ಷಿಣ ಭಾಗವನ್ನು ಮಾತ್ರ ಸೊರಠ್ ಎಂದು ಕರೆಯುತ್ತಾರೆ. ಸ್ವಾಭಾವಿಕ ಸಂಪತ್ತಿನಿಂದ ಕೂಡಿದ ಈ ಭಾಗಕ್ಕೆ ಈ ಹೆಸರು ಅನ್ವರ್ಥನಾಮವಾಗಿದೆ. ಮಾಹಿಯಿಂದ ತಾಪಿ ನದಿಯವರೆಗಿನ ಗುಜರಾತಿನ ಪ್ರದೇಶಕ್ಕೆ ಲಾಟ ಎಂಬ ಹೆಸರಿದೆ. ಮೊದಲಬಾರಿಗೆ ಟಾಲೆಮಿ ಇದನ್ನು ಲಾರಿಕೆ ಎಂದಿದ್ದಾನೆ. ಮೂರನೆಯ ಶತಮಾನದ ಬಳಿಕ ಈ ಹೆಸರು ಹೆಚ್ಚಾಗಿ ಬಳಕೆಗೆ ಬಂತು.

ವಿಷ್ಣುಪುರಾಣದಲ್ಲಿ ಸೌರಾಷ್ಟ್ರವನ್ನು ಕುರಿತಾದ ಕಥೆಯೊಂದಿದೆ. ಅದರಂತೆ ಆನರ್ತ್ತ ಎಂಬ ದೊರೆ ಕುಶಸ್ಥಲೀ ರಾಜಧಾನಿಯಿಂದ ಆಳುತ್ತಿದ್ದ. ಆನರ್ತ್ತ ಸಹ ಇವನ ರಾಜ್ಯದ ಒಂದು ಭಾಗವಾಗಿತ್ತು. ಇವನ ಮಗ ರೇವತನ ಮೊಮ್ಮಗಳು ರೇವತಿ. ಈಕೆ ಯಾದವ ವಂಶದ ಅರಸನಾದ ದ್ವಾರಕೆಯ ಬಲದೇವನ ಪತ್ನಿ. ಇವಳ ತಂದೆಯಾದ ರೈವತನನ್ನು ಬಲದೇವ ಸೋಲಿಸಿ ಸೌರಾಷ್ಟ್ರದ ಅಧಿಪತಿಯಾದ. ಆದರೆ ಪುರಾಣದಲ್ಲಿ ಈ ಕತೆ ಬೇರೆಯಾಗಿದೆ. ಯಾದವ ವಂಶದಲ್ಲಿ ಜನಿಸಿದವನು ಕೃಷ್ಣ ಬಲದೇವರ ತಂದೆಯಾದ ವಸುದೇವ. ಕಂಸನ ಮರಣಾನಂತರ ಅವನ ಮಾವನಾದ ಜರಾಸಂಧನ ಉಪಟಳವನ್ನು ತಡೆಯಲಾರದೆ ಅವರು ಮಧುರೆಯನ್ನು ಬಿಟ್ಟು ಆನರ್ತ್ತ ದೇಶದಲ್ಲಿ ದ್ವಾರಕೆಯನ್ನು ನಿರ್ಮಿಸಿದರು. ಸೌರಾಷ್ಟ್ರದಲ್ಲಿ ಆಳಿದ ಯಾದವರು ಅಂತಃಕಲಹಗಳ ಪರಿಣಾಮವಾಗಿ ಮಹಾಭಾರತದ ಯುದ್ಧ ಮುಗಿದ 36 ವರ್ಷದೊಳಗಾಗಿಯೇ ತಮ್ಮ ರಾಜ್ಯವನ್ನು ಕಳೆದುಕೊಂಡರು. ನಿರ್ಜನವಾದ ದ್ವಾರಕೆಯನ್ನು ಸಮುದ್ರ ನುಂಗಿತಂತೆ.

ಇದು ಗುಜರಾತಿಗೆ ಸಂಬಂಧಿಸಿದ ಪುರಾಣಕತೆ. ಆದರೆ ನಮಗೆ ತಿಳಿದಂತೆ ಇದರ ರಾಜಕೀಯ ಇತಿಹಾಸ ಆರಂಭವಾಗುವುದು ಮೌರ್ಯರ ಕಾಲದಿಂದಲೇ. ಆ ವಂಶದ ಚಂದ್ರಗುಪ್ತ ಸೆಲ್ಯೂಕಸನನ್ನು ಸೋಲಿಸಿದ ಬಳಿಕ ಕಾಠಿಯಾವಾಡವನ್ನು ಸ್ವಾಧೀನಪಡಿಸಿಕೊಂಡು ಆ ಪ್ರಾಂತ್ಯದ ಆಡಳಿತಕ್ಕೆ ತನ್ನ ಅಧಿಕಾರಿಗಳನ್ನು ನೇಮಿಸಿದ. ವೈಶ್ಯ ಪುಷ್ಯಗುಪ್ತ ಇವನಿಂದ ಹಾಗೆ ನೇಮಿತವಾದ ಒಬ್ಬ ರಾಷ್ಟ್ರೀಯ (ಪ್ರಾಂತ್ಯಾಧಿಕಾರಿ). ಜುನಾಗಢದ ಸುದರ್ಶನ ಸರೋವರವನ್ನು ಕಟ್ಟಿಸಿದವನೀತನೇ. ಆದರೂ ಇಲ್ಲಿ ಆಳುತ್ತಿದ್ದ ಒಂದು ಅರಸುಮನೆತನ ಮೌರ್ಯರ ಅಧೀನತೆಯನ್ನು ಒಪ್ಪಿಕೊಂಡಿತ್ತೆಂದೂ ಬಿಂದುಸಾರನ ಆಳ್ವಿಕೆಯ 16ನೆಯ ವರ್ಷದಲ್ಲಿ ಆ ಮನೆತನದ ಪಿಂಗಲ ಪಟ್ಟಕ್ಕೆ ಬಂದನೆಂದೂ ಹೇಳಿದೆ. ಅಶೋಕನ ಕಾಲದಲ್ಲಿ ಯವನರ ತುಶಾಷ್ಪ ಇಲ್ಲಿಯ ಪ್ರಾಂತ್ಯಾಧಿಕಾರಿಯಾಗಿದ್ದ. ಅಶೋಕನ 14 ಬಂಡೆ ಶಾಸನಗಳು ಜುನಾಗಢದಲ್ಲಿ ದೊರೆತಿವೆ. ಮೌರ್ಯರ ಅವನತಿಯ ಕಾಲದಲ್ಲಿ ಅವರ ಸಾಮ್ರಾಜ್ಯದ ಇತರ ಭಾಗಗಳು ಬೇರೆಯವರ ಅಧೀನವಾದರೂ ಕಾಠಿಯವಾಡದ ಭಾಗದಲ್ಲಿ ಆ ವಂಶದ ಅರಸನೊಬ್ಬ ಆಳುತ್ತಿದ್ದನೆಂದು ತೋರುತ್ತದೆ. ಅನಂತರ ವಾಯವ್ಯದಿಂದ ಗ್ರೀಕರು ಮತ್ತು ಪಾರ್ಥಿಯನರು ಈ ಭಾಗದಲ್ಲಿ ಕೆಲಕಾಲ ಅಧಿಕಾರ ನಡೆಸಿದರು. ಗ್ರೀಕರ ರಾಜ ಡೆಮಿಟ್ರಿಯೆಸ್‌ನ ಇಬ್ಬರು ಸೇನಾನಿಗಳು ಭಾರತದ ಮೇಲೆ ಧಾಳಿ ಮಾಡಿದರು. ಅಪೋಲೊಡೋಟಸ್ (ಪ್ರ.ಶ.ಪೂ 175 – ಪ್ರ.ಶ.ಪೂ 156) ಅವರಲ್ಲೊಬ್ಬ, ಅವನ ಬಳಿಕ ಮಿನಾಂಡರ್, ಅನಂತರ ಇವನ ಮಗನಾದ 1ನೆಯ ಸೋತರ್ ಈ ಪ್ರದೇಶವನ್ನು ಆಳಿದರು. ಸೋತರನ ಕಾಲದಲ್ಲಿ ಅವನ ಅಧೀನದಲ್ಲಿ ಸತ್ರಪನಾದ (ಕ್ಷತ್ರಪ) ಇಮ್ಮಡಿ ಅಪೋಲೊಡೋಟಸ್ ಕಾಠಿಯಾವಾಡದಲ್ಲಿ ಅಧಿಕಾರ ನಡೆಸಿದ.

ಕ್ಷತ್ರಪ ಎಂಬುದು ಪ್ರಾಂತ್ಯಾಧಿಕಾರಿಯ ಬಿರುದು. ಇದೆ ಮುಂದೆ ಉತ್ತರದಲ್ಲಿ ಸ್ವತಂತ್ರವಾಗಿ ಆಳಿದ ಮನೆತನಗಳ ಹೆಸರೂ ಆಯಿತು. ಅಂತೆಯೇ ಉಜ್ಜಯಿನಿಯನ್ನು ರಾಜಧಾನಿಯಾಗಿ ಮಾಡಿಕೊಂಡು ಮಾಳವ, ಕಾಠಿಯಾವಾಡ ಮತ್ತು ಗುಜರಾತಗಳಲ್ಲಿ ಆಳತೊಡಗಿದ ಕ್ಷತ್ರಪರು ಭೂಮಕ ಮತ್ತು ನಹಪಾಣರು. ಇವರು ಕ್ಷಹರಾತ ಕುಲಕ್ಕೆ ಸೇರಿದವರು. ನಹಪಾಣನ ರಾಜ್ಯ ನಾಸಿಕದಿಂದ ಸೂರ್ಪಾರಕದವರೆಗೂ ಹಬ್ಬಿತ್ತು. ಆದರೆ ಇವನನ್ನು ಶಾತವಾಹನ ಕುಲದ ಗೌತಮೀಪುತ್ರ ಶಾತಕರ್ಣಿ ಸೋಲಿಸಿ, ಅಶಿಕ, ಅಸಕ, ಮುಲಕ, ಸುರಠ, ಕುಕರ, ಅಪರಾಂತ ಮುಂತಾದ ಪ್ರದೇಶಗಳನ್ನು ಗೆದ್ದುಕೊಂಡ. ಆದರೆ ಸುರಾಷ್ಟ್ರ, ಮಾಳವ ಮತ್ತು ಗುಜರಾತ್‌ಗಳ ಮೇಲೆ ಶಾತಕರ್ಣಿಯ ಹಿಡಿತ ಕ್ರಮೇಣ ಸಡಿಲವಾಯಿತು. ಕ್ಷತ್ರಪರಾದ ಚಷ್ಟನ ಮತ್ತು ರುದ್ರದಾಮರು ಶಾತಕರ್ಣಿಯನ್ನೂ ಸೋಲಿಸಿ ಈ ಪ್ರದೇಶಗಳನ್ನು ತಮ್ಮ ಅಧೀನಕ್ಕೆ ತಂದುಕೊಂಡರು. ರುದ್ರದಾಮನ ಕೈಕೆಳಗಿನ ಪ್ರಾಂತ್ಯಾಧಿಕಾರಿಯಾಗಿ ಸೌರಾಷ್ಟ್ರ, ಆನರ್ತ್ತ ಪ್ರದೇಶಗಳನ್ನು ಪಹ್ಲವ ಕುಲೈಪನ ಮಗನಾದ ಸುವಿಶಾಖ ಆಳುತ್ತಿದ್ದ. ಈತನ ಕಾಲದಲ್ಲಿ ಪ್ರವಾಹದ ಹಾವಳಿಯಿಂದ ಒಡೆದು ಹಾಳಾದ ಸುದರ್ಶನ ಸರೋವರವನ್ನು ಮತ್ತೊಮ್ಮೆ ಜೀರ್ಣೋದ್ಧಾರ ಮಾಡಲಾಯಿತು.

ರುದ್ರದಾಮನ ಬಳಿಕ ಅವನ ಮಗ ದಾಮಘಸದ ಆಳಿದ. ಅವನ ಬಳಿಕ ಅವನ ಮಕ್ಕಳಲ್ಲಿ ಅಂತಃಕಲಹಗಳುಂಟಾಗಿ, ಸೇನಪತಿಗಳಾಗಿದ್ದ ಆಭೀರರು ಕೊನೆಗೆ ಈ ಭಾಗದ ಅರಸರಾದರು. 236 – 239ರಲ್ಲಿ ಇಲ್ಲಿ ಆಳಿದ ಈಶ್ವರದತ್ತ ಆಭೀರ ಕುಲದವರು. 4ನೆಯ ಶತಮಾನದಲ್ಲಿ ಶಕರ ಆಳ್ವಿಕೆಗೊಳಪಟ್ಟ ಈ ಪ್ರದೇಶದ ಮೇಲೆ ಗುಪ್ತರ ಇಮ್ಮಡಿ ಚಂದ್ರಗುಪ್ತ ದಂಡೆತ್ತಿ ಶಕರ 3ನೆಯ ರುದ್ರಸಿಂಹನನ್ನು ಸೋಲಿಸಿ ಅವನ ರಾಜ್ಯವನ್ನು ತನ್ನ ಅಧೀನಕ್ಕೆ ತಂದುಕೊಂಡ. ಸ್ಕಂದಗುಪ್ತನ ಕಾಲದಲ್ಲಿ ಸುರಾಷ್ಟ್ರ ಪ್ರಾಂತ್ಯವನ್ನು ಅವನ ಅಧಿಕಾರಿಯಾದ ಪರ್ಣದತ್ತ ಆಳುತ್ತಿದ್ದ. ಇವನ ಅನಂತರ ಇವನ ಕೈಕೆಳಗಿನ ಭಟಾರ್ಕ ಇಲ್ಲಿ ಆಳತೊಡಗಿದ. ಈತ ಮೈತ್ರಕ ವಂಶಕ್ಕೆ ಸೇರಿದವನು. ವಲ್ಲಭಿನಗರವನ್ನು ಈತ ಸ್ಥಾಪಿಸಿ ಅದನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡ. ಜುನಾಗಢ (ಗಿರಿನಗರ) ತನ್ನ ಮೊದಲಿನ ಖ್ಯಾತಿಯನ್ನು ಕಳೆದುಕೊಂಡಿತು. ಹೊಸದಾಗಿ ಕಟ್ಟಿದ ವಲ್ಲಭಿನಗರದ ಹೆಸರಿನಲ್ಲಿ ವಲ್ಲಭಿಶಕೆ ಎಂಬ ಒಂದು ಕಾಲಗಣನೆ ಆರಂಭವಾಗಿ ಅದು ಮೈತ್ರಕರ ಶಾಸನಗಳಲ್ಲಿ ಉಕ್ತವಾಗಿದೆ. ವಲ್ಲಭಿ ಶಕೆ ಮತ್ತು ಗುಪ್ತರ ಶಕೆ ಎರಡೂ ಒಂದೇ ಎಂದೂ ಈ ಎರಡರ ಮೊದಲ ವರ್ಷ ಪ್ರ. ಶ. 319 ಎಂದೂ ಅನೇಕರು ಅಭಿಪ್ರಾಯಪಟ್ಟಿದ್ದಾರಾದರೂ ಇದಿನ್ನೂ ಸರ್ವಸಮ್ಮತವಾಗಿಲ್ಲ.

ಸು. 472ರಲ್ಲಿ ಭಟಾರ್ಕನಿಂದ ಆರಂಭವಾದ ಮೈತ್ರಕ ವಂಶದ ಅರಸರು ಮೂರು ಶತಮಾನಗಳ ಕಾಲ – 776 ರವರೆಗೆ – ವಲ್ಲಭಿಯನ್ನು ರಾಜಧಾನಿಯಾಗಿ ಮಾಡಿಕೊಂಡು ಆಳಿದರು. ಆರಂಭದಲ್ಲಿ ಇವರು ಗುಪ್ತರ ಸಾಮಂತರಾಗಿದ್ದರು. ಅನಂತರ ವಾಕಾಟಕರ ಅಧೀನತೆಯನ್ನು ಒಪ್ಪಿದರು. ವಾಕಾಟಕ ಹರಿಷೇಣನ ಮಗಳಾದ ಚಂದ್ರಲೇಖೆಯನ್ನು ಮೈತ್ರಕ 1ನೆಯ ಧ್ರುವಸೇನ ಮದುವೆಯಾಗಿದ್ದ. ಹರಿಷೇಣನ ಉತ್ತರಾಧಿಕಾರಿಯನ್ನು ಮಂಡಸರಸ್ತಂಭ ಶಾಸನದ ಮಾಳವದ ಯಶೋಧರ್ಮ ಸೋಲಿಸಿ ಧ್ರುವಸೇನನನ್ನು ತನ್ನ ದಂಡನಾಯಕನಾಗಿ ನೇಮಿಸಿಕೊಂಡಂತೆ ತೋರುತ್ತದೆ. ಆದರೆ ಯಶೋಧರ್ಮನ ವಿಜಯ ಕ್ಷಣಿಕವಾದ್ದಾಗಿದ್ದು ಧ್ರುವಸೇನ ಪುನಃ ಮಹಾರಾಜ, ಮಹಾಸಾಮಂತ ಎಂಬ ತನ್ನ ಮೊದಲಿನ ಬಿರುದುಗಳನ್ನೇ ಧರಿಸಿದ. ಇವನ ಆಳ್ವಿಕೆಯ ಕಾಲದಲ್ಲಿ ಸು. 525ರಲ್ಲಿ ವಲ್ಲಭಿನಗರದಲ್ಲಿ ಜೈನರ ಮಹಾಸಭೆಯೊಂದು ನೆರೆದಿತ್ತು. ಇಮ್ಮಡಿ ಧರಸೇನನ (569 – 589) ಕಾಲದಲ್ಲಿ ಮೌಖರಿ ಕುಲದ ಈಶಾನವರ್ಮ ಮೈತ್ರಕರನ್ನು ಸೋಲಿಸಿದ. ಧರಸೇನನ ತಂದೆಯಾದ ಗುಹಸೇನ ಮಹಾರಾಜನೆಂದು ಬಿರುದಾಂಕಿತನಾಗಿದ್ದ. ಆದರೆ ಆಗ ಈತ ಪುನಃ ಮಹಾಸಾಮಂತ ಪದವಿಯಲ್ಲೇ ತೃಪ್ತಿಗೊಳ್ಳಬೇಕಾಯಿತು. ಆದರೆ ಇವನ ಮಗ 1ನೆಯ ಶೀಲಾದಿತ್ಯನ (590–615) ಕಾಲದಲ್ಲಿ ಇವನ ರಾಜ್ಯ ವಿಸ್ತಾರಗೊಂಡು ಪೂರ್ವ ಮಾಳವ ಸಹ ಇವರಿಗೆ ಸೇರಿತ್ತೆಂದು ತಿಳಿದುಬರುತ್ತದೆ. ಯುವಾನ್‌ಚಾಂಗ್ ನಮೂದಿಸಿರುವ ಮೊ ಲ ಪೊದ (ಮಾಳವ) ಶೀಲಾದಿತ್ಯ ಇವನೇ ಎಂದು ಹಲವರು ಸೂಚಿಸಿದ್ದಾರೆ. ಅಂದು ಮಾಳವದ ಅರಸನಾಗಿದ್ದ ದೇವಗುಪ್ತನಿಗೂ ಕಳಚುರಿಗಳಿಗೂ ಹೋರಾಟಗಳಾದವು. ಆ ಕಲಹದಲ್ಲಿ ಅನಂತರ ಕನೌಜಿನ ಶ್ರೀಹರ್ಷನೂ ಗೌಡ ದೇಶದ ಶಶಾಂಕನೂ ಪಾಲುಗೊಂಡಿದ್ದರು. ಶೀಲಾದಿತ್ಯ ಆ ಸಂದರ್ಭದಲ್ಲಿ ಶಶಾಂಕನ ಬೆಂಬಲಿಗನಾಗಿದ್ದ ಕಾರಣ ದೇವಗುಪ್ತನ ಮರಣಾನಂತರ ಹರ್ಷ ಮಾಳವವನ್ನು ಆಕ್ರಮಿಸದೆ ಅದು ಶೀಲಾದಿತ್ಯನ ಕರಗತವಾಯಿತೆಂದು ಊಹಿಸಲಾಗಿದೆ. ಆದರೆ ಶಶಾಂಕ ಸತ್ತ ಕೂಡಲೇ ಶ್ರೀಹರ್ಷ ಮೈತ್ರಕರ ಮೇಲೆರಿ

ಹೋಗಿ ಮಾಳವನನ್ನು ಕಸಿದುಕೊಂಡ. ಇದು ನಡೆದದ್ದು ಇಮ್ಮಡಿ ಧ್ರುವಸೇನ ಬಾಲಾದಿತ್ಯನ ಆಳ್ವಿಕೆಯ ಕಾಲದಲ್ಲಿ (ಸು. 627–641) ಎಂದು ಊಹಿಸಲಾಗಿದೆ. ಈ ಸಂದರ್ಭದಲ್ಲಿ ಬಾಲಾದಿತ್ಯ ಗೂರ್ಜರಾಧಿಪತಿಯಾದ ನಾಲ್ಕನೆಯ ದದ್ದನ ಆಶ್ರಯಪಡೆದನೆಂದೂ ಈ ಇಬ್ಬರೂ ಕರ್ನಾಟಕದಲ್ಲಿ ಆಳುತ್ತಿದ್ದ ಚಳುಕ್ಯ ಇಮ್ಮಡಿ ಪುಲಕೇಶಿಯ ಸಾಮಂತಿಕೆಯನ್ನು ಒಪ್ಪಿದ್ದರೆಂದೂ ಇವರಿಂದ ಸ್ವಲ್ಪಮಟ್ಟಿಗೆ ಹೆದರಿದ ಶ್ರೀಹರ್ಷ ತನ್ನ ಮಗಳನ್ನು ಬಾಲಾದಿತ್ಯನಿಗೆ ವಿವಾಹ ಮಾಡಿಕೊಟ್ಟು ಅವನನ್ನು ತನ್ನ ಸಾಮಂತನಾಗಿ ಮಾಡಿಕೊಂಡನೆಂದೂ ಹೇಳಲಾಗಿದೆ.

ನಾಲ್ಕನೆಯ ಧರಸೇನ (641 – 650) ಮೈತ್ರಕರಲ್ಲೆಲ್ಲ ಅತ್ಯಂತ ಪ್ರಸಿದ್ಧನಾದ ದೊರೆ. ಈತ ಮಹಾರಾಜಾಧಿರಾಜ, ಪರಮೇಶ್ವರ ಚಕ್ರವರ್ತಿ ಇತ್ಯಾದಿ ಸಾರ್ವಭೌಮ ಸೂಚಕ ಬಿರುದುಗಳನ್ನು ಪಡೆದಿದ್ದ. 642ರ ಬಳಿಕ ಕೆಲವು ಕಾಲ ಬಾದಾಮಿಯ ಚಳುಕ್ಯರ ಬಲ ಗ್ರಹಣ ಪೀಡಿತವಾಗಿದ್ದ ಸಮಯದಲ್ಲಿ ಅವರ ಸಾಮಂತರಾಗಿದ್ದ ಗೂರ್ಜರರನ್ನು ಧರಸೇನ ಸೋಲಿಸಿ ಭರುಕಚ್ಛವನ್ನು ಆಕ್ರಮಿಸಿದ. ಶ್ರೀಹರ್ಷನ ಮರಣಾನಂತರ ಅವನಿಗೆ ಗಂಡು ಸಂತತಿ ಇಲ್ಲದ ಕಾರಣ ಧರಸೇನನೇ ಪುಷ್ಪಭೂತಿ ರಾಜ್ಯದ ಉತ್ತರ ಆಧಿಕಾರಿಯಾದನೆಂದೂ ಇದು ಇವನ ಸಾರ್ವಭೌಮ ಪದವಿಗೆ ನಿಮಿತ್ತವಾಯಿತೆಂದೂ ಹಲವರು ಸೂಚಿಸಿದ್ದಾರಾದರೂ ಇದು ಸಂದೇಹಾಸ್ಪದವೇ.



ಮೈತ್ರಕರ ತಾಮ್ರಮುದ್ರೆ

ಚಳುಕ್ಯ 1ನೆಯ ವಿಕ್ರಮಾದಿತ್ಯ ತನ್ನ ತಂದೆಯ ರಾಜ್ಯವನ್ನು ಪುನಃ ಪ್ರತಿಷ್ಠಾಪಿಸಿ ಅದು ತನ್ನ ಹಿಂದಿನ ಯಶಸ್ಸನ್ನು ಗಳಿಸಲು ಶ್ರಮಿಸಿದ. ಇದರ ಪರಿಣಾಮವಾಗಿ ಮೈತ್ರಕರ ಬಲವೂ ಕುಗ್ಗಿತು. ಮುಮ್ಮಡಿ ಧ್ರುವಸೇನ (650 – 55) ದಕ್ಷಿಣ ಗುಜರಾತಿನ ಪ್ರದೇಶಗಳನ್ನು ಪುನಃ ಕಳೆದುಕೊಂಡ. ಚಳುಕ್ಯರ ಸಾಮಂತನಾದ ಅಲ್ಲಶಕ್ತಿ ಪೃಥ್ವಿವಲ್ಲಭ ಇಲ್ಲಿಯ ಪ್ರಾಂತ್ಯಾಧಿಕಾರಿಯಾಗಿ ನಿಯಮಿತನಾದ. ಅನಂತರ ಆಳಿದ ಮೈತ್ರಕರು ಕಳೆದುಹೋದ ತಮ್ಮ ರಾಜ್ಯದ ಭಾಗಗಳನ್ನು ಪುನಃ ಪಡೆಯಲು ಯತ್ನಿಸಿದರಾದರೂ ಅವರಿಗೆ ಹೆಚ್ಚಿನ ಯಶಸ್ಸು ದೊರೆಯಲಿಲ್ಲ. ಚಳುಕ್ಯ ವಿನಯಾದಿತ್ಯ ತನ್ನ ಉತ್ತರ ದಂಡಯಾತ್ರೆಯ ಸಮಯದಲ್ಲಿ ಮಾಳವವನ್ನು ಆಕ್ರಮಿಸಿದನೆಂದು ಹೇಳಿದೆ. ಆಗ ಅಲ್ಲಿ ಆಳುತ್ತಿದ್ದವರು ಮೈತ್ರಕರೇ ಆದ ಕಾರಣ ಚಳುಕ್ಯರ ಸಾಮಂತಿಕೆಯನ್ನು 3 ನೆಯ ಶೀಲಾದಿತ್ಯ ಒಪ್ಪಬೇಕಾಯಿತೆಂದೂ ತೋರುತ್ತದೆ. ಈ ಮಧ್ಯೆ ಅರಬರ ಸೈನ್ಯ ಜುನೈದನ ನೇತೃತ್ವದಲ್ಲಿ ಗುಜರಾತಿನ ಕರಾವಳಿಯನ್ನು ಮುತ್ತಿ ಅಲ್ಲಿ ಆಳುತ್ತಿದ್ದ ಗೂರ್ಜರ, ಮೈತ್ರಕ ಇತ್ಯಾದಿ ಅರಸರನ್ನು ತೊಂದರೆಗೀಡು ಮಾಡಿತು. 4ನೆಯ ಹಾಗೂ 5ನೆಯ ಶೀಲಾದಿತ್ಯರು ಇವರ ಧಾಳಿಗಳನ್ನು ಎದುರಿಸ ಬೇಕಾಯಿತು. ಆದರೆ ಮೈತ್ರಕರ ಆಳ್ವಿಕೆ ಬಹುಕಾಲ ಮುಂದುವರಿಯಲು ಸಾಧ್ಯವಿರಲಿಲ್ಲ. ಮಾಳವ, ಗುಜರಾತ್ ಪ್ರದೇಶಗಳಲ್ಲಿ ರಾಷ್ಟ್ರಕೂಟರೂ, ಗೂರ್ಜರ ಪ್ರತೀಹಾರರೂ ತಲೆ ಎತ್ತಿದರು. ರಾಷ್ಟ್ರಕೂಟರು ಕ್ರಮೇಣ ಬಾದಾಮಿಯ ಚಳುಕ್ಯರನ್ನು ಸೋಲಿಸಿ ಅವರ ರಾಜ್ಯವನ್ನು ಕಸಿದುಕೊಂಡರು. ಮೈತ್ರಕರು ಗೂರ್ಜರ – ಪ್ರತೀಹಾರರ ವಿರೋಧ ವನ್ನೆದುರಿಸಲಾರದೆ ಹೋದರು. ಕೊನೆಗೆ ಅವರ ರಾಜ್ಯವನ್ನು ಆ ಶತ್ರುಗಳು ಕಬಳಿಸಿದರು. ಆರನೆಯ ಶೀಲಾದಿತ್ಯನೇ ಈ ಮನೆತನದ ಕೊನೆಯ ಅರಸ (ಸು. 762 – 776).

ಭರುಕಚ್ಛದ ಸುತ್ತಲಿನ ಪ್ರದೇಶದಲ್ಲಿ ಗೂರ್ಜರ ವಂಶಕ್ಕೆ ಸೇರಿದ ಒಂದು ಶಾಖೆಯ ಅರಸರು ಕೆಲಕಾಲ ಆಳುತ್ತಿದ್ದರು. ಇವರನ್ನು ನಂದಿಪುರಿಯ (ಈಗಿನ ನಾಂದೋಡ್) ಗೂರ್ಜರರೆಂದು ಕರೆಯಲಾಗಿದೆ. ಈ ಮನೆತನದ ಮೊದಲ ಅರಸ ದದ್ದ; ರಾಜಸ್ತಾನದ ಜೋಧಪುರದಲ್ಲಿ ಆಳಿದ ಗೂರ್ಜರ ವಂಶದ ಮೂಲಪುರುಷನಾದ ಹರಿಚಂದ್ರನ ನಾಲ್ವರು ಮಕ್ಕಳಲ್ಲಿ ಕಿರಿಯವನು. ಈತ ಮೊದಲು ರಾಜಸ್ತಾನದ ದಕ್ಷಿಣದಲ್ಲಿ ಆಳ್ವಿಕೆಯನ್ನು ಆರಂಭಿಸಿ, ಕ್ರಮೇಣ, ಕಳಚುರಿಗಳ ಅವನತಿಯ ಅನಂತರ, ಭರುಕಚ್ಛವನ್ನು ಆಕ್ರಮಿಸಿರಬೇಕು. ಇವನು ಈ ರಾಜ್ಯ ವಿಸ್ತರಣೆಗಾಗಿ ಬಾದಾಮಿಯ ಚಳುಕ್ಯರ ನೆರವನ್ನು ಪಡೆದು ಅವರ ಸಾಮಂತಿಕೆಯನ್ನೂ ಒಪ್ಪಿಕೊಂಡ. ಈತನ ಮೊಮ್ಮಗ ಇಮ್ಮಡಿ ದದ್ದ ಹರ್ಷನ ಹೆದರಿಕೆಯಿಂದ ಓಡಿ ಬಂದ ವಲ್ಲಭಿಯ ಮೈತ್ರಕ ಅರಸನಿಗೆ ಆಶ್ರಯವಿತ್ತ. ಆದರೆ ಇವರೇ ಗೂರ್ಜರರ ಶತ್ರುಗಳಾಗಿ ಅವರ ರಾಜ್ಯವನ್ನು ಕಸಿಯಲು ಹವಣಿಸಿದರು. ಆದರೆ ಇದು ಸಾಧ್ಯವಾಗಲಿಲ್ಲ. ಇಮ್ಮಡಿ ದದ್ದನ ಅನಂತರ ಐದನೆಯ ತಲೆಮಾರಿನವನಾದ ನಾಲ್ವಡಿ ಜಯಭಟನೆಂಬವನು ಚಳುಕ್ಯ ಅವನಿಜನಾಶ್ರಯ ಪುಲಿಕೇಶಿ ರಾಜನ ಸಹಾಯದಿಂದ ಅರಬರನ್ನು ಹಿಮ್ಮೆಟ್ಟಿಸುವುದರಲ್ಲಿ ಯಶಸ್ವಿಯಾದ. ಈತ ನಂದಿಪುರಿಯ ಗೂರ್ಜರರ ಕೊನೆಯ ಅರಸ. 4 ನೆಯ ಶತಮಾನದ ಮಧ್ಯಭಾಗದಲ್ಲಿ ಈತನ ರಾಜ್ಯ ಮೊದಲು ಚಳುಕ್ಯರಿಂದ, ಅನಂತರ ರಾಷ್ಟ್ರಕೂಟರಿಂದ ಮುತ್ತಲ್ಪಟ್ಟು ಕೊನೆಗೆ ಅವಂತಿಯ ಪ್ರತೀಹಾರ ವಂಶದ ನಾಗಭಟನ ವಶವಾಯಿತು.

ಕಾಠಿಯಾವಾಡ ಹಾಗೂ ಉತ್ತರ ಗುಜರಾತಿನ ನಡುವಣ ಪ್ರದೇಶದಲ್ಲಿ 8ನೆಯ ಶತಮಾನದ ಆರಂಭದಿಂದ 10ನೆಯ ಶತಮಾನದ ಮಧ್ಯಭಾಗದವರೆಗೂ ಚಾಪ ಅಥವಾ ಚಾಪೋತ್ಕಟರು ಆಳಿದರು. ಇವರನ್ನು ಚಾವೋಟಕರೆಂದೂ ಚಾವಡಾರೆಂದೂ ಸಹ ಕರೆಯಲಾಗಿದೆ. ಅಣಹಿಲಪಾಟಕ ನಗರವನ್ನು (ಈಗಿನ ಪಾಟಣ) ಪಂಚಾಶರದ ಜಯಶೇಖರನ ಮಗ ವನರಾಜ 746ರಲ್ಲಿ ಕಟ್ಟಿಸಿದ. 914ರಲ್ಲಿ ಈ ಮನೆತನದ ಧರಣೀವರಾಹ ಪೂರ್ವ ಕಾಠಿಯಾವಾಡವನ್ನು ಆಳುತ್ತಿದ್ದ.

ವಡೋದರದ ಸುತ್ತಲಿನ ಪ್ರದೇಶ 6 – 7ನೆಯ ಶತಮಾನಗಳಲ್ಲಿ ಕಳಚುರಿಗಳ ಆಳ್ವಿಕೆಗೊಳಪಟ್ಟಿತ್ತು. ಆರನೆಯ ಶತಮಾನದ ಉತ್ತರ ಭಾಗದಲ್ಲಿ ಮಹಾರಾಷ್ಟ್ರದ ನಾಸಿಕ್ ಹಾಗೂ ಸುತ್ತಲಿನ ಪ್ರಾಂತ್ಯದಲ್ಲಿ ಪ್ರಾಬಲ್ಯಕ್ಕೆ ಬಂದ ಇವರು ಕ್ರಮೇಣ ಗುಜರಾತಿನ ಭಾಗಗಳನ್ನು ಆಕ್ರಮಿಸಿದರು. ಕೃಷ್ಣರಾಜ, ಶಂಕರಗಣ ಹಾಗೂ ಬುದ್ಧರಾಜರೆಂಬ ಈ ವಂಶದ ಮೂವರೂ ಅರಸರನ್ನು ಕುರಿತು ನಮಗೆ ಹೆಚ್ಚಿನ ವಿವರಗಳು ಲಭ್ಯವಾಗಿವೆ. ಆದರೆ ಬುದ್ಧರಾಜನನ್ನು ಬಾದಾಮಿ ಚಳುಕ್ಯ ಮಂಗಲೇಶ ಸೋಲಿಸಿದನೆಂದು ಮಹಾಕೂಟ ಶಾಸನದಿಂದ ತಿಳಿದಿದೆ. ಇದು ಏಳನೆಯ ಶತಮಾನದ ಆರಂಭದಲ್ಲಿ. ಹೀಗೆ ಚಳುಕ್ಯರಿಂದಲೂ ಇನ್ನೊಂದು ಕಡೆ ವಲ್ಲಭಿಯ ಮೈತ್ರಕರಿಂದಲೂ ಆಕ್ರಮಣಕ್ಕೊಳಗಾದ ಕಳಚುರಿಗಳು ಕ್ರಮೇಣ ಪೂರ್ವಾಭಿಮುಖವಾಗಿ ಸರಿದು ಜಬ್ಬಲ್ಪುರ ಪ್ರದೇಶದಲ್ಲಿ ಅಂತಿಮವಾಗಿ ನೆಲೆಸಿದರು.

ಕರ್ನಾಟಕದಲ್ಲಿ ಆಳಿದ ಚಳುಕ್ಯ ಮತ್ತು ರಾಷ್ಟ್ರಕೂಟ ವಂಶಗಳಿಗೆ ಸಂಬಂಧಿಸಿದ ಮನೆತನಗಳು ಗುಜರಾತಿನಲ್ಲಿಯೂ ಆಳಿದುವು. ಚಳುಕ್ಯ ಮನೆತನಕ್ಕೆ ಸೇರಿದವನೆಂದು ಹೇಳಲಾದ ವಿಜಯವರ್ಮರಾಜ (ಸು. 643) ಇವರಲ್ಲಿ ಮೊದಲಿಗ. ಈತ ಜಯಸಿಂಹ ರಾಜನ ಮೊಮ್ಮಗ ಹಾಗೂ ರಣವಿಕ್ರಾಂತ ಬುದ್ಧವರ್ಮ ರಾಜನ ಮಗ. ಮೂಲ ಚಳುಕ್ಯ ವಂಶದ ಅರಸರೊಡನೆ ಇವನ ಬಾಂಧವ್ಯವೆಂಥದೆಂಬುದು ತಿಳಿದಿಲ್ಲ. ಒಂದನೆಯ ಕೀರ್ತಿವರ್ಮನ ಮಗನಾದ ಧರಾಶ್ರಯ ಜಯಸಿಂಹವರ್ಮನೆಂಬುವನು ಸಹ ಗುಜರಾತಿನಲ್ಲಿ ಅಧಿಕಾರದಲ್ಲಿದ್ದನೆಂದು ಹೇಳಿದೆ. ಇಮ್ಮಡಿ ಪುಲಿಕೇಶಿಯ ಮಕ್ಕಳಲ್ಲಿ ಒಬ್ಬನಾದ ಧರಾಶ್ರಯ ಜಯಸಿಂಹವರ್ಮ ಲಾಟಮಂಡಲವನ್ನು ಆಳುತ್ತಿದ್ದ. ಇವನ ಮಗ ಶ್ರ್ಯಾಶ್ರಯಶೀಲಾದಿತ್ಯ. ಈತನಿಗೆ ಇನ್ನೂ ಇಬ್ಬರು ತಮ್ಮಂದಿರು–ವಿನಯಾದಿತ್ಯ ಯುದ್ಧಮಲ್ಲ ಜಯಾಶ್ರಯ ಮಂಗಲರಸ ಮತ್ತು ಅವನಿಜನಾಶ್ರಯ ಪುಲಕೇಶಿ – ಇದ್ದರೆಂಬುದು ಅವರ ಬಲ್ಸಾರ ಮತ್ತು ನವಸಾರಿ ತಾಮ್ರ ಶಾಸನಗಳಿಂದ ತಿಳಿದಿದೆ. ಇವರು ಸೂರತ್, ವಡೋದರ ಜಿಲ್ಲೆಗಳ ಸುತ್ತಲಿನ ಪ್ರಾಂತ್ಯವನ್ನು ಆಳುತ್ತಿದ್ದರೆಂದು ತಿಳಿದುಬಂದಿದೆ.

ಇದರಂತೆಯೇ ರಾಷ್ಟ್ರಕೂಟ ಮನೆತನಕ್ಕೆ ಸೇರಿದ ಕೆಲವು ಶಾಖೆಗಳು ಸಹ ಈ ಭಾಗದಲ್ಲಿ ಆಳುತ್ತಿದ್ದುವು. ಎಂಟನೆಯ ಶತವಾನದ ಮಧ್ಯಭಾಗದಲ್ಲಿ ರಾಹಪ್ಪನೆಂಬವನಿಂದ ಬಾದಾಮಿಯ ಚಳುಕ್ಯರ ರಾಜ್ಯವನ್ನು ಕಸಿದುಕೊಂಡ ಮೊದಲನೆಯ ಕೃಷ್ಣ ಸೋಲಿಸಿ ತನ್ನ ರಾಜ್ಯವನ್ನು ವಿಸ್ತರಿಸಿದನೆಂದು ಹೇಳಿದೆ. ಸೂರತ್ ಜಿಲ್ಲೆಯಲ್ಲಿ ದೊರೆತ ತಾಮ್ರ ಶಾಸನವೊಂದರಲ್ಲಿ ಗುಜರಾತಿನಲ್ಲಿ ಆಳಿದ ರಾಷ್ಟ್ರಕೂಟ ಮನೆತನವೊಂದರ ವಂಶಾವಳಿಯನ್ನು ಕೊಟ್ಟಿದೆ. ಅದರ ಪ್ರಕಾರ ಅವರ ಮೊದಲ ಅರಸ 1ನೆಯ ಕಕ್ಕರಾಜ; ಇವನ ಮಗ ಧ್ರುವರಾಜ; ಈತನ ಮಗ ಗೋವಿಂದರಾಜ ಮತ್ತು ಮೊಮ್ಮಗ ಇಮ್ಮಡಿ ಕಕ್ಕರಾಜ. ಈತನನ್ನೂ ಪರಮೇಶ್ವರ, ಪರಮಭಟ್ಟಾರಕ ಎಂದೆಲ್ಲ ವರ್ಣಿಸಲಾಗಿದೆ. ಈತನೇ ರಾಹಪ್ಪನಾಗಿರಬಹುದೆಂದು ಊಹಿಸಲಾಗಿದೆ.

ರಾಷ್ಟ್ರಕೂಟರ ಮುಮ್ಮಡಿ ಗೋವಿಂದ ಲಾಟಮಂಡಲವನ್ನು ಗೆದ್ದುಕೊಂಡು ಅಲ್ಲಿ ತನ್ನ ತಮ್ಮನಾದ ಇಂದ್ರರಾಜನನ್ನು ಅಧಿಕಾರದಲ್ಲಿ ಸ್ಥಾಪಿಸಿದ. ಇಂದ್ರ ಲಾಟಮಂಡಲದಲ್ಲಿ ಆಳಿದ ಇನ್ನೊಂದು ರಾಷ್ಟ್ರಕೂಟ ಮನೆತನದ ಮೊದಲ ಅರಸನಾದ.

ಈತ ತನ್ನ ಅಣ್ಣನ ಉತ್ತರದ ದಂಡಯಾತ್ರೆಯಲ್ಲಿ ಆತನಿಗೆ ಬೆಂಬಲವಾಗಿ ನಿಂತು, ಶತ್ರುಗಳಿಂದ ಆತನನ್ನು ಕಾಪಾಡಿದ. ಗೋವಿಂದ ಸಾಯುವ ಮೊದಲು ತನ್ನ ಅಲ್ಪವಯಸ್ಕ ಮಗನಾದ ಅಮೋಘವರ್ಷನ ರಕ್ಷಣೆಗಾಗಿ ಇಂದ್ರನ ಮಗ ಸುವರ್ಣವರ್ಷ ಕರ್ಕರಾಜನನ್ನು ರಾಜಪ್ರತಿನಿಧಿಯಗಿ ನೇಮಿಸಿದ (814). ಕರ್ಕ ತನ್ನ ಜವಾಬ್ದಾರಿಯನ್ನು ಯಶಸ್ವಿಯಾಗಿ ಹೊತ್ತು ಅಮೋಘವರ್ಷನನ್ನು ಸಂಕಟಗಳಿಂದ ಪಾರು ಮಾಡಿ, ಸು. 821ರಲ್ಲಿ ಆತನನ್ನು ಸಿಂಹಸನದಲ್ಲಿ ಕುಳ್ಳಿರಿಸಿದ. ಕರ್ಕನ ಮಗ ಧಾರಾವರ್ಷ ನಿರುಪಮ ಧ್ರುವರಾಜ. ಈತನ 834 – 35ರ ಶಾಸನ ಲಭ್ಯವಿದೆ. ಈತನ ಮೊಮ್ಮಗ, ಅಕಾಲವರ್ಷ ಶುಭತುಂಗನ ಮಗನಾದ ಧಾರಾವರ್ಷ ಧ್ರುವರಾಜ ಸಹ ಮಾನ್ಯಖೇಟದಲ್ಲಿ ಆಳಿದ ಅಮೋಘವರ್ಷನ ಸಮಕಾಲೀನನೇ. ಇವನ 866 – 67ರ ತಾಮ್ರ ಶಾಸನವೊಂದು ನವಸಾರಿ ಜಿಲ್ಲೆಯಲ್ಲಿ ದೊರತಿದೆ. 888ರ ಬಾಗುಮ್ರಾ ಶಾಸನದಲ್ಲಿ ಉಕ್ತನದ ಅಕಾಲವರ್ಷ ಕೃಷ್ಣರಾಜ ಇಮ್ಮಡಿ ಧ್ರುವರಾಜನ ಮೊಮ್ಮಗನೆಂದು ತೋರುತ್ತದೆ. ಈತ ವಲ್ಲಭನ ಸಮಕ್ಷದಲ್ಲಿಯೆ ಉಜ್ಜಯಿನಿಯ ಶತ್ರುಗಳನ್ನು ಸೋಲಿಸಿದನೆಂದು ಶಾಸನದಲ್ಲಿ ಹೇಳಿದೆ. ಈ ವಲ್ಲಭ ಮಾನ್ಯಖೇಟದಲ್ಲಿ ಆಳುತ್ತಿದ್ದ ರಾಷ್ಟ್ರಕೂಟ ಇಮ್ಮಡಿ ಕೃಷ್ಣನಾಗಿರಬೇಕು. ಇವರೆಲ್ಲ ತಮ್ಮ ಶಾಸನಗಳಲ್ಲಿ ಮಹಸಾಮಂತಾಧಿಪತಿಗಳೆಂದೇ ವರ್ಣಿತರಾಗಿದ್ದಾರೆ. ಇವರು ತಮ್ಮ ಸ್ವಾಮಿಯ ಬೆಂಬಲಿಗರಾಗಿ, ವಿಧೇಯರಾಗಿ ಲಾಟಮಂಡಲದಲ್ಲಿ ಆಳುತ್ತಿದ್ದರೆನ್ನಲು ಆಧಾರಗಳಿವೆ.

ಖೇಟಕ ಮಂಡಲದ (ಈಗಿನ ಖೇಡಾ ಜಿಲ್ಲೆ) ವರೆಗಿನ ದಕ್ಷಿಣ ಗುಜರಾತು ರಾಷ್ಟ್ರಕೂಟರ ಅಧೀನದಲ್ಲಿದ್ದುದನ್ನು ನೋಡಿದ್ದೇವೆ. ಧ್ರುವ, ಮುಮ್ಮಡಿ ಗೋವಿಂದ, ಮುಮ್ಮಡಿ ಇಂದ್ರರು ಉತ್ತರ ದಿಗ್ವಿಜಯವನ್ನು ಕೈಗೊಂಡು ಗೂರ್ಜರ–ಪ್ರತೀಹಾರ ಹಾಗೂ ಪಾಲರೊಡಗೂಡಿದ ತ್ರಿಕೂಟ ಸಮರದಲ್ಲಿ ಪ್ರತಿಬಾರಿಯೂ ವಿಜಯವನ್ನು ಗಳಿಸಿ ಭಾರತದಲ್ಲಿಯೇ ಅತಿ ಪ್ರಬಲ ಅರಸರೆನಿಸಿಕೊಂಡರು. ಆ ಸಂದರ್ಭದಲ್ಲಿ ಜ್ಞಾತಿಗಳೂ ಸಾಮಂತರೂ ಆಗಿದ್ದ ಗುಜರಾತಿನ ರಾಷ್ಟ್ರಕೂಟರು ಇವರಿಗೆ ನೀಡಿದ ಸಹಾಯ ಸ್ಮರಣೀಯವಾದದ್ದು.

ಇದೇ ಸಮಯದಲ್ಲಿ ಸೌರಾಷ್ಟ್ರ ಮತ್ತು ಕಚ್ಛ್ ಪ್ರದೇಶಗಳಲ್ಲಿ ಅನೇಕ ಸಣ್ಣಪುಟ್ಟ ಸಾಮಂತರು ಆಳುತ್ತಿದ್ದರು. ಚಾವೋಟಕರು ಅವರಲ್ಲಿ ಒಬ್ಬರು. ಪಶ್ಚಿಮ ಸೌರಾಷ್ಟ್ರದಲ್ಲಿ (ಅಪರ ಸೌರಾಷ್ಟ್ರ ಮಂಡಲ) ಭೂಮಿಲಿಕಾವನ್ನು (ಈಗಿನ ಕಾಠಿಯಾವಾಡದಲ್ಲಿಯ ಭುಮಿಲಿ) ರಾಜಧಾನಿಯಾಗಿ ಮಾಡಿಕೊಂಡಿದ್ದ ಸೈಂಧವರು 8ನೆಯ ಶತಮಾನದಿಂದ 10ನೆಯ ಶತಮಾನದವರೆಗೆ ಆಳುತ್ತಿದ್ದರು. ಇವರು ಪ್ರತೀಹಾರರಿಗೆ ಸಾಮಂತರಾಗಿದ್ದರೆಂದು ತೋರುತ್ತದೆ. ಇವರ ಸರ್ವಕಾಲೀನರಾಗಿ ಜುನಾಗಢದಲ್ಲಿ ಚಳುಕ್ಯರೂ ದಕ್ಷಿಣ ಹಾಗೂ ಪಶ್ಚಿಮ ಸೌರಾಷ್ಟ್ರದಲ್ಲಿ ಅಭೀರರೂ ಸೌರ್ಯಮಂಡಲದ ವರಾಹರೂ ಅಧಿಕಾರದಲ್ಲಿದ್ದರು.

ಕಲ್ಯಾಣ ಚಾಳುಕ್ಯರು ಮಾನ್ಯಖೇಟದಿಂದ ರಾಷ್ಟ್ರಕೂಟರನ್ನು ಓಡಿಸಿದ ಸಮಯದಲ್ಲಿ, ಇಮ್ಮಡಿ ತೈಲಪನ ಸೇನಾನಿ ಎನಿಸಿದ ಚೌಳುಕ್ಯ ಮನೆತನದ ಬಾರಪ್ಪನೆಂಬವನು ಖೇಟಕ ಮಂಡಲದಲ್ಲಿದ್ದ ರಾಷ್ಟ್ರಕೂಟರನ್ನು ಸೋಲಿಸಿ, ಭೃಗುಕಚ್ಛವನ್ನು ರಾಜಧಾನಿಯಾಗಿ ಹೊಂದಿದ್ದ ಲಾಟಮಂಡಲದ ಅಧಿಪತಿಯಾದ. ಆದರೆ ಇವನು ಪರಮಾರ ಮುಂಜನನ್ನು ಎದುರಿಸಬೇಕಾಯಿತು. ಚೌಳುಕ್ಯ ಚಾಮುಂಡರಾಜ ಇವನನ್ನು ಸೋಲಿಸಿ ಇವನ ರಾಜ್ಯವನ್ನು ಕಸಿದುಕೊಂಡನಾದರೂ ಬಾರಪ್ಪನ ಮಗನಾದ ಗೊಗಿರಾಜ ಇದನ್ನು ಪುನಃ ತನ್ನ ವಶಕ್ಕೆ ತಂದುಕೊಂಡ. ಈತನ ಮಗನಾದ ಕೀರ್ತಿರಾಜನ ಕಾಲದಲ್ಲಿ ದುರ್ಲಭರಾಜ ಮತ್ತೊಮ್ಮೆ ಇವನ ರಾಜ್ಯವನ್ನು ಕಸಿಯಲು ಯತ್ನಿಸಿ ವಿಫಲನಾದ. ಕೀರ್ತಿರಾಜನ ಮಗ ವತ್ಸರಾಜ ಮತ್ತು ಮೊಮ್ಮಗ ತ್ರಿಲೋಚನಪಾಲ 1051ರವರೆಗೆ ಆಳಿದರು. ಅನಂತರ ಇವರ ರಾಜ್ಯವನ್ನು ಗುಜರಾತಿನ ಚಾಳುಕ್ಯರು ವಶಪಡಿಸಿಕೊಂಡರು.

ಮುಮ್ಮಡಿ ಕೃಷ್ಣನ ತರುವಾಯ ಮಾನ್ಯಖೇಟದ ರಾಷ್ಟ್ರಕೂಟ ರಾಜ್ಯ ಮತ್ತೊಮ್ಮೆ ಚಾಳುಕ್ಯರ ವಶವಾಯಿತು. ಇಮ್ಮಡಿ ತೈಲಪ ಚಾಳುಕ್ಯ ರಾಜ್ಯದ ಪುನಃಪ್ರತಿಷ್ಠಾಕನೆನಿಸಿಕೊಂಡ. ಆ ವೇಳೆಗೆ ಗುಜರಾತಿನಲ್ಲಿಯೂ ಅದುವರೆಗೆ ಆಳಿದ ಅರಸು ಮನೆತನಗಳು ಅಳಿದು ಇನ್ನೊಂದು ಚಾಳುಕ್ಯ (ಚೌಳುಕ್ಯ) ಮನೆತನ ಪ್ರಾಬಲ್ಯಕ್ಕೆ ಬಂದಿತು. ಅಣಹಿಲಪಾಟಕವನ್ನು ರಾಜಧಾನಿಯಾಗಿ ಮಾಡಿಕೊಂಡ ಈ ವಂಶದ ಮೂಲರಾಜ ಕ್ರಮೇಣ ತನ್ನ ರಾಜ್ಯವನ್ನು ವಿಸ್ತರಿಸಿದ. ಅಭೀರರ ಗ್ರಾಹರಿಪು ಬ್ರಾಹ್ಮಣ ದ್ವೇಷಿಯಾಗಿ, ಪ್ರಭಾಸತೀರ್ಥಕ್ಕೆ (ಸೋಮನಾಥ) ಹೋಗುತ್ತಿದ್ದ ಯಾತ್ರಾರ್ಥಿಗಳನ್ನು ನಿಷೇಧಿಸಿ ಪ್ರಜೆಗಳನ್ನು ತೊಂದರೆಗೀಡು ಮಾಡಿದ್ದ. ಮೂಲರಾಜ ಇವನ ವಿರುದ್ಧ ದಂಡೆತ್ತಿ ಗ್ರಾಹರಿಪುವನ್ನು ಸೋಲಿಸಿ ಸೆರೆಹಿಡಿದ. ಚಾಹಮಾನ ವಿಗ್ರಹರಾಜ, ಪರಮಾರ ಮುಂಜ, ಕಳಚುರಿ ಲಕ್ಷ್ಮಣ ಇವರ ವಿರುದ್ಧ ತನ್ನ ರಾಜ್ಯವನ್ನು ಉಳಿಸಿಕೊಳ್ಳಲು ಈತ ಹೋರಾಡಬೇಕಾಯಿತು.

ಮೂಲರಾಜನ ಮಗ ಚಾಮುಂಡರಾಜ ಸಹ ವಿರೋಧಿಗಳನ್ನೆದುರಿಸಬೇಕಾಯಿತು. ತಾನು ಎಸಗಿದ ಯಾವುದೋ ಪಾಪಕಾರ್ಯಕ್ಕೆ ಪ್ರಾಯಶ್ಚಿತ್ತ ಮಾಡಿಕೊಳ್ಳಲು ಈತ ವಾರಾಣಸಿಗೆ ಹೋಗುವ ಮುನ್ನ ರಾಜ್ಯವನ್ನು ಮಗನಾದ ವಲ್ಲಭರಾಜನಿಗೆ ಒಪ್ಪಿಸಿದ. ಮಾರ್ಗಮಧ್ಯದಲ್ಲಿ ಇವನ ಮೇಲೆರಗಿ ಇವನ ರಾಜಚಿಹ್ನೆಗಳನ್ನು ಕಸಿದುಕೊಂಡ ಪರಮಾರ ಭೋಜನನ್ನು ಶಿಕ್ಷಿಸಲು, ಈತ ಸ್ವರಾಜ್ಯಕ್ಕೆ ಹಿಂದಿರುಗಿದ ಬಳಿಕ ಮಗನನ್ನು ಸೇನೆಯೊಡನೆ ಕಳಿಸಿದ. ಆದರೆ ಆತ ಹಾದಿಯಲ್ಲಿ ಸಿಡುಬುರೋಗದಿಂದ ಸತ್ತ. ರಾಜ್ಯ ಎರಡನೆಯ ಮಗನಾದ ದುರ್ಲಭರಾಜನಿಗೆ ಲಭಿಸಿತು (1009–10). ದುರ್ಲಭ ತನ್ನ ಸೋದರಳಿಯನಾದ ಭೀಮದೇವನಿಗೆ 1022ರಲ್ಲಿ ರಾಜ್ಯವನ್ನೊಪ್ಪಿಸಿ ತಾನು ಅಧಿಕಾರದಿಂದ ನಿವೃತ್ತನಾದ. ಭೀಮನ ಕಾಲದಲ್ಲಿ ಘಜ್ನಿಯ ಮಹಮೂದ ಗುಜರಾತನ್ನು ಮುತ್ತಿ ಸೋಮನಾಥ ದೇವಾಲಯದಲ್ಲಿಯ ಅಪಾರ ಸಂಪತ್ತನ್ನು ಕೊಳ್ಳೆಹೊಡೆದ(1025). 1031ರ ಅನಂತರ ಅಬೂ ಪರ್ವತ ಪ್ರದೇಶವನ್ನು ಭೀಮದೇವ ಗೆದ್ದುಕೊಂಡ. ಕಳಚುರಿ ಕರ್ಣನೊಡಗೂಡಿ ಪರಮಾರ ಭೋಜನನ್ನು ಸೋಲಿಸಿದ.

1064ರ ಸುಮಾರಿಗೆ ಭೀಮನ ಕಿರಿಯ ಮಗ ಕರ್ಣ ಪಟ್ಟಕ್ಕೆ ಬಂದ. ಈತ ಕರ್ನಾಟಕದ ಚಾಳುಕ್ಯರೊಡಗೂಡಿ ಪರಮಾರ ಜಯಸಿಂಹನನ್ನು ಸೋಲಿಸಿದನಾದರೂ ಮಾಳವ ದೇಶದಿಂದ ಹಿಂದಿರುಗಬೇಕಾಯಿತು. ಪರಮಾರ ಉದಯಾದಿತ್ಯ ಇವನನ್ನು ಅಲ್ಲಿಂದ ಓಡಿಸಿದ. ಇನ್ನೊಮ್ಮೆ ಪರಮಾರ ಜಗದ್ದೇವ ಇವನನ್ನು ಸೋಲಿಸಿದ. ಗೋವೆಯ ಕದಂಬ ವಂಶದ ಜಯಕೇಶಿಯ ಮಗಳಾದ ಮಯಣಲ್ಲಾ ದೇವಿಯನ್ನು ಕರ್ಣ ಮದುವೆಯಾದ. 1094ರಲ್ಲಿ ಈತ ಮರಣ ಹೊಂದಿದಾಗ, ಇವನ ಮಗ ಜಯಸಿಂಹ ಇನ್ನೂ ಕಿರಿಯನಾಗಿದ್ದ ಕಾರಣ ಮಯಣಲ್ಲಾದೇವಿ ರಾಜಪ್ರತಿನಿಧಿಯಾಗಿ ಕೆಲಕಾಲ ರಾಜ್ಯಭಾರ ಮಾಡಿದಳು.




ಸಿದ್ಧಪುರದಲ್ಲಿ ಸಿದ್ಧರಾಜ ಜಯಸಿಂಹನಿಂದ ನಿರ್ಮಿತವಾದ ರುದ್ರಮಹಾಕಾಲ ದೇವಾಲಯದ ತೋರಣ

ಜಯಸಿಂಹ ಚಾಳುಕ್ಯರಲ್ಲಿ ಅತಿ ಪ್ರಸಿದ್ಧನಾದ ಅರಸ. ಸಿದ್ಧರಾಜನೆನಿಸಿದ ಈತನ ಕಾಲದಲ್ಲಿ ಚಾಳುಕ್ಯರ ರಾಜ್ಯ ಉತ್ತರದಲ್ಲಿ ಜೋಧಪುರದ ಬಳಿ ಮತ್ತು ಜಯಪುರದ ಸಾಂಭರ್‌ವರೆಗೂ ಪೂರ್ವದಲ್ಲಿ ಭಿಲ್ಸಾ ಮತ್ತು ಪಶ್ಚಿಮದಲ್ಲಿ ಕಾಠಿಯಾವಾಡ ಮತ್ತು ಕಚ್ಛ್ ವರೆಗೂ ಹಬ್ಬಿತ್ತು. ಚಾಹಮಾನ ಅರ್ಣೊ ರಾಜ, ಪರಮಾರ ನರವರ್ಮ, ಚಂದೇಲ ಮದನವರ್ಮ, ಕಲ್ಯಾಣದ 6ನೆಯ ವಿಕ್ರಮಾದಿತ್ಯ, ಡಾಹಲದ ಕಳಚುರಿ ಗಯಾಕರ್ಣ ಇವರು ಇವನ ಸಮಕಾಲೀನರು. ಇವರ ವಿರುದ್ಧ ಸೆಣಸಾಡಿ ಇವರಿಗೆ ಸೇರಿದ ಕೆಲವು ಪ್ರದೇಶಗಳನ್ನು ಈತ ವಶಪಡಿಸಿಕೊಂಡ. ಸಿದ್ಧಪುರದ ರುದ್ರಮಹಾಕಾಲ ದೇವಾಲಯವನ್ನು ಈತ ಕಟ್ಟಿಸಿ, ಜ್ಯೋತಿಷ, ನ್ಯಾಯ ಮುಂತಾದ ಶಾಸ್ತ್ರಗಳನ್ನು ಕಲಿಸುವ ವಿದ್ಯಾಸಂಸ್ಥೆಗಳನ್ನು ಸ್ಥಾಪಿಸಿದ. ಜೈನ ಕವಿ ಹೇಮಚಂದ್ರ ಈತನ ಆಸ್ಥಾನವನ್ನು ಬೆಳಗಿದ.

ಜಯಸಿಂಹನಿಗೆ ಮಕ್ಕಳಿರಲಿಲ್ಲವಾದ ಕಾರಣ ಹತ್ತಿರದ ಸೋದರ ಸಂಬಂಧಿಯಾದ ಕುಮಾರಪಾಲ ಪಟ್ಟಕ್ಕೆ ಬಂದ ಆದರೆ ಈತ ರಾಜನಾಗುವುದು ಜಯಸಿಂಹನಿಗೆ ಒಪ್ಪಿಗೆಯಾಗಿರಲಿಲ್ಲವಾದ ಕಾರಣ. ಕುಮಾರಪಾಲ ಅಧಿಕಾರಕ್ಕೆ ಬರುವ ಮೊದಲು ಶತ್ರುಗಳನ್ನು ಸೋಲಿಸಬೇಕಾಯಿತು. ಹೇಮಚಂದ್ರನಿಂದಾಗಿ ಜೈನಮತವನ್ನು ಸ್ವೀಕರಿಸಿದ ಕುಮಾರಪಾಲ ತನ್ನ ವಿಜಯಗಳಿಗಿಂತ ಹೆಚ್ಚಾಗಿ ಜೈನಧರ್ಮ ಪೋಷಕನೆಂದೇ ಖ್ಯಾತಿ ಪಡೆದಿದ್ದಾನೆ. ಕುಮಾರಪಾಲನ (1143–44 ರಿಂದ 1171–72) ಬಳಿಕ ರಾಜ್ಯಕ್ಕಾಗಿ ಅಂತಃಕಲಹಗಳುಂಟಾದವು. ಕೊನೆಗೆ ಅಜಯಪಾಲ ಯಶಸ್ವಿಯಾದ. ಇವನ ಮಗ ಇಮ್ಮಡಿ ಮೂಲರಾಜನ ಕಾಲದಲ್ಲಿ ಮಹಮದ್ ಘೋರಿ ಗುಜರಾತನ್ನು ಧಾಳಿ ಮಾಡಿದ. ಇಮ್ಮಡಿ ಭೀಮ ಆಳಲು ಬಂದಾಗ ಗುಜರಾತಿನ ಬಲ ಕುಗ್ಗಿ ಸೇವುಣರು, ಪರಮಾರರು, ಮಹಮ್ಮದೀಯರು ಈ ಪ್ರದೇಶಕ್ಕೆ ದಂಡೆತ್ತಿ ಬಂದರು. ಚೌಳುಕ್ಯರ ಸಾಮಂತರಾಗಿದ್ದ ವಾಘೇಲರ ಲವಣ ಪ್ರಸಾದ ಭೀಮನ ನೆರವಿಗೆ ಬಂದ. ಈ ಮನೆತನದ ಕೊನೆಯ ಅರಸ ಕರ್ಣ. ಈತನ ಕಾಲದಲ್ಲಿ ಅಲ್ಲಾವುದ್ದೀನ್ ಖಲ್ಜಿಯ ಸೇನಾಪತಿಗಳಾದ ಉಲುಘ್ ಖಾನ್ ಮತ್ತು ನಸರತ್‌ಖಾನರು ಗುಜರಾತನ್ನು ಆಕ್ರಮಿಸಿ ಕರ್ಣನನ್ನು ಸೋಲಿಸಿ, ಅವನ ಪತ್ನಿ ಕಮಲಾದೇವಿಯನ್ನೂ ಮಗಳು ದೇವಲದೇವಿಯನ್ನೂ ಸೆರೆಹಿಡಿದು ದೆಹಲಿಗೆ ಸಾಗಿಸಿದರು. ಅವನ ರಾಜಧಾನಿಯನ್ನು ಸೈನಿಕರು ಮುತ್ತಿ ಅಲ್ಲಿಯ ಅಪಾರ ಸಂಪತ್ತನ್ನು ಲೂಟಿ ಮಾಡಿದರು. ಅನಂತರ ಪಾಟಣದಿಂದ (ಅಣಹಿಲ ಪಟ್ಟಣ) ಸೋಮನಾಥಕ್ಕೆ ಹೋಗಿ ಅಲ್ಲಿಯ ಪ್ರಸಿದ್ಧ ದೇವಾಲಯವನ್ನು ಹಾಳುಗೆಡವಿ, ಆಲಯದಲ್ಲಿದ್ದ ಲಿಂಗವನ್ನು ಭಗ್ನ ಮಾಡಿ ದೆಹಲಿಗೆ ಒಯ್ದರು. ದೇವಾಲಯದ ಧನಕನಕಗಳು ಅವರ ವಶವಾದುವು. ಇನ್ನೊಮ್ಮೆ 1034–05ರಲ್ಲಿ ಅಲ್ಲಾವುದ್ದೀನ್ ತನ್ನ ಸೇನಾನಿಗಳನ್ನು ಗುಜರಾತಿಗೆ ಕಳಿಸಿದ. ಪುನಃ ರಾಜಧಾನಿಯಿಂದ ಓಡಿಹೋದ ಕರ್ಣ ವಾರಂಗಲ್ಲಿನ ಕಾಕತೀಯ ಪ್ರತಾಪರುದ್ರನ ಆಶ್ರಯ ಪಡೆದು ಅಲ್ಲಿಯೇ ತನ್ನ ಕೊನೆಯುಸಿರೆಳೆದ.

ಅಂದಿನಿಂದ ಗುಜರಾತು ದೆಹಲಿಯ ಸುಲ್ತಾನರ ಅಧಿಪತ್ಯಕ್ಕೊಳಪಟ್ಟಿತು. ಆದರೆ ಸೌರಾಷ್ಟ್ರ ಮಾತ್ರ ಇವರ ಸ್ವಾಧೀನಕ್ಕೆ ಬರದೆ, ಅಲ್ಲಿ ರಜಪೂತ ಮನೆತನಗಳವರು ಆಳುತ್ತಿದ್ದರು. ಒಂದು ಶತಮಾನದ ಬಳಿಕ ಗುಜರಾತಿನಲ್ಲಿ ಹೊಸದೊಂದು ಸುಲ್ತಾನ ಮನೆತನ ಆಳ್ವಿಕೆಗೆ ತೊಡಗುವವರೆಗೆ ಪರಿಸ್ಥಿತಿ ಹೀಗೆಯೇ ಮುಂದುವರಿದಿತ್ತು. ಅಲ್ಲಾವುದ್ದೀನ್ ಆಲ್ಫ್‌ಖಾನನನ್ನು ಈ ಪ್ರಾಂತ್ಯದ ಅಧಿಕಾರಿಯಾಗಿ ನೇಮಿಸಿದ. ಆದರೆ ಕೆಲಕಾಲದ ಬಳಿಕ ಈತನನ್ನು ಮಲಿಕ್ ಕಾಫರ್ ದೆಹಲಿಗೆ ಬರಮಾಡಿಕೊಂಡು ಕೊಲೆಮಾಡಿದ. ಗುಜರಾತಿನಲ್ಲಿದ್ದ ಅವನ ಹಿಂಬಾಲಕರು ಇದರಿಂದ ದಂಗೆ ಎದ್ದರು. ದೆಹಲಿಯಲ್ಲಿ ಘಟನೆಗಳು ತೀವ್ರ ಸ್ವರೂಪ ಪಡೆದು ಮಲಿಕ್ ಕಾಫರನೇ ತನ್ನ ಪ್ರಾಣವನ್ನು ಕಳೆದುಕೊಂಡ. ಮುಬಾರಕ್ ಷಹ ದೆಹಲಿಯ ಸುಲ್ತಾನನಾದ (1316). ಬಳಿಕ ಗುಜರಾತಿನ ದಂಗೆಯನ್ನು ಅಡಗಿಸಲಾಯಿತು.

ಮಹಮ್ಮದ್ ಬಿನ್ ತುಘಲಕನ ಕಾಲದಲ್ಲಿ ಗುಜರಾತು ಅವನ ರಾಜ್ಯದ ಒಂದು ಪ್ರಾಂತ್ಯವಾಗಿ ಮುಂದುವರಿಯಿತಾದರೂ, ಅಲ್ಲಿ ಅವನಿಂದ ನೇಮಿತರಾದ ಅಧಿಕಾರಿಗಳ ಪರಸ್ಪರ ದ್ವೇಷಾಸೂಯೆಗಳಿಂದ ಆಡಳಿತ ಸಡಿಲಗೊಂಡಿತು. ಅಲ್ಲಲ್ಲಿ ದಂಗೆಗಳು ಸಂಭವಿಸಿದುವು. ಇವನ್ನು ಅಡಗಿಸಲು ಸುಲ್ತಾನ ಸ್ವತಃ ದೆಹಲಿಯಿಂದ ಬಂದ (1345). ಪಾಟಣದಿಂದ ವಡೋದರಕ್ಕೆ ದಂಗೆಕೋರರನ್ನು ಬೆನ್ನಟ್ಟಿ ಕೊನೆಗೆ ಭರುಕಚ್ಛವನ್ನು ತಲಪಿ ಅದನ್ನು ತನ್ನ ನೆಲೆವೀಡಾಗಿ ಮಾಡಿಕೊಂಡ. ದಂಗೆಕೋರರನ್ನು ಅಡಗಿಸುವುದರಲ್ಲಿ ಯಶಸ್ವಿಯಾದ ಬಳಿಕ ಗುಜರಾತಿನ ಆಡಳಿತವನ್ನು ಕ್ರಮಬದ್ಧಗೊಳಿಸಲು ಉದ್ಯುಕ್ತನಾಗಿದ್ದಾಗ ದೌಲತಾಬಾದದ ದಂಗೆ ಅವನ ಗಮನ ಸೆಳೆದು ಆತ ಗುಜರಾತನ್ನು ಬಿಟ್ಟ. ಆರು ತಿಂಗಳುಗಳ ಬಳಿಕ ಪುನಃ ಗುಜರಾತಿಗೆ ಬಂದು (1347) ಪುನಃ ತಲೆ ಎತ್ತಿದ ದಂಗೆಕೋರರನ್ನು ಸೋಲಿಸಿದ. ಈ ಅವಾಂತರಗಳಲ್ಲಿ ದೌಲತಾಬಾದ್ ತುಘಲಕನ ಕೈಯಿಂದ ಜಾರಿತ್ತು. ಸೌರಾಷ್ಟ್ರ ಹಾಗೂ ಜುನಾಗಢದಲ್ಲಿ ಒಂದು ವರ್ಷಕ್ಕೂ ಹೆಚ್ಚು ಕಾಲ ಇದ್ದ ಮಹಮ್ಮದ್ ಅನಂತರ ಸಿಂಧ್ ಮೂಲಕ ದೆಹಲಿಗೆ ಹಿಂದಿರುಗುವಾಗ ಥಟ್ಟಾದಲ್ಲಿ ಅನಾರೋಗ್ಯದಿಂದ 1351ರ ಮಾರ್ಚ್ 20 ರಂದು ಮರಣಹೊಂದಿದ. ಅನಂತರ ಬಂದ ಫಿರೋಝ್‌ಷಹ ಜಫರ್‌ಖಾನನ್ನು ಗುಜರಾತಿನ ಪ್ರಾಂತ್ಯಾಧಿಕಾರಿಯಾಗಿ ನೇಮಿಸಿ ದೆಹಲಿಗೆ ಹಿಂದಿರುಗಿದ. ಈತನ ಬಳಿಕ ಇತರರು ಕೆಲವರು ಅಧಿಕಾರಕ್ಕೆ ಬಂದ ಮೇಲೆ, ಗುಜರಾತಿನಲ್ಲಿ ನೆಲಸಿದ್ದ ಮಹಮ್ಮದೀಯರ ಅಪೇಕ್ಷೆಯಂತೆ ದೆಹಲಿಯಲ್ಲಿ ಆಗ ಸುಲ್ತಾನನಾಗಿದ್ದ ಇಮ್ಮಡಿ ಮಹಮೂದ ಜಫರ್‌ಖಾನನನ್ನು ಪ್ರಾಂತ್ಯಾಧಿಕಾರಿಯಾಗಿ ನೇಮಿಸಿ ಕಳಿಸಿದ. ಇವನಿಗೆ ಮುಝಫರ್‌ಖಾನ್ ಎಂಬ ಬಿರುದನ್ನು ಇತ್ತ. ಈ ಮೊದಲೇ ಆ ಅಧಿಕಾರ ಪಡೆದಿದ್ದ ಫರ್‌ಹತ್ ಉಲ್‌ಮುಲ್ಕ್ ಇವನನ್ನು ವಿರೋಧಿಸಿ ಕಂಬೋಇ ಕದನದಲ್ಲಿ ಮಡಿದ (1392). ಅನಂತರ ಅಣಹಿಲವಾಡವನ್ನು ಮುಜಫರ್‌ಖಾನ್ ಆಕ್ರಮಿಸಿದ. 1394ರಲ್ಲಿ ಸುಲ್ತಾನ್ ಮಹಮೂದ ಸತ್ತ ಬಳಿಕ ಗುಜರಾತಿನ ಹಿಂದೂ ನಾಯಕರು ಕೆಲವರು ದಂಗೆ ಎದ್ದರಾದರೂ ಮುಜಫರ್‌ಖಾನ್ ಅವರನ್ನು ಅಡಗಿಸಿದ. ಆದರೆ ದೆಹಲಿಯಲ್ಲಿ ಸುಲ್ತಾನನೊಡನೆ ಇದ್ದ ಈತನ ಮಗ ತಾತರ್‌ಖಾನ್, ತೈಮೂರ ದೆಹಲಿಯಿಂದ ಹಿಂದಿರುಗಿದ ಬಳಿಕ ಸುಲ್ತಾನ್ ಪದವಿಯನ್ನು ಪಡೆಯಬೇಕೆಂದು ಮುಜಫರನನ್ನು ಪ್ರೋತ್ಸಾಹಿಸಿದನಾದರೂ ಮುಜಫರ್ ಅದಕ್ಕೆ ಒಪ್ಪಲಿಲ್ಲ. ಕೊನೆಗೆ ತಾತರ್ ತಂದೆಯನ್ನು ಸೆರೆಹಿಡಿದು ತಾನೆ ಗುಜರಾತನ ಸ್ವತಂತ್ರ ಸುಲ್ತಾನನೆಂದು ಘೋಷಿಸಿಕೊಂಡನೆಂದು ಹಲವರ ಹೇಳಿಕೆ.



**ಗುಜರಾತಿನ ಶ್ರೀಮಂತರು ಅಕ್ಬರನಿಗೆ ಗೌರವ ಸಲ್ಲಿಸುತ್ತಿರುವುದು–ಸಮಕಾಲೀನ ರಚನೆ**

ಒಂದು ವಿಧದಲ್ಲಿ ಈತನೇ ಗುಜರಾತಿನಲ್ಲಿ ಆಳಿದ ಮೊದಲನೆಯ ಸುಲ್ತಾನ. ಈತ ಮಹಮ್ಮದ್‌ಷಹ ಎಂಬ ಹೆಸರಿನಿಂದ ಆಳತೊಡಗಿದ(1403). ಇವನು ಮರುವರುಷವೇ ಸತ್ತ. ಇವನ ತಂದೆ ಸೆರೆಯಿಂದ ಮುಕ್ತನಾದ. ಬೆಂಬಲಿಗರ ಕೋರಿಕೆಯನ್ನು ಮನ್ನಿಸಿ ಆತ ಸುಲ್ತಾನ್ ಮುಜಫರ್‌ಷಹ ಎಂಬ ಹೆಸರಿನಿಂದ ಸ್ವತಂತ್ರವಾಗಿ ಆಳಲು ಒಪ್ಪಿದ (1407). ಅನಂತರ ಆತನ ಮೊಮ್ಮಗ ಅಹಮದ್‌ಷಹ 32 ವರ್ಷಗಳ ಕಾಲ (1411–43) ಆಳಿದ. ಸೌರಾಷ್ಟ್ರದಲ್ಲಿ ಆಳುತ್ತಿದ್ದ ಹಿಂದೂ ಮಾಂಡಲಿಕರನ್ನು ಸೋಲಿಸುವ ಇವನ ಯತ್ನ ವಿಫಲವಾಯಿತು. ಅನ್ಯಮತ ದ್ವೇಷಿಯಾದ ಈತ ಅನೇಕ ದೇವಾಲಯಗಳನ್ನು ಹಾಳುಗೆಡವಿದ. ಅಹಮದಾಬಾದ್ ನಗರವನ್ನು ಕಟ್ಟಿ ರಾಜಧಾನಿಯನ್ನು ಅಣಹಿಲವಾಡದಿಂದ ಈ ಹೊಸ ನಗರಕ್ಕೆ ಬದಲಾಯಿಸಿಕೊಂಡ.

1458ರಿಂದ ಆಳತೊಡಗಿದ ಫತ್‌ಖಾನ್ ಈ ಸುಲ್ತಾನರಲ್ಲಿ ಪ್ರಮುಖ. ಈತ ಮಹಮೂದ್ ಬೇಗಡಾ ಎಂಬ ಹೆಸರಿನಿಂದ ಪ್ರಸಿದ್ಧನಾಗಿದ್ದಾನೆ. ಸೌರಾಷ್ಟ್ರವನ್ನು ತನ್ನ ರಾಜ್ಯಕ್ಕೆ ಸೇರಿಸಿಕೊಳ್ಳುವುದರಲ್ಲಿ ಈತ ಯಶಸ್ವಿಯಾದ. ಜುನಾಗಢಕ್ಕೆ ಮುಸ್ತಫಾಬಾದ್

ಎಂದು ನಾಮಕರಣವಾಯಿತು. ದ್ವಾರಕಾದಲ್ಲಿ ಅಧಿಕಾರದಲ್ಲಿದ್ದ ಭೀಮನನ್ನು ಈತ ಸೋಲಿಸಿ ಕೊಂದು ಆ ನಗರವನ್ನು ಲೂಟಿಮಾಡಿದ. ಚಂಪಾನೇರಿಯ ಅರಸನಾದ ಜಯಸಿಂಹನನ್ನು ಸೋಲಿಸಿ ಆ ಪ್ರಾಂತ್ಯವನ್ನು ವಶಪಡಿಸಿಕೊಂಡ. ಇಪ್ಪತ್ತು ತಿಂಗಳ ಮುತ್ತಿಗೆಯ ಅನಂತರ ಪಾವಾಗಢದ ಕೋಟೆ ಇವನ ವಶವಾಯಿತು. ಚಂಪಾನೇರಿಗೆ ಮುಹಮ್ಮದಾಬಾದ್ ಎಂಬ ಹೊಸ ಹೆಸರು ಬಂತು. ಎರಡು (ಜುನಾಗಢ ಮತ್ತು ಚಂಪಾನೇರ್) ಕೋಟೆಗಳನ್ನು ಗೆದ್ದ ಕಾರಣ ಈತ ಬೇಗಢಾ ಎನಿಸಿಕೊಂಡ. ಇವನು ಹಿಂದೂಗಳಿಗೆ ವಿಶೇಷವಾಗಿ ಕಿರುಕುಳ ಕೊಟ್ಟನೆಂದು ತಿಳಿದುಬರುತ್ತದೆ. ಈ ವೇಳೆಗೆ ಕ್ಯಾಂಬೆಯಲ್ಲಿ ಕೋಠಿಯನ್ನು ಕಟ್ಟಿಕೊಂಡು ವ್ಯಾಪಾರದಲ್ಲಿ ತೊಡಗಿದ್ದ ಪೋರ್ಚುಗೀಸರನ್ನು ಹಿಂದೂಡುವುದರಲ್ಲಿ ಈತ ವಿಫಲನಾದ. ದೀವ್ ದ್ವೀಪ ಅವರ ವಶವಾಯಿತು. ಅವರ ಪ್ರಾಬಲ್ಯ ಕ್ರಮೇಣ ಬೆಳೆಯಿತು. ಈತ 1511ರಲ್ಲಿ ತೀರಿಕೊಂಡ.

ಇವನ ಮಗ ಇಮ್ಮಡಿ ಮುಜ಼ಫರ್‌ಷಹ ಹಿಂದೂ ಅರಸರ-ಮುಖ್ಯವಾಗಿ ಮೇವಾಡದ ರಾಣಾ ಸಾಂಗಾನ-ವಿರುದ್ಧ ಕದನಗಳಲ್ಲಿ ತೊಡಗಿದ್ದನಾದರೂ ಸಾಂಗಾನನ್ನು ಸೋಲಿಸಲಾಗಲಿಲ್ಲ. 1526ರಿಂದ ಆಳತೊಡಗಿದ ಬಹದೂರ್‌ಷಹನ ಕಾಲದಲ್ಲಿ, ಆ ವೇಳೆಗೆ ದೆಹಲಿಯನ್ನು ಆಕ್ರಮಿಸಿದ ಮೊಗಲ್ ಅರಸ ಹುಮಾಯೂನ್ ಗುಜರಾತಿನ ವಿರುದ್ಧ ದಂಡೆತ್ತಿ ಬಂದ. ಇವನನ್ನು ಎದುರಿಸಲಾರದ ಬಹದೂರ್ ಪೋರ್ಚುಗೀಸರ ಸ್ನೇಹಹಸ್ತವನ್ನು ಬಯಸಿದ. ತಲೆಮರೆಸಿಕೊಂಡು ದೇಶದಿಂದ ಓಡಿಹೋಗುವುದರಲ್ಲಿದ್ದ ಈತನಿಂದ ಪೋರ್ಚುಗೀಸರು ಕೆಲವು ಅನುಕೂಲಗಳನ್ನು ಪಡೆದುಕೊಂಡರು. ಸ್ವಲ್ಪ ಕಾಲ ಗುಜರಾತು ಹುಮಾಯೂನನ ವಶವಾಗಿದ್ದರೂ, ಷೇರ್ ಷಹ ಹುಮಾಯೂನನನ್ನು ಓಡಿಸಲು ಮಾಡಿದ ಯತ್ನಗಳ ಸಂದರ್ಭದಲ್ಲಿ ಬಹದೂರ್ ಸ್ವಸ್ಥಾನಕ್ಕೆ ಮರಳಿದ. ಆದರೆ ಪೋರ್ಚುಗೀಸರಿಗೆ ಇವನು ನೀಡಿದ್ದ ಸೌಲಭ್ಯಗಳನ್ನು ದುರುಪಯೋಗಪಡಿಸಿಕೊಂಡು ತಮ್ಮ ಪ್ರಭಾವವನ್ನು ಹೆಚ್ಚಿಸಿಕೊಳ್ಳುತ್ತಿದ್ದ ಅವರನ್ನು ಹತ್ತಿಕ್ಕಲು ಇವನು ಮಾಡಿದ ಯತ್ನ ವಿಫಲವಾಯಿತಷ್ಟೇ ಅಲ್ಲ, ಅವರಿಂದ ಈತ ಹತನಾದ (1551). ಮುಮ್ಮಡಿ ಮಹಮೂದ (1537-54) ಬೆಸಿನ್, ದೀವ್, ದಮನ್‌ಗಳನ್ನು ಇವರಿಗೆ ಬಿಟ್ಟುಕೊಡಬೇಕಾಯಿತು. (ಜಿ.ಬಿ.ಆರ್.)



ಸೋಮನಾಥ ದೇವಾಲಯ

ಅಕ್ಬರನ ಕಾಲದಲ್ಲಿ 1572ರ ವೇಳೆಗೆ ಮೊಗಲರು 1572ರಲ್ಲಿ ಗುಜರಾತಿನ ಮೇಲೆ ದಂಡೆತ್ತಿ ಹೊರಟು 1573ರ ಫೆಬ್ರವರಿ 26ರಂದು ಸೂರತ್ ಕೋಟೆಯನ್ನು ವಶಪಡಿಸಿಕೊಂಡನು. ಗುಜರಾತಿನಲ್ಲಿ ದಂಗೆಯೆದ್ದ ಸುದ್ದಿ ತಿಳಿದು ರಾಜಧಾನಿಯಿಂದ ಹಿಂತಿರುಗಿ ಅಹಮದಾಬಾದ್ ಬಳಿ ಯುದ್ಧದಲ್ಲಿ ದಂಗೆಕೋರರನ್ನು ಸೋಲಿಸಿ 1573ರ ಸೆಪ್ಟೆಂಬರ್ 2ರಂದು ಸಂಪೂರ್ಣವಾಗಿ ಗುಜರಾತನ್ನು ಆಕ್ರಮಿಸಿಕೊಂಡು ಅದರ ಪ್ರತ್ಯೇಕ ಇತಿಹಾಸವನ್ನು ಕೊನೆಗಾಣಿಸಿದರು. ತೋದರಮಲ್ಲನ ಸಹಾಯದಿಂದ ಅಕ್ಬರ್ ಕಂದಾಯದ ಜಮಾಬಂದಿಯನ್ನು (1575) ನಡೆಸಿದ. ಷಹಜಹಾನ ಅಲ್ಲಿಯ ವೈಸ್‌ರಾಯ್ ಆಗಿ ನೇಮಿಸಲ್ಪಟ್ಟಾಗ ಶಾಹಿಬಾಗನ್ನು ಕಟ್ಟಿಸಿದ. ಷಹಜಹಾನನ ಆಳ್ವಿಕೆಯ ಕಾಲದಲ್ಲಿ 1631ರಲ್ಲಿ ಅಲ್ಲಿ ಒಂದು ದೊಡ್ಡ ಕ್ಷಾಮ ತಲೆದೋರಿತು.

1760ರ ಮೊದಲೇ ಮರಾಠರು ಗುಜರಾತಿನ ಮೇಲೆ ತಮ್ಮ ಪ್ರಭಾವವನ್ನು ಸ್ಥಾಪಿಸಿ 1819ರ ವೇಳೆಗೆ ಬ್ರಿಟಿಷರ ಮುನ್ನಡೆಯಿಂದ ತಮ್ಮ ಅಧಿಕಾರವನ್ನು ಕಳೆದುಕೊಂಡರು. ಈ ಅವಧಿಯಲ್ಲಿ ಮರಾಠರು ಗುಜರಾತಿನ ಸಂಪೂರ್ಣ ಸ್ವಾಮ್ಯವನ್ನು ಪಡೆದಿದ್ದರು. ಔರಂಗ್‌ಜ಼ೇಬನ ಕಾಲದಲ್ಲಿ ಶಿವಾಜಿಯಿಂದ ಗುಜರಾತಿನಲ್ಲಿ ಮರಾಠರ ಕಾರ್ಯಾಚರಣೆ ಪ್ರಾರಂಭವಾಯಿತು. ಸೂರತ್ ಮತ್ತು ಭಡೋಚ ಸಮುದ್ರದ ಕಡೆಯಿಂದ ಸೂರೆಗೆ ಒಳಗಾದುವು. 1699 ಮತ್ತು 1716ರಲ್ಲಿ ದಾಭಡೆ ಗುಜರಾತ್ ಪ್ರದೇಶಗಳನ್ನು ಕೊಳ್ಳೆಹೊಡೆದ. ತ್ರಿಂಬಕ್‌ರಾವ್ ದಾಭಡೆ, ಪೀಲಾಜಿ ಗಾಯಕವಾಡ್ ಗುಜರಾತಿನಲ್ಲಿ ಆಸಕ್ತಿವಹಿಸಿದರು. ಒಂದನೆಯ ಬಾಜೀರಾಯನ ಅನುಯಾಯಿಯಾಗಿದ್ದ ಪೀಲಾಜಿ ಗಾಯಕವಾಡ ವಡೋದರದಲ್ಲಿ ನೆಲೆಸಿ, ಗಾಯಕವಾಡ ಮನೆತನದ ಆಳ್ವಿಕೆಯನ್ನು ಆರಂಭಿಸಿದ. ಈತನ ಮಗ ಇಮ್ಮಡಿ ದಾಮಾಜಿ 1761ರಲ್ಲಿ ನಡೆದ ಪಾಣಿಪಟ್ ಕದನದಲ್ಲಿ ಭಾಗವಹಿಸಿ ಜೀವಸಹಿತ ಹಿಂದಿರುಗಿದ. ಬಳಿಕ (1763) ಇವನ ಮಕ್ಕಳಲ್ಲಿ ಕಲಹಗಳುಂಟಾಗಿ, ಕೊನೆಗೆ ಹಿರಿಯ ಮೊಮ್ಮಗನಾದ ಆನಂದರಾಯ ರಾಜ್ಯವನ್ನು ಪಡೆದ. ಈತ 1805ರಲ್ಲಿ ಬ್ರಿಟಿಷರೊಡನೆ ಮಾಡಿಕೊಂಡ ಒಪ್ಪಂದದ ಫಲವಾಗಿ, ಮರಾಠರು ಅವರೊಡನೆ ನಡೆಸಿದ ಕದನಗಳಲ್ಲಿ ಈತ ಭಾಗವಹಿಸಬೇಕಾಗಲಿಲ್ಲ. ಆದರೆ 1875ರಲ್ಲಿ ದುರಾಡಳಿತದ ನೆಪವನ್ನು ಒಡ್ಡಿ ಆಗಿನ ಗಾಯಕವಾಡನಾಗಿದ್ದ ಮಲ್ಹಾರ್‌ರಾಯನನ್ನು ಸಿಂಹಾಸನದಿಂದ ಇಳಿಸಿ ಆತನ ಸ್ಥಾನಕ್ಕೆ ಬಾಲಕನಾಗಿದ್ದ ಸಯಾಜಿರಾಯನನ್ನು ಬ್ರಿಟಿಷರು ತಂದರು. ಈ ಅರಸ 1930ರವರೆಗೂ ಆಳಿದ. ಈತನ ಕಾಲದಲ್ಲಿ ವಡೋದರ ಸಂಸ್ಥಾನ ಬಹಳ ಅಭಿವೃದ್ಧಿ ಹೊಂದಿತು. ವಡೋದರದಂತೆಯೇ ಕಾಠಿಯಾವಾಡ್ ಅಥವಾ ಸೌರಾಷ್ಟ್ರ ಸಹ ಮೂರನೆಯ ಮರಾಠಾ ಯುದ್ಧದ ಬಳಿಕ ಬ್ರಿಟಿಷರ ಆಡಳಿತಕ್ಕೆ ಸೇರಿತು.

ಕ್ಯಾಂಬೇ, ಛೋಟ ಉದಯಪುರ, ಬರಿಯ, ಬಲಾಸಿನೋರ್ ಮತ್ತಿತರ ಹಲವು ಸಣ್ಣ ಸಂಸ್ಥಾನಗಳ ರಾಜರು ಬ್ರಿಟಿಷರೊಡನೆ ಒಪ್ಪಂದ ಮಾಡಿಕೊಂಡು ಆಶ್ರಿತರಾಗಿ ಉಳಿದುಕೊಂಡರು. ದೇಶೀಯ ಸಂಸ್ಥಾನಗಳನ್ನುಳಿದ ಭಾಗ ಆಗಿನ ಮುಂಬಯಿ ಪ್ರಾಂತ್ಯದ ಅಂಗವಾಗಿತ್ತು. 1947ರಲ್ಲಿ ದೇಶೀಯ ಸಂಸ್ಥಾನಗಳು ಭಾರತ ಗಣರಾಜ್ಯದಲ್ಲಿ ವಿಲೀನಗೊಂಡುವು. 1948ರಲ್ಲಿ ಕಾಠಿಯಾವಾಡದ ಬಹು ಭಾಗ ಸೌರಾಷ್ಟ್ರವೆನಿಸಿಕೊಂಡು ರಾಜಪ್ರಮುಖರ ರಾಜ್ಯವಾಗಿ ರೂಪಗೊಂಡಿತು. 1956ರಲ್ಲಿ ಭಾಷಾನುಗುಣ ರಾಜ್ಯ ವಿಂಗಡಣೆಯಾದಾಗ ಗುಜರಾತ್-ಮಹಾರಾಷ್ಟ್ರಗಳು ಒಂದಾದ ದ್ವಿಭಾಷಾ ಮುಂಬಯಿ ರಾಜ್ಯದ ರಚನೆಯಾಯಿತು. ಇವೆರಡೂ ಪ್ರತ್ಯೇಕ ರಾಜ್ಯಗಳಾದ್ದು ಮೇ 1, 1960ರಲ್ಲಿ. 1960ರಿಂದ 1995ರವರೆಗೆ ಕಾಂಗ್ರೆಸ್ ಪಕ್ಷ ಅಧಿಕಾರ ನಡೆಸಿತು. 1995ರಿಂದ ಭಾರತೀಯ ಜನತಾ ಪಕ್ಷ ಅಧಿಕಾರದಲ್ಲಿದೆ. 2011 ಅಕ್ಟೋಬರ್ 7ಕ್ಕೆ ನರೇಂದ್ರ ಮೋದಿ ಮುಖ್ಯಮಂತ್ರಿಯಾಗಿ 10 ವರ್ಷಗಳಾಯಿತು, ಇಂದಿಗೂ ನರೇಂದ್ರಮೋದಿ ಮುಖ್ಯಮಂತ್ರಿಯಾಗಿದ್ದಾರೆ.

ಗುಜರಾತಿನಲ್ಲಿ ಪ್ರಾಚೀನ ಕಾಲದ ಅನೇಕ ಸಾಂಸ್ಕೃತಿಕ ಕುರುಹುಗಳುಂಟು. ಮೌರ್ಯರ ಆಳ್ವಿಕೆಯ ಕುರುಹುಗಳು ವಿರಳವಾಗಿದ್ದರೂ ಚಾಳುಕ್ಯರ ಕೋಟೆಗಳು, ಧಾರ್ಮಿಕ ಕಟ್ಟಡಗಳು, ಸರೋವರಗಳು, ಬಾವಿಗಳಿವೆ. ಉದಯಮತಿ ರಾಣಿಯ ರಾಣಿವಾವ್, ಕರ್ಣನ ಕರ್ಣಸಾಗರ ಮತ್ತು ಸಿದ್ಧರಾಜ ಜಯಸಿಂಹನ ಸಹಸ್ರಲಿಂಗ ತಲಾಬ್, ವಿರಂಗಾಂ ಎಂಬಲ್ಲಿಯ ಕೆರೆಗಳು ಉದಾಹರಣೆಗಳು. ಚಾಳುಕ್ಯರ ಕಾಲ ದೇವಾಲಯ ನಿರ್ಮಾಣದಲ್ಲಿ ಅತ್ಯುತ್ತಮ ಹೆಸರನ್ನು ಪಡೆದಿದೆ. ಉತ್ತರ ಗುಜರಾತಿನಲ್ಲಿ ಆರಂಭಿಸಿ, ಸೋಮನಾಥ ದೇವಾಲಯವೇ ಮೊದಲಾದ ಪ್ರಮುಖ ದೇವಾಲಯಗಳನ್ನು ಕಟ್ಟಿದ್ದು ಆ ಕಾಲದಲ್ಲಿ. ಆದರೆ, ಮುಸ್ಲಿಮರು ಅನೇಕ ಸಲ ದಾಳಿ ಮಾಡಿ ಅವನ್ನು ಧ್ವಂಸ ಮಾಡಿದರು. **(ನೋಡಿ-ಗುಜರಾತಿನ ವಾಸ್ತು-ಶಿಲ್ಪ)**

ಗುಜರಾತಿನ ರಾಜಮನೆತನದಲ್ಲಿ 13ನೆಯ ಶತಮಾನದವರೆಗೆ ಸೂರ್ಯಪೂಜೆ ಪ್ರಚಲಿತವಾಗಿತ್ತು. ಮೊದಲಲ್ಲಿ ಶಿವಪೂಜೆ ಅಷ್ಟೇನೂ ಜನಪ್ರಿಯವಾಗಿದ್ದಂತೆ ಕಾಣುವುದಿಲ್ಲ. ರಾಷ್ಟ್ರಕೂಟರು ಮತ್ತು ಚಾಳುಕ್ಯರು ಶೈವ ಮತ್ತು ವೈಷ್ಣವ ಧರ್ಮಗಳನ್ನು ಸಮನಾಗಿ ಕಾಣುತ್ತಿದ್ದರು. 10ನೆಯ ಶತಮಾನದಲ್ಲಿ ಶೈವ ಧರ್ಮದ ಪ್ರಚಾರವಾಯಿತು. ಸೋಮನಾಥ ಒಂದು ಮುಖ್ಯ ಯಾತ್ರಾಸ್ಥಳವಾಗಿತ್ತು. ಮೂಲರಾಜ, ಸಿದ್ಧರಾಜರು ಶೈವಧರ್ಮಕ್ಕೆ ಉತ್ತೇಜನ ಕೊಟ್ಟರು. ಕುಮಾರಪಾಲ ಜೈನಧರ್ಮಕ್ಕೆ ಹೆಚ್ಚು ಪ್ರೋತ್ಸಾಹ ನೀಡಿದ. ಕೆಲವು ಕಾಲ ಅದು ರಾಜ್ಯದ ಮುಖ್ಯ ಧರ್ಮವಾಗಿತ್ತು. ಸಂಸ್ಕೃತ, ಗುಜರಾತಿ ಭಾಷೆಗಳಲ್ಲಿ ಅನೇಕ ಧಾರ್ಮಿಕ ಮತ್ತು ಇತರ ಗ್ರಂಥಗಳ ರಚನೆಯಾಗಿದೆ. **(ನೋಡಿ-ಗುಜರಾತಿ ಸಾಹಿತ್ಯ)** (ಜಿ.ಆರ್.ಕೆ.)

**ಗುಜರಾತಿನ ವಾಸ್ತು, ಶಿಲ್ಪ :** ಈ ಪ್ರದೇಶದ ಅತ್ಯಂತ ಪ್ರಾಚೀನ ವಾಸ್ತುಶಿಲ್ಪ ಸ್ಮಾರಕಗಳೆಂದರೆ ಸಿಂಧೂ ಬಯಲಿನ ನಾಗರಿಕತೆಯ ಕಟ್ಟಡಗಳು. ಲೋಥಾಲ್, ರಂಗಪುರ, ರೋಜ್‌ಡಿ, ಸುರ್‌ಕೋಟಡ್ ಮುಂತಾದವು ಇದರ ನೆಲೆಗಳು. **(ನೋಡಿ-ಗುಜರಾತಿನ ಇತಿಹಾಸ)** ಅನಂತರಕಾಲದ ವಾಸ್ತುವಿನ ಉಲ್ಲೇಖವೆಂದರೆ ರುದ್ರದಾಮನನ ಶಾಸನದಲ್ಲಿ ಹೇಳಿರುವ, ಮೌರ್ಯರ ಕಾಲಕ್ಕೆ ಸಂಬಂಧಿಸಿದ, ಸುದರ್ಶನ ಸರೋವರ **(ನೋಡಿ- ಗುಜರಾತಿನ ಶಾಸನಗಳು, ನಾಣ್ಯಗಳು)**. ಆದರೆ ಈ ಸರೋವರದ ಒಡ್ಡು, ಕಾಲುವೆಗಳು ಯಾವುವೂ ಈಗ ಕಾಣಿಸುವುದಿಲ್ಲ. ಕಲ್ಲಿನಲ್ಲಿ ಕೊರೆದ ಜೈನ ವಿಹಾರ ಮತ್ತು ಚೈತ್ಯಗಳು ಜುನಾಗಢ, ತಲಾಜಾ ಮತ್ತು ಧಾಂಕಗಳಲ್ಲಿವೆ. ಜುನಾಗಢದಲ್ಲಿಯ

ಭಾವೆ ಪ್ಯಾರಾ ಮಠದ ಸಮೀಪದಲ್ಲಿ ಚೈತ್ಯವಿಹಾರಗಳ ಮೂರು ಸಾಲುಗಳುಂಟು. ಚೈತ್ಯದ್ದು ಗಜಪೃಷ್ಠಾಕೃತಿ. ಉಳಿದೆಲ್ಲವೂ ಸಾಮಾನ್ಯವಾಗಿ ಚತುರ್ಭುಜಾಕಾರದ ಕೋಣೆಗಳು. ಕೆಲವಕ್ಕೆ ಕಂಬಗಳುಳ್ಳ ಹೊರಾಂಗಣಗಳುಂಟು. ಎರಡರಲ್ಲಿ ಚೈತ್ಯಾಕಾರದ ಗವಾಕ್ಷಿಗಳಿವೆ. ಇವುಗಳಲ್ಲೊಂದರಲ್ಲಿ ಜೈನಧರ್ಮದ ಸಂಕೇತಗಳಾದ ಸ್ವಸ್ತಿಕ, ಭದ್ರಾಸನ, ನಂದಿಪಾದ, ಜೋಡಿಮೀನು, ಕಲಶ ಇವುಗಳ ಚಿಹ್ನೆಗಳಿವೆ. ಗಜಪೃಷ್ಠಾಕೃತಿಯ ಚೈತ್ಯ ಪ್ರ.ಶ.ಪೂ. 2 ನೆಯ ಶತಮಾನದ್ದಿರಬಹುದು. ಉಳಿದವುಗಳ ನಿರ್ಮಾಣ ಪ್ರ.ಶ. 200–300ರ ಕಾಲದಲ್ಲಿ ಆಗಿರಬಹುದು.



ಮೊಢೇರದ ಸೂರ್ಯದೇವಾಲಯದ ಕೆತ್ತನೆ ಕಂಬಗಳು

ಇದೇ ಸ್ಥಳದ ಉಪರಕೋಟದಲ್ಲಿರುವ ಕೊರೆದ ಕಲ್ಲಿನ ಚೈತ್ಯ ಎರಡು ಅಂತಸ್ತುಗಳುಳ್ಳದ್ದು. ಮೊದನೆಯದರಲ್ಲಿ 3.30 ಮೀ ಚದರದ ಒಂದು ಕುಂಡವಿದೆ. ಇದರ ಮೂರು ಬದಿಗಳಲ್ಲಿ ಅಂಗಳವಿದೆ. ಅಂಗಳದ ಬದಿಯಲ್ಲಿ ಕುಳಿತುಕೊಳ್ಳಲು ಆಸನವುಳ್ಳ ಗೂಡುಗಳುಂಟು. ಉಳಿದ ಬದಿಯಲ್ಲಿ ವಿಶಾಲವಾದ ಕಂಬಗಳುಳ್ಳ ಕೋಣೆಯಿದೆ. ಅಲ್ಲಲ್ಲಿ ಸುಂದರವಾದ ಪ್ರಾಣಿಗಳ, ಹೂವುಗಳ ಚಿತ್ರಗಳುಂಟು. ಕಂಬಗಳ ವೈವಿಧ್ಯದಿಂದ ಇವೆಲ್ಲವೂ ಪ್ರ.ಶ. 1–7ನೆಯ ಶತಮಾನಗಳಲ್ಲಿ ಆಗಿರಬಹುದೆಂದು ತೋರುವುವು. ತಲಾಜಾದಲ್ಲಿರುವ 30 ಕೊರೆದ ಚೈತ್ಯ ವಿಹಾರಗಳು ಇವುಗಳನ್ನು ಹೆಚ್ಚು ಕಡಿಮೆ ಹೋಲುವುವು. ಇವುಗಳಲ್ಲಿ ಒಂದು ಚೈತ್ಯದ ಗವಾಕ್ಷಿಯ ಆಕಾರ ವಿಶಿಷ್ಟವಾಗಿದೆ. ಸಾನಾದಲ್ಲಿ ಇಂಥ ಸುಮಾರು 62 ಕೊರೆದ ಗುಹಾಚೈತ್ಯ ವಿಹಾರಗಳಿವೆ. ಧಾಂಕದಲ್ಲಿಯ ಗುಹಾಚೈತ್ಯಗಳಲ್ಲಿ ಮೂರ್ತಿಗಳೂ ಕೆತ್ತಲ್ಪಟ್ಟಿವೆ.



ತಾಯಿ ಮಗು, ಕೋಟ್ಯರ್ಕ ದೇವಾಲಯ, ಮೆಹೆಸಾನಾ ಜಿಲ್ಲೆ (ಸು. 7ನೆಯ ಶತಮಾನ)

ಗುಪ್ತರ ಕಾಲದ ಯಾವ ವಿಧವಾದ ಕಟ್ಟಡಗಳೂ ಬೆಳಕಿಗೆ ಬಂದಿಲ್ಲ. ಸ್ಕಂದ ಗುಪ್ತನ ಪ್ರಾಂತ್ಯಾಧಿಕಾರಿಯಾಗಿದ್ದ ಚಕ್ರಪಾಲಿತ ಗಿರ್ನಾರಿನಲ್ಲಿ ವಿಷ್ಣುದೇವಾಲಯವನ್ನು ಕಟ್ಟಿಸಿದ್ದನೆಂಬುದಕ್ಕೆ ಅಲ್ಲಿಯ ಶಾಸನದಲ್ಲಿ ಉಲ್ಲೇಖವಿದೆ. ಅಲ್ಲಿಯ ದಾಮೋದರ ಮಂದಿರದಲ್ಲಿ ಇದರ ಅವಶೇಷಗಳಿರಬಹುದು.

ಗುಪ್ತರ ಅನಂತರ ಚಾಳುಕ್ಯರ ಕಾಲದವರೆಗೆ ದೇವಾಲಯದ ವಾಸ್ತುಶಿಲ್ಪದಲ್ಲಿ ಬೆಳವಣಿಗೆಯಾಗುತ್ತ ಚಾಳುಕ್ಯರ ಕಾಲದಲ್ಲಿ ಅದು ತನ್ನದೇ ಆದ ಸುಸ್ಪಷ್ಟವಾದ ಶೈಲಿಯಾಗಿ ಮಾರ್ಪಟ್ಟಿತು. ಚಾಳುಕ್ಯರ ಶೈಲಿಯ ಪೂರ್ವದ ಬೆಳವಣಿಗೆಯನ್ನು ಗೊಪ್, ವಿಸಾವಾದ, ಬಿಲೇಸ್ವರ್, ಸುತ್ರಪಾದ, ಥಾನ್ ಮತ್ತು ಕದ್ವಾರದಲ್ಲಿಯ ದೇವಾಲಯಗಳಲ್ಲಿ ಕಾಣಬಹುದು. ಗೊಪ್‌ದಲ್ಲಿಯ ದೇವಾಲಯ ಹಳೆಯದು ಮತ್ತು ಬಲು ಸರಳವಾದ್ದು. ಇದು ಎರಡು ಪ್ರಾಕಾರಗಳಿಂದ ಸುತ್ತುವರಿಯಲ್ಪಟ್ಟ, ಸಮಬಾಹುವಿನ ಗರ್ಭಗೃಹವುಳ್ಳ ದೇವಾಲಯ. ಶಿಖರ ತ್ರಿತಲವಾಗಿದೆ. ಕದ್ವಾರದಲ್ಲಿಯ ದೇವಾಲಯ ಉದ್ದವಾದ ಕೋಣೆಯಾಗಿದೆ; ಪ್ರಾಕಾರದಿಂದ ಸುತ್ತುವರಿಯಲ್ಪಟ್ಟಿದೆ. ಪ್ರಾಕಾರದ ಒಂದು ಬದಿಯಲ್ಲಿ ಮಂಟಪವಿದೆ. ಇದರ ದ್ವಾರದ ಚೌಕಟ್ಟಿನ ಕೆಳಗಿನ ಬದಿಯಲ್ಲಿ ಗಂಗೆ–ಯಮುನೆಯರ ಮೇಲೆ ಅಡ್ಡಜಂತಿಯಲ್ಲಿ ವಿಷ್ಣು, ಗಣಪತಿಗಳ ಮೂರ್ತಿ ಗಳಿವೆ. ಸ್ವಲ್ಪ ಮೇಲೆ ಸೂರ್ಯ, ಬ್ರಹ್ಮ, ವಿಷ್ಣು, ಶಿವ ಮತ್ತು ಬಹುಶಃ ಚಂದ್ರನ ಮೂರ್ತಿಗಳ ಸಾಲು ಇದೆ.



ಶಿವಪಾರ್ವತಿ ದೇವಾಲಯ, ರೋಡಾ

ಇದೇ ಕಾಲದ ಕಿಂದರ್‌ಖೇಡ್, ಸೋನ್ ಕನ್ಸಾರೀ ಮತ್ತು ಪಾಸ್ತರ ದೇವಾಲಯಗಳು ಶಿಖರದ ಶೈಲಿಯಲ್ಲಿ ಇತರ ದೇವಾಲಯಗಳಿಗಿಂತ ಭಿನ್ನವಾದಂಥವು.

ಒಟ್ಟಿನಲ್ಲಿ ಈ ಕಾಲದ ದೇವಾಲಯಗಳನ್ನು ಅವುಗಳ ವಾಸ್ತುಶಿಲ್ಪ ಲಕ್ಷಣದ ಮೇರೆಗೆ ವಿಸಾವಾದ –ಥಾನ್ ಮತ್ತು ಕದ್ವಾನ್–ಪಾಸ್ತಾರ್ ಎಂದು ಎರಡು ಪಂಗಡಗಳಾಗಿ ವಿಂಗಡಿಸಬಹುದು.

ಕ್ರಮೇಣ, ಚಾಳುಕ್ಯರ ಕಾಲದಲ್ಲಿ ದೇವಾಲಯದ ನಿರ್ಮಾಣದಲ್ಲಿ ಒಂದು ವಿಶಿಷ್ಟ ಶೈಲಿ ವಿಕಾಸ ಹೊಂದಿತು. ಈ ಕಾಲದ ಕಟ್ಟಡಗಳನ್ನು ಕೋಟೆಗಳು, ಹೆಬ್ಬಾಗಿಲುಗಳು, ಸರೋವರಗಳು, ದೇವಾಲಯಗಳು, ತೋರಣಗಳೆಂದು ವಿಭಾಗಿಸ ಬಹುದು. ಶಾಸನಗಳಲ್ಲಿ ಪ್ರಾಕಾರಗಳೆಂದು ಕರೆಯಲಾದ ಕೋಟೆಗಳು ಕ್ರಮೇಣ ಹಾಳಾಗಿ ಈಗ ಅಲ್ಲಲ್ಲಿ ದಿಬ್ಬಗಳಾಗಿ ಕಾಣುತ್ತವೆ. ದಾಭೋಯಿಕೋಟೆಯ ನಿರ್ಮಾಣ ಪ್ರಾಯಶಃ ಜಯಸಿಂಹ ಸಿದ್ಧರಾಜ ಮತ್ತು ಅವನ ಹಿಂದಿನವ ರಿಂದ ಪ್ರಾರಂಭವಾಗಿ ವಾಘಲಾರಾಜನಾದ ವಿಸಾಲಿ ದೇವನ (1244–61) ಕಾಲದವರೆಗೂ ಮುಂದುವರಿಯಿತು. ವಸ್ತುಪಾಲಚರಿತ ಎಂಬ ಗ್ರಂಥದ ಪ್ರಕಾರ ವಸ್ತುಪಾಲನ ಸಹೋದರನಾದ ತೇಜಪಾಲ ಮತ್ತು ವಾಘೇಲದ ರಾಜ ವೀರಧವಲನ ಮಂತ್ರಿ ಈ ನಗರದ ಪ್ರಾಕಾರವನ್ನು ಕಟ್ಟಿಸಿದರು. ಈಗ ಇದರ ನಾಲ್ಕು ಬದಿಗಳಲ್ಲಿಯ ಹೆಬ್ಬಾಗಿಲುಗಳು ಉಳಿದಿವೆ. ವಡೋದರದ ಕೋಟೆಯ ಹೆಬ್ಬಾಗಿಲಿನ ಕಂಬಗಳು ಸುಂದರವಾದ ಚಿತ್ರಗಳಿಂದಲೂ ಮೂರ್ತಿಗಳಿಂದಲೂ ಅಲಂಕೃತವಾಗಿವೆ. ಝಿಂಜೂವಾದ, ಗುಮ್ಲಿ, ಜುನಾಗಢಗಳಲ್ಲಿಯೂ ಇಂಥ ಕೋಟೆಗಳ ಅವಶೇಷಗಳಿವೆ.

ಮಹಾರಾಣಿ ಮಯಣಲ್ಲದೇವಿ ಕಟ್ಟಿಸಿದ (1,100), ವಿರಂಗಾಮಿನಲ್ಲಿಯ ಮಾನಸರ್ ಸರೋವರ ಪ್ರಾಯಶಃ ಶಂಖಾಕೃತಿಯದು; ಇಳಿಯಲು ಹಾಗೂ ಮೇಲೇರಲು ಹಲವು ದಾರಿಗಳಿಂದ ಕೂಡಿದ್ದು. ಘಾಟಿನಲ್ಲಿ ಈಗ ಸುಮಾರು 357 ಸಣ್ಣ ಶೈವ ವೈಷ್ಣವ

ಗುಡಿಗಳಿವೆ. ಮೊದಲು 520 ಗುಡಿಗಳಿದ್ದವು. ಮೊಢೇರದಲ್ಲಿಯ ಸೂರ್ಯ ದೇವಾಲಯದ ಪಕ್ಕದ ರಾಮಕುಂಡದ (ಸು. 11 ನೆಯ ಶತಮಾನ) ನೀರಿನ ಮಟ್ಟದ ತನಕ ಅಲ್ಲಲ್ಲಿ ಸುತ್ತಲೂ ಅಗಲವಾದ ಸ್ಥಳ ಬಿಟ್ಟಿದೆ. ಪ್ರತಿಯೊಂದು ಮೂಲೆಯಲ್ಲೂ ಹಂತಹಂತದ ಮಧ್ಯೆ ಒಂದೊಂದು ಸಣ್ಣ ಗುಡಿಯುಂಟು. ಅನ್ಹಿಲ್‍ವಾಡದ ರಾಣಿ ಬಾವಿ, ಬಾರೋತ್ ಬಾವಿಗಳು, ವಾಯಡದಲ್ಲಿಯ ಬಾವಿ, ವರ್ಧ್ವಾನ್‍ದ ಮಾಧವ ಮತ್ತು ಗಂಗಾ ಬಾವಿಗಳು ಹಾಗೂ ಧಾಂಡಲ್‍ಪುರದ ಬಾವಿಗಳು ವಾಸ್ತುಶೈಲಿಯ ದೃಷ್ಟಿಯಿಂದ ಪ್ರೇಕ್ಷಣೀಯ.



ಕೀರ್ತಸ್ತಂಭ, ವಡನಗರ

ಚಾಳುಕ್ಯರ ಕಾಲದ ದೇವಾಲಯಗಳನ್ನು ಎರಡು ಗುಂಪುಗಳಾಗಿ ವಿಂಗಡಿಸ ಬಹುದು. ಮೊದಲಿನ ಗುಂಪಿನ ದೇವಾಲಯಗಳನ್ನು ಅಳತೆ ಪ್ರಮಾಣಗಳ ದೃಷ್ಟಿಯಿಂದ ಮತ್ತೆ ಎರಡು ಗುಂಪುಗಳನ್ನಾಗಿ ವಿಭಾಗಿಸಬಹುದು. ಉತ್ತರ ಗುಜರಾತಿನಲ್ಲಿರುವ ಸೂನಕ್, ಸಂಡೆರ್, ರುಹಾವಿ, ದಿಲ್‍ಮಾಲ್, ಕಸರ್, ಧಿನೋಜ್, ಮಾಮೊಡ ಮತ್ತು ಕಾಠಿಯಾವಾಡದ ಪರಬಾದಿ, ಚೌಬಾರಿಗಳಲ್ಲಿಯ ದೇವಾಲಯಗಳು ಸಾಮಾನ್ಯವಾಗಿ ಸಣ್ಣವಾಗಿವೆ. ಮೊಢೇರ, ರುದ್ರಮಾಲ್ (ಉತ್ತರ ಗುಜರಾತ್), ಥಾನ್, ಸೋಮನಾಥ್ ಬಳಿಯ ಭೀಮನಾಥ್ ಮತ್ತು ಹಿರಣ್ಯ ನದಿಯ ಹತ್ತಿರದ ಸೂರ್ಯ ದೇವಾಲಯ-ಇವು ದೊಡ್ಡವಾಗಿವೆ. ಮೊಢೇರ ಸೂರ್ಯ ದೇವಾಲಯವನ್ನು 1026ರಲ್ಲಿ ನಿರ್ಮಿಸಲಾಗಿದೆ ಎಂದು ಶಾಸನಗಳಿಂದ ತಿಳಿಯುತ್ತದೆ. ಈ ದೇವಾಲಯದಲ್ಲಿ ಸೂರ್ಯಕುಂಡ ಅಥವಾ ರಾಮಕುಂಡ, ಸಭಾ ಮಂಟಪ ಮತ್ತು ಗೂಢ ಮಂಟಪವಿದೆ. ಸಭಾ ಮಂಟಪದಲ್ಲಿ ಸುಂದರ ಕೆತ್ತನೆ ಕೆಲಸ ಮತ್ತು ಕೆಳಭಾಗದಲ್ಲಿ ಅನೇಕ ಉಬ್ಬು ಶಿಲ್ಪಿಗಳನ್ನೊಳಗೊಂಡ 52 ಕಂಬಗಳಿವೆ. ಈ ಕಂಬಗಳಲ್ಲಿ ಅನೇಕ ಶಿಲ್ಪಗಳಿದ್ದು, ಕೆಲವು ಅಪರೂಪದ ಜೀವನ ಚಕ್ರದ ಶಿಲ್ಪಗಳಿವೆ. ಇವುಗಳಲ್ಲಿ ಯುವಕ-ಯುವತಿಯರಲ್ಲಿಯ ಸಹಜ ಕಾಮೋನ್ಮಾದದಿಂದ ಹಿಡಿದು, ಗರ್ಭದಾರಣೆ, ಹುಟ್ಟು ಮೊದಲಾದ ಹಂತಗಳ ಮೂಲಕ ಕಡೆಯಲ್ಲಿ ಸಾವಿನವರೆಗೆ ಜೀವನ ಚಕ್ರದ ಪ್ರಮುಖ ಹಂತಗಳನ್ನು ನಿರೂಪಿಸಲಾಗಿದೆ. ಪ್ರಪಂಚದಲ್ಲಿ ನಿರಂತರವಾಗಿ ನಡೆಯುತ್ತಿರುವ ಸೃಷ್ಟಿ, ಸ್ಥಿತಿ ಮತ್ತು ಲಯದ ವಾಸ್ತವಾಂಶವನ್ನು ಮುಕ್ತವಾಗಿ ಚಿತ್ರಿಸಿರುವುದು ಈ ದೇವಾಲಯದ ಒಂದು ವಿಶೇಷವಾಗಿದೆ. ಸೋಮನಾಥದ ಶಿವದೇವಾಲಯ ಮತ್ತು ಗುಮ್ಲಿ ಸೆಜಕ್‍ಪುರದ ದೇವಾಲಯಗಳು ಎರಡನೆಯ ಗುಂಪಿಗೆ ಸೇರಿವೆ. ಇವಲ್ಲದೆ ತಾರಿಂಗ, ಸರೋತ್ರ, ಆಬು, ಗಿರ್ನಾರ್ ಮತ್ತು ಶತ್ರುಂಜಯದಲ್ಲಿಯ ಜೈನದೇವಾಲಯಗಳದು ಅವುಗಳ ವಾಸ್ತು ವೈಶಿಷ್ಟ್ಯದಿಂದ ಒಂದು ಪ್ರತ್ಯೇಕವಾದ ಗುಂಪು.



ಸೂರ್ಯದೇವಾಲಯ, ಮೊಢೇರ

ಸಾಮಾನ್ಯವಾಗಿ ಈ ದೇವಾಲಯಗಳ ಗೋಡೆಗಳ ಹೊರಬದಿಯಲ್ಲಿ, ಗರ್ಭಗುಡಿಯ ಮುಂದಿನ ಮಂಟಪದ ಮಧ್ಯದ ಗುಮ್ಮಟಾಕಾರದ ಚಾವಣಿಯಲ್ಲಿ ಮತ್ತು ಕಂಬಗಳ ಮೇಲೆ ವಿಶೇಷವಾಗಿ ದೇವಮಾನವ ಮೂರ್ತಿಗಳೂ ರೇಖಾ ಹೂಬಳ್ಳಿ ಚಿತ್ರಗಳೂ ಇರುತ್ತವೆ. ಗೋಡೆಗಳು ಅಲ್ಲಲ್ಲಿ ಕ್ರಮವಾಗಿ ಹಿಂದಕ್ಕೆ ಸರಿದು ಮುಂದಕ್ಕೆ ಚಾಚಿರುವುದರಿಂದ ತಳವಿನ್ಯಾಸ ಚತುಷ್ಕೋಣವಾಗಿರದೆ ಸಮಸಂಖ್ಯೆಯ ಅನೇಕ ಕೋಣಗಳುಳ್ಳ ಹಲವು ಭುಜುಗಳನ್ನುಳ್ಳದ್ದಾಗಿದೆ. ಈ ಎರಡು ಲಕ್ಷಣಗಳು 500-1000ದ ಕಾಲದ ಗುಡಿಗಳಲ್ಲಿ ಇಲ್ಲ. ಮಂಟಪದ ಮೇಲೆ ಗುಮ್ಮಟವೂ ಗರ್ಭಗುಡಿಯ ಮೇಲೆ ರೇಖಾನಾಗರ ಶೈಲಿಯ ಶಿಖರವೂ ಇವೆ. ಸರ್ನೆಲ್‍ದಲ್ಲಿಯ ಗಲ್ತೆಶ್ವರ ದೇವಾಲಯ 38 ಕಂಬಗಳ ಸಭಾ ಮಂಟಪದಿಂದ ಮತ್ತು ವರ್ತುಳಾಕಾರದ ನಕ್ಷತ್ರಾಕೃತಿಯ ತಳವಿನ್ಯಾಸದ ಗರ್ಭಗುಡಿಯಿಂದ ಕೂಡಿದೆ. ಗಿರ್ನಾರದ ನೇಮಿನಾಥ ದೇವಾಲಯಕ್ಕೆ ಸುತ್ತಲೂ ಸರಾಯಿಯ ಪ್ರಾಕಾರವಿದೆ. ಹಾಗೆಯ ಗುಮ್ಲಿಯ ನವಲಾಖ ದೇವಾಲಯಕ್ಕೆ ಸರಾಯಿಯಿಲ್ಲದ ಪ್ರಾಕಾರವುಂಟು. ಕಸರ್ ಮತ್ತು ಗಿರ್ನಾರ್‍ಗಳಲ್ಲಿ ತ್ರಿಕೂಟಾಚಲ ದೇವಾಲಯಗಳಿವೆ. ಪ್ರಸಿದ್ಧವಾದ ಸೋಮನಾಥ ದೇವಾಲಯ ಪದೇಪದೇ ಶತ್ರುಗಳ ಹಾವಳಿಗಳಿಂದ ಹಾಳಾಗಿ ಜೀರ್ಣೋದ್ಧಾರಗೊಂಡು, ಅದರ ಮೊದಲಿನ ಸ್ವರೂಪ ಬದಲಾಗಿದೆ.


ವಡನಗರ, ಕಪದ್ವಂಜ್, ಐಲುದ್ರ, ರೇವ-ಈ ಸ್ಥಳಗಳಲ್ಲಿಯ ಕೀರ್ತಿ ತೋರಣಗಳು ಗುಜರಾತಿನ ವಾಸ್ತುಶಿಲ್ಪದ ಗುರುತುಗಳು. ಇವುಗಳಲ್ಲಿ ವಡನಗರದಲ್ಲಿರುವುದು ಪ್ರರೂಪಿ ಸ್ವರೂಪದ್ದು. ಇದು ಸಂಪೂರ್ಣ ಸೂಕ್ಷ್ಮ ಕುಸುರಿ ಕೆತ್ತನೆಯಿಂದ ಅಲಂಕೃತವಾಗಿದೆ.

(ಎ.ಎಸ್)

**ಗುಜರಾತಿನ ಶಾಸನಗಳು, ನಾಣ್ಯಗಳು :** 1. **ಶಾಸನಗಳು** : ಗುಜರಾತು ಪ್ರ.ಶ.ಪೂ. ಸು. 3ನೆಯ ಶತಮಾನದಿಂದ ಪ್ರ.ಶ. 14ನೆಯ ಶತಮಾನದವರೆಗೆ ಕ್ರಮವಾಗಿ ಮೌರ್ಯ, ಕ್ಷತ್ರಪ, ಗುಪ್ತ, ತ್ರೈಕೂಟಕ, ಗೂರ್ಜರ, ಚಾಳುಕ್ಯ, ರಾಷ್ಟ್ರಕೂಟ, ವಲ್ಲಭಿ, ಮೈತ್ರಕ, ಸೋಲಂಕಿ ಮತ್ತು ವಾಘೇಲದ ಚಾಳುಕ್ಯ ಮುಂತಾದ ರಾಜವಂಶದವರ ಆಳ್ವಿಕೆಗೆ ಒಳಪಟ್ಟತ್ತೆಂಬುದೂ ಅವರಲ್ಲಿ ಕೆಲವರ ವಂಶಾವಳಿಯೂ ಧಾರ್ಮಿಕ ರಾಜಕೀಯ ಲೋಕೋಪಯೋಗಿ ವಿಷಯಗಳೂ ಚಟುವಟಿಕೆಗಳೂ ಇದುವರೆಗೆ ದೊರೆತ ಸುಮಾರು 300 ಶಾಸನಗಳಿಂದ ತಿಳಿದಿವೆ.

ಅಶೋಕ ಪ್ರಾಣಿಹತ್ಯೆಯನ್ನು ನಿಷೇಧಿಸಿದ್ದು, ಮಾರ್ಗಬದಿಗಳಲ್ಲಿ ಗಿಡ ಮರಗಳನ್ನು ನೆಡಿಸಿದ್ದು, ಬಾವಿಗಳನ್ನು ತೋಡಿಸಿದ್ದು, ಧರ್ಮಪ್ರಚಾರಕ್ಕೂ ನ್ಯಾಯ ಪರಿಪಾಲನೆಗೂ ಅಧಿಕಾರಿಗಳನ್ನು ನೇಮಿಸಿ ಅವರ ಕರ್ತವ್ಯಗಳನ್ನು ನಿರೂಪಿಸಿದ್ದು, ಜನಸಾಮಾನ್ಯರಲ್ಲಿ ನೀತಿಯ ಮಟ್ಟವನ್ನು ಹೆಚ್ಚಿಸಿ ಧರ್ಮಾಂಧತೆಯನ್ನು ಹೋಗಲಾಡಿಸಿ ಧರ್ಮಸಮನ್ವಯಕ್ಕೆ ಪ್ರಯತ್ನ ಮಾಡಿದ್ದು-ಮುಂತಾದ ವಿಷಯಗಳು ಗಿರ್ನಾರ್‍ನಲ್ಲಿ ದೊರೆತ, ಅಶೋಕ ಚಕ್ರವರ್ತಿಯ 14 ಕಲ್ಲುಬಂಡೆ ಶಾಸನಗಳಲ್ಲಿವೆ. ತರುವಾಯದ ಕ್ಷತ್ರಪರ ಶಾಸನಗಳಲ್ಲಿ

ಮುಖ್ಯವಾದವೆಂದರೆ ಜುನಾಗಢದ ರುದ್ರದಾಮನ ಶಾಸನ. ಭೀಕರ ಮಳೆಗಾಳಿಯಿಂದಾಗಿ ಅಲ್ಲಿಯ ಸುದರ್ಶನ ಸರೋವರದ ಕಟ್ಟೆ ಒಡೆದು ಅದನ್ನು ತಿರುಗಿ ಕಟ್ಟಿಸಲಸಾಧ್ಯವೆನ್ನುವಂಥ ಸ್ಥಿತಿಯಲ್ಲಿದ್ದಾಗ ಕ್ಷತ್ರಪರುದ್ರದಾಮನ್ ಧೈರ್ಯದಿಂದ ತನ್ನ ಪ್ರಾಂತ್ಯಾಧಿಕಾರಿ ಸುವಿಶಾಖನಿಂದ (ಕುಲೇಪನ ಮಗ) ಮತ್ತೆ ಅದನ್ನು ಕಟ್ಟಿಸಿದನೆಂದು ತಿಳಿಸುತ್ತದೆ. ಅಲ್ಲದೆ, ಈ ಸರೋವರವನ್ನು ಚಂದ್ರಗುಪ್ತ ಮೌರ್ಯನ ಪ್ರಾಂತ್ಯಾಧಿಕಾರಿಯಾಗಿದ್ದ ವೈಶ್ಯ ಪುಷ್ಯಗುಪ್ತ ನಿರ್ಮಿಸಿದನೆಂದೂ ಅನಂತರ ಅಶೋಕಮೌರ್ಯನ ಪ್ರಾಂತ್ಯಾಧಿಕಾರಿ ತುಶಾಷ್ಪ ಅದಕ್ಕೆ ಕಾಲುವೆಗಳನ್ನು ಮಾಡಿಸಿ ಜನರಿಗೆ ಹೆಚ್ಚು ಉಪಯೋಗವಾಗುವ ಹಾಗೆ ಮಾಡಿದನೆಂದೂ ಇದರಲ್ಲಿ ಹೇಳಿದೆ. ಸ್ಕಂದಗುಪ್ತ ಈ ಸರೋವರವನ್ನು ಮತ್ತೆ ಜೀರ್ಣೋದ್ಧಾರ ಮಾಡಿಸಿದನೆಂಬುದೂ ಇವರ ಪ್ರಾಂತ್ಯಾಧಿಕಾರಿಯಾದ ಚಕ್ರಪಾಲಿತ ಒಂದು ವಿಷ್ಣು ದೇವಾಲಯವನ್ನು ಇಲ್ಲಿ ಕಟ್ಟಿಸಿದನೆಂಬುದೂ ಇಲ್ಲಿ ದೊರಕಿರುವ ಸ್ಕಂದಗುಪ್ತನ ಶಾಸನದಿಂದ ತಿಳಿದುಬರುತ್ತದೆ.



ಅಶೋಕನ ಬಂಡೆ ಶಾಸನ, ಗಿರ್ನಾರ್

ಗೂರ್ಜರ ವಂಶದ ಮುಮ್ಮಡಿ ಜಯಭಟನ ತಾಮ್ರಶಾಸನದಲ್ಲಿ (ಶಕವರ್ಷ 456) ಅವನ ವಂಶಾವಳಿ ಮತ್ತು ಸಮಿಪದ್ರಕ ಗ್ರಾಮದಲ್ಲಿಯ ಭೂಮಿದಾನದ ವಿಷಯ ಇವೆ. ನವಸರಿತದ ಚಾಳುಕ್ಯರ ಶ್ರ್ಯಾಶ್ರಯ ಶೀಲಾದಿತ್ಯನ ತಾಮ್ರಶಾಸನದಲ್ಲಿ (ಶ.ವ. 421) ಆ ರಾಜನ ವಂಶಾವಳಿಯ ಜೊತೆಗೆ ಆಸಟ್ಟಿ ಗ್ರಾಮ ದಾನಮಾಡಿದ್ದಾಗಿ ಹೇಳಿದೆ. ಸೂರತ್ ಸಮೀಪದ ಅಂತ್ರೋಳಿ–ಚ್ಚರೋಳಿಯಲ್ಲಿ ದೊರೆತ, ರಾಷ್ಟ್ರಕೂಟ ಇಮ್ಮಡಿ ಕಕ್ಕನ ತಾಮ್ರಶಾಸನದಲ್ಲಿ (ಶ.ವ. 679) ಇವನ ಗ್ರಾಮದಾನದ ವಿಷಯ ಹೇಳುವಾಗ ಇವನ ವಂಶಾವಳಿ ಇದೆ. ಮೌಂಟ್ ಅಬುದಲ್ಲಿಯ ವಿಮಲದೇವಸ್ಥಾನ ಚಾಳುಕ್ಯ (ಸೋಲಂಕಿ) ವಂಶದ ಒಂದನೆಯ ಭೀಮನ ಕಾಲದಲ್ಲಿ ಕಟ್ಟಲ್ಪಟ್ಟಿತೆಂದು ಆ ದೇವಾಲಯದಲ್ಲಿಯ ಶಾಸನ (ಶ.ವ. 1119) ತಿಳಿಸುತ್ತದೆ. ಇದೇ ವಂಶದ ಜಯಸಿಂಹ ಮಾಳವದ ಯಶೋವರ್ಮನನ್ನು ಸೋಲಿಸಿದನೆಂದೂ ಅವಂತಿಮಂಡಳ ಅವನ ಅಧೀನವಾಗಿತ್ತೆಂದೂ ಉಜ್ಜಯನಿಯ ಒಂದು ಶಾಸನದಲ್ಲಿದೆ (ಪ್ರ.ಶ. 1195). ವಡನಗರದ ಪ್ರಶಸ್ತಿಯಲ್ಲಿ (ಶ.ವ. 1208) ಮೂಲರಾಜನಿಂದ ಹಿಡಿದು, ಚಾಮುಂಡ, ವಲ್ಲಭ ಮತ್ತು ದುರ್ಲಭರಿಂದ ಕೂಡಿದ ಚಾಳುಕ್ಯ ರಾಜರ ವಂಶಾವಳಿಯನ್ನು ಹಾಗೂ ಈ ವಂಶದ ಕುಮಾರಪಾಲ ಕೋಟೆಯನ್ನು ಕಟ್ಟಿಸಿದನೆಂಬ ವಿಷಯವನ್ನು ಹೇಳಿದೆ. ಕುಮಾರಪಾಲನ ಕಾಲದಲ್ಲಿ ಗಂಡ ಬೃಹಸ್ಪತಿ ಸೋಮನಾಥ ದೇವಾಲಯವನ್ನು ಜೀರ್ಣೋದ್ಧಾರ ಮಾಡಿದನೆಂದು ಪ್ರಭಾಸ್ ಪಾಟನ್ ಶಾಸನದಲ್ಲಿ (ವಿಕ್ರಮ ಶಕೆ 850) ಇದೆ. ಈಗ ಸಿಂತ್ರದಲ್ಲಿಟ್ಟಿರುವ (ಪೋರ್ಚುಗಲ್), ಸೋಮನಾಥದಲ್ಲಿಯ ಒಂದು ಶಾಸನದಲ್ಲಿ (ಶ.ವ. 1342) ತ್ರಿಪುರಾಂತಕನೆಂಬ ಲಾಕುಳಿಶ ಪಾಶುಪತ ಸಂನ್ಯಾಸಿ ಸೋಮನಾಥ ದೇವಾಲಯಕ್ಕೆ ಕೊಡಮಾಡಿದ ದತ್ತಿಯ ವಿಷಯವಿದೆ.

ವಲ್ಲಭಿಯಿಂದ ಆಳಿದ ಮೈತ್ರಕರ ಶಾಸನಗಳು ಸುಮಾರು 110 ದೊರೆತಿವೆ. ಇವುಗಳಲ್ಲಿ 90ಕ್ಕೂ ಹೆಚ್ಚಿನವು ತಾಮ್ರ ಶಾಸನಗಳು. ಮೈತ್ರಕರ ಶಾಸನಗಳಲ್ಲಿ ಕಂಡುಬರುವ ರಾಜಮುದ್ರೆಯ ಮೇಲಿನ ಚಿಹ್ನೆ ಕುಳಿತಿರುವ ನಂದಿಯದು. ಇದರ ಕೆಳಗೆ ಶ್ರೀ ಭಟಾರ್ಕಃ ಎಂಬ ಅಂಕಿತ ಕಂಡುಬಂದಿದೆ. ಇದು ಮನೆತನದ ಮೂಲಪುರುಷನಾದ ಭಟಾರ್ಕನ ಅಂಕಿತ. ಅನಂತರ ಆಳಿದ ಎಲ್ಲರೂ ಇದನ್ನೇ ಬಳಸಿರುವುದು ಗಮನಾರ್ಹ.

ಪ್ರಾಚೀನತಮ ತಾಮ್ರ ಶಾಸನ ಭಾವನಗರ ಜಿಲ್ಲೆಯ ಭಮೋದ್ರ – ಮೊಹೊತದಲ್ಲಿ ದೊರೆತ. ಗುಪ್ತವಲ್ಲಭೀ 183ನೆಯ ಸಂವತ್ಸರದ (ಪ್ರ.ಶ. 502) ದ್ರೋಣಸಿಂಹನದು. ಹಸ್ತವಪ್ರ ಆಹಾರದಲ್ಲಿಯ ಭಗವತೀ ದೇವಾಲಯಕ್ಕೆ ತ್ರಿಸಂಗಮಕ ಗ್ರಾಮವನ್ನು ದತ್ತಿಯಾಗಿ ಬಿಟ್ಟಿದ್ದು ಶಾಸನ ವಿಷಯ. ಶಾಸನವನ್ನು ಅರಸನ ಆಜ್ಞೆಯ ಮೇರೆಗೆ ಬರೆದ ಲೇಖಕ ಷಷ್ಠಿದತ್ತನ ಮಗ ಕುಮಾರಿಲ ಕ್ಷತ್ರಿಕ. ಇದು ದ್ರೋಣಸಿಂಹನ ಏಕೈಕ ಶಾಸನ.

ಒಂದನೆಯ ಧ್ರುವಸೇನನ 15 ತಾಮ್ರ ಶಾಸನಗಳಲ್ಲಿ ಹದಿನಾಲ್ಕರ ಲೇಖಕ ಕಿಕ್ಕುಕ; ಹದಿನೈದನೆಯದರ ಲೇಖಕ ಭದ್ರ. ಇಮ್ಮಡಿ ಧರಸೇನನ ಹನ್ನೆರಡು ಶಾಸನಗಳನ್ನೂ ಅತನಿಗೆ ಮೊದಲು ಆಳಿದ ಗುಹಸೇನನ ಎರಡು ಶಾಸನಗಳನ್ನೂ ಬರೆದಿರುವ ಅಧಿಕಾರಿ ಸ್ಕಂದಭಟ್ಟ. ಅಂತೆಯೇ ಶೀಲಾದಿತ್ಯನ 9 ಶಾಸನಗಳ, ಖರಗ್ರಹನ 2 ಶಾಸನಗಳ, ಮುಮ್ಮಡಿ ಧರಸೇನನ 1 ಶಾಸನದ, ಇಮ್ಮಡಿ ಧ್ರುವಸೇನನ 3 ಶಾಸನಗಳ ಲೇಖಕ ವತ್ಸಭಟ್ಟಿ. ಇವರ ಕೆಲವು ಶಾಸನಗಳ ಸಾಹಿತ್ಯದಲ್ಲಿ ಪ್ರಸಿದ್ಧ ಕವಿಗಳಾದ ಕಾಳಿದಾಸ ಮುಂತಾದವರ ಶೈಲಿಯ ಪ್ರಭಾವವನ್ನು ಸ್ಪಷ್ಟವಾಗಿ ಕಾಣಬಹುದು.

ಇದುವರೆಗೆ ದೊರೆತಿರುವ ಶಿಲಾಶಾಸನಗಳೆಲ್ಲ ಭಗ್ನಗೊಂಡ ಸ್ಥಿತಿಯಲ್ಲಿವೆ. ಯಾವ ಒಂದು ಶಾಸನವೂ ಸಂಪೂರ್ಣವಾಗಿಲ್ಲ. ಕೆಲವರಲ್ಲಿ ಹಲವರ ಹೆಸರುಗಳ ಅಥವಾ ತಥಾಗತನಿಗೆ ಸಂಬಂಧಿಸಿದ ಉಲ್ಲೇಖಗಳನ್ನು ಕಾಣಬಹುದು. ಇವಲ್ಲದೆ ಇವರ ಶಾಸನಗಳಿರುವ ಮುದ್ರೆಗಳೂ ಹಲವಾರು ದೊರೆತಿವೆ. ಇವುಗಳಲ್ಲಿ ಬಹಳ ಮಟ್ಟಿಗೆ ಬೌದ್ಧಧರ್ಮಕ್ಕೆ ಸಂಬಂಧಿಸಿದ, ಯೇ ಧಮ್ಮ ಹೇತು ಪ್ರಭವಾ ಎಂದು ಆರಂಭವಾಗುವ ಸೂತ್ರವನ್ನು ಕೆತ್ತಲಾಗಿದೆ. ಸುಮಾರು 1.3 ಸೆಂಮೀ ಕಾಗದದ ಮೇಲೆ ಒತ್ತುವ ಮುದ್ರೆಯೊಂದರಲ್ಲಿ ಶ್ರೀ ಶೀಲಾದಿತ್ಯನೆಂಬ ಹೆಸರನ್ನು ಹಿಮ್ಮುಖವಾಗಿ ಕೆತ್ತಲಾಗಿದೆ.

**2. ನಾಣ್ಯಗಳು:** ಭಾರತದ ವಾಯುವ್ಯ ಭಾಗದಲ್ಲಿ ಪ್ರ.ಶ.ಪೂ. 2ನೆಯ ಶತಮಾನದಿಂದ ಪ್ರ.ಶ. 1ನೆಯ ಶತಮಾನದವರೆಗೆ ಆಳುತ್ತಿದ್ದ ಗ್ರೀಕರಿಂದ ಗುಜರಾತಿನ ಭಾಗದಲ್ಲಿ ನಾಣ್ಯ ಪದ್ಧತಿ ಸ್ಥಿರವಾಯಿತೆಂದು ಹೇಳಬಹುದು. ಇವರ ಪೂರ್ವದಲ್ಲಿ 5 ಗ್ರೇನ್ ತೂಕದ ಸ್ವಸ್ತಿಕ, ತ್ರಿಶೂಲ, ವೃತ್ತ, ಆನೆ, ಚಕ್ರ ಮುಂತಾದ ಚಿಹ್ನೆಗಳುಳ್ಳ ನಾಣ್ಯಗಳು ಉಪಯೋಗದಲ್ಲಿದ್ದುವು. ಕಾಮ್ರೇಜ್‌ನಲ್ಲಿ ದೊರೆತ ನಾಣ್ಯಗಳಲ್ಲಿ ಕೆಲವು ಅಚ್ಚೊತ್ತಿದವು. ಕೆಲವು ಎರಕ ಹೊಯ್ದವು; ಮತ್ತು ಆವಂತಿ, ಉಜ್ಜಯನಿ ನಾಣ್ಯಗಳು. ಗ್ರೀಕರ ಬೆಳ್ಳಿ ಹಾಗೂ ತಾಮ್ರದ ನಾಣ್ಯಗಳು ವೃತ್ತಾಕಾರ ಅಥವಾ ಸಮಬಾಹುಗಳುಳ್ಳ ಚತುರ್ಭುಜಾಕಾರದವಾಗಿವೆ; ಅವುಗಳ ಮೇಲೆ ಗ್ರೀಕ್ ಮತ್ತು ಖರೋಷ್ಠಿ ಅಕ್ಷರಗಳೂ ರಾಜನ ತಲೆಯ ಚಿತ್ರವೂ ಇವೆ. ಕ್ಷಹರಾತ ಮತ್ತು ಕ್ಷತ್ರಪರ ನಾಣ್ಯಗಳಲ್ಲಿ ಬಾಣ, ಚಕ್ರ, ವಜ್ರಾಯುಧ, ಧರ್ಮಚಕ್ರ ಮುಂತಾದ ಚಿತ್ರಗಳು, ರಾಜನ ತಲೆಯ ಚಿತ್ರ ಮತ್ತು ಬ್ರಾಹ್ಮಿ ಮತ್ತು ಖರೋಷ್ಠಿ ಅಕ್ಷರಗಳಿವೆ. ಕಾರ್ದಮಕ ಕ್ಷತ್ರಪರ ನಾಣ್ಯಗಳು ಮಾತ್ರ ಹೆಚ್ಚು ವೈವಿಧ್ಯಪೂರ್ಣವಾದಂಥವು. ಇವು ತಾಮ್ರ, ಬೆಳ್ಳಿ ಮತ್ತು ಸತುವಿನಿಂದ ಮಾಡಿದವು; ವೃತ್ತಾಕಾರ ಅಥವಾ ಸಮಬಾಹುಗಳುಳ್ಳ ಚತುರ್ಭುಜಾಕಾರದವು. ಇವುಗಳ ಒಂದು ಬದಿಯಲ್ಲಿ ರಾಜನ ತಲೆಯ ಚಿತ್ರವೂ ಗ್ರೀಕ್ ಅಕ್ಷರವೂ ಮತ್ತೊಂದು ಬದಿಯಲ್ಲಿ ಬ್ರಾಹ್ಮಿ ಮತ್ತು ಖರೋಷ್ಠಿ ಲಿಪಿಯಲ್ಲಿ ರಾಜನ ಹೆಸರೂ ಇವೆ. ಬ್ರಾಹ್ಮಿ ಸಂಖ್ಯೆಯಲ್ಲಿ ಶಾಲಿವಾಹನ ಶಕೆಯೂ ನಕ್ಷತ್ರ, ಚಂದ್ರ, ಚೈತ್ಯ ಮುಂತಾದ ಚಿಹ್ನೆಗಳೂ ಇರುತ್ತವೆ. ಭಾರತ – ರೋಂ ವ್ಯಾಪಾರಕ್ಕೆ ಭಡೋಚ ಒಂದು ಕೇಂದ್ರವಾಗಿದ್ದುದರಿಂದ ಇಲ್ಲೂ ಬೆಳ್ಳಿ ಚಿನ್ನಗಳ ರೋಮನ್ ನಾಣ್ಯಗಳು ಇದ್ದಿರಬೇಕು. ರೋಮನ್ ಚಕ್ರವರ್ತಿ ಲೂಸಿಯಸ್ ವೀರಸನ (130 – 169) ಒಂದು ನಾಣ್ಯ ದೊರೆತಿದೆ. ಉಳಿದ ನಾಣ್ಯಗಳನ್ನು ಚಿನ್ನ ಬೆಳ್ಳಿಗಾಗಿ ಪ್ರಾಯಶಃ ಕರಗಿಸಿರಬೇಕು. ಗುಪ್ತರವು ಬೆಳ್ಳಿ ಮತ್ತು ತಾಮ್ರ ನಾಣ್ಯಗಳು. ಇಲ್ಲವೇ ರಜತಲೇಪಿತ ತಾಮ್ರ ನಾಣ್ಯಗಳು; ವೃತ್ತಾಕಾರದವು. ರಾಜನ ತಲೆಯ ಚಿತ್ರ, ಗುಪ್ತ ಶಕೆ, ರಾಜನ ಹೆಸರು ಮತ್ತು ಗರುಡ, ವಕ್ರಗೆರೆ, ಮಲಗಿದ ನಂದಿ, ಅಗ್ನಿಯುಳ್ಳ ವೇದಿಕೆ ಮುಂತಾದ ಚಿಹ್ನೆಗಳಿವೆ. ತ್ರೈಕೂಟಕರ ನಾಣ್ಯಗಳು ದುಂಡಾಗಿವೆ; ಬೆಳ್ಳಿಯವು. ರಾಜನ ತಲೆ, ಚೈತ್ಯ ನಕ್ಷತ್ರಗಳ ಚಿಹ್ನೆ ರಾಜನ ಹೆಸರು ಇವೆ. ಹೆಸರನ್ನು ಸೂಚಿಸುವಲ್ಲಿ ಕ್ಷತ್ರಪರ, ಗುಪ್ತರ ಪ್ರಭಾವವನ್ನು ಕಾಣಬಹುದು.

ಗುಜರಾತಿನ ನಾಣ್ಯಪದ್ಧತಿಯ ವೈಶಿಷ್ಟ್ಯವೆಂದರೆ ಇಂಡೋ – ಗ್ರೀಕರ ಕಾಲದಿಂದ ತ್ರೈಕೂಟಕರವರೆಗೆ ಬೆಳ್ಳಿಯ ಬಳಕೆ ಒಂದೇ ತೆರನಾಗಿರುವುದು ಮತ್ತು ರಾಜನ ತಲೆಯನ್ನು ಮೂಡಿಸುವ ಪದ್ಧತಿ ಏಕಪ್ರಕಾರವಾಗಿ ಉಳಿದುಬಂದಿರುವುದು.

ತ್ರೈಕೂಟಕರ ಅನಂತರ ಬಂದ ರಾಜರ ನಾಣ್ಯಗಳು, ವಲ್ಲಭಿಯ ಮೈತ್ರಕರವು ಹೊರತು, ಸಿಕ್ಕಿಲ್ಲ. ಮೈತ್ರಕರು ಬೆಳ್ಳಿ ಹಾಗೂ ತಾಮ್ರದ ನಾಣ್ಯಗಳನ್ನು ಅಚ್ಚು ಹಾಕಿಸಿದರು ಬೆಳ್ಳಿ ನಾಣ್ಯಗಳು ಸಂಪೂರ್ಣ ಬೆಳ್ಳಿಯವಾಗಿರದೆ ಬೆಳ್ಳಿಯ ಲೇಪನವನ್ನು ಹೊಂದಿವೆ. ಇವರ ಮೊದಲಿಗೆ ಅಚ್ಚಾದ ನಾಣ್ಯಗಳು ಸಾಧಾರಣವಾಗಿ 15 ಸೆಂಮೀ ಸುತ್ತಳತೆ ಹೊಂದಿದ್ದು 29 ಗ್ರೇನ್ ತೂಕದವಾಗಿವೆ. ನಾಣ್ಯದ ಒಂದು ಬದಿಯಲ್ಲಿ ಅರಸರ ಬಲಮುಖವನ್ನು ಕಾಣಬಹುದು. ಇನ್ನೊಂದು ಬದಿಯಲ್ಲಿ ತ್ರಿಶೂಲದ ಚಿಹ್ನೆಯಿದೆ. ಇದರ ಸುತ್ತಲೂ ಬ್ರಾಹ್ಮೀಲಿಪಿಯಲ್ಲಿ ಬರೆಹವಿದೆ. ಇದನ್ನು ಓದಲು ಅನೇಕರು ಪ್ರಯತ್ನಿಸಿರುವರಾದರೂ, ಅಕ್ಷರದಲ್ಲಿ ಸ್ಪಷ್ಟತೆ ಇಲ್ಲದ ಕಾರಣ ತೊಡಕುಗಳೂ ಭಿನ್ನಾಭಿಪ್ರಾಯಗಳೂ ಉಂಟಾಗಿವೆ. ಭಟಾರ್ಕ ಎಂಬಷ್ಟನ್ನು ಮಾತ್ರ ಎಲ್ಲರೂ ಓದಿದ್ದಾರೆ. ಈ ನಾಣ್ಯಗಳು ಬಹಳ ಮಟ್ಟಿಗೆ ಅನಂತರದ ಗುಪ್ತರ ನಾಣ್ಯಗಳನ್ನು ಹೋಲುತ್ತಿದ್ದುವು. ಅವುಗಳಿಂದ ಪ್ರಭಾವಿತಗೊಂಡಿವೆ ಎನ್ನಬಹುದು.

ಗುಜರಾತಿನಲ್ಲಿ ಸ್ವತಂತ್ರವಾಗಿ ಆಳಿದ ಸುಲ್ತಾನರ ನಾಣ್ಯಗಳು ದೊರೆತಿವೆ. ಇವನ್ನು ಮೊದಲು ಅಚ್ಚು ಹಾಕಿಸಿದವನು 1ನೆಯ ಅಹಮದ್ ಷಹ. ಸುಲ್ತಾನರ ನಾಣ್ಯಗಳೆಲ್ಲ ಹೆಚ್ಚಾಗಿ ಬೆಳ್ಳಿ ಹಾಗೂ ತಾಮ್ರದಲ್ಲಿ ಎರಕ ಹೊಯ್ದಂಥವು. ಚಿನ್ನದ ನಾಣ್ಯಗಳೂ ಇಲ್ಲದಿಲ್ಲ; ಆದರೆ ಅಪರೂಪ. ಅಹಮದಾಬಾದ್, ಅಹಮದ್‌ನಗರ (ಇದರ್), ಮುಸ್ತಫಾಬಾದ್ (ಗಿರಿನಗರ), ಮಹಮದಾಬಾದ್ (ಚಂಪಾನೇರ್) ಮತ್ತು ಖಾನ್ಪುರಗಳಲ್ಲಿ ಇವರ ಟಂಕಸಾಲೆಗಳಿದ್ದುವು. ಆದರೆ ಸಾಮಾನ್ಯವಾಗಿ ನಾಣ್ಯಗಳ ಮೇಲೆ ಇವುಗಳ ಸೂಚನೆ ಇರದೆ ಕೇವಲ ಷಹರ್ ಇ ಮುಕರ್ರಮ್ ಎಂದಿದೆ.

ಸಾಮಾನ್ಯವಾಗಿ ಸುಲ್ತಾನನ ಹೆಸರನ್ನು ಚೌಕಾಕಾರವಾಗಿ ಕೆತ್ತಲಾಗಿದ್ದು, ಪಕ್ಕದಲ್ಲಿ ಟಂಕಸಾಲೆಯ ಹೆಸರು ಅಥವಾ ಷಹರ್ ಇ ಮುಕರ್ರಮ್ ಎಂಬ ಅಕ್ಷರಗಳಿರುತ್ತವೆ. ಅಲ್ ಸುಲ್ತಾನ, ಅಲ್ ಅಝಮ್ ಎಂಬ ಇವರ ಬಿರುದುಗಳನ್ನು, ಒಮ್ಮೊಮ್ಮೆ ಇವರ ಧರ್ಮಸೂಚಕವಾದ ಅಬು ಅಲ್ ಮುಹಮ್ಮದ್, ಅಬುಲ್‌ಫತ್, ಅಲ್ ಮುತಸ್ಸಿಮ್ ಬೆ ಅಲ್ಲಾಹ್ ಅಲ್ ರಹ್ಮಾನ್ ಎಂಬ ಮತೀಯ ಬಿರುದುಗಳನ್ನು ಕಾಣಬಹುದು. ಇಮ್ಮಡಿ ಮುಹಮ್ಮದ್ ಷಹನ ನಾಣ್ಯಗಳಲ್ಲಿ ಪದ್ಯಗಳ ಛಾಯೆ ಕಂಡುಬರುತ್ತದೆ.

ಹೆಚ್ಚು ಗಮನಾರ್ಹವೆಂದರೆ ಇವರ ವಂಶಾವಳಿಯನ್ನು ಕೊಟ್ಟಿರುವ ನಾಣ್ಯಗಳು. ಇವುಗಳಲ್ಲಿ ವಂಶದ ಮೂಲಪುರುಷನಿಂದಾರಂಭಿಸಿ, ಆಳುತ್ತಿರುವ ಸುಲ್ತಾನನವರೆಗಿನ ರಾಜವಂಶಾವಳಿ ಇದೆ. 1ನೆಯ ಅಹಮದ್, 1ನೆಯ ಮಹಮ್ಮದ್ ಮತ್ತು ಬಹದೂರ್ ಷಹ–ಇವರ ನಾಣ್ಯಗಳನ್ನು ಇಲ್ಲಿ ಉದಾಹರಿಸಬಹುದು.

ಮುಮ್ಮಡಿ ಮಹಮದ್ ಮತ್ತು ಇಮ್ಮಡಿ ಮುಜಫರರ ಚಿನ್ನದ ನಾಣ್ಯಗಳು 185 ಗ್ರೇನ್ ತೂಕದವು. ಮೊದಲ ಅರಸರ ನಾಣ್ಯಗಳು 176–180 ಗ್ರೇನ್ ತೂಗುತ್ತವೆ. ಬೆಳ್ಳಿ ನಾಣ್ಯಗಳು 163–176 ಗ್ರೇನ್, ಅರ್ಧನಾಣ್ಯಗಳು 88 ಗ್ರೇನ್, ಕಾಲು ನಾಣ್ಯಗಳು 44 ಗ್ರೇನ್ ತೂಕದವಾಗಿವೆ. ಇಮ್ಮಡಿ ಮಹಮದ್ 229 ಗ್ರೇನ್ ತೂಕದ ತಾಮ್ರದ ನಾಣ್ಯಗಳನ್ನು ಅಚ್ಚುಹಾಕಿಸಿದ. ಆದರೆ ಅವನ ನಾಣ್ಯಗಳು ಸಾಮಾನ್ಯವಾಗಿ 148 ಗ್ರೇನ್ ತೂಕದವುಗಳಾಗಿದ್ದುವು.

ಅನ್ಹಿಲ್‌ವಾಡದ ಚಾಳುಕ್ಯರು ರಾಜ್ಯವನ್ನು ಕಟ್ಟಿ ವೈಭವದಿಂದ ಸಾಕಷ್ಟು ಸಮಯ ಆಳಿದರೂ ಅವರ ನಾಣ್ಯಗಳೊಂದೂ ಸಿಗದಿರುವುದು ಆಶ್ಚರ್ಯಕರ. (ಜಿ.ಬಿ.ಆರ್.;ಎ.ಎಸ್)

**ಗುಜರಾತಿ ಭಾಷೆ :** ಭಾರತ ರಾಜ್ಯಾಂಗದಲ್ಲಿ ನಮೂದಾಗಿರುವ 18 ಭಾರತೀಯ ಭಾಷೆಗಳಲ್ಲಿ ಒಂದು; ಗುಜರಾತಿನ ಪ್ರಾಂತಭಾಷೆ. ಗುಜರಾತ್ ರಾಜ್ಯದಲ್ಲೂ ಗುಜರಾತಿ ಸಮುದಾಯಗಳು ನೆಲೆಸಿರುವ ಭಾರತದ ವಿವಿಧ ಭಾಗಗಳಲ್ಲೂ ಭಾರತದ ಹೊರಗೆ ಏಷ್ಯ, ಆಫ್ರಿಕಗಳಲ್ಲೂ ಈ ಭಾಷೆಯನ್ನಾಡುವ ಜನ ನೆಲೆಸಿದ್ದಾರೆ. ಗುಜರಾತಿ ಮಾತನಾಡುವವರ ಸಂಖ್ಯೆ 46,091,617 (2001), ಗುಜರಾತಿ ಇಂಡೋ–ಆರ್ಯನ್ ಭಾಷೆಗಳಲ್ಲೊಂದು. ಇದರ ಪೂರ್ವ ಮತ್ತು ಈಶಾನ್ಯ ಗಡಿಯಲ್ಲಿ ರಾಜಸ್ತಾನಿ ಇದೆ. ಸಹಜವಾಗಿ ಇವೆರಡು ಭಾಷೆಗಳೂ ಕ್ರಮೇಣ ಬೆರೆಯುತ್ತ ಬಂದಿವೆಯಾಗಿ ಎಲ್ಲೆಕಟ್ಟಿನ ಭಾಗಗಳಲ್ಲಿ ಉಪಭಾಷೆಗಳು ಯಾವ ಮೂಲದಿಂದ ಬಂದಿವೆಯೆಂಬುದನ್ನು ನಿರ್ಧರಿಸುವುದು ಕಷ್ಟ.

ವಾಙ್ಮಯ ಮತ್ತು ವೈಚಾರಿಕ ಗದ್ಯ ಸಾಹಿತ್ಯದ ದೃಷ್ಟಿಯಿಂದ ಆಧುನಿಕ ಗುಜರಾತಿ ಸಾಹಿತ್ಯ ಸಮೃದ್ಧವಾಗಿದೆ. ಇದರ ಸಾಹಿತ್ಯಕ ಪರಂಪರೆಯ ಇತಿಹಾಸ ಸುಮಾರು ಒಂದು ಸಾವಿರ ವರ್ಷಗಳಷ್ಟು ಹಿಂದಕ್ಕೆ ಹೋಗುತ್ತದೆ. ಉಪದೇಶಾತ್ಮಕ ಗದ್ಯ ಹಾಗೂ ಭಾವಗೀತಾತ್ಮಕ ಮತ್ತು ಪ್ರಶಂಸಾತ್ಮಕ (ಅಥವಾ ಮಾಗಧ) ಪದ್ಯ ರೂಪದ ರಚನೆಗಳು ಈ ಹಂತದಲ್ಲಿ ಕಾಣದೊರೆಯುತ್ತವೆ. ಗುಜರಾತಿ ಲಿಪಿ ದೇವನಾಗರಿ ಲಿಪಿಯ ಸುತ್ತು ಬರೆಹದ ರೂಪದ್ದಾಗಿದ್ದು, ಕಳೆದ ಆರೇಳು ಶತಮಾನಗಳಿಂದಲೂ ಪಶ್ಚಿಮ ಭಾರತದಲ್ಲಿ (ವಿಶೇಷವಾಗಿ ಗುಜರಾತ್ ಮತ್ತು ರಾಜಸ್ತಾನ ರಾಜ್ಯಗಳಲ್ಲಿ) ಬಳಕೆಯಲ್ಲಿತ್ತು. ಇದನ್ನು ಮಹಾಜನಿ ಎಂದು ಕರೆಯುತ್ತಾರೆ. ಇದರ ವರ್ಣಮಾಲೆ ಸಂಸ್ಕೃತಜನ್ಯವಾಗಿದ್ದು, ಅಕ್ಷರಗಳ ಆಕಾರ ದೇವನಾಗರಿಯನ್ನು ತುಂಬ ನಿಕಟವಾಗಿ ಹೋಲುತ್ತದೆ.

ಗುಜರಾತಿಯು ಇಂಡೋ–ಯುರೋಪಿಯನ್ (ಭಾರೋಪೀಯ) ಭಾಷಾ ಪರಿವಾರದ ಇಂಡೋ–ಇರಾನಿಯನ್ (ಭಾರತೀಯ ಇರಾನಿ) ಉಪವರ್ಗದ ಇಂಡೋ–ಆರ್ಯನ್ (ಭಾರತೀಯ–ಆರ್ಯ) ಶಾಖೆಗೆ ಸೇರಿದೆ. ಇಂಡೋ–ಆರ್ಯನ್ ಶಾಖೆಯ ಎರಡು ಮುಖ್ಯಕವಲುಗಳು (ಉತ್ತರದ ಕವಲು–ಪಹಾಡಿ. ಪಂಜಾಬಿ, ಲಹಂದ, ಸಿಂಧಿ, ಕಚ್ಛಿ; ಪೂರ್ವದ ಕವಲು–ಬಂಗಾಲಿ ಅಸ್ಸಾಮಿ ಮತ್ತು ಒರಿಯ) ಬೇರ್ಪಟ್ಟ ತರುವಾಯ ಪಶ್ಚಿಮ, ದಕ್ಷಿಣ ಮತ್ತು ನಡುವಣ ಶಾಖೆಗಳು ಮತ್ತೆ ಕವಲೊಡೆದವು. ದಕ್ಷಿಣದ ಭಾಷೆಗಳ (ಮರಾಠಿ–ಕೊಂಕಣಿ) ಬೇರ್ಪಡೆಯನ್ನು ಹಿಂಬಾಲಿಸಿ, ಪಶ್ಚಿಮದ ಭಾಷೆಗಳೂ (ಗುಜರಾತಿ, ರಾಜಸ್ತಾನಿ, ಭೀಲಿ) ನಡುವಣ ವಲಯದ (ಪಶ್ಚಿಮ ಹಿಂದಿ) ಭಾಷೆಗಳಿಂದ ಬೇರ್ಪಟ್ಟವು. ನಡುವಣ ವಲಯದಲ್ಲಿ ನಾಮವಾಚೀ ಏಕವಚನ ಪುಲ್ಲಿಂಗದ ಆ ಕಾರಾಂತ್ಯದ ರೂಪದಲ್ಲೂ ಪಶ್ಚಿಮ ವಲಯದಲ್ಲಿ ಓ ಕಾರಾಂತ್ಯದ ರೂಪದಲ್ಲೂ ಈ ಬೇರ್ಪಡೆ ಎದ್ದು ಕಾಣುತ್ತದೆ. ಹೀಗಾಗಿ ಪಶ್ಚಿಮ ವಲಯದಲ್ಲಿ ಘೋಡ (ಕುದುರೆ) ರೂಪವೂ ಗುಜರಾತಿಯಲ್ಲಿ ಘೋಡೊ ರೂಪವೂ ಕಾಣದೊರೆಯುತ್ತವೆ. ಪಶ್ಚಿಮ ಮತ್ತು ದಕ್ಷಿಣ ವರ್ಗದ ಭಾಷೆಗಳೂ ನಪುಂಸಕ ಲಿಂಗವನ್ನು ಉಳಿಸಿಕೊಂಡಿವೆ. ಪಶ್ಚಿಮ ವಲಯದ ಭಾಷೆಗಳಲ್ಲಿ ಮೊದಲಿಗೆ ಭೀಲಿಯೂ ಅನಂತರದಲ್ಲಿ ಗುಜರಾತಿ ಹಾಗೂ ರಾಜಸ್ತಾನದ ಉಪಭಾಷೆಗಳೂ ಬೇರ್ಪಡುತ್ತವೆ.




**ಧ್ವನಿ ವ್ಯವಸ್ಥೆ:** ಗುಜರಾತಿ ಧ್ವನಿಮಾವ್ಯವಸ್ಥೆಯ ವಿಶಿಷ್ಟ ಲಕ್ಷಣಗಳೆಂದರೆ ಎಂಟು ಸ್ವರಗಳ – ಇ, ಎ ∈ ಉ ಓ ∂ ಅಆ–ವ್ಯವಸ್ಥೆ ಮತ್ತು ನ ಹಾಗೂ ಣ ಗಳ ಮತ್ತು ಲ ಮತ್ತು ಳ ಗಳ ಸ್ಪಷ್ಟ ಧ್ವನಿಘಟಕಗಳು. ಆರು ಸ್ವರಗಳೂ – ಇ ∈, ಉ ∂, ಆ, ಆ – ಅನುನಾಸಿಕಗಳಾಗಿಯೂ ಬರಬಹುದು. ಎಲ್ಲ ಸ್ವರಗಳೂ ಘೋಷ ಅಥವಾ ಅರ್ಧಘೋಷ ಸ್ವರಗಳಾಗಿರಬಹುದು. ಹೀಗಾಗಿ, ಬಾರ್ (ಹನ್ನೆರಡು) ಬಾರ್ (ಹೊರಗೆ) (ಅಕ್ಷರದ ಕೆಳಗಿನ ಕಿರುಗೀಟು ಅರ್ಧಘೋಷ ಸ್ವರವನ್ನು ಸೂಚಿಸುತ್ತವೆ) ಮತ್ತು ಭಾರ್ (ಹೊರೆ) ನಂಥ ಶಬ್ದಗಳಲ್ಲಿ ಬಾರ್‌ನಲ್ಲಿ ಬರುವ ಅರ್ಧಘೋಷಸ್ವರ ಬಾರ್ ಮತ್ತು ಭಾರ್‌ನಲ್ಲಿ ಬರುವ ಸಾಮಾನ್ಯ ದೀರ್ಘ ಸ್ವರವಾದ ಆ ಕ್ಕಿಂತ ಭಿನ್ನವಾಗಿದೆ. ಸ್ವರಗಳ ಮಾತ್ರೆಗೆ ಗುಜರಾತಿಯಲ್ಲಿ ಅಂಥ ಮಹತ್ತ್ವವಿಲ್ಲ. ಲಿಪಿಯಲ್ಲೇನೋ ಇ, ಉ, ಕಾರಗಳ ಹ್ರಸ್ವ ಮತ್ತು ದೀರ್ಘ ಸ್ವರಗಳನ್ನೇ ಸೂಚಿಸುವ ಪ್ರತ್ಯೇಕ ವರ್ಣಗಳಿವೆ; ∈ ಮತ್ತು ∂ ಕಾರಗಳಿಗೆ (ದೇವನಾಗರಿ ಸಂಪ್ರದಾಯದಂತೆ) ಪ್ರತ್ಯೇಕ ವರ್ಣಗಳಿಲ್ಲ.

**ವ್ಯಾಕರಣ :** ನಾಮರೂಪಗಳಲ್ಲಿ ಗುಜರಾತಿ ಮೂರು ಲಿಂಗಗಳನ್ನೂ ಎರಡು ವಚನಗಳನ್ನೂ ಹೊಂದಿದೆ. ವಿಶೇಷ್ಯ, ವಿಶೇಷಣ ಮತ್ತು ಕೃದಂತ ರೂಪಗಳನ್ನು ಪುಲ್ಲಿಂಗ, ಸ್ತ್ರೀಲಿಂಗ ಮತ್ತು ನಪುಂಸಕ ಲಿಂಗಗಳಲ್ಲಿಯೂ ಏಕ ಮತ್ತು ಬಹು ವಚನಗಳಲ್ಲಿಯೂ ಸಾಧಿಸಬಹುದು. ವಿಭಕ್ತಿ ರೂಪಕ್ಕೆ ಸಂಬಂಧಿಸಿದಂತೆ ಹೆಚ್ಚೆಂದರೆ ಮೂರು ವಿಭಕ್ತಿ ರೂಪಗಳನ್ನು ಸ್ಪಷ್ಟವಾಗಿ ಗುರುತಿಸಬಹುದು: ಪ್ರತ್ಯಕ್ಷ ಏಕವಚನ, ಪ್ರತ್ಯಕ್ಷ ಬಹುವಚನ ಮತ್ತು ಪರೋಕ್ಷ ರೂಪ. ಈ ಬಗೆಗಳಲ್ಲಿ ಪುಲ್ಲಿಂಗ ನಾಮಪದಗಳು ಎರಡು ರೂಪಗಳನ್ನು

ನಪುಂಸಕ ಲಿಂಗನಾಮಪದಗಳು ಮೂರು ರೂಪಗಳನ್ನು ಹೊಂದಿರುತ್ತವೆ. ಸಬಲ ನಾಮಪದಗಳಿಗೆ ಹಾಗೂ ಸ್ತ್ರೀಲಿಂಗ ನಾಮಪದಗಳಿಗೆ ವಿಭಕ್ತಿ ಪ್ರತ್ಯಗಳಾವುವೂ ಇರುವುದಿಲ್ಲ.

ದಿಕ್ರೋ ನಂಥ ಪುಲ್ಲಿಂಗದ ನಾಮಪದ ಹಾಗೂ ಮಾಥೊ̃ ನಂಥ ನಪುಂಸಕ ನಾಮಪದಗಳಿಗೆ ಈ ರೀತಿ ಪ್ರತ್ಯಯಗಳನ್ನು ಹಚ್ಚಬಹುದು.

| | ಏಕವಚನ | ಬಹುವಚನ | ಏಕವಚನ | ಬಹುವಚನ |
|---|---|---|---|---|
| ಪ್ರತ್ಯಕ್ಷ | ದಿಕ್ರ್ + ಓ | ದಿಕ್ರ್ + ಆ | ಮಾಥ್ + ಉ̃ | ಮಾಥ್ + ಆ̃ |
| ಪರೋಕ್ಷ | | ದಿಕ್ರ್ + ಆ | | ಮಾಥಾ |

ಹಾಥಿ (ಆನೆ) ಮತ್ತು ಮಚ್ಛರ್ (ಸೊಳ್ಳೆ) ಯಂಥ ಸಬಲ ನಾಮಪದಗಳಿಗೆ ವಿಭಕ್ತಿರೂಪಗಳನ್ನು ಹಚ್ಚುವುದಿಲ್ಲ. ಅಂತೆಯೇ, ದಿಕ್ರಿ (ಮಗಳು), ತಮಾಕು (ಹೊಗೆಸೊಪ್ಪು), ಬೋ (ರಿಬ್ಬನ್), ಸತ್ತಾ (ಅಧಿಕಾರ) ದಂಥ ಸ್ತ್ರೀಲಿಂಗ ನಾಮಪದಗಳಿಗೆ ವಿಭಕ್ತಿ ಪ್ರತ್ಯಯಗಳನ್ನಾಗಲೀ ವಚನ ಪ್ರತ್ಯಯಗಳನ್ನಾಗಲೀ ಹಚ್ಚುವುದಿಲ್ಲ. ಪ್ರಾಚೀನ ವಿಭಕ್ತಿ ಪ್ರತ್ಯಯಗಳಿಗೆ ಬದಲಾಗಿ ಅನೇಕ ಬಗೆಯ ಪರಪ್ರತ್ಯಯಗಳನ್ನು ಬಳಸಲಾಗುತ್ತದೆ. ಓ ಎಂಬ ಹೊಸ ಬಹುವಚನ ಪ್ರತ್ಯಯವನ್ನು (18 ನೆಯ ಶತಮಾನದಿಂದ ಈಚೆಗೆ) ಬಳಸಲಾಗುತ್ತಿದೆ ಐಚ್ಛಿಕವಾಗಿ ವಿಭಕ್ತಿ ಪ್ರತ್ಯಯ ಸಹಿತವಾದ ಬಹುವಚನ ರೂಪದಲ್ಲಿ ಆ ಪ್ರತ್ಯಯವನ್ನೂ ಬಳಸಲಾಗುತ್ತಿದೆ. ಉದಾ: ದಿಕ್ರ್ + ಆ ~ ದಿಕ್ರ್ + ಆ + ಓ (ಮಕ್ಕಳು),

~ ಮಾಥ್ +̃ ಆ ಮಾಥ್ +̃ ಆ + ಓ (ತಲೆಗಳು)

ಗುಜರಾತಿ ಪುರುಷವಾಚಕ ಸರ್ವನಾಮಗಳಲ್ಲಿ ಲಿಂಗವಿವಕ್ಷೆಯಿಲ್ಲ. ಉತ್ತಮ ಪುರುಷ ಬಹುವಚನದಲ್ಲಿ ಸಮಾವೇಶಿ ಮತ್ತು ಅಸಮಾವೇಶಿ ಸರ್ವನಾಮಗಳಿಗೆ ಪ್ರತ್ಯೇಕ ರೂಪಗಳಿವೆ: ಅಮೆ (ನಾವು–ಅಸಮಾವೇಶಿ), ಆಪ್‌ಣೆ (ನಾವು–ಸಮಾವೇಶಿ).

ಕ್ರಿಯಾರೂಪದಲ್ಲಿ ಗುಜರಾತಿ ಪುರುಷ ಮತ್ತು ವಚನ ರೂಪ ನಿದರ್ಶನವನ್ನು ಹೊಂದಿದೆ. ಪರಪ್ರತ್ಯಯಗಳನ್ನು ಹಚ್ಚುವುದರ ಮೂಲಕ ಕಾಲ ಮತ್ತು ಅವಸ್ಥಾ ವಿಶೇಷಗಳನ್ನು ಅಥವಾ ಕ್ರಿಯಾರೂಪಗಳನ್ನು (ಮೂಡ್ಸ್) ಸೂಚಿಸಲಾಗುತ್ತದೆ. ಹೋ (ಇರು) ಎಂಬ ಸಹಾಯಕ ಕ್ರಿಯಾಪದಯುಕ್ತವಾದ ಬಹುಪದ ರಚನೆಗಳ ಮೂಲಕ ಪೂರ್ಣಕಾಲಗಳನ್ನು ಸೂಚಿಸಲಾಗುತ್ತದೆ. ತಾತ್ಕಾಲಿಕ ವರ್ತಮಾನಕಾಲ. ಭೂತಕಾಲ ಮತ್ತು ಪೂರ್ವಕಾಲಿಕ ರೂಪಗಳು ಕೃದಂತಗಳಾಗಿದ್ದು, ನಾಮಪದಗಳಂತೆಯೇ ಅವುಗಳಿಗೆ ವಿಭಕ್ತಿ ಪ್ರತ್ಯಯಗಳನ್ನು ಹಚ್ಚಲಾಗುತ್ತದೆ. ಕಾರಕ ರೂಪಗಳಂತೆಯೇ ಧಾತುರೂಪಗಳನ್ನೂ ನಡೆಸಬಹುದು. ಏಕವಚನದಲ್ಲಿ ಎರಡು, ಬಹುವಚನದಲ್ಲಿ ಎರಡು–ಹೀಗೆ ಕ್ರಿಯಾರೂಪನಿದರ್ಶನದಲ್ಲಿ ಅಥವಾ ಕ್ರಿಯಾರೂಪ ಕಾಲಿಕೆಯಲ್ಲಿ ಹೆಚ್ಚೆಂದರೆ ನಾಲ್ಕು ರೂಪಗಳನ್ನು ಸ್ಪಷ್ಟವಾಗಿ ಗುರುತಿಸಬಹುದು.

| | ಏಕವಚನ | ಬಹುವಚನ | ಏಕವಚನ | ಬಹುವಚನ |
|---|---|---|---|---|
| ಉತ್ತಮಪುರುಷ | ಬೋಲ್+ಉ̃ | ಬೋಲ್+ಇಏ | ಬೋಲ್+ಇಶ್ | ಬೋಲ್+ಇಶ್+ಉ̃ |
| ಇತರ ಪುರುಷಗಳು | ಬೋಲ್+ಏ | ಬೋಲ್+ಏ | ಬೋಲ್+ಶ್+ಓ | ಬೋಲ್+ಶ್+ಓ |

**ಉಪ ಭಾಷೆಗಳು** : ದಕ್ಷಿಣ, ಮಧ್ಯ ಹಾಗೂ ಉತ್ತರ ಗುಜರಾತ್ ಮತ್ತು ಸೌರಾಷ್ಟ್ರ ಪರ್ಯಾಯದ್ವೀಪ–ಇವು ಗುಜರಾತಿಯ ನಾಲ್ಕು ಪ್ರಮುಖ ಉಪಭಾಷಾ ವಲಯಗಳು. ಸೌರಾಷ್ಟ್ರದ ಉಪಭಾಷೆಗಳು ಪ್ರಾಚೀನವಾದುವಾಗಿದ್ದು ಕೆಲವು ಪ್ರಾಚೀನತರ ರೂಪಗಳನ್ನು ಉಳಿಸಿಕೊಂಡಿವೆ. ಅವುಗಳಲ್ಲಿ ಕೆಲವು ಆರು ಸ್ವರ (~ ಮತ್ತು ə ಗಳನ್ನು ಬಿಟ್ಟು) ವ್ಯವಸ್ಥೆಯನ್ನು ಹೊಂದಿವೆ. ಉತ್ತರದ ಉಪಭಾಷೆಗಳು ನೆರೆಯ ಪ್ರದೇಶದ ಭೀಲಿ ಭಾಷೆಯ ಕೆಲವು ಲಕ್ಷಣಗಳನ್ನು ಒಳಗೊಂಡಿವೆ. ಅನುನಾಸಿಕ ~ ಅಥವಾ ಇ ಅನುನಾಸಿಕ ವ್ಯಂಜನಗಳ ಸನಿಹದಲ್ಲಿದ್ದಾಗ ವಿವೃತ ~ ಅಥವಾ ε ಆಗಿಯೂ ಬದಲಾಗುವುದು ಹಾಗೂ ಕ ಕಾರ ಗ ಕಾರಗಳು ಇ, ಏ ಅಥವಾ ಯ ಕಾರದ ಎದುರಿನಲ್ಲಿ ಚಕಾರ ಜ ಕಾರಗಳಾಗಿ ತಾಲವ್ಯೀಕರಣಕ್ಕೊಳ ಗಾಗುವುದು–ಇವು ಉತ್ತರ ಹಾಗೂ ಮಧ್ಯ ಗುಜರಾತಿ ಉಪಭಾಷೆಗಳ ವಿಶಿಷ್ಟ ಲಕ್ಷಣ. ಮುಂದಿನ ವರ್ಣದಲ್ಲಿ ಯ ಕಾರವಿದ್ದರೆ ವರ್ಣವ್ಯತ್ಯಯವಾಗುವುದು ದಕ್ಷಿಣದ ಉಪಭಾಷೆಗಳ ವಿಶಿಷ್ಟ ಲಕ್ಷಣ. ಹೀಗಾಗಿ ಶಿಷ್ಟ ಆಪ್ಯೋ ರೂಪ ದಕ್ಷಿಣದ ಉಪಭಾಷೆಗಳಲ್ಲಿ ಅಯೋ ಎಂಬ ರೂಪದಲ್ಲಿ ಕಾಣದೊರೆಯುತ್ತದೆ. ವೃತ್ತಿಪರ ಭಾಷಾಶೈಲಿಯಗಳಲ್ಲಿ ಗಮನಾರ್ಹವಾದುವೆಂದರೆ ಸೌರಾಷ್ಟ್ರ ಹಾಗೂ ದಕ್ಷಿಣ ಗುಜರಾತಿನ ಕರಾವಳಿಯ ಬೆಸ್ತರ ಮಾತು. ಸೌರಾಷ್ಟ್ರದ ವಂದಿಮಾಗಧೀಯ ಹಾಗೂ ಹುಲ್ಲುಗಾವಲಿನ ಜನಸಮುದಾಯಗಳ ಮಾತು. ಸೌರಾಷ್ಟ್ರದ ಇಸ್ಮಾಯಿಲೀ ಖೋಜಾಗಳ ಮಾತು ಮತ್ತು ದಕ್ಷಿಣ ಗುಜರಾತಿನ ಪಾರ್ಸಿಗಳ ಮಾತು. ಒಟ್ಟಿನಲ್ಲಿ ಮಧ್ಯ ಹಾಗೂ ಉತ್ತರ ಗುಜರಾತಿನ ಉಪಭಾಷೆಗಳು ಆವಿಷ್ಕಾರಕ ಉಪಭಾಷೆಗಳು. ಸುಶಿಕ್ಷಿತ, ಮೇಲು ಜಾತಿಯ ಜನಸಮುದಾಯದ ಮಾತೇ ಆಧುನಿಕ ಶಿಷ್ಟ ಗುಜರಾತಿಗೆ ಆಧಾರವಾಗಿದೆ. (ಪಿ.ಬಿ.ಪಿ.)

**ಗುಜರಾತಿ ಸಾಹಿತ್ಯ** : ಗುಜರಾತಿ ಸಾಹಿತ್ಯದ ಇತಿಹಾಸವನ್ನು ಸಮೀಕ್ಷಿಸುವಾಗ ಗುಜರಾತಿನ ಮುಖ್ಯ ಭೂಮಿ ಮತ್ತು ಸೌರಾಷ್ಟ್ರ ಹಾಗೂ ಕಚ್ ಅನ್ನು ಒಳಗೊಂಡಿರುವ ಪರ್ಯಾಯ ದ್ವೀಪ ಭಾಗಗಳ ಸಾಹಿತ್ಯ ಕೃತಿಗಳನ್ನಲ್ಲದೆ ಮೌಂಟ್ ಅಬುವಿನ ಉತ್ತರಕ್ಕಿರುವ ಪ್ರದೇಶಗಳ ಸಾಹಿತ್ಯ ಕೃತಿಗಳನ್ನೂ ಪರ್ಯಾಲೋಚನೆಗೆ ತೆಗೆದುಕೊಳ್ಳಬೇಕು, ಏಕೆಂದರೆ ಅಹಮದಾಬಾದಿನಲ್ಲಿ ಹದಿನೈದನೆಯ ಶತಮಾನ ಮತ್ತು ಪ್ರಾಯಶಃ ಹದಿನಾರನೆಯ ಶತಮಾನಗಳ ಅವಧಿಯಲ್ಲಿ, ಗುಜರಾತೀ ಸುಲ್ತಾನಿಕೆ ಸ್ಥಾಪಿತವಾಗುವ ವರೆಗೆ, ಗುಜರಾತು ಮತ್ತು ರಾಜಸ್ಥಾನಗಳಿಗೆ ಒಂದೇ ಒಂದು ಭಾಷೆಯಿತ್ತು. ಇದರಿಂದಲೇ ಟೆಸ್ಸಿಟೋರಿ ಮೊದಲಾದ ವಿದ್ವಾಂಸರು ಪ್ರಾಚೀನ ಗುಜರಾತಿಯೆಂದು ಹೆಸರಾಂತ ಈ ಪ್ರಾಂತಗಳ ಭಾಷೆಯ ಪ್ರಾಚೀನ ರೂಪವನ್ನು ಪ್ರಾಚೀನ ಪಶ್ಚಿಮ ರಾಜಸ್ತಾನೀ ಎಂದು ಕರೆದಿರುವುದು. ಈ ಎರಡು ಪ್ರಾಂತಗಳಿಗೂ ಸಾಧಾರಣವಾಗಿರುವ ಪ್ರಾಚೀನ ರೂಪಗಳನ್ನೂ ಈ ಭಾಷೆಯಲ್ಲಿ ಸೇರಿಸಿಕೊಳ್ಳಲು ಅನುಕೂಲವಾಗುವಂತೆ ಇದನ್ನು ಮಾರೂ ಗುರ್ಜರ್ (ಮಾರವಾಡ ಮತ್ತು ಗುಜರಾತುಗಳ ಭಾಷೆ) ಎಂದೇ ಕರೆಯಬೇಕೆಂದು ಯು. ಜೆ. ಜೋಷಿಯವರು ಸೂಚಿಸಿದ್ದಾರೆ.

ಗುಜರಾತ್ ಮತ್ತು ಲಾಟ (ದಕ್ಷಿಣ ಗುಜರಾತ್) ದೇಶಗಳ ಜನಗಳ ಭಾಷೆಯನ್ನು ಕುರಿತ ಬಹು ಹಳೆಯ ಪ್ರಸ್ತಾಪ ಉದ್ಯೋತನಸೂರಿಯ ಕುವಲಯ ಮಾಲಾ (ಪ್ರ.ಶ. 798) ಎಂಬ ಗ್ರಂಥದಲ್ಲಿ ಗೋಚರಿಸುತ್ತದೆ. ಪ್ರಾಕೃತದಲ್ಲಿ ರಚಿತವಾಗಿರುವ ಈ ಗ್ರಂಥ ಭಾರತ ದೇಶದ ವಿವಿಧ ಪ್ರಾಂತಗಳಲ್ಲಿ ಪ್ರಚಲಿತವಾಗಿದ್ದ ಭಾಷೆಗಳನ್ನು ಕುರಿತು ಹೇಳುತ್ತದೆ. ಗುಜರಾತ್ ಮತ್ತು ಲಾಟಗಳ ಭಾಷೆಯನ್ನು ಕುರಿತು ಅಲ್ಲಿನ ಶ್ಲೋಕಗಳ ಅರ್ಥ ಇದು: 'ಬಳಿಕ ಆತ ಗುಜ್ಜರರನ್ನು (ಗುಜರಾತ್ ದೇಶದವರನ್ನು) ಕಂಡ. ಅವರು ಅಲ್ಲಿ ಸಮೃದ್ಧವಾಗಿದ್ದ ಬೆಣ್ಣೆಯನ್ನು ಮೆದ್ದು ಪುಷ್ಟರಾಗಿದ್ದರು. ಅವರು ಧಾರ್ಮಿಕರು. ಯುದ್ಧದಲ್ಲಿಯೂ ಶಾಂತಿಯಲ್ಲಿಯೂ ನಿಷ್ಣಾತರು ಮತ್ತು 'ನೌರೇ ಭಲ್ಲೌ' ಮುಂತಾದ ಉಗ್ಗಡಣೆಗಳು ಅವರ ಮುಖದಿಂದ ಹೊರಡುತ್ತಿದ್ದವು.' ಬಳಿಕ ಆತ ಲಾಟರನ್ನು ಎಂದರೆ ಲಾಟದೇಶದ ಜನರನ್ನು ಕಂಡನು. ಅವರು ಸ್ನಾನಾಂತರದಲ್ಲಿ ತಮ್ಮ ಮೈಗೆ ಶ್ರೀಗಂಧವನ್ನು ಬಳಿದುಕೊಳ್ಳುತ್ತಿದ್ದರು; ತಲೆಯನ್ನು ಆ ಕಡೆ ಈ ಕಡೆಗೆ ಬಾಚಿಕೊಳ್ಳುತ್ತಿದ್ದರು. ಅವರ ಅಂಗಗಳು ಸುಂದರವಾಗಿದ್ದವು. 'ಅಂಹನ್ ಕೌತುಂಹ್' ಮುಂತಾದ ಶಬ್ದಗಳನ್ನು ಅವರು ಉಚ್ಚರಿಸುತ್ತಿದ್ದರು.

ಈ ತೆಳ್ಳನೆ ಸಾಕ್ಷ್ಯದಿಂದ ಗುಜರಾತಿನಲ್ಲೂ ಲಾಟದಲ್ಲೂ ಎಂಟನೆಯ ಶತಮಾನದಲ್ಲಿ ಪ್ರಚಲಿತವಾಗಿದ್ದ ಭಾಷೆಯ ಸ್ವರೂಪವನ್ನು ಕುರಿತು ಯಾವುದನ್ನೂ ಖಚಿತವಾಗಿ ಹೇಳುವುದು ಕಷ್ಟ; ಆದರೆ ಒಂದು ಬಗೆಯ ಅಪಭ್ರಂಶ ಅಲ್ಲಿ ಪ್ರಚಲಿತವಾಗಿತ್ತೆಂದು ನಿಸ್ಸಂಶಯವಾಗಿ ಹೇಳಬಹುದು.

ಇದಕ್ಕೆ ಭೋಜ (1000) ತನ್ನ ಸರಸ್ವತೀ ಕಂಠಾಭರಣದಲ್ಲಿ ಹೇಳುವ ಈ ಮಾತು ಒತ್ತು ನುಡಿಯಾಗಿದೆ. ಆತ ಹೇಳುತ್ತಾನೆ: ಅಪಭ್ರಂಶೇನ ತುಷಂತಿ ಸ್ವೇನ ನಾನ್ಯೇನ ಗುರ್ಜರಾಃ (ತಮ್ಮ ಅಪಂಭ್ರಂಶದಿಂದಲೇ ಗುರ್ಜರರು ಸಂತುಷ್ಟಿಗೊಳ್ಳುತ್ತಾರೆ, ಮತ್ತೊಂದನ್ನು ಒಲ್ಲರು.) ಮಾರ್ಕಂಡೇಯನೆಂಬ (1000) ಪ್ರಾಕೃತ ವೈಯಾಕರಣಿ ಅಪಭ್ರಂಶದ ಇಪ್ಪತ್ತೇಳು ಪ್ರಕಾರಗಳನ್ನು ಹೇಳುತ್ತ ಗುರ್ಜರೀ ಎಂಬೊಂದನ್ನು ಹೆಸರಿಸುತ್ತಾನೆ. ಇವುಗಳೆಲ್ಲದರ ಮಥಿತಾರ್ಥವೇನೆಂದರೆ ದೇಶದ ಈ ಭಾಗಗಳಲ್ಲಿ ಪ್ರಚಲಿತವಾಗಿದ್ದ ಅಪಭ್ರಂಶದ ಒಂದು ಪ್ರಕಾರದಿಂದ ಪ್ರಾಚೀನ ಗುಜರಾತಿ ಭಾಷೆ (ಅಥವಾ ಪ್ರಾಚೀನ ಪಶ್ಚಿಮ ರಾಜಸ್ತಾನೀ ಭಾಷೆ) ಹುಟ್ಟಿತು ಎಂದು.

ಭಾರತದ ಉತ್ತರ ಮತ್ತು ಪಶ್ಚಿಮ ಪ್ರಾಂತಗಳ ಭಾಷೆಗಳೆಲ್ಲ ಇಂಡೊ – ಆರ್ಯನ್ ಭಾಷೆ ಅಪಭ್ರಂಶದ ಘಟ್ಟವನ್ನು ಮುಟ್ಟಿದಾಗ ವಿಕಾಸಗೊಂಡವೆಂಬುದು ಭಾರತೀಯ ಭಾಷೆಗಳ ಭಾಷಾ ಶಾಸ್ತ್ರಜ್ಞರಿಗೆ ಚೆನ್ನಾಗಿ ತಿಳಿದಿರುವ ವಿಷಯ. ಅಪಭ್ರಂಶದ ಇತಿಹಾಸವನ್ನು ಕುರಿತು ಹೇಳಲು ಇದು ಸ್ಥಳವಲ್ಲ. ಈಗಿಷ್ಟು ಹೇಳಿದರೆ ಸಾಕು. ಅಪಭ್ರಂಶ ಮೊದಲು ಜನರಾಡುವ ಒಂದು ಉಪಭಾಷೆಯಾಗಿತ್ತು. ಇಂಡೋ – ಆರ್ಯನ್ ಭಾಷೆಯ ಒಂದು ಘಟ್ಟದಲ್ಲಿ ಪ್ರಾಕೃತವನ್ನು ಬೇಗ ಹಿಂಬಾಲಿಸಿ ಬಂದ ಜನರಾಡುವ ಭಾಷೆಯಾಗಿತ್ತು ಅಪಭ್ರಂಶ. ಆ ಬಳಿಕ ಅದು ಸಾಹಿತ್ಯ ಭಾಷೆ ಆಯಿತು ಮತ್ತು ಅದರದೊಂದು ವಿಪುಲ ಸಾಹಿತ್ಯರಾಶಿ ಈಗಲೂ ಉಳಿದುಕೊಂಡು ಬಂದಿದೆ. ಈ ಸಾಹಿತ್ಯಕ ಅಪಭ್ರಂಶ ಉತ್ತರ ಮತ್ತು ಪಶ್ಚಿಮ ಭಾರತದ ಸಾಹಿತ್ಯ ಭಾಷೆಯಾಗಿ ಪರಿಣಮಿಸಿತು. ಹಾಗೂ ಗುಜರಾತ್ ಮತ್ತು ಮಹಾರಾಷ್ಟ್ರಗಳಿಂದ ಅಸ್ಸಾಂ ಮತ್ತು ನೇಪಾಲಗಳ ವರೆಗೆ ಭಾರತದ ವಿವಿಧ ಪ್ರಾಂತಗಳ ಕವಿಗಳು ಅಲ್ಪಸ್ವಲ್ಪ ಸ್ಥಳೀಯ ವ್ಯತ್ಯಾಸಗಳೊಡನೆ ಈ ಅಪಭ್ರಂಶವನ್ನು ತಮ್ಮ ಕವಿತೆಗಳಿಗೆ ಉಪಯೋಗಿಸಿಕೊಂಡರು.

ಆದರೆ ಚಾಳುಕ್ಯರ ಕಾಲದಲ್ಲಿ (942–1304) ಗುಜರಾತಿನಲ್ಲೂ ರಾಜಸ್ತಾನದಲ್ಲೂ ಅಪಭ್ರಂಶದಲ್ಲಿ ಪ್ರಚಲಿತ ಸಾಹಿತ್ಯರಾಶಿಯೊಂದಿತ್ತು. ಅದು ಜನಪದ ಸಾಹಿತ್ಯದೊಂದು ಭಾಗವಾಗಿತ್ತು. ಅದರ ಹೆಚ್ಚು ಪಾಲು ನಮಗೀಗ ಲಭ್ಯವಾಗಿಲ್ಲ. ಅದೃಷ್ಟವಶಾತ್, ಈ ತೇಲುವ ಸಾಹಿತ್ಯದ ಅನೇಕ ದ್ವಿಪದಿಗಳನ್ನು ಪ್ರಸಿದ್ಧ ಜೈನ ಸಾಧು ಹೇಮಚಂದ್ರ (1087–1174) ತನ್ನ ಪ್ರಾಕೃತ ವ್ಯಾಕರಣದಲ್ಲಿ ಅಪಭ್ರಂಶದ ಉದಾಹರಣೆಗಳಾಗಿ ಎತ್ತಿಕೊಂಡು ಕೂಡಿಟ್ಟಿದ್ದಾನೆ. ಈ ದ್ವಿಪದಿಗಳು ಯಾವ ಗ್ರಂಥದ ಭಾಗಗಳಾಗಿವೆಯೋ ಆ ಗ್ರಂಥವನ್ನು ರಚಿಸಲು ಹೇಮಚಂದ್ರನನ್ನು ಸಿದ್ಧರಾಜ ಜಯಸಿಂಹ ಎಂಬ ಅರಸ ಕೋರಿದ. ಇದರಿಂದ ಇವುಗಳ ಬೆಳಸು ಹೆಚ್ಚಿದೆ ಮತ್ತು ಈ ಉದಾಹೃತಪದ್ಯಗಳು 11 ಮತ್ತು 12ನೆಯ ಶತಮಾನದ ಗುಜರಾತಿನ ಜನಪದ ಸಾಹಿತ್ಯವನ್ನು ಪ್ರತಿನಿಧಿಸುತ್ತವೆ ಎಂದು ಧಾರಾಳವಾಗಿ ಹೇಳಬಹುದು. ವಸ್ತುತಃ ಹೇಮಚಂದ್ರ ಉದ್ಧರಿಸಿರುವ ಪದ್ಯಗಳು ಪಶ್ಚಿಮ ಭಾರತದ ಆ ಭಾಗದ ಅತಿ ಪ್ರಾಚೀನ ಸಾಹಿತ್ಯದಲ್ಲೂ ಮಾದರಿಗಳಾಗಿವೆ.

ಹೇಮಚಂದ್ರ ಉದಹರಿಸಿರುವ ಪದ್ಯಗಳಲ್ಲಿ ಬಹುಭಾಗ ವೀರರಸವನ್ನೂ ಶೃಂಗಾರ ರಸವನ್ನೂ ಪ್ರತಿಪಾದಿಸುತ್ತವೆ. ಈ ರಸಗಳೇ ಆ ಕಾಲದ ಜನಪದ ಸಾಹಿತ್ಯದಲ್ಲಿನ ಬಹುಪ್ರಧಾನ ರಸಗಳಾಗಿದ್ದು ಸ್ವಲ್ಪ ಮಟ್ಟಿಗೆ ಆ ಕಾಲದ ಜನಜೀವನದ ಕೆಲವು ಮುಖಗಳನ್ನು ಪ್ರತಿಬಿಂಬಿಸುತ್ತವೆ. ಇಲ್ಲಿ ಅನೇಕ ಸುಭಾಷಿತಗಳಾಗಿವೆ; ಮತ್ತೆ ಕೆಲವು ಜೈನ ಮತ್ತು ಬ್ರಾಹ್ಮಣ ಪುರಾಣಗಳನ್ನು ಕುರಿತವಾಗಿವೆ. ಈ ಪದ್ಯಗಳ ಮನೋಜ್ಞವಾದ ಶೈಲಿ, ಚಿತ್ರಮಯವಾದ ಕಲ್ಪನೆ, ಸಮರ್ಥವಾದ ಉಪಮೆಗಳು ಆಗಿನ ಸಾಹಿತ್ಯ ಚೆನ್ನಾಗಿ ಬೆಳೆವಣಿಗೆ ಹೊಂದಿತ್ತೆಂಬುದನ್ನು ಸೂಚಿಸುತ್ತವೆ. ಹೇಮಚಂದ್ರನ ತರುವಾಯ ಸಂಸ್ಕೃತ ಪ್ರಬಂಧಗಳನ್ನು (ಐತಿಹಾಸಿಕ ಕಥೆಗಳನ್ನು ವರ್ಣಿಸಿರುವ ಕೃತಿಗಳನ್ನು) ಬರೆದ ಅನೇಕ ಲೇಖಕರು ಇಂಥ ಅಪಭ್ರಂಶ ಪದ್ಯಗಳನ್ನು ಉಲ್ಲೇಖಿಸಿದ್ದಾರೆ. ಇವುಗಳ ಪೈಕಿ ಮೇರುತುಂಗನ ಪ್ರಬಂಧ ಚಿಂತಾಮಣಿ (1305) ಎಂಬ ಗ್ರಂಥವನ್ನು ಎತ್ತಿ ಹೇಳಬಹುದಾಗಿದೆ. ಅದರಲ್ಲಿ ಸಿದ್ಧರಾಜ ಜಯಸಿಂಹ ಜುನಾಗಡದ ಅರಸ ಖಂಗಾರನನ್ನು ಕೊಂದಾಗ, ಅವನ ರಾಣಿಗೆ ಸೋನಲ ದೇವಿ ಹೇಳಿದ ಹಾಗೆ ಅನೇಕ ಅಪಭ್ರಂಶ ದುಹಾಗಳು ಉದ್ಧೃತವಾಗಿವೆ. ಈ ದುಹಾಗಳಲ್ಲಿ ಪ್ರಾಯಶಃ ಎಲ್ಲವೂ ಈಗಿನ ಗುಜರಾತ್ ಮತ್ತು ಸೌರಾಷ್ಟ್ರಗಳ ಜನಪದ ಸಾಹಿತ್ಯದಲ್ಲಿಯೂ ಜೀವಂತವಾಗಿರುವುದು ಗಮನಾರ್ಹವಾದ ಸಂಗತಿ. ಆದರೆ ಇವುಗಳ ಭಾಷೆ ಈಗಿನ ಜನರಾಡುವ ಭಾಷೆ. ಇವು ಎಲ್ಲ ಕಾಲದಲ್ಲೂ ಜನಪ್ರಿಯವಾಗಿದ್ದವೆಂಬುದಕ್ಕೆ ಇದೇ ಸಾಕ್ಷಿ. ಗುಜರಾತಿನ ಇನ್ನೂ ಕೆಲವು ಪ್ರಾಚೀನ ದುಹಾಗಳು ತಲೆಮಾರಿನಿಂದ ತಲೆಮಾರಿಗೆ ಅನುಸ್ಯೂತವಾಗಿ ಇಳಿದು ಬಂದು ಇಂದೂ ಸೌರಾಷ್ಟ್ರ ರಾಜಸ್ತಾನಗಳಲ್ಲಿ ಗೋಚರಿಸುತ್ತವೆ ಎಂಬುದನ್ನು ಪ್ರಖ್ಯಾತ ಜನಪದ ಸಾಹಿತ್ಯ ಸಂಗ್ರಾಹಕ ಜಾವೇರ್‌ಚಂದ್ ಮೇಘಾನಿ ಮತ್ತು ಇತರ ವಿದ್ವಾಂಸರು ತೋರಿಸಿಕೊಟ್ಟಿದ್ದಾರೆ.

ಪ್ರಾಚೀನ ಗುಜರಾತೀ ಸಾಹಿತ್ಯವನ್ನು ಮೂರು ಅವಧಿಗಳಾಗಿ ವಿಂಗಡಿಸಬಹುದು.

1. ಹೇಮಚಂದ್ರನಿಂದ ಮುಗ್ಧಾವಬೋಧ ಔಕ್ತಿಕವೆಂಬ ವ್ಯಾಕರಣ ಗ್ರಂಥದ (1394) ವರೆಗೆ. ಈ ವ್ಯಾಕರಣ ಗ್ರಂಥ ಭಾಷೆಯ ಇತಿಹಾಸದಲ್ಲಿ ಒಂದು ದೊಡ್ಡ ಮೈಲಿಗಲ್ಲು. ಈ ಅವಧಿ ಸುಮಾರು 12ನೆಯ ಶತಮಾನದಿಂದ 14ನೆಯ ಶತಮಾನದವರೆಗೆ ಹರಡಿದೆ.
2. ಹದಿನೈದನೆಯ ಶತಮಾನದ ಆದಿಯಿಂದ 17ನೆಯ ಶತಮಾನದ ಮಧ್ಯ ಭಾಗದವರೆಗೆ, ಎಂದರೆ, ಪ್ರೇಮಾನಂದ ಮಹಾಕವಿ ಇನ್ನು ತರುಣನಾಗಿ ದ್ದಾಗಿನವರೆಗೆ.
3. ಹದಿನೇಳನೆಯ ಶತಮಾನದ ಉತ್ತರಾರ್ಧದಿಂದ 1853ರವರೆಗೆ ಎಂದರೆ, ಪ್ರೇಮಾನಂದನಿಂದ ಹಿಡಿದು ಪ್ರಾಚೀನ ಕವಿತಾಸಂಪ್ರದಾಯದ ಬಹು ಸಮರ್ಥ ಪ್ರತಿನಿಧಿಯಾಗಿದ್ದ ದಯರಾಮನವರೆಗೆ.

**ಮೊದಲನೆಯ ಅವಧಿ:** ಈ ಅವಧಿಯಲ್ಲಿ ಈ ಸಾಹಿತ್ಯ ರೂಪಗಳು ಗೋಚರಿಸುತ್ತವೆ. (1) ರಾಸು, ರಾಸ, ಅಥವಾ ರಾಸೋ –ಇದು ಮತೀಯ ಕಥೆಗಳನ್ನು ಪದ್ಯಗಳಲ್ಲಿ ಹೇಳುವ ಅಖ್ಯಾನ, (2) ಕಥಾ, (3) ಅನ್ಯಾಪದೇಸ, (4) ಫಾಗು ಅಥವಾ ವಸಂತಕಾಲದ ಕವಿತೆ, (5) ಬಾರಾಮಾಸೀ ಅಥವಾ ಹನ್ನೆರಡು ತಿಂಗಳುಗಳನ್ನು ವರ್ಣಿಸುವ ಕವಿತೆ, (6) ಮಾತೃಕಾ ಮತ್ತು ಕಕ್ಕ, ಎಂದರೆ ನೀತಿಯನ್ನು ಬೋಧಿಸುವ ಪದ್ಯಗಳು, ಇವುಗಳಲ್ಲಿ ಒಂದೊಂದೂ ಒಂದೊಂದು ಅಕ್ಷರಮಾಲಿಕೆಯ ಅಕ್ಷರದಿಂದ ಪ್ರಾರಂಭವಾಗುತ್ತದೆ. (7) ಸ್ತೋತ್ರಗಳು, ಭಾವಗೀತೆಗಳು, (8) ಗದ್ಯಕೃತಿಗಳು (9) ಔಕ್ತಿಕಗಳು ಅಥವಾ ಸಂಸ್ಕೃತ ವ್ಯಾಕರಣವನ್ನು ಕುರಿತ ಗುಜರಾತಿ ಗ್ರಂಥಗಳು. ಈ ರೂಪಗಳೆಲ್ಲವೂ ಇತರ ಕೆಲವೂ 19ನೆಯ ಶತಮಾನದವರೆಗೂ ಅನುಸ್ಯೂತವಾಗಿ ಬೆಳೆದುಬಂದವು. ಈ ಅವಧಿಗೆ ಮುಂಚೆ ಪ್ರಣೀತವಾದ ಅನೇಕ ಗ್ರಂಥಗಳು ಬಹುಮುಖ್ಯವಾದ ಭಾಷಾ ಶಾಸ್ತ್ರೀಯ ಹಾಗೂ ಸಾಂಸ್ಕೃತಿಕ ವಿಷಯಗಳನ್ನು ಒದಗಿಸುತ್ತವೆ. ಈ ಪುಟ್ಟ ಲೇಖನದಲ್ಲಿ ಪ್ರಧಾನ ಗ್ರಂಥಕರ್ತರನ್ನಾಗಲೀ ಅವರ ಕೃತಿಗಳನ್ನಾಗಲಿ ಕುರಿತು ಹೇಳುವುದು ಕೂಡ ಅಸಾಧ್ಯವಾಗಿದೆ.

**ಎರಡನೆಯ ಅವಧಿ :** ಇಲ್ಲಿ ಗುಜರಾತೀ ಸಾಹಿತ್ಯದ ಅತ್ಯಂತ ಶ್ರೇಷ್ಠ ಕವಿಗಳಲ್ಲಿ ಒಬ್ಬನಾದ ನರಸಿಂಹ ಮೆಹತನ ಕೃತಿಗಳನ್ನು ಕುರಿತು ಪ್ರತ್ಯೇಕವಾಗಿ ಪ್ರಸ್ತಾವಿಸಬೇಕಾಗಿದೆ. ನರಸಿಂಹ ಸೌರಾಷ್ಟ್ರದ ಜುನಾಗಡದಲ್ಲಿನ ನಾಗರ ಬ್ರಾಹ್ಮಣ. ತನ್ನ ಅತ್ತಿಗೆಯ ಕಾಟದಿಂದ ಈತ ಭಕ್ತಿಯತ್ತ ತಿರುಗಿದನೆಂದು ಹೇಳಲಾಗಿದೆ. ಹನ್ನೆರಡರಿಂದ ಹದಿನಾರನೆಯ ಶತಮಾನದವರೆಗೆ ಉತ್ತರ ಭಾರತದ ವಿವಿಧ ಭಾಗಗಳಲ್ಲಿ ಪ್ರವೃದ್ಧವಾಗುತ್ತಿದ್ದ ಭಕ್ತಿಪಂಥಗಳನ್ನು ಈ ಕವಿ ಬಹುಸಮರ್ಥವಾಗಿ ಪ್ರತಿನಿಧಿಸಿ ಅವುಗಳ ಮೇಲೆ ತನ್ನ ಮುದ್ರೆಯೊತ್ತಿ ಕವಿತಾ ಪ್ರತಿಭೆಯಿಂದ ಅವಕ್ಕೆ ನುಡಿಗೊಡುತ್ತಾನೆ. ಒಂದು ದೃಷ್ಟಿಯಲ್ಲಿ ಈತ ಸಮಾಜ ಸುಧಾರಕ; ಸಮಾಜದ ಕೆಲಸಕ್ಕೆ ಬಾರದ ಸತ್ತರೂಢಿಗಳಿಗೆ ಯಾವ ಗಮನವನ್ನೂ ಕೊಡಲಿಲ್ಲ. ಸ್ವತಃ ಅಸ್ಪೃಶ್ಯರೊಂದಿಗೆ ಸ್ವೇಚ್ಛೆಯಾಗಿ ಬೆರೆಯುತ್ತಿದ್ದ. ಅವರನ್ನು ಅವರ ಭಕ್ತಿಗಾಗಿ ಪ್ರೀತಿಸುತ್ತಿದ್ದ. ನರಸಿಂಹನ ಒಂದು ಪ್ರಖ್ಯಾತ ಪದ್ಯದಿಂದ ಮಹಾತ್ಮಗಾಂಧಿ ಹರಿಜನ ಎಂಬ ಶಬ್ದವನ್ನು ಎತ್ತಿಕೊಂಡರು. ಗಾಂಧಿಯವರಿಂದ ಪ್ರಖ್ಯಾತಿಯನ್ನು ಹೊಂದಿದ ಈತನ ವೈಷ್ಣವ ಜನತೋ ಎಂಬ ಕವಿತೆ ಈತನ ಜೀವನ ತತ್ತ್ವವನ್ನು ಬಹು ವಿಶದವಾಗಿ ಸಂಕ್ಷೇಪಿಸುತ್ತದೆ. ನರಸಿಂಹನ ಮುಖ್ಯ ಕೃತಿಗಳೆಂದರೆ ಜ್ಞಾನಭಕ್ತಿಶೃಂಗಾರ ಪರವಾದ ಪದಗಳು. ಈತನ ಶೃಂಗಾರ ಬಹಳ ಸಲ ಅಷ್ಟು ನವಿರಾಗಿರದೆ ಅಸಂಸ್ಕೃತವೆನಿಸಿದರೂ ಕೊನೆಗೆ ಭಕ್ತಿಯಲ್ಲಿ ಲೀನವಾಗುತ್ತದೆ. ಪದಗಳಲ್ಲಿನ ಈತನ ಶೈಲಿ ನಿಸ್ಸಂಶಯವಾಗಿ ತುಂಬ ಶ್ರೇಷ್ಠವಾದದ್ದು.

ಯಾರ ಹೆಸರು ಎಲ್ಲರ ಮನೆಮಾತಾಗಿದೆಯೋ ಅಂಥ ಮಹಾಭಕ್ತಳೂ ಅಸಮಾನ ಕವಯಿತ್ರಿಯೂ ಆದ ಮೀರಾಬಾಯಿಯ (1499–1547) ಕೃತಿಗಳನ್ನು ಪರಿಶೀಲಿಸದಿದ್ದರೆ ಗುಜರಾತೀ ಸಾಹಿತ್ಯದ ಯಾವ ಸಮೀಕ್ಷೆಯೂ ಸಮಗ್ರವೆನಿಸುವುದಿಲ್ಲ. ಗುಜರಾತು ಮತ್ತು ರಾಜಸ್ತಾನಗಳೆರಡೂ ಮೀರಾಬಾಯಿ ತಮಗೆ ಸೇರಿದವಳೆಂದು ಸ್ಪರ್ಧಿಸುತ್ತಿವೆ. ಆದರೆ ಹದಿನಾರನೆಯ ಶತಮಾನದವರೆಗೂ ಗುಜರಾತಿನಲ್ಲೂ ರಾಜಸ್ತಾನದಲ್ಲೂ ಒಂದೇ ಒಂದು ಭಾಷೆ ಪ್ರಚಲಿತವಾಗಿತ್ತೆಂಬ ಐತಿಹಾಸಿಕ ಸಂಗತಿಯನ್ನು ನೆನಪಿಗೆ ತಂದುಕೊಂಡರೆ ಈ ವಿವಾದ ಕೊನೆಗಾಣುತ್ತದೆ. ರಾಜಸ್ತಾನದ ಮೆಡ್ತಾ ಎಂಬ ಒಂದು ಸಣ್ಣ ಸಂಸ್ಥಾನದ ಅರಸನಾದ ರಾವ್ ದೂದಾಜೀ ಎಂಬ ಕೃಷ್ಣಭಕ್ತನ ಮೊಮ್ಮಗಳು ಮೀರಾ. ಈಕೆಯನ್ನು ಚಿತ್ತೋಡಿನ ಪ್ರಖ್ಯಾತ ರಾಣಾಸಿಂಗ ಅಥವಾ ಸಂಗ್ರಾಮಸಿಂಹನ ಮಗ ಭೋಜರಾಜನಿಗೆ ಕೊಟ್ಟು ಮದುವೆಯಾಗಿತ್ತು. ಮದುವೆಯಾದ ಸ್ವಲ್ಪಕಾಲದೊಳಗೆಯೇ ಮೀರಾ ವಿಧವೆಯಾದಳು. ತನ್ನ ಕೃಷ್ಣಭಕ್ತಿಯ ನಿಮಿತ್ತವಾಗಿ ತನ್ನ ಪತಿಯ ಸಂಬಂಧಿಕರಿಗೂ ಆಕೆಗೂ ಮನಸ್ಸು ಹೊಂದಿಕೊಳ್ಳಲಿಲ್ಲವಾದುದರಿಂದ ಆಕೆ ಮೇವಾಡವನ್ನು ತ್ಯಜಿಸಿ ದ್ವಾರಕೆಯಲ್ಲಿರತೊಡಗಿದಳು. ಮೀರಾ ಯಾವ ದೊಡ್ಡ ಗ್ರಂಥವನ್ನೂ ರಚಿಸಲಿಲ್ಲ. ಆದರೆ ಅವಳ ಪ್ರತಿಭೆ ಸಣ್ಣ ಸಣ್ಣ ಪದಗಳಲ್ಲಿ ವ್ಯಕ್ತವಾಗತೊಡಗಿತು. ಆಕೆಯ ಅತಿ ಮನೋಹರವಾದ ಕವಿತೆಯಲ್ಲಿ ಒಂದೇ ಒಂದು ಭಾವವಾದ ಅವಳ ಕೃಷ್ಣಪ್ರೇಮ ಹರಿದು ಬರುತ್ತದೆ. ಮೀರಾ ತನ್ನ ಪ್ರಭುವಿನ ಹಂಬಲವನ್ನು ಚೆಲುವಾದ ಕೆಲವೇ ಮಾತುಗಳಲ್ಲಿ ತೋಡಿಕೊಳ್ಳುತ್ತಾಳೆ. ಆಕೆಯ ಕವಿತೆಯಲ್ಲಿ ಗುಜರಾತು ಪ್ರಖರ ಪ್ರತಿಭಾವಿಲಾಸದಿಂದ ಶೋಭಿಸುವ ಅತಿಮಧುರ ಭಾವಗೀತಗಳನ್ನು ಪಡೆದಿದೆ.

ಭಾಲಣ ಮತ್ತು ಪದ್ಮನಾಭ ಎಂಬುವರು ನರಸಿಂಹನ ಸಮಕಾಲೀನ ಪ್ರಸಿದ್ಧ ಕವಿಗಳ ಪೈಕಿ ಶ್ರೇಷ್ಠರಾಗಿದ್ದಾರೆ. ಗುಜರಾತೀ ಭಾಷೆಯಲ್ಲಿ ಸಮಗ್ರವಾದ ಆಖ್ಯಾನಗಳನ್ನು ಮೊದಲು ರಚಿಸಿದವ ಕವಿ ಭಾಲಣ. ಇದಕ್ಕಾಗಿ ಈತನನ್ನು ಕೆಲವರು ಆಖ್ಯಾನ ರೂಪದ ಜನಕನೆಂದು ಕರೆಯುತ್ತಾರೆ. ಕಾನ್‌ಹಡದೇ ಪ್ರಬಂಧವೆಂಬ ಶಕ್ತಿಯುತವಾದ ಐತಿಹಾಸಿಕ ಚರಿತ್ರೆಯನ್ನು ಬರೆದ ಕವಿ ಪದ್ಮನಾಭ. ಮುಖ್ಯ ಅಖ್ಯಾನ ಲೇಖಕರಾದ ಭಾಲಣ ಮತ್ತು ಪ್ರೇಮಾನಂದ ಎಂಬಿಬ್ಬರ ನಡುವಣ ಅವಧಿಯನ್ನು ನಾಕರ್ ಮತ್ತು ವಿಷ್ಣುದಾಸರು ತುಂಬಿದ್ದಾರೆ.

ಆದರೆ ಪ್ರೇಮಾನಂದನ ವಿಷಯಕ್ಕೆ ಬರುವ ಮುಂಚೆ ಆಖೋ ಎಂಬ ಶ್ರೇಷ್ಠ ವೇದಾಂತ ಕವಿಯನ್ನು ಕುರಿತು ಒಂದೆರಡು ಮಾತುಗಳನ್ನು ಹೇಳುವುದು ಅಗತ್ಯ. ಈತ ಹದಿನೇಳನೆಯ ಶತಮಾನದಲ್ಲಿ ಬಾಳಿದವ. ಈತನ ಆಖೋಗೀತ (1659), ಅನುಭವ ಬಿಂದು ಮುಂತಾದ ಕೃತಿಗಳ ಹೆಸರನ್ನು ಓದಿದರೆ ಅವು ವೇದಾಂತ ತತ್ತ್ವವನ್ನು ಕುರಿತ ಗ್ರಂಥಗಳೆಂಬುದು ಸ್ಪಷ್ಟವಾಗುತ್ತದೆ. ಇಂಥ ಕೃತಿಗಳಲ್ಲಿ ಆಖೋವಿನ ಶೈಲಿ ಪೆಡಸಾಗಿದೆ. ಆದರೆ ಈತನ ದಾರ್ಶನಿಕ ಪದಗಳ ಪರಿಯೇ ಬೇರೆ. ಇವಕ್ಕೆ ಒಂದು ಸಾಂಪ್ರದಾಯಿಕ ಶೈಲಿಯ ಸೌಕರ್ಯವೂ ಒದಗಿದೆ. ಈ ಶೈಲಿ ನರಸಿಂಹ

ಮೆಹತನ ಕಾಲದಿಂದಲೂ ಬೆಳೆದು ಬಂದಿರುವ ರಚನೆಗಳಿಂದಲೂ ಮತ್ತು ಗುಜರಾತಿನ ಜನಪದ ಸಾಹಿತ್ಯದಲ್ಲಿ ರೂಪಗೊಂಡಿರುವ ತತ್ತ್ವಜ್ಞಾನಿಗಳ ಉಪದೇಶಗಳಿಂದಲೂ ಈತನದೇ ಆದ ಛಪ್ಪಾಗಳಿಂದ, ಎಂದರೆ, ಆರು ಸಾಲಾಗಿ ರಚಿಸಿದ ಛೋಪಾಯಿಗಳಿಂದಲೂ ಪುಷ್ಟಗೊಂಡಿದೆ.

ಗುಜರಾತಿಯಲ್ಲಿ ನಿಸ್ಸಂದೇಹವಾಗಿ ಆಖೋ ತುಂಬ ಶ್ರೇಷ್ಠನಾದ ದಾರ್ಶನಿಕ ಕವಿ.

ಆಖೋವಿನ ಹಿಂದುಗಡೆಯೇ ಪ್ರೇಮಾನಂದ (1634–1700) ಗೋಚರಿಸುತ್ತಾನೆ. ಈತ ಅತ್ಯಂತ ಶ್ರೇಷ್ಠನಾದ ಆಖ್ಯಾನ ಕವಿ. ನಾಕರನ ಸಾಹಿತ್ಯಕರ್ಮದ ಬೀಡಾದ ವಡೋದರಕ್ಕೆ ಸೇರಿದವನೀತ. ಇವನು ಅನೇಕ ಆಖ್ಯಾನಗಳನ್ನು ರಚಿಸಿದ್ದಾನೆ. ಅವುಗಳ ಪೈಕಿ ನಳಾಖ್ಯಾನ, ಸುದಾಮ ಚರಿತ್ರೆ, ಮಾಮೇರುಣ್ (ನರಸಿಂಹ ಮೆಹತನ ಜೀವನ ಚರಿತೆಯಲ್ಲಿನ ಒಂದು ಪ್ರಸಂಗವನ್ನು ಕುರಿತದ್ದು) ಮತ್ತು ದಶಮಸ್ಕಂಧ ತುಂಬ ಗಮನಾರ್ಹವಾಗಿವೆ. ಪ್ರೇಮಾನಂದನ ಕೃತಿಗಳು ಗುಜರಾತಿನಲ್ಲೆಲ್ಲ ಜನಪ್ರಿಯವಾಗಿವೆ. ಒಬ್ಬ ವಿಮರ್ಶಕ ಮನಮುಟ್ಟ ಹೇಳಿರುವಂತೆ ಪ್ರೇಮಾನಂದ ಎಲ್ಲ ಗುಜಾರಾತೀ ಕವಿಗಳಿಗಿಂತಲೂ ಅಚ್ಚಗುಜರಾತೀ ಕವಿ. ಆತನನ್ನು ಜನತೆ ಮೆಚ್ಚಿಕೊಂಡಿರುವುದಕ್ಕೆ ಇದೂ ಒಂದು ಕಾರಣ. ಗುಜರಾತೀ ಸಮಾಜದ ಪ್ರತಿಯೊಂದು ಜಾತಿ ಮತ್ತು ಪಂಗಡಗಳ ಜೀವನಕ್ರಮಗಳನ್ನು ಆತ ಬಹು ಚೆನ್ನಾಗಿಯೂ ವಿಶದವಾಗಿಯೂ ಕಂಡಿದ್ದಾನಲ್ಲದೆ ತನ್ನ ಕವಿತೆಗಳಲ್ಲಿ ಅವನ್ನು ಸ್ವಾರಸ್ಯವಾಗಿ ವರ್ಣಿಸಿದ್ದಾನೆ. ಕೆಲವು ಸಲ ಪುರಾಣಗಳಲ್ಲಿ ಗೋಚರಿಸುವ ಮಹಾ ಪಾತ್ರಗಳ ಗುಜರಾತೀರೂಪ ಮೂಲದ ಘನತೆಗೆ ಭಂಗ ತರುವಂತಿತ್ತು. ಆದರೆ ಒಟ್ಟಿನಲ್ಲಿ ಪ್ರೇಮಾನಂದನಿಗೆ ಅದೊಂದು ಮೂಲಧನವಾಗಿತ್ತು. ಏಕೆಂದರೆ ಗುಜರಾತೀ ಜನರ ಅನುಭವದ ಮಿತಿಗೆ ತನ್ನ ಕೃತಿಗಳನ್ನು ತರಲು ಅದು ಮುಖ್ಯ ಸಾಧನವಾಗಿತ್ತು. ಪ್ರೇಮಾನಂದನ ವಿಪುಲ ಲೇಖನಗಳನ್ನು ವ್ಯಾಸಂಗ ಮಾಡಿದ ವಿದ್ವಾಂಸನೊಬ್ಬ ಹದಿನೇಳನೆಯ ಶತಮಾನದ ಗುಜರಾತಿನ ಸಮಾಜದ ಅನೇಕ ಮುಖಗಳ ನೈಜಚಿತ್ರವನ್ನು ಇಲ್ಲಿ ಕಾಣಬಹುದು ಎಂದು ಹೇಳಿದ್ದರೆ ಅದು ಅತ್ಯುಕ್ತಿಯಾಗಲಾರದು. ಕಥೆ ಹೇಳುವುದರಲ್ಲೂ ವರ್ಣನೆಗಳಲ್ಲೂ ಗುಜರಾತೀ ಸಾಹಿತ್ಯದಲ್ಲಿ ಪ್ರೇಮಾನಂದನಿಗೆ ಸರಿಸಮವಾದವರು ಯಾರೂ ಇಲ್ಲ. ಈ ಕೆಲಸಕ್ಕೆ ಆತನಿಗೆ ಬಹು ದಕ್ಷವಾದ ಶೈಲಿಯೂ ವಿಪುಲವಾದ ಭಾಷಾಪ್ರಭುತ್ವವೂ ಇದೆ. ಆತನ ಕವಿತೆಗಳೆಲ್ಲವೂ ಅಪಭ್ರಂಶದ ಕಥಾ – ಕಾವ್ಯಗಳ ಕಾಲದಿಂದಲೂ ಜನರಿಗೆ ಇಷ್ಟವಾಗಿದ್ದ ದೇಸೀ ಛಂದಸ್ಸುಗಳಲ್ಲಿವೆ. ಈ ದೆಸೆಯಿಂದ ಆತನ ಕೃತಿಗಳನ್ನು ಹಾಡುವವರು ಎಷ್ಟು ದೊಡ್ಡ ಸಭೆಗಳಲ್ಲೂ ಜನರ ಗಮನವನ್ನು ಸೆಳೆದು ಮೆಚ್ಚುಗೆಯನ್ನು ಪಡೆಯಬಹುದಾಗಿತ್ತು. ಪ್ರೇಮಾನಂದ ಆಖ್ಯಾನ ರೂಪದ ಪರಮೋಚ್ಚಸ್ತರವನ್ನು ಮುಟ್ಟಿರುವ ಕವಿ. ಆತನ ಹಿಂದೆಯೂ ತರುವಾಯವೂ ಯಾರೂ ಈ ಮಟ್ಟಕ್ಕೆ ಏರಲಿಲ್ಲ.

ಪ್ರೇಮಾನಂದನ ತರುವಾಯ ಶಾಮಲಭಟ್ಟನೆಡೆಗೆ (1718–1765) ಬರುತ್ತೇವೆ. ಪದ್ಯಗಳಲ್ಲಿ ಈತ ಜನಪ್ರಿಯ ಕಥೆಗಳನ್ನು ವಿಪುಲವಾಗಿ ರಚಿಸಿದ್ದಾನೆ. ಅಹಮದಾಬಾದಿನ ಒಂದು ಹರವಿನಲ್ಲಿ ಈತ ವಾಸಿಸುತ್ತಿದ್ದ. ಮುಂದೆ ಖೇಡಾ ಜಿಲ್ಲೆಯ ರಖಿದಾಸ್ ಎಂಬೊಬ್ಬ ಜಮೀನುದಾರನ ಆಶ್ರಯದಲ್ಲಿದ್ದ. ಶಾಮಲನ ಮುಖ್ಯ ಕೃತಿಗಳೆಂದರೆ, ಆತನ ಕಥಾಪುಸ್ತಕಗಳು. ಇವುಗಳೆಲ್ಲ ಬಹುತರವಾಗಿ ವಿಕ್ರಮ ಭೋಜ ಮತ್ತು ಇಂಥ ಇತರ ಜನಪ್ರಿಯ ಶೂರರ ಕತೆಗಳ ಸುತ್ತ ಹೆಣೆದುಕೊಳ್ಳುತ್ತ ಹೋಗುತ್ತವೆ. ಇಲ್ಲಿ ಗುಜರಾತಿನ ಜೈನ ಲೇಖಕರು ಸಂಸ್ಕೃತ, ಪ್ರಾಕೃತ ಮತ್ತು ಪ್ರಾಚೀನ ಗುಜರಾತಿಯಲ್ಲಿ ರಚಿಸಿದ ವಿಪುಲ ಜಾನಪದ ಕಥೆಗಳು ಮತ್ತು ಜನಪ್ರಿಯ ಕಥೆಗಳನ್ನು ಎತ್ತಿ ಹೇಳಬಹುದು. ಈ ಹಳೆಯ ಗ್ರಂಥಗಳಿಗೆ ತಾನು ತುಂಬ ಋಣಿ ಎಂದು ಶಾಮಲ ಮನಃಪೂರ್ವಕವಾಗಿ ಒಪ್ಪಿಕೊಂಡಿದ್ದಾನೆ.

ವರ್ಣನೆಯಲ್ಲೂ ಕಥೆ ಹೇಳುವುದರಲ್ಲೂ ಶಾಮಲ ತುಂಬ ಗಟ್ಟಿಗ. ಈ ಕಾರಣದಿಂದಲೇ ಈತನ ಕಥೆಗಳು ಹುಟ್ಟಿಕೊಂಡು ಹರಡಿದ ಮೇಲೆ ಹಿಂದಿನ ಕಥೆಗಳೆಲ್ಲ ಮೂಲೆಪಾಲಾಗಿ ಜನ ಅವನ್ನು ಮರೆತುಬಿಟ್ಟರು. ಜನಪ್ರಿಯ ಕಥಾ ಕ್ಷೇತ್ರದಲ್ಲಿ ಶಾಮಲನ ಸ್ಥಾನ ಆಖ್ಯಾನ ಕ್ಷೇತ್ರದಲ್ಲಿ ಪ್ರೇಮಾನಂದನದಕ್ಕೆ ಸಮಾನವಾಗಿದೆ.

**ಮೂರನೆಯ ಅವಧಿ:** ಪ್ರಾಚೀನ ಕವಿತಾ ಸಂಪ್ರದಾಯದ ಕೊನೆಯ ಸಮರ್ಥ ಪ್ರತಿನಿಧಿ ದಯಾರಾಮ (1783–1853). ಈತ ವಡೋದರದ ಹತ್ತಿರವಿರುವ ಚಾಂದೋಡಿಯಲ್ಲಿ ಜನಿಸಿದ ಮತ್ತು ತನ್ನ ಜೀವಿತ ಕಾಲದ ಬಹು ಭಾಗವನ್ನು ಚಾಂದೋಡಿಗೆ ಕೆಲವು ಮೈಲಿಗಳ ದೂರದಲ್ಲಿದ್ದ ದಭೋಯೀಯಲ್ಲಿ ಕಳೆದ. ಈತ ಅನೇಕ ದೇಶಗಳನ್ನು ಸುತ್ತಿದವ ಮತ್ತು ಸಂಗೀತದಲ್ಲಿ ಒಳ್ಳೆ ಪರಿಶ್ರಮಿ. ಸಾಂಪ್ರದಾಯಿಕವಾಗಿ ಹೇಳುವ ಅರ್ಥದಲ್ಲಿ ಈತ ಪಂಡಿತನಲ್ಲ. ಆದರೆ ಸಂಸ್ಕೃತದಲ್ಲಿ ನಿಷ್ಣಾತ, ಗುಜರಾತಿಯೊಂದರಲ್ಲಿ ಅಲ್ಲದೆ, ಈತ ವ್ರಜ, ಮರಾಠಿ, ಪಂಜಾಬೀ, ಸಂಸ್ಕೃತ ಮತ್ತು ಉರ್ದು ಭಾಷೆಗಳಲ್ಲೂ ಪದಗಳನ್ನು ರಚಿಸಿದ್ದಾನೆ. ವಲ್ಲಭಾಚಾರ್ಯ ಪಂಥದ ನಿಷ್ಠಭಕ್ತನಾದ ಈತ ಆ ಪಂಥದ ಶುದ್ಧಾದ್ವೈತ ದರ್ಶನವನ್ನು ವಿವರಿಸಿ ಅನೇಕ ಗ್ರಂಥಗಳನ್ನು ಬರೆದಿದ್ದಾನೆ. ಆದರೆ ಕವಿ ಎಂಬ ಈತನ ಮಹಾಯಶಸ್ಸು ಇವನ ಕೃತಿಗಳ ಪೈಕಿ ಬಹು ಸ್ವಲ್ಪ ಭಾಗದ ಮೇಲೆ, ಎಂದರೆ ಈತನ ಕೃಷ್ಣ ಗೋಪಿಯರ ಪ್ರಣಯವನ್ನು ಕುರಿತ ಭಾವಗೀತಗಳ ಮೇಲೆ ನಿಂತಿದೆ. ಇದಕ್ಕೇನು ಕಾರಣ ಎಂದರೆ, ಈ ಗರಬೀಗಳು ಗುಜರಾತಿಗೆ ವಿಶಿಷ್ಟವಾಗಿರುವ ಗರ್‌ಬಾ ನರ್ತನಕ್ಕೆ ಅನುಗುಣವಾದ ಜನಪ್ರಿಯ ಹಾಡುಗಳನ್ನು ಒದಗಿಸುತ್ತವೆ. ಈ ಪದಗಳು ಮತ್ತು ಗರಬೀಗಳು ಅನೇಕ ಶತಸಂಖ್ಯೆಯಲ್ಲಿ ಈಗಲೂ ರಕ್ಷಿತವಾಗಿವೆ. ಇವು ಗುಜರಾತಿನಲ್ಲಿ ಈ ಕವಿಯನ್ನು ಅಮರನನ್ನಾಗಿ ಮಾಡಿವೆ.

ದಯಾರಾಮನ ಕಾಲಕ್ಕಾಗಲೇ ಗುಜರಾತಿನಲ್ಲಿ ಮೊಗಲರ, ಪೇಷ್ವೆಗಳ ಪ್ರಭುತ್ವ ಕೊನೆಗೊಂಡಿತ್ತು. ಕೆಲವು ಜಿಲ್ಲೆಗಳಲ್ಲಿ ಗಾಯಕವಾಡರೂ ಮತ್ತೆ ಕೆಲವು ಕಡೆ ಬ್ರಿಟಿಷರೂ ನೆಲೆಗೊಂಡಿದ್ದರು. ನರ್ಮದನೆಂದು ಜನಾಖ್ಯಾತನಾಗಿ ನವೋದಯದ ಕಹಳೆಯನ್ನೂದಿದ ನರ್ಮದಾಶಂಕರನೆಂಬ ಕವಿ 1833 ರಲ್ಲಿ ಸ್ವರ್ಗಸ್ಥನಾದ. ಆದರೆ ಆತ ಗತಿಸುವುದಕ್ಕೆ ಎಂಟು ವರ್ಷಗಳ ಮುಂಚೆ, 1844 ರಲ್ಲಿ ದುರ್ಗಾರಾಮ ಮಂಛಾರಾಮ ಮೆಹತಾಜೀ ಎಂಬ ಗುಜರಾತಿನ ಪ್ರಥಮ ಸಮಾಜ ಸುಧಾರಕ ಸೂರತ್ತಿನಲ್ಲಿ ತನ್ನ ಮಾನವ ಧರ್ಮ ಸಭೆಯನ್ನು ಸಂಸ್ಥಾಪಿಸಿದ. ಒಂದು ನೂರು ವರ್ಷಗಳ ಕಾಲ ಸಾಹಿತ್ಯದಲ್ಲೂ ವಿದ್ಯಾ ಪ್ರಸಾರದಲ್ಲೂ ಪ್ರಧಾನ ಕಾರ್ಯವನ್ನೆಸಗಿರುವ ಗುಜರಾತ್ ಭಾಷಾ ಸಂಘ (ಈಗಿನ ಗುಜರಾತ್ ವಿದ್ಯಾಸಭಾ) ಎ. ಕೆ. ಫೋರ್ಬ್ಸ್ ಎಂಬ ಗುಜರಾತಿನ ಪ್ರಥಮ ಆಂಗ್ಲ ಚರಿತ್ರೆಕಾರ ಮತ್ತು ಕವಿ ದಲಪತರಾಮ–ಇವರಿಂದ 1848 ರಲ್ಲಿ ಸ್ಥಾಪಿತವಾಯಿತು. ನರ್ಮದಾಶಂಕರ ಈ ಸಂಘಸ್ಥಾಪನೆಯ ಪ್ರಯೋಜನಗಳನ್ನು ಕುರಿತು ತನ್ನ ಪ್ರಥಮ ಗದ್ಯ ಲೇಖನವನ್ನು ಬೊಂಬಾಯಿಯಲ್ಲಿ ಬುದ್ಧಿವರ್ಧಕ ಸಭೆಯ ಮುಂದೆ 1851 ರಲ್ಲಿ ಓದಿದ. ಈ ಸಂಗತಿ ನಡೆದ ಸ್ವಲ್ಪ ಕಾಲದಲ್ಲೇ, 1857 ರಲ್ಲಿ, ಬೊಂಬಾಯಿಯ ವಿಶ್ವವಿದ್ಯಾಲಯ ಸ್ಥಾಪಿತವಾಯಿತು. ಪಾಶ್ಚಾತ್ಯ ಸಂಪರ್ಕದಿಂದ ಒಂದು ಹೊಸಯುಗ ಆಗಲೇ ಉದಿಸಿತ್ತು. ಸಂಸ್ಕೃತ ಸಾಹಿತ್ಯವನ್ನೂ ಭಾರತದ ಪ್ರಾಚೀನ ಸಂಸ್ಕೃತಿಯ ಜನ ಹೊಸ ದೃಷ್ಟಿಯಿಂದ ವ್ಯಾಸಂಗಿಸಲು ತೊಡಗಿದ್ದರು. ಪ್ರಬಂಧ, ನಾಟಕ, ಕಾದಂಬರಿ, ಸಣ್ಣ ಕಥೆ, ಜೀವನಚರಿತ್ರೆ ಮುಂತಾದ ಹೊಸ ಸಾಹಿತ್ಯದ ಪ್ರಕಾರಗಳನ್ನು ಬೆಳೆಸಲು, ವರ್ಧಿಸುತ್ತಿರುವ ಸಾಮರ್ಥ್ಯದಿಂದ ಬೆಳೆಸಲು ಸಾಹಿತಿಗಳು ಯತ್ನಗೊಂಡರು. ಇಂಗ್ಲಿಷ್ ಕವಿಗಳಲ್ಲಿ ಅತ್ಯುತ್ತಮರಾದವರ ಕೃತಿಗಳಿಂದ ಪ್ರಭಾವಿತವಾಗಿ ಭಾವಗೀತೆಗಳು ಹುಟ್ಟಿಕೊಂಡವು. ಗುಜರಾತಿನ ಪ್ರತಿಭಾವಂತ ಕಲೆಗಾರ ತನ್ನ ಮನಸ್ಸನ್ನು ಜೀವನ ಮತ್ತು ಸಾಹಿತ್ಯಗಳಲ್ಲೇಳುವ ಹೊಸ ತರಂಗಗಳಿಗೆ ಯಾವಾಗಲೂ ತೆರೆದೇ ಇದ್ದಾನೆ ಮತ್ತು ಈ ಸಾಹಿತ್ಯ ರೂಪಗಳೆಲ್ಲ ಈಗಿನ ಕಾಲದವರೆಗೂ ಅನೇಕ ವಿಧಗಳಲ್ಲಿ ವಿಕಾಸಗೊಳ್ಳುತ್ತಲೇ ಬಂದಿವೆ. ಆಧುನಿಕ ಕಾಲದಲ್ಲಿ ಸಾಹಿತ್ಯದ ವಿವಿಧ ರೂಪಗಳಲ್ಲಿ ಜಯಪ್ರದವಾದ ಪ್ರಯತ್ನಗಳನ್ನು ನಡೆಸಿರುವ ಪ್ರಧಾನ ಲೇಖಕರ ಹೆಸರನ್ನು ಸಹ ಎತ್ತಿ ಹೇಳಲು ಇಲ್ಲಿ ಅವಕಾಶವಿಲ್ಲ. ಎಲ್ಲೋ ಕೆಲವು ಗ್ರಂಥಕರ್ತರ ಮತ್ತು ಅವರ ಮುಖ್ಯ ಕೃತಿಗಳು– ಇವು ಕೂಡ ಸಮಗ್ರವಾಗಿಲ್ಲದಿರಬಹುದು– ಒಂದು ಚಿಕ್ಕ ಪಟ್ಟಿಯನ್ನು ಇಲ್ಲಿ ಕೊಡಬಹುದು, ಅಷ್ಟೆ.

ಈಗ ನಮ್ಮ ವಿವೇಚನೆ 19ನೆಯ ಶತಮಾನವನ್ನು ದಾಟಿ 20ನೆಯ ಶತಮಾನದ ಮೊದಲ ಅರ್ಧಕ್ಕೆ ಕಾಲಿಡುತ್ತದೆ.

**ಕವಿತೆ:** ಇಂಗ್ಲೀಷ್ ಸಾಹಿತ್ಯದಿಂದಲೂ ಸಮಾಜ ಪರಿಷ್ಕರಣದ ಭಾವನೆಗಳಿಂದಲೂ ಪ್ರೇರಿತನಾದ ನರ್ಮದ ಕಾದಂಬರಿಯನ್ನು ಬಿಟ್ಟು ಮಿಕ್ಕೆಲ್ಲ ಸಾಹಿತ್ಯ ಪ್ರಕಾರಗಳಲ್ಲೂ ಪ್ರಯತ್ನಗಳನ್ನು ನಡೆಸಿದ್ದಾನೆ. ಆದರೆ ಕವಿತೆಯಲ್ಲಿ ಆತನ ಶೈಲಿ ಅಷ್ಟು ನವುರಾಗಿಲ್ಲ. ಸಕಲ ವಿಶಾರದನಾದ ನರಸಿಂಹರಾಲ್ ಎಂಬಾತನ ಲೇಖನಿಯಿಂದ ಮಾತ್ರ ಮೊದಲ ಬಾರಿಗೆ ಅತ್ಯುತ್ತಮವಾದ ಕೆಲವು ಭಾವಗೀತೆಗಳು ಹೊರಹೊಮ್ಮಿವೆ. ಮಣಿಶಂಕರಭಟ್ಟ (ಕಾಂತ) ಮತ್ತು ಕಲಾಪೀ ಎಂಬವರು ಸಹ ಗಮನಾರ್ಹರಾದ ಸಮಕಾಲೀನರು. ಅನೇಕ ಧ್ಯೇಯಪೂರ್ಣ ನಾಟಕಗಳನ್ನೂ ಅತಿ ಮನೋಹರವಾದ ಭಾವಗೀತೆಗಳನ್ನೂ ರಚಿಸಿರುವ ಕವಿ ನಾನಾಲಾಲ ಆಧುನಿಕ ಗುಜರಾತಿ ಸಾಹಿತ್ಯದಲ್ಲಿನ ಅತಿ ವಿಲಕ್ಷಣಕವಿ. ವಿದ್ವಾಂಸ – ವಿಮರ್ಶಕ ಮತ್ತು ಕವಿಯಾದ ಬಿ. ಕೆ. ಠಾಕೂರ್ ಎಂಬಾತ ತಲೆಮಾರಿಗೆ ಸೇರುತ್ತಾನೆ. ಸುಂದರರಾಮ್ ಮತ್ತು ಉಮಾಶಂಕರ ಜೋಶಿ ಎಂಬವರು ಠಾಕೂರ್ ಪಂಥದ ಕವಿತ್ವವನ್ನು ರಚಿಸುವುದರಲ್ಲಿ ಅತ್ಯಂತ ಯಶಸ್ವಿಗಳಾಗಿದ್ದಾರೆ. ಆದರೆ ಇವರು ಠಾಕೂರ ನಂತಲ್ಲದೆ ಗಾಂಧಿಯವರ ಭಾವನೆ ಮತ್ತು ಸ್ವಾತಂತ್ರ್ಯ ಚಳುವಳಿಗಳಿಂದ ಗಾಢವಾಗಿ ಪ್ರಭಾವಿತರಾಗಿದ್ದಾರೆ. ಜೋಶಿ (1967) ಜ್ಞಾನಪೀಠ ಪ್ರಶಸ್ತಿಯನ್ನು ಗಳಿಸಿರುವ ಕವಿಶ್ರೇಷ್ಠ (ನಿಶೀತ್). ಶೇಷ್ (ಆರ್. ವಿ. ಪಾಠಕ್) ಮತ್ತು ಮುಸಿಕಾರ್ (ಆರ್. ಸಿ.

ಪರೀಖ್) ಎಂಬವರು ಶ್ಲಾಘ್ಯವಾದ ಕವಿತೆಯನ್ನು ಬರೆದಿದ್ದಾರೆ. ಮನ್‌ಶುಖಿಲಾಲ್ ಜ್ಹಾವೇರಿ, ಸ್ನೇಹರಶ್ಮಿ, ಚಂದ್ರವದನ ಮೆಹತಾ ಬೇಟೈ, ಕರ್‌ಸಂದಾಸ್ ಮಾಣಿಕ್ ಮತ್ತು ಇಂದೂಲಾಲ್ ಗಾಂಧಿ, ರಾಜೇಂದ್ರಷಹ ಮತ್ತು ನಿರಂಜನ ಭಗತ್ ಎಂಬವರು ಇತರ ಪ್ರಸಿದ್ಧ ಗುಜರಾತೀ ಕವಿಗಳು.

**ನಾಟಕ:** ನರ್ಮದ ಸಾಹಿತ್ಯಗುಣವುಳ್ಳ ಅನೇಕ ನಾಟಕಗಳನ್ನು ಬರೆದಿದ್ದಾನೆ. ಆದರೆ ರಣಛೋಡ್‌ಭಾಯ್ ಉದ್ಯೆರಾಂ ಎಂಬಾತ ನಾಟಕರಂಗದ ಮೇಲೆ ತುಂಬ ಹೆಸರು ಗಳಿಸಿರುವ ನಾಟಕಗಳನ್ನು ರಚಿಸಿದ ಪ್ರಥಮ ಗುಜರಾತಿ ನಾಟಕಕಾರ. ಈತನದಾದ ಮೇಲೆ ನಭುಭಾಯಿಯ ಕಾಂತಾನಾಟಕ ಮತ್ತು ರಮಣ್ ಭಾಯ್ ನೀಲಕಂಠನ ರಾಯ್‌ನೋ ಪರ್ವತ ಎಂಬ ನಾಟಕಗಳು ಬರುತ್ತವೆ. ಇವೆರಡೂ ತಮ್ಮ ಶ್ರೇಷ್ಠಗುಣಗಳಿಂದ ಸ್ಥಿರವಾಗಿ ನಿಲ್ಲಬಲ್ಲ ನಾಟಕಗಳು. ಇದಾದ ಮೇಲೆ ಕೆ. ಎಂ. ಮುನ್ಷಿಯ (ಪೌರಾಣಿಕ ಮತ್ತು ಸಾಮಾಜಿಕ) ಗದ್ಯನಾಟಕಗಳತ್ತಲೂ ಬಟುಭಾಯಿಯ ಏಕಾಂಕ ನಾಟಕಗಳತ್ತಲೂ ನಾವು ಬರುತ್ತೇವೆ. ಉಮಾಶಂಕರ ಜೋಶಿ ತುಂಬ ಯಶಸ್ವಿಗಳಾದ ಏಕಾಂಗ ನಾಟಕಗಳನ್ನು ಬರೆದಿದ್ದಾನೆ. ಚಂದ್ರವದನ ಮೆಹತ, ತಾನೇ ಒಳ್ಳೆ ನಟನೂ ನಿರ್ದೇಶಕನೂ ಆಗಿದ್ದು, ರಂಗವನ್ನು ದೃಷ್ಟಿಯಲ್ಲಿಟ್ಟುಕೊಂಡು ಅನೇಕ ಸಾಹಿತ್ಯಕ ನಾಟಕಗಳನ್ನು ರಚಿಸಿದ್ದಾನೆ. ಶ್ರೀಮತಿ ಹಂಸಾ ಮೆಹತ ಷೇಕ್ಸ್‌ಪಿಯರಿನ ಎರಡು ನಾಟಕಗಳನ್ನು ತರ್ಜುಮೆ ಮಾಡುವುದರ ಜೊತೆಗೆ ಕೆಲವು ಸ್ವಂತ ನಾಟಕಗಳನ್ನೂ ಬರೆದು ರಾಮಾಯಣವನ್ನು ಪದ್ಯರೂಪದಲ್ಲಿ ಭಾಷಾಂತರಿಸಿ ಪ್ರಕಟಿಸಿದ್ದಾಳೆ. ಯಶವಂತ ಪಾಂಡ್ಯ. ಆರ್. ಸಿ. ಪರೀಖ್, ಜಯಂತೀಲಾಲ್, ಶ್ರೀಧರಾಣಿ, ಚುನಿಲಾಲ್ ಮಡಿಯಾ, ಗುಲಾಬ್‌ದಾಸ್ ಬ್ರೋಕರ್, ಪುಷ್ಕರ್ ಚಂದರವಾರ್ಕರ್ ಎಂಬವರು ಇತರ ಯಶಸ್ವೀ ನಾಟಕಕಾರರು.

**ಕಾದಂಬರಿ:** ಹತ್ತೊಂಬತ್ತನೆಯ ಶತಮಾನದಲ್ಲಿ ಅನೇಕ ಕಾದಂಬರಿಗಳು ಇಂಗ್ಲಿಷ್ ಮತ್ತು ಇತರ ಭಾಷೆಗಳಿಂದ ಭಾಷಾಂತರಗೊಂಡವು. ಆದರೆ ಗುಜರಾತಿಯಲ್ಲೇ ಬರೆದ ಸ್ವತಂತ್ರ ಪ್ರಥಮ ಕಾದಂಬರಿ ಎಂದರೆ 1868ರಲ್ಲಿ ಪ್ರಕಟವಾದ ನಂದಶಂಕರನ ಕರಣ್ ಘೆಲೋ ಎಂಬುದು. ಆ ಕಾದಂಬರಿ ವಸ್ತು ಮಧ್ಯಯುಗದ ಗುಜರಾತಿನ ಚರಿತ್ರೆಯಿಂದ ಆರಿಸಿಕೊಂಡದ್ದು. ಇದು ಪ್ರಕಟವಾದ ಹತ್ತು ವರ್ಷಗಳೊಳಗೆ ಗೋವರ್ಧನ ರಾಮನ ಸರಸ್ವತೀ ಚಂದ್ರವೆಂಬ ಕಾದಂಬರಿ ಬರುತ್ತದೆ. ಮುಂದೆ ಬರುವ ಜನ ತನ್ನನ್ನು ಕಡೆಗಾಣಿಸಲಾಗದಷ್ಟು ಮಹಾಕಾವ್ಯದ ಗಾಂಭೀರ್ಯವನ್ನು ಮೆರೆಸುವ ಬಹು ಘನವಾದ ಕಾದಂಬರಿ ಇದು. ಕೆ.ಎಂ. ಮುನ್ಷಿಯ ಐತಿಹಾಸಿಕ ಮತ್ತು ಸಾಮಾಜಿಕ ಕಾದಂಬರಿಗಳು ಕತೆಯನ್ನು ಕಳಕಳನೆ ಹೊಳೆವಂತೆ ಹೇಳುತ್ತವೆಯಲ್ಲದೆ ಬೆರಗು ಮೂಡಿಸುವಂತೆ ನಾಟಕೀಯವಾಗಿಯೂ ಇದ್ದು ವಿಲಕ್ಷಣವಾಗಿವೆ. ಗುಜರಾತಿ, ಹಿಂದೀ ಮತ್ತು ಸಂಸ್ಕೃತ ಭಾಷಾ ಪ್ರಸಾರಕ್ಕಾಗಿ ಭಾರತೀಯ ಸಂಸ್ಕೃತಿಯ ಪುನರುಜ್ಜೀವನಕ್ಕಾಗಿ ಮುನ್ಷಿ ದಂಪತಿಗಳು ಮಾಡಿದ ಕೆಲಸಗಳು ಅದ್ವಿತೀಯವಾದುವು. ಅವರು ಸ್ಥಾಪಿಸಿದ ಭಾರತೀಯ ವಿದ್ಯಾಭವನ ಭಾರತದ ಚರಿತ್ರೆಯಲ್ಲಿ ಮರೆಯಲಾಗದ ಹೆಸರಾಗಿದೆ. ಯುಗಮೂರ್ತಿ ವಾರ್ತಾಕರ್ ಎಂದು ನ್ಯಾಯವಾಗಿಯೇ ವಿಮರ್ಶಕರು ಹೊಗಳುವ ರಮಣಲಾಲ ದೇಸಾಯಿ ನಾಟಕಗಳು, ಸಣ್ಣ ಕಥೆಗಳು, ಕಾದಂಬರಿಗಳು, ಸಾಹಿತ್ಯ ಮತ್ತು ಇತಿಹಾಸಗಳ ಮೇಲಿನ ಪ್ರಬಂಧಗಳು–ಹೀಗೆ ಹಲವು ಪ್ರಕಾರಗಳಲ್ಲಿ ದುಡಿದಿದ್ದಾನೆ. ಸತ್ಯಾಗ್ರಹ ಚಳವಳಿಯನ್ನು ಕುರಿತ ದಿವ್ಯ ಚಕ್ಷು ಎಂಬುದು ಅವುಗಳಲ್ಲೊಂದು. ಮೇಘಾನಿ, ಧೂಮಕೇತು, ಚುನಿಲಾಲ್ ಷಹ, ಪನ್ನಾಲಾಲ್ ಪಟೇಲ್, ಗುಣವಂತರಾಯ್ ಆಚಾರ್ಯ ಮತ್ತು ದರ್ಶಕ ಎಂಬುವರು ಇತರ ಜನಪ್ರಿಯ ಕಾದಂಬರಿಕಾರರು. ಮಡಿಯಾ, ಪೆಟ್ಲೀಕರ್. ಚಂದರವಾರ್ಕರ್, ಪೀತಾಂಬರ್ ಪಟೇಲ್, ಮುಂತಾದವರು ಕಿರಿಯ ಕಾದಂಬರಿಕಾರರಲ್ಲಿ ಕೆಲವರು.

**ಸಣ್ಣಕಥೆ:** ಮಲಯಾನಿಲ (ಕಾಂಚನಲಾಲ್ ಮೆಹತ) ಮೊದಲು ಆಮೇಲೆ ಮಟುಭಾಯ್ ಕಾಂತಾವಾಲಾ ಮತ್ತು ಕೆ. ಎಂ. ಮುನ್ಷಿಯವರು ಯಶಸ್ವೀ ಸಣ್ಣ ಕಥೆಗಳನ್ನು ಬರೆದರು. ಗುಜರಾತಿಯಲ್ಲಿ ಆರ್.ವಿ. ಪಾಠಕ್ ಅವರು ಧೂಮಕೇತು ಮತ್ತು ದ್ವಿರೇಫ್ ಎಂಬ ಕೆಲವು ಅತ್ಯುತ್ತಮ ಸಣ್ಣ ಕಥೆಗಳನ್ನು ಬರೆದಿದ್ದಾರೆ. ರಮಣಲಾಲ್ ದೇಸಾಯಿ, ಮೇಘಾನಿ, ಸೋಪಾನ್, ಉಮಾಶಂಕರ್, ಸುಂದರಂ, ಪನ್ನಾಲಾಲ್ ಪಟೇಲ್, ಗುಲಾಬ್‌ದಾಸ್, ಮಡಿಯಾ, ಪೆಟ್ಲೀಕರ್ ಮುಂತಾದವರು ಪ್ರತ್ಯೇಕವಾಗಿ ಕಥಾಸಂಗ್ರಹಗಳನ್ನು ಪ್ರಕಟಿಸಿದ್ದಾರೆ.

ನೂರು ವರ್ಷಗಳಿಂದೀಚೆಗೆ ಗುಜರಾತಿಯಲ್ಲಿ ಅನೇಕ ಮನೋಹರ ಜೀವನ ಚರಿತ್ರೆಗಳೂ ಆತ್ಮಕಥೆಗಳೂ ರಚಿತವಾಗಿವೆ. ಅವುಗಳ ಪೈಕಿ ಅತಿವಿಲಕ್ಷಣವಾಗಿರುವುದು ಮಹಾತ್ಮಾ ಗಾಂಧೀಜಿಯ ಆತ್ಮಕಥೆ. ಗಾಂಧಿಯವರ ಬರೆಹಗಳಿಂದಾಗಿ ಗುಜರಾತಿ ಸಾಹಿತ್ಯ ಭಾರತೀಯ ಸಾಹಿತ್ಯದಲ್ಲಿ ಮಾತ್ರವಲ್ಲದೆ ವಿಶ್ವಸಾಹಿತ್ಯದಲ್ಲಿ ಶಾಶ್ವತ ಸ್ಥಾನವನ್ನು ಗಳಿಸುವಂತಾಗಿದೆ. ಸಮಾಜ ಪರಿಷ್ಕರಣೆಗೆ ಬಹು ಉತ್ಸಾಹದಿಂದ ನರ್ಮದನೂ ಬಳಿಕ ಆರ್ಯ ಸಂಸ್ಕೃತಿಯ ಮೇಲಣ ಧಾಳಿಯನ್ನು ಎದುರಿಸುವುದಕ್ಕೂ ಮತ್ತು ಅದರ ಗುಣಗಳನ್ನು ವಿವರಿಸುವುದಕ್ಕೂ ಮಣಿಲಾಲನೂ ಬಳಸಿಕೊಂಡ ಪ್ರಬಂಧವನ್ನು ಇತರರೂ ಬಳಸಿಕೊಂಡಿದ್ದಾರೆ. ಅವರ ಪೈಕಿ, ಆನಂದ ಶಂಕರ ಧ್ರುವ, ಮಹಾತ್ಮಗಾಂಧಿ, ಕಾಕಾ ಕಾಲೇಲ್‌ಕರ್ ಮತ್ತು ಮಶ್ರುವಾಲರು ಪ್ರಸಿದ್ಧರಾದವರು. ಲಘು ಪ್ರಬಂಧಗಳನ್ನು ಸ್ವೈರವಿಹಾರಿ (ಆರ್.ವಿ.ಪಾಠಕ್), ಜ್ಯೋತೀಂದ್ರ ದಾವೆ, ದೂರ್‌ಕಾಲ್, ವಿ.ಕೆ. ವೈದ್ಯ, ಮುನಿಕುಮಾರ ಭಟ್, ಜಿ.ಎಲ್.ಮೆಹತ. ನವಲ್ ರಾಂ ತ್ರಿವೇದಿ ಮತ್ತು ಇತರರು ಬರೆದಿದ್ದಾರೆ.

ಗುಜರಾತಿನಲ್ಲಿ ಐತಿಹಾಸಿಕ ಮತ್ತು ಸಾಹಿತ್ಯಕ ಸಂಶೋಧನೆಗಳು: ಎ.ಕೆ. ಫೋರ್ಬ್ಸ್ ಮತ್ತು ಕವಿ ದಲಪತರಾಮ ಎಂಬವರು ಮೊದಲ ಬಾರಿಗೆ ಗುಜರಾತಿ ಮಾತಿನ ಇತಿಹಾಸವನ್ನು ರಚಿಸಲು ಬೇಕಾದ ವಸ್ತುಗಳೆಲ್ಲದರ ಶೋಧನೆಗೆ ತೊಡಗಿದಂದಿನಿಂದ ಪ್ರಾರಂಭವಾದವು. ಈ ಕೆಲಸವನ್ನು ಇಂದಿನವರೆಗೂ ಅನೇಕ ವಿದ್ವಾಂಸರು ಮುಂದುವರಿಸಿಕೊಂಡು ಬಂದಿದ್ದಾರೆ. ವ್ರಜಲಾಲಶಾಸ್ತ್ರಿ ತನ್ನ ಗ್ರಂಥಗಳನ್ನೂ ಗುಜರಾತಿ ಯಲ್ಲಿನ ಗಮನಾರ್ಹವಾದ ಪ್ರಥಮ ಶಬ್ದಕೋಶವಾದ ನರ್ಮಕೋಶಕ್ಕೆ ನರ್ಮದ ಪೀಠಿಕೆಯನ್ನೂ ಬರೆದಂದಿನಿಂದ, ಭಾಷಾಶಾಸ್ತ್ರ ಸಂಶೋಧನೆಗಳೂ ಉಪಕ್ರಮಿಸಿವೆ. ಪ್ರವೃದ್ಧವಾಗಿರುವ ಭಾಷಾಶಾಸ್ತ್ರದ ದೃಷ್ಟಿಯಿಂದ ನೋಡಿದರೆ ಈ ದಿವಸ ಈ ಕೃತಿಗಳು ಹಳೆಯವೆನ್ನಿಸಬಹುದು. ಆದರೆ ಈ ಶಾಸ್ತ್ರ ತುಂಬ ಪ್ರಧಾನವಾದುದೆಂಬುದನ್ನು ಬಲು ಹಿಂದೆಯೇ ವಿದ್ವಾಂಸರು ಕಂಡುಕೊಂಡ ವಿಷಯವನ್ನು ಇವು ಜ್ಞಾಪಿಸುತ್ತವೆ. ಎನ್. ಬಿ. ದಿವೇಟಿಯಾ ಎಂಬ ಗುಜರಾತಿ ಭಾಷೆಯ ಘನ ಪಂಡಿತ. ತಾನು ಬೊಂಬಾಯಿ ವಿಶ್ವವಿದ್ಯಾಲಯದ ಆಸರೆಯಲ್ಲಿ ಕೊಟ್ಟ ವಿಲ್ಸನ್ ಭಾಷಾ ಶಾಸ್ತ್ರೋಪನ್ಯಾಸಗಳಲ್ಲಿಯೂ ಸ್ವಂತ ಪ್ರಬಂಧಗಳಲ್ಲಿಯೂ ವಿಶೇಷವಾದ ಕಾಣಿಕೆಯನ್ನು ಸಲ್ಲಿಸಿದ್ದಾನೆ. ಈ ಕ್ಷೇತ್ರದಲ್ಲಿ ಆತನ ಕೆಲಸವನ್ನು ಈ ದಿವಸ ವಿದ್ವಾಂಸರ ಸಂಘವೊಂದು ಮುಂದುವರಿಸುತ್ತಿದೆ. ನರ್ಮದನ ತರುವಾಯ ಅನೇಕ ಗುಜರಾತೀ ಶಬ್ದಕೋಶಗಳು ರಚಿತವಾಗಿವೆ; ಇವನ್ನು ಕುರಿತ ವ್ಯಾಸಂಗವೇ ತುಂಬ ಕುತೂಹಲಜನಕವಾಗಿದೆ. ಮಹಾತ್ಮ ಗಾಂಧಿಯವರ ಆಶೀರ್ವಚನದಿಂದ ಪುಷ್ಟಿಗೊಂಡು, ಗುಜರಾತ್ ವಿದ್ಯಾಪೀಠದಿಂದ 1929ರಲ್ಲಿ ಪ್ರಕಟವಾದ ಸಾರ್ಥ ಜೋಡಣೀ ಕೋಶ, ಗುಜರಾತೀ ಶಬ್ದ ರೂಪಗಳನ್ನು ಶಿಷ್ಟೀಕರಿಸುವ ಕೆಲಸದಲ್ಲಿ ಮುಖ್ಯ ಸಾಧನವಾಯಿತು.

ವಿಷಯಗಳ ಸಾಮಾನ್ಯ ಜ್ಞಾನವನ್ನು ಪ್ರಸರಿಸುವ ಅನೇಕ ಗ್ರಂಥಗಳನ್ನು ವಿವಿಧ ಸಂಘಗಳೂ ವ್ಯಕ್ತಿಗಳೂ ಪ್ರಕಟಿಸಿದ್ದಾರೆ. ಪ್ರಮಾಣ ಮತ್ತು ಗುಣದ ದೃಷ್ಟಿಯಿಂದ ವಡೋದರ ಮತ್ತು ಅಹಮದಾಬಾದುಗಳಲ್ಲಿ ನಡೆದಿರುವ ಕೆಲಸ ಗಮನಾರ್ಹವಾಗಿದೆ. ಹಳೆಯ ವಡೋದರ ಸಂಸ್ಥಾನ ವಿವಿಧ ಜ್ಞಾನ ಶಾಖೆಗಳಲ್ಲಿ 1500ಕ್ಕಿಂತಲೂ ಹೆಚ್ಚಿನ ಪುಸ್ತಕಗಳನ್ನು ಗುಜರಾತಿಯಲ್ಲಿ ಒಂದರಲ್ಲೇ ಅಲ್ಲದೆ ಹಿಂದಿ, ಮರಾಠಿ, ಸಂಸ್ಕೃತ ಮತ್ತು ಇಂಗ್ಲಿಷ್ ಭಾಷೆಗಳಲ್ಲೂ ಪ್ರಕಟಿಸಿದೆ. ಇಂಥ ಪುಸ್ತಕಗಳ ಪಟ್ಟಿಯೊಂದನ್ನು ವಡೋದರ ವಿಶ್ವವಿದ್ಯಾಲಯ ಅಚ್ಚುಹಾಕಿದೆಯಲ್ಲದೆ ಈ ಸಂಪ್ರದಾಯವನ್ನು ಮುಂದುವರಿಸಿಕೊಂಡು ಬರುತ್ತಿದೆ. ವಡೋದರದ ಶ್ರೀಮಂತ ಗಾಯಕವಾಡರ ಆಶ್ರಯದಲ್ಲಿ ಇನ್ನೂ ಅನೇಕ ಪುಸ್ತಕಗಳ ಪ್ರಕಟನೆಗೆ ಧನಸಹಾಯ ಲಭಿಸಿತು. ಅಹಮದಾಬಾದಿನ ಗುಜರಾತ್ ವೆರ್‌ನಾಕ್ಯುಲರ್ ಸೊಸೈಟಿ (ಈಗಿನ ಗುಜರಾತ್‌ವಿದ್ಯಾಸಭಾ) 500ಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಅನೇಕ ಶಾಸ್ತ್ರ ಮತ್ತು ವೈಜ್ಞಾನಿಕ ಗ್ರಂಥಗಳನ್ನು ಪ್ರಕಟಿಸಿದೆ.; ಅದರ ಕಾರ್ಯ ಇನ್ನೂ ಮುಂದುವರಿಯುತ್ತಲೇ ಇದೆ. ಫೋರ್ಬ್ಸ್ ಗುಜರಾತೀ ಸಭಾ, ಭಾರತೀಯ ವಿದ್ಯಾಭವನ ಮತ್ತು ಮುಂಬಯಿಯ ಗುಜರಾತ್ ರಿಸರ್ಚ್ ಸೊಸೈಟಿ ಸಹ ಶ್ಲಾಘ್ಯವಾದ ಕೆಲಸ ಮಾಡಿವೆ.

ಹತ್ತೊಂಬತ್ತನೆಯ ಶತಮಾನದ ಮಧ್ಯಕಾಲದಿಂದ ವಿಜ್ಞಾನ ಮತ್ತು ಯಂತ್ರತಂತ್ರ ಸಂಬಂಧೀ ಗ್ರಂಥಗಳು ಗುಜರಾತಿಯಲ್ಲಿ ಅನೇಕವಾಗಿ ಪ್ರಕಟವಾಗಿವೆ. ಇವುಗಳಲ್ಲಿ ಕೆಲವು ಸಾಮಾನ್ಯ ಓದುಗರಿಗಾಗಿ ರಚಿತವಾದವು ಮತ್ತೆ ಕೆಲವು–– ಹಳೆಯ ವಡೋದರ ರಾಜ್ಯ ಪ್ರಕಟಿಸಿದ ಶ್ರೀ ಸಯ್ಯಾಜೀ ಜ್ಞಾನ ಮಂಜೂಷ್‌ದಂಥವು–ಪ್ರೌಢ ವಿದ್ಯಾರ್ಥಿಗಳಿಗಾಗಿ ರಚಿತವಾದವು. ಸದಾ ಬೆಳೆಯುತ್ತಲೇ ಇರುವ ವೈಜ್ಞಾನಿಕ ವಿಷಯಗಳನ್ನು ಕುರಿತವಾದುದರಿಂದ ಈ ದಿವಸ ಅವುಗಳಲ್ಲಿ ಎಲ್ಲವೂ ಉಪಯುಕ್ತವಾದ ವೆಂದೆನಿಸದಿರಬಹುದು; ಆದರೆ ವೈಜ್ಞಾನಿಕ ವಿಷಯಗಳ ಪ್ರಾಧಾನ್ಯವನ್ನು ವಿದ್ಯಾವಂತರು ಮುಂಚೆಯೇ ಮನಗಂಡಿದ್ದರೆಂಬ ಬಗೆಗೆ ಇವು ದೊಡ್ಡ ಸಾಕ್ಷಿಗಳಂತಿವೆ.

ಕೊನೆಗೆ ನಾವು ವೈಜ್ಞಾನಿಕ ಶಬ್ದಕೋಶದತ್ತ ಬರುತ್ತೇವೆ. ವೈಜ್ಞಾನಿಕ ಶಬ್ದಗಳಿಗೆ ಗುಜರಾತಿ ಪಾರಿಭಾಷಿಕ ಕೋಶವೊಂದನ್ನು ರಚಿಸಲು ಅನೇಕ ಪ್ರಯತ್ನಗಳು ಜರುಗಿವೆ. ಹಳೆಯ ವಡೋದರ ರಾಜ್ಯದ ಆಸರೆಯಲ್ಲಿ ಟಿ.ಕೆ. ಗಜ್ಜರ್ ಎಂಬಾತ ಒಂದು ಶಬ್ದಕೋಶವನ್ನು ಬೃಹತ್ ಪ್ರಮಾಣದಲ್ಲಿ ತಯಾರಿಸಿದ. ಆದರೆ ಅದು ಪ್ರಕಟವಾಗದೆ ಹಾಗೆಯೇ ಉಳಿಯಿತು. ಇದರ ಕೈಬರೆಹದ ಸಂಪುಟಗಳನ್ನು ಓರಿಯಂಟಲ್

ಇನ್‌ಸ್ಟಿಟ್ಯೂಟ್ ಆಫ್ ಬರೋಡದ ಪುಸ್ತಕಾಲಯದಲ್ಲಿ ಪರಿಶೀಲಿಸಬಹುದು. ಪಿ.ಜಿ.ಷಾಹ, ಎಂ.ಪಿ ದೇಸಾಯಿ, ವೈ ಜಿ. ನಾಯಕ್ ಮತ್ತು ಇತರ ಅನೇಕ ವಿದ್ವಾಂಸರೂ ಮತ್ತು ಬರೋಡ ವಿಶ್ವವಿದ್ಯಾಲಯವೂ ಇಂಥ ಶಬ್ದಕೋಶವನ್ನು ತಯಾರಿಸಿ ಪ್ರಕಟಿಸಿವೆ. ಅನೇಕ ದೃಷ್ಟಿಗಳಿಂದ, ಅದರಲ್ಲೂ ಭಾರತ ದೇಶಕ್ಕೆಲ್ಲ ಅನ್ವಯಿಸುವಂತೆ, ಒಂದು ಶಬ್ದಕೋಶವನ್ನು ರಚಿಸುವುದು ಅಗತ್ಯದ ಕೆಲಸವೆಂದು ಎಲ್ಲರೂ ಭಾವಿಸುತ್ತಿರುವ ಈ ವೇಳೆಯಲ್ಲಿ ಇವೆಲ್ಲ ಕೃತಿಗಳ ಉಪಯೋಗಕ್ಕೆ ಬರುತ್ತವೆ. (ಬಿ.ಜಿ.ಎಸ್.)

ಸಮಕಾಲೀನ ಗುಜರಾತಿ ಸಾಹಿತ್ಯದಲ್ಲಿ 1967ರಲ್ಲಿ ಉಮಾಶಂಕರ ಜೋಶಿ, 1985ರಲ್ಲಿ ಪನ್ನಲಾಲ್ ಪಟೇಲ್ ಮತ್ತು 2001ರಲ್ಲಿ ರಾಜೇಂದ್ರ ಕೇಶವಲಾಲ್ ಷಹ ಅವರು ಜ್ಞಾನಪೀಠ ಪ್ರಶಸ್ತಿಯನ್ನು ಗಳಿಸಿರುವ ಕವಿ ಶ್ರೇಷ್ಠರು. *

**ಗುಜರಾತ್ ವಿದ್ಯಾಪೀಠ :** 1920ರಲ್ಲಿ ಗಾಂಧೀಜಿ ಅಹಮದಾಬಾದಿನಲ್ಲಿ ಆರಂಭಿಸಿದ ರಾಷ್ಟ್ರೀಯ ವಿದ್ಯಾಸಂಸ್ಥೆ. ನಾಡಿನಲ್ಲಿ ಅಸಹಕಾರ ಚಳವಳಿ ನಡೆಯುತ್ತಿದ್ದಾಗ ಹೋರಾಟದಲ್ಲಿ ಭಾಗವಹಿಸಲು ಶಿಸ್ತಿನ ಯುವಜನರನ್ನು ಸಿದ್ಧಪಡಿಸುವ ಕಾರ್ಯವನ್ನು ಈ ಸಂಸ್ಥೆ ಕೈಗೊಂಡಿತ್ತು. 1932ರಲ್ಲಿ ಅಸಹಕಾರ ಚಳವಳಿಯಲ್ಲಿ ಭಾಗವಹಿಸಿದ್ದಕ್ಕಾಗಿ ಇದನ್ನು ಕಾನೂನು ಬಾಹಿರಸಂಸ್ಥೆಯೆಂದು ಅಂದಿನ ಸರ್ಕಾರ ಘೋಷಿಸಿತು. 1935ರಲ್ಲಿ ಮತ್ತೆ ಈ ಸಂಸ್ಥೆ ತನ್ನ ಕಾರ್ಯವನ್ನು ಆರಂಭಿಸಿದರೂ ಕ್ವಿಟ್ ಇಂಡಿಯ ಚಳವಳಿಯಲ್ಲಿ



ಗುಜರಾತ್ ವಿದ್ಯಾಪೀಠ

ಭಾಗವಹಿಸುವುದಕ್ಕಾಗಿ 1942ರಲ್ಲಿದನ್ನು ಮುಚ್ಚಲಾಯಿತು. ಆಮೇಲೆ 1945ರಲ್ಲಿದು ಪುನಃಚೇತನಗೊಂಡಿತು. 1947ರಲ್ಲಿ ಇದರ ವತಿಯಲ್ಲಿ ಮಹದೇವದೇಸಾಯ್ ಸಮಾಜಸೇವಾ ಕಾಲೇಜು ಆರಂಭವಾಯಿತು. 1963ರಲ್ಲಿ ಪಾರ್ಲಿಮೆಂಟು ಇದನ್ನು ರಾಷ್ಟ್ರೀಯ ಪ್ರಾಮುಖ್ಯವುಳ್ಳ ವಿದ್ಯಾಸಂಸ್ಥೆಯೆಂದು ಘೋಷಿಸಿ ಪದವಿ ನೀಡುವ ಅಧಿಕಾರವಿತ್ತು, ಪರಿಗಣಿತ ವಿಶ್ವವಿದ್ಯಾಲಯವನ್ನಾಗಿ ಅಂಗೀಕರಿಸಿತು. ಗಾಂಧೀಜಿ ಅಜೀವಪರ್ಯಂತ ಇದರ ಕುಲಪತಿಗಳಾಗಿದ್ದರು. ಅನಂತರ ಬಾಬು ರಾಜೇಂದ್ರ ಪ್ರಸಾದರು ಕುಲಪತಿಗಳಾದರು. ಅನಂತರ ಇದರ ಕುಲಪತಿ ಮುರಾರ್ಜಿ ದೇಸಾಯಿ.

ಗಾಂಧೀಜಿಯವರ ಆದರ್ಶದಂತೆ ನಾಡಿನ ಪುನರುಜ್ಜೀವನಕ್ಕಾಗಿ ದುಡಿಯಬಲ್ಲ ದಕ್ಷರೂ ಶೀಲಸಂಪನ್ನರೂ ಪ್ರಾಜ್ಞರೂ ಸುಶಿಕ್ಷಿತರೂ ಆದ ಯುವಜನರನ್ನು ರೂಪಿಸುವುದು ಈ ವಿದ್ಯಾಪೀಠದ ಮುಖ್ಯ ಉದ್ದೇಶ. ಸತ್ಯ ಮತ್ತು ಅಹಿಂಸೆಯ ಮಾರ್ಗದಲ್ಲಿ ಅಧ್ಯಾಪಕರೂ ಆಡಳಿತ ಮಂಡಳಿಯವರೂ ಸಂಸ್ಥೆಯನ್ನು ನಡೆಸಿಕೊಂಡು ಬರುತ್ತಿದ್ದಾರೆ. ಅಸ್ಪೃಶ್ಯತೆಯ ನಿವಾರಣೆ, ನೂಲುವುದು, ನೇಯುವುದು, ಗ್ರಾಮಾಭಿವೃದ್ಧಿ, ಶ್ರಮದಾನ, ಮಾತೃಭಾಷೆಗೆ ಪ್ರಾಮುಖ್ಯ, ಧರ್ಮಸಹಿಷ್ಣುತೆ, ದೈಹಿಕ ಶಿಕ್ಷಣ ಮುಂತಾದ ಅಂಶಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡಲಾಗುತ್ತಿದೆ.

1930ರವರೆಗೆ ಈ ಸಂಸ್ಥೆಯಲ್ಲಿ ಗುಜರಾತಿ, ಮರಾಠಿ, ಬಂಗಾಳಿ, ಸಂಸ್ಕೃತ , ಇಂಗ್ಲಿಷ್, ಪರ್ಷಿಯನ್ ಮೊದಲಾದ ಭಾಷೆಗಳಲ್ಲೂ ಇಂಡಾಲಜಿ, ಸಮಾಜ ವಿಜ್ಞಾನಗಳು. ಔಷಧನಿರ್ಮಾಣಶಾಸ್ತ್ರ, ತತ್ತ್ವಶಾಸ್ತ್ರ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ, ವಾಣಿಜ್ಯಶಾಸ್ತ್ರ, ಮುಂತಾದ ಶಾಸ್ತ್ರಗಳಲ್ಲೂ ಪದವಿಮಟ್ಟದ ಶಿಕ್ಷಣಕ್ಕೆ ಅವಕಾಶವಿತ್ತು. 1947ರ ಅನಂತರ ಸ್ನಾತಕೋತ್ತರ ತರಗತಿಗಳನ್ನು ತೆರೆಯಲಾಯಿತು. ಗಾಂಧೀತತ್ತ್ವ, ಅರ್ಥಶಾಸ್ತ್ರ, ಶಿಕ್ಷಣ, ಭಾಷೆ ಮತ್ತು ಸಾಹಿತ್ಯ, ಭಾರತೀಯ ಸಂಸ್ಕೃತಿ–ಈ ವಿಶೇಷ ವಿಷಯಗಳನ್ನು ಪಠ್ಯಕ್ರಮದಲ್ಲಿ ಸೇರಿಸಿಕೊಳ್ಳಲಾಗಿದೆ. ಶಿಕ್ಷಣ ಮಾಧ್ಯಮ ಗುಜರಾತಿ.

ಏಕ ಘಟಕ ವಸತಿ ವಿಶ್ವವಿದ್ಯಾಲಯವಾದ್ದರಿಂದ ಇದಕ್ಕೆ ಸೇರಿದಂತೆ ಯಾವ ಅಂಗೀಕೃತ ಕಾಲೇಜುಗಳೂ ಇಲ್ಲ. ಇಲ್ಲಿಂದ ಹೊರಬಂದ ಪದವೀಧರರು ಗುಜರಾತಿನ 200 ಗ್ರಾಮಗಳಲ್ಲಿ ಏರ್ಪಡಿಸಿರುವ ಆಶ್ರಮಪಾಠಶಾಲೆಗಳಲ್ಲೂ ಇತರ ಸಂಸ್ಥೆಗಳಲ್ಲೂ ಕೆಲಸ ಮಾಡುತ್ತಿದ್ದಾರೆ. ಈಗ ಈ ವಿಶ್ವವಿದ್ಯಾಲಯ ಶಿಶುವಿಹಾರದಿಂದ ಸ್ನಾತಕೋತ್ತರ ತರಗತಿಗಳ ಎಲ್ಲ ಮಟ್ಟದ ಶಿಕ್ಷಣ ಸಂಸ್ಥೆಗಳನ್ನೂ ಅಂತರ್ಗತಗೊಳಿಸಿಕೊಂಡು ಕೆಲಸ ಮಾಡುತ್ತಿದೆ. 1970ರಲ್ಲಿ ಈ ಸಂಸ್ಥೆ ಸುವರ್ಣಮಹೋತ್ಸವವನ್ನು ಆಚರಿಸಿತು. (ಟಿ.ಆರ್.ಎನ್.)

**ಗುಜ್ರನ್‌ವಾಲಾ :** ಪಾಕಿಸ್ತಾನದ ಲಾಹೋರ್ ವಿಭಾಗದಲ್ಲಿರುವ ಒಂದು ಜಿಲ್ಲೆ; ತಹಸೀಲು; ಲಾಹೋರಿಗೆ 64 ಕಿಮೀ ಉತ್ತರದಲ್ಲಿರುವ ಪಟ್ಟಣ. ಹಿಂದೆ ಈ ಪಟ್ಟಣ ಒಂದು ಹಳ್ಳಿಯಾಗಿತ್ತು. ಇದನ್ನು ಸ್ಥಾಪಿಸಿದವರು ಗುಜರರು. ಇಲ್ಲಿ ನೆಲಸಿದ ಅಮೃತಸರದ ಶಾನ್ಸಿ ಜಾಟರು ಖಾನ್ಪುರವೆಂದು ಇದನ್ನು ಕರೆದರು. ಆದರೂ ಹಳೆಯ ಹೆಸರೇ ಉಳಿಯಿತು. ಸಿಕ್ಖರ ಕಾಲದಲ್ಲಿ ಇದಕ್ಕೆ ಪ್ರಾಮುಖ್ಯ ಬಂತು. ಮಹಾನ್‌ಸಿಂಗನ ಗೋರಿ, ಅವನ ಉದ್ಯಾನ ಇವು ಪ್ರೇಕ್ಷಣೀಯ ಸ್ಥಳಗಳು. ಪಂಜಾಬ್ ವಿಶ್ವವಿದ್ಯಾಲಯದಿಂದ ಮನ್ನಣೆ ಪಡೆದ ಎರಡು ಕಾಲೇಜುಗಳಿವೆ. ಪೆಷಾವರ್ ರೈಲುಮಾರ್ಗವೂ ಮಹಾ ಹೆದ್ದಾರಿಯೂ ಈ ಮೂಲಕ ಹಾದುಹೋಗುತ್ತವೆ. ಇಲ್ಲಿ ತಿಜೋರಿ ಮತ್ತು ಪಾತ್ರೆಗಳು ತಯಾರಾಗುತ್ತವೆ. ಜವಳಿ, ಹೆಣಿಗೆ, ವಿದ್ಯುತ್‌ಪಂಖ ಇವು ಈಚಿನ ತಯಾರಿಕೆಗಳು.

ಗುಜ್ರನ್‌ವಾಲಾ ಭಾರತ ಸ್ವಾತಂತ್ರ್ಯ ಪೂರ್ವದಲ್ಲಿ ಅಖಂಡ ಪಂಜಾಬ್ ಪ್ರಾಂತ್ಯಕ್ಕೆ ಸೇರಿತ್ತು. 630ರಲ್ಲಿ ಚೀನದ ಬೌದ್ಧಯಾತ್ರಿಕ ಯುವಾನ್‌ಚಾಂಗ್ ಈ ಜಿಲ್ಲೆಯ ತಕಾಯಿ ಪ್ರದೇಶಕ್ಕೆ ಭೇಟಿ ನೀಡಿದ್ದ. ಈಗಿನ ಅಸುರಾರ ಗ್ರಾಮದ ಬಳಿ ಇರುವ ಒಡ್ಡು ಗತಕಾಲದ ರಾಜಧಾನಿಯ ಸ್ಥಳವೆಂದು ಪರಿಗಣಿಸಲ್ಪಟ್ಟಿದೆ. ಚರತ್‌ಸಿಂಗ್ ಗುಜ್ರನ್‌ವಾಲಾವನ್ನು ತನ್ನ ಆಡಳಿತಕೇಂದ್ರವನ್ನಾಗಿ ಮಾಡಿಕೊಂಡಿದ್ದ. ಮುಂದೆ ಅವನ ಮೊಮ್ಮಗ ರಣಜಿತ್‌ಸಿಂಗ್ ಇಲ್ಲಿ ಜನಿಸಿ ಮಹಾರಾಜನಾದ. 1847ರಲ್ಲಿ ಈ ಪ್ರದೇಶವನ್ನು ಬ್ರಿಟಿಷರು ಲಾಹೋರಿನಲ್ಲಿ ಸೇರಿಸಿದರು. ಗೋದಿ, ಹತ್ತಿ ಇಲ್ಲಿಯ ಬೆಳೆಗಳು. ಇಲ್ಲಿಯ ಕೃಷಿ ಭೂಮಿಗೆ 1892ರಲ್ಲಿ ಚೀನಾಬ್ ನದಿಯ ಕೆಳಕಾಲುವೆಯಿಂದಲೂ 1912ರಲ್ಲಿ ಮೇಲುಕಾಲುವೆಯಿಂದಲೂ ನೀರಾವರಿ ಸೌಲಭ್ಯ ಒದಗಿಸಲಾಯಿತು.

ಗುಜ್ರನ್‌ವಾಲಾ ತಹಸೀಲಿನ ವಿಸ್ತೀರ್ಣ 936 ಚ.ಕಿ.ಮೀ. (ಎಸ್.ಎನ್.ಎಆರ್‌ಇ.)

**ಗುಜ್ರಾಲ್, ಐ.ಕೆ. :** 1919–2012. ಭಾರತ ಗಣರಾಜ್ಯದ 12ನೆಯ ಪ್ರಧಾನಮಂತ್ರಿ. ಇವರ ಪೂರ್ಣ ಹೆಸರು ಇಂದ್ರಕುಮಾರ್ ಗುಜ್ರಾಲ್. 1919ರ ಡಿಸೆಂಬರ್ 4ರಂದು ಜನಿಸಿದರು. ಇವರು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದರು. ಇವರು 23 ವರ್ಷದವರಾಗಿದ್ದಾಗ 1942ರ ಆಗಸ್ಟ್‌ನಲ್ಲಿ ಕ್ವಿಟ್ ಇಂಡಿಯ ಚಳವಳಿಯಲ್ಲಿ ಭಾಗವಹಿಸಿ ಬಂಧನಕ್ಕೆ ಒಳಗಾದರು. ಸ್ವಾತಂತ್ರ್ಯಾನಂತರ ಇಂದಿರಾಗಾಂಧಿಯವರ ಸಚಿವ ಸಂಪುಟದಲ್ಲಿ 1975ರಲ್ಲಿ ವಾರ್ತಾ ಮತ್ತು ಪ್ರಸಾರಖಾತೆಯ ಸಚಿವರಾಗಿದ್ದರು. 1975ರ ಜೂನ್ 12ರಂದು ಅಲಹಬಾದ್ ಹೈಕೋರ್ಟು ಇಂದಿರಾಗಾಂಧಿಯವರ 1976 ಚುನಾವಣೆಯ ಲೋಕಸಭೆಯ ಸದಸ್ಯತ್ವ ಅಸಿಂಧುವೆಂದು ತೀರ್ಪುಕೊಟ್ಟಾಗ ಆ ಸಂಪುಟದಲ್ಲಿದ್ದರು. ಅನಂತರ ರಷ್ಯಕ್ಕೆ ರಾಯಭಾರಿಯಾಗಿ ನೇಮಕವಾಗಿ ಮಾಸ್ಕೊನಲ್ಲಿದ್ದರು.

1980ರ ಮಧ್ಯದಲ್ಲಿ ಇವರು ಕಾಂಗ್ರೆಸ್ ಪಕ್ಷವನ್ನು ತೊರೆದು ಜನತಾ ಪಕ್ಷವನ್ನು ಸೇರಿದರು. 1989ರ ಚುನಾವಣೆಯಲ್ಲಿ ಪಂಜಾಬ್ ಪ್ರಾಂತದ ಜಲಂಧರ್ ಲೋಕಸಭೆ ಕ್ಷೇತ್ರದಿಂದ ಸ್ಪರ್ಧಿಸಿ ಚುನಾಯಿತರಾದರು. ಪ್ರಧಾನಿ ವಿಶ್ವನಾಥ ಪ್ರತಾಪಸಿಂಗ್‌ರ (ವಿ.ಪಿ. ಸಿಂಗ್) ಸಂಪುಟದಲ್ಲಿ ವಿದೇಶಾಂಗ ವ್ಯವಹಾರ ಖಾತೆ ಸಚಿವರಾಗಿದ್ದರು. ಅದೇ ವರ್ಷ ರುಬಿಯ ಸಯೇದ್ ಅಪಹರಣದ ವಿಷಯವಾಗಿ ಅಪಹರಣಕಾರರೊಡನೆ ಸಂಧಾನ ನಡೆಸಲು ಗುಜ್ರಾಲ್ ಅವರನ್ನು ಶ್ರೀನಗರಕ್ಕೆ ಕಳಿಸಲಾಯಿತು. ಅನಂತರ ಕುವೈತ್ ಮೇಲೆ ಇರಾಕ್ 1990 ಆಗಸ್ಟ್ 2ರಂದು ಧಾಳಿ ನಡೆಸಿತು. ಇದು 1991 ಜನವರಿಯಲ್ಲಿ ಮೊದಲ ಗಲ್ಫ್ ಯುದ್ಧಕ್ಕೆ ಕಾರಣವಾಯಿತು. ಅಮೆರಿಕ ಮತ್ತು ಬ್ರಿಟನ್ ಕುವೈತ್ ಸಹಾಯಕ್ಕೆ ಬಂದು ಇರಾಕ್ ಕುವೈತ್‌ನಿಂದ ಕಾಲ್ತೆಗೆಯುವಂತೆ ಮಾಡಿದವು. ಭಾರತದ ಪ್ರತಿನಿಧಿಯಾಗಿ ಇವರು ಇರಾಕ್‌ನ ಅಧ್ಯಕ್ಷ ಸದ್ದಾಂ ಹುಸೇನ್‌ರನ್ನು ಖುದ್ದಾಗಿ ಭೇಟಿಯಾದರು. ಆ ಸಮಯದಲ್ಲಿ ಇವರು ಹುಸೇನ್‌ರನ್ನು ತಬ್ಬಿಕೊಂಡಿದ್ದು ಚರ್ಚೆಗೆ ಗ್ರಾಸವಾಗಿತ್ತು.

1991ರ ಮಧ್ಯಾಂತರ ಚುನಾವಣೆಯಲ್ಲಿ ಇವರು ಬಿಹಾರದ ಪಾಟ್ನ (ಪಟಣ) ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಿದರು. ಆದರೆ ಅಲ್ಲಿಯ ಚುನಾವಣೆಯು ರದ್ದಾಯಿತು. 1992ರಲ್ಲಿ ರಾಜ್ಯಸಭೆ ಸದಸ್ಯರಾಗಿ ಚುನಾಯಿತರಾದರು. ಇವರು ಜನತಾದಳ ಪಕ್ಷದ ಒಬ್ಬ ಮುಖ್ಯ ನಾಯಕರಾಗಿದ್ದರು. 1996ರ ಚುನಾವಣೆಯ ಅನಂತರ ಅನೇಕ ರಾಜಕೀಯ ಪಕ್ಷಗಳು ಜೊತೆಗೂಡಿ ಕರ್ನಾಟಕದ ಎಚ್.ಡಿ. ದೇವೇಗೌಡರ ನೇತೃತ್ವದಲ್ಲಿ ಯುನೈಟೆಡ್ ಫ್ರಂಟ್ ಸರ್ಕಾರ ರಚನೆಯಾಯಿತು. ಅದರಲ್ಲಿ ಮತ್ತೆ ವಿದೇಶಾಂಗ ವ್ಯವಹಾರಗಳ ಸಚಿವರಾದರು. ಈ ಸರ್ಕಾರಕ್ಕೆ ಹೊರಗಿನಿಂದ ಬೆಂಬಲ ಕೊಡುತ್ತಿದ್ದ ಕಾಂಗ್ರೆಸ್ ಪಕ್ಷದವರು ತಮ್ಮ ಬೆಂಬಲವನ್ನು ಹಿಂದಕ್ಕೆ ಪಡೆಯಲು ನಿರ್ಧರಿಸಿದರಿಂದ ಸರ್ಕಾರದ ಪತನಕ್ಕೆ ಹಾದಿಯಾಯಿತು. ಚುನಾವಣೆಯನ್ನು ತಪ್ಪಿಸಲು ಸಂಧಾನ ಏರ್ಪಟ್ಟು ನಾಯಕರನ್ನು ಬದಲಾಯಿಸಿದರೆ ಸರ್ಕಾರಕ್ಕೆ ಹೊರಗಿನಿಂದ ಬೆಂಬಲ ಕೊಡುವುದಾಗಿಯೂ, ಅನೇಕ ವಿಷಯಗಳಲ್ಲಿ ಕಾಂಗ್ರೆಸ್ ಸಲಹೆಯನ್ನು ಪಡೆಯಬೇಕೆಂದೂ ಷರತ್ತು ವಿಧಿಸಿದರು. ಯುನೈಟೆಡ್ ಫ್ರಂಟ್ (ಸಂಯುಕ್ತ ರಂಗ) ಅದಕ್ಕೆ ಒಪ್ಪಿಕೊಂಡು ಇವರನ್ನು ನಾಯಕನನ್ನಾಗಿ ಚುನಾಯಿಸಿತು. ಆಗ ಇವರು 1997 ಏಪ್ರಿಲ್ 21ರಂದು ಪ್ರಧಾನಿಯಾಗಿ ಪ್ರಮಾಣ ವಚನ ಸ್ವೀಕರಿಸಿದರು. ಇವರು ಪ್ರಧಾನಿಯಾದ ಕೆಲವೇ ವಾರಗಳಲ್ಲಿ ಒಂದು ತೊಂದರೆ ಪ್ರಾರಂಭವಾಯಿತು. ಜನತಾ ಪಕ್ಷದವರೇ ಆದ ಬಿಹಾರ್‌ನ ಮುಖ್ಯಮಂತ್ರಿ ಲಾಲು ಪ್ರಸಾದ್ ಯಾದವ್ ಪಶುಗಳ ಮೇವಿನ ಹಗರಣದಲ್ಲಿ ಸಿಲುಕಿಕೊಂಡರು. ಆಗ ಈ ಅವ್ಯವಹಾರದ ಮೊಕದ್ದಮೆ ಹೂಡಲು ಸಿ.ಬಿ.ಐ. ಬಿಹಾರಿನ ರಾಜ್ಯಪಾಲರಾಗಿದ್ದ ಎ.ಆರ್. ಕಿದ್ವಾಯಿಯವರ ಅನುಮತಿ ಕೇಳಿತು. ರಾಜ್ಯಪಾಲರು ಅನುಮತಿ ನೀಡಿದರು. ಪಕ್ಷದ ಒಳಗೆ ಮತ್ತು ಹೊರಗೆ ಮುಖ್ಯಮಂತ್ರಿ ರಾಜೀನಾಮೆ ನೀಡಬೇಕೆಂದು ಒತ್ತಾಯ ಮಾಡಿದರು. ಈ ಬೇಡಿಕೆಯನ್ನು ಯಾದವ್ ನಿಷ್ಠುರವಾಗಿ ತಿರಸ್ಕರಿಸಿದರು. ಗುಜ್ರಾಲ್ ಯಾದವ್‌ಗೆ ಮಂತ್ರಿಪದವಿಯಿಂದ ಕೆಳಗಿಳಿಯಲು ಸೂಚಿಸಿದರು. ಆದರೆ ಸರ್ಕಾರದ ಮೇಲೆ ಯಾವ ಕ್ರಮವನ್ನೂ ಜರುಗಿಸಲಿಲ್ಲ. ಆಗ ಸಿ.ಬಿ.ಐ. ನಿರ್ದೇಶಕರಾಗಿದ್ದ ಜೋಗಿಂದರ್ ಸಿಂಗ್ ಅವರನ್ನು ವರ್ಗ ಮಾಡಿದರು. ಇದು ಲಾಲುಪ್ರಸಾದ್ ಅವರನ್ನು ಗುಜ್ರಾಲ್ ರಕ್ಷಿಸುತ್ತಿರುವರೆಂಬ ಆಪಾದನೆಗೆ ಹಾದಿ ಮಾಡಿಕೊಟ್ಟಿತು. ಅನಂತರ ಯಾದವ್ ಜನತಾದಳ ತೊರೆದು 1997ರ ಜುಲೈ 3ರಂದು ರಾಷ್ಟ್ರೀಯ ಜನತಾದಳ ಎಂಬ ಪಕ್ಷವನ್ನು ಪ್ರಾರಂಭ ಮಾಡಿದರು. ಈ ಹೊಸ ಪಕ್ಷದಲ್ಲಿ ಸಂಸತ್ತಿನ 17 ಸದಸ್ಯರಿದ್ದರು. ಹೊಸ ಪಕ್ಷ ಗುಜ್ರಾಲ್‌ಗೆ ಬೆಂಬಲ ಸೂಚಿಸಿತು. ಇದರಿಂದ ಸರ್ಕಾರಕ್ಕೆ ಅಪಾಯ ತಪ್ಪಿತು.



ಇವರ ಸರ್ಕಾರದ ಒಂದು ವಿವಾದಾಸ್ಪದ ನಿರ್ಧಾರ ಎಂದರೆ ಉತ್ತರಪ್ರದೇಶದಲ್ಲಿ ರಾಷ್ಟ್ರಪತಿ ಆಡಳಿತಕ್ಕೆ ಶಿಫಾರಸ್ಸು ಮಾಡಿದ್ದು. ಆದರೆ ರಾಷ್ಟ್ರಪತಿ ಕೆ.ಆರ್. ನಾರಾಯಣನ್ ಆ ಶಿಫಾರಸನ್ನು ಹಿಂದಕ್ಕೆ ಕಳುಹಿಸಿದರು. ಜೊತೆಗೆ ಉತ್ತರಪ್ರದೇಶದ ಅಲಹಬಾದ್ ಉಚ್ಚ ನ್ಯಾಯಾಲಯ ಸಹಿತ ರಾಷ್ಟ್ರಪತಿ ಆಡಳಿತವನ್ನು ವಿರೋಧಿಸಿ ತೀರ್ಪು ನೀಡಿತು. ರಾಜೀವ್‌ಗಾಂಧಿ ಹತ್ಯೆಯ ತನಿಖೆಯನ್ನು ನಡೆಸಿದ ಜೈನ್ ನಿಯೋಗದ ಮಧ್ಯಾಂತರ ವರದಿಯ ರಹಸ್ಯ ಹೊರಬಿದ್ದು ಅನಂತರದಲ್ಲಿ ಡಿ.ಎಂ.ಕೆ. (ದ್ರಾವಿಡ ಮುನ್ನೇತ್ರ ಕಳಗಂ) ಪಕ್ಷ ಗುಪ್ತವಾಗಿ ಎಲ್.ಟಿ.ಟಿ.ಇ.ಗೆ ಬೆಂಬಲ ನೀಡಿದೆ ಎಂಬ ವಿಷಯ ಬಹಿರಂಗವಾಯಿತು. ಗುಜ್ರಾಲ್ ಮಂತ್ರಿಮಂಡಲದಲ್ಲಿ ಡಿ.ಎಂ.ಕೆ. ಸಚಿವರುಗಳಿದ್ದರು. ಕಾಂಗ್ರೆಸ್ ಪಕ್ಷ ಸಂಸತ್ತಿನಲ್ಲಿ ಜೈನ್‌ವರದಿಯನ್ನು ಮಂಡಿಸಲು ಒತ್ತಾಯಿಸಿತು. 1997 ನವೆಂಬರ್ 19ರಂದು ವರದಿ ಮಂಡನೆಯಾಗಿ ಅದರಲ್ಲಿ ಡಿ.ಎಂ.ಕೆ. ಪಕ್ಷ ಎಲ್.ಟಿ.ಟಿ.ಇ.ಗೆ ಬೆಂಬಲಿಸಿರುವುದು ಖಚಿತವಾಯಿತು. ಕಾಂಗ್ರೆಸ್ ಪಕ್ಷ ಡಿ.ಎಂ.ಕೆ. ಸಚಿವರನ್ನು ಕೈಬಿಡಲು ಒತ್ತಾಯಿಸಿತು. ಈ ವಿಷಯವಾಗಿ ಕಾಂಗ್ರೆಸ್ ಅಧ್ಯಕ್ಷ ಸೀತಾರಾಮ್ ಕೇಸರಿ ಮತ್ತು ಪ್ರಧಾನಿ ಗುಜ್ರಾಲ್ ಮಧ್ಯೆ ಪತ್ರವ್ಯವಹಾರ ನಡೆಯಿತು. ಆದರೆ ಇದಕ್ಕೆ ಪ್ರಧಾನಿ ಒಪ್ಪಲಿಲ್ಲ. 1997ರ ನವೆಂಬರ್ 28ರಂದು ಕಾಂಗ್ರೆಸ್ ಪಕ್ಷ ಸರ್ಕಾರಕ್ಕೆ ನೀಡಿದ್ದ ಬೆಂಬಲ ವಾಪಸ್ಸು ಪಡೆಯಿತು. ಅನಂತರ ಗುಜ್ರಾಲ್ ರಾಜೀನಾಮೆ ಕೊಟ್ಟರು. 1998ರಲ್ಲಿ ನಡೆದ ಚುನಾವಣೆಯಲ್ಲಿ ಪಂಜಾಬಿನ ಜಲಂಧರ್ ಲೋಕಸಭಾ ಕ್ಷೇತ್ರದಿಂದ ಅಕಾಲಿದಳದಿಂದ ಬೆಂಬಲಿತರಾಗಿ ಸ್ಪರ್ಧಿಸಿ ಕಾಂಗ್ರೆಸ್ ಅಭ್ಯರ್ಥಿಗಿಂತ 1,31,000 ಅಧಿಕಮತದಿಂದ ಜಯಗಳಿಸಿದರು. ಅನಂತರ ಇವರು 1999ರ ಚುನಾವಣೆಯಲ್ಲಿ ಸ್ಪರ್ಧಿಸಲಿಲ್ಲ. ಇವರು ರಾಜಕೀಯದಿಂದ ನಿವೃತ್ತರಾಗಿ ವಿಶ್ರಾಂತ ಜೀವನವನ್ನು ಆಯ್ಕೆ ಮಾಡಿಕೊಂಡರು. ಇವರು 2012ರ ನವೆಂಬರ್ 30ರಂದು ನಿಧನವಾದರು.

ಗುಜ್ರಾಲ್ ಅವರು ಉರ್ದು ಭಾಷೆಯ ಸರಳ ಮಾತುಗಳ ವಾಗ್ಮಿ. ತಮಗೆ ಅವಕಾಶ ದೊರೆತಾಗೆಲ್ಲಾ ಉರ್ದುವಿನಲ್ಲಿ ದ್ವಿಪದಿಗಳನ್ನು ರಚಿಸಿ ವಾಚಿಸುತ್ತಿದ್ದುದುಂಟು. ಇವರ ಪತ್ನಿ ಶೈಲಗುಜ್ರಾಲ್. ಪಂಜಾಬಿ, ಹಿಂದಿ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಅನೇಕ ಕೃತಿಗಳನ್ನು ರಚಿಸಿದ್ದಾರೆ. ಈಕೆ 2011ರ ಜುಲೈ 11ರಂದು ನಿಧನರಾದರು. ಈ ದಂಪತಿಗಳಿಗೆ ಇಬ್ಬರು ಪುತ್ರರು, ಮೂರು ಮೊಮ್ಮಕ್ಕಳು ಇದ್ದಾರೆ. (ಎನ್.ಎಲ್.)

**ಗುಟ್ಸ್‌ಕೊ, ಕಾರ್ಲ್ ಫರ್ಡಿನಾಂಡ್ :** 1811–78. ಜರ್ಮನ್ ಕಾದಂಬರಿಕಾರ, ನಾಟಕಕಾರ ಮತ್ತು ಪತ್ರಿಕೋದ್ಯಮಿ. ಜರ್ಮನ್ ಸಾಹಿತ್ಯದ ಪ್ರಥಮ ಸಾಮಾಜಿಕ ಕಾದಂಬರಿಕರ್ತೃ. ಹುಟ್ಟಿದ್ದು ಬಡಕುಟುಂಬದಲ್ಲಿ. ಆದರೆ ಈತನಲ್ಲಿ ನೆಲೆಸಿದ್ದ ಮಹತ್ವಾಕಾಂಕ್ಷೆಗಳು ಈತನ ಪುರೋಭಿವೃದ್ಧಿಗೆ ದಾರಿ ತೋರಿಸಿದವು. ಈತನ ಸೂಕ್ಷ್ಮಮತಿ ಹಾಗೂ ಗ್ರಹಣಶಕ್ತಿ ಈತನ ಮಹತ್ವಾಕಾಂಕ್ಷೆಗಳಿಗೆ ಪೂರಕವಾದವು. ಗಯಟೆ ಮಹಾಕವಿಯನ್ನು ರಮ್ಯ ಸಾಹಿತ್ಯ ಪಂಥದ ಪ್ರವರ್ತಕನೆಂದು ಜರ್ಮನ್ ಸಾಹಿತ್ಯ ಹೇಳಿದರೆ, ಗುಟ್ಸ್‌ಕೊನನ್ನು ಆ ಪಂಥದ ವಿರೋಧಿಗಳ ನಾಯಕನೆಂದು ನಿರೂಪಿಸುತ್ತದೆ. ಹೀಗಾಗಿ ಈತನ ಹೆಸರು ಜರ್ಮನ್ ಸಾಹಿತ್ಯದಲ್ಲಿ ಪ್ರಸಿದ್ಧವಾದುದು. ಯುರೋಪಿನಲ್ಲಾದ 1830ರ ಕ್ರಾಂತಿ ಈತನ ಮೇಲೆ ಅಪೂರ್ವವಾದ ಪ್ರಭಾವ ಬೀರಿತೆನ್ನಬಹುದು.

1835ರಲ್ಲಿ ಪ್ರಕಟವಾದ ವಲ್ಲಿ ಡಿ ತ್ಸ್ವೈಫ್ಲೆರಿನ್ ಕಾದಂಬರಿ ವಿವಾಹ ಪದ್ಧತಿಯನ್ನು ಕುರಿತದ್ದು. ಇದರಲ್ಲಿ ಅಂದಿನ ಧಾರ್ಮಿಕ ಪದ್ಧತಿಗಳಲ್ಲಿನ ನ್ಯೂನತೆಗಳನ್ನು ವಿವರಿಸಲಾಗಿತ್ತು. ಅದಕ್ಕಾಗಿ ಈತ ಮೂರು ತಿಂಗಳ ಕಾರಾಗೃಹವಾಸವನ್ನು ಅನುಭವಿಸಬೇಕಾಯಿತು. 1836ರಲ್ಲಿ ಇತಿಹಾಸದ ಮೂಲತತ್ತ್ವಗಳು (ಟ್ಸುರ್ ಫಿಲೋಸೋಫಿ ಡೆರ್ ಗೆಶಿಷ್ಟೆ) ಎಂಬ ಉದ್ಗ್ರಂಥ ಪ್ರಕಟವಾಯಿತು. 1839 ರಿಂದ ಈತನ ನಾಟಕಗಳು ರಂಗಸ್ಥಳದ ಮೇಲೆ ಬರಲಾರಂಭಿಸಿದವು. ಈತ ಬರೆದ ನಾಟಕಗಳು 20 ಸಂಪುಟಗಳಲ್ಲಿ ಹೊರಬಿದ್ದಿವೆ. ವಲ್ಲಿಯನ್ನು ಬಿಟ್ಟರೆ ಪ್ರೇತಸರ್ದಾರರು (ಡೀ ರೆಟರ್ ಫ್ರೋಮ್ ಗೈಸ್ಟೆ) ಮತ್ತು ರೋಮ್ ನಗರದ ಮಾಂತ್ರಿಕರು (ಡೀ ಟ್ಸಾನೆರೆರ್ ಫಾನ್ ರೋಮ್) ಎಂಬುವು ಅನೇಕ ಸಂಪುಟಗಳಲ್ಲಿ ಪ್ರಕಟಗೊಂಡಿದ್ದು ಪ್ರಸಿದ್ಧವೆನಿಸಿವೆ. ಈತನ ಕೃತಿಗಳಲ್ಲಿ ಅಂದಿನ ಸ್ತ್ರೀ ಜೀವನ, ಸಾಮಾಜಿಕ, ರಾಜಕೀಯ ವಿಷಯಗಳ ನೈಜ ಚಿತ್ರಣವನ್ನು ಕಾಣಬಹುದು. (ಕೆ.ಕೆ.ಐ.)

**ಗುಡ್ ಫ್ರೈಡೆ :** ಕ್ರಿಸ್ತನ ಮರಣದ ವಾರ್ಷಿಕಾಬ್ದಿಕದ ಆಚರಣೆ. ಈಸ್ಟರ್ ದಿನದ ಹಿಂದಿನ ಶುಕ್ರವಾರ ಎಲ್ಲ ಕ್ರೈಸ್ತರೂ ಇದನ್ನು ಆಚರಿಸುತ್ತಾರೆ. ಬಹುಶಃ ಮೊದಲಲ್ಲಿ ಗಾಡ್ಸ್ ಫ್ರೈಡೆಯಾಗಿದ್ದು ಕಾಲಾಂತರದಲ್ಲಿ ಗುಡ್‌ಫ್ರೈಡೆ ಆಗಿರಬಹುದು. ಗುಡ್‌ಫ್ರೈಡ್ ಆಚರಣೆ ಪ್ರ.ಶ. 100ರಲ್ಲಿ ಪ್ರಾರಂಭವಾಯಿತೆಂಬುದಕ್ಕೆ ದಾಖಲೆ ದೊರಕುತ್ತದೆ. ಇದು ಸಾಮಾನ್ಯವಾಗಿ ಈಸ್ಟರ್ ದಿನದ ಹಿಂದಿನ ಶುಕ್ರವಾರ ಉಪವಾಸವನ್ನು ಆಚರಿಸುತ್ತಿದ್ದರು. ಇದು ಪ್ರ.ಶ. 300ರ ಅನಂತರ ಆಚರಣೆಗೆ ಪ್ರಾರಂಭವಾಗಿದೆ. ಇದರ ಆಚರಣೆ ಕ್ರೈಸ್ತರೆಲ್ಲರಲ್ಲೂ ಒಂದೇ ತೆರನಾಗಿರುವುದಿಲ್ಲ. ಪ್ರಾಟೆಸ್ಟಂಟರು ಅಂದು ದೇವರ ಸ್ತೋತ್ರ ಮಾಡುತ್ತಾರೆ. ಇದು ತುಂಬ ಸರಳ ಸಂಸ್ಕಾರ. ರೋಮನ್ ಕ್ಯಾಥೊಲಿಕರ ಆಚರಣೆ ಹೆಚ್ಚು ವಿಸ್ತಾರವಾದದ್ದು. ಅವರ ಚರ್ಚುಗಳಲ್ಲಿ ಅದು ಗುರುವಾರ ಸಂಜೆಯಿಂದ ಪ್ರಾರಂಭವಾಗಿ ಶುಕ್ರವಾರ ಸಂಜೆಯ ಪರ್ಯಂತ ನಡೆಯುತ್ತದೆ. ಪ್ರಭುಭೋಜನಕ್ಕೆ ಸಂಬಂಧಪಟ್ಟಂತೆ ಶುಕ್ರವಾರ ಬೆಳಗ್ಗೆ ನಡೆಯುವ ಪೂಜಾವಿಧಾನ ಇದರ ಮುಖ್ಯ ಅಂಗ. (ಜಿ.ಎಚ್.)

**ಗುಡಗುಂಟಿ ಪಾಳೆಯಗಾರರು :** ರಾಯಚೂರು ಜಿಲ್ಲೆ ಲಿಂಗಸುಗೂರು ತಾಲ್ಲೂಕಿನಲ್ಲಿ ಲಿಂಗಸುಗೂರಿಗೆ 19ಕಿಮೀ ದೂರದಲ್ಲಿರುವ (ಸು.3 ಶತಮಾನಗಳ ಕಾಲ ಆಳಿದ) ಗುಡಗುಂಟಿಯ ಒಂದು ಸ್ಥಳೀಯ ಅರಸು ಮನೆತನ. ಇವರು ಗೋಸಲ ವಂಶದವರು. ಜಕ್ಕಪ್ಪದೇಸಾಯಿ ಹಿರಿಯ ಮಗ. ಗಡ್ಡಿಲಿಂಗನಾಯಕ ಈ ಮನೆತನದ ಸ್ಥಾಪಕ. ಈ ಸಂದರ್ಭದಲ್ಲಿ ಕಕ್ಕೇರಿ ಪ್ರದೇಶ ಬಿಜಾಪುರದ ಆದಿಲ್‌ಶಾಹಿಗಳ ಸಾಮ್ರಾಜ್ಯದ ವ್ಯಾಪ್ತಿಗೆ ಒಳಪಟ್ಟಿದ್ದರಿಂದ ಗಡ್ಡಿಲಿಂಗನಾಯಕ ಗುಡಗುಂಟಿ ಪರಗಣದ ಸರದೇಸಾಯಿಯಾಗಿ ಬಡ್ತಿ ಹೊಂದಿ ಆಳಿಕೆ ಪ್ರಾರಂಭಿಸಿದ. ಇವನು ಬಿಜಾಪುರದ ಆದಿಲ್‌ಶಾಹಿಗಳ ಜೊತೆ ಹೋದಾಗ ಷೇಖ್‌ಮಿನಹಾಜ ಸರದಾರನಿಂದ ಕೊಲ್ಲಲ್ಪಟ್ಟ. ಅನಂತರ

ಪಾಮನಾಯಕ, ಲಿಂಗನಾಯಕ, ಜಡಿಸೋಮಪ್ಪ ನಾಯಕ ಅನುಕ್ರಮವಾಗಿ ಆಡಳಿತ ನಡೆಸಿದರು. ಜಡಿಸೋಮಪ್ಪನಾಯಕ ಬಿಜಾಪುರದಲ್ಲಿ ತನ್ನ ಶೌರ್ಯ ಸಾಹಸಗಳನ್ನು ಪ್ರದರ್ಶಿಸಿದ್ದಕ್ಕಾಗಿ ಸರ್ಜಾಬಹಾದ್ದೂರ್ ಎಂಬ ಬಿರುದು ಪಡೆದ. ಈತನಿಗೆ 1669ರಲ್ಲಿ 2ನೆಯ ಅಲಿ ಆದಿಲ್‍ಷಾನಿಂದ ಒಂದು ಫಾರಸಿ ಸನ್ನದು ದೊರಕಿತ್ತು. ಅನಂತರ 2ನೆಯ ಲಿಂಗನಾಯಕ, ಸೋಮಪ್ಪನಾಯಕ, ಸೋಮಲಿಂಗನಾಯಕ, ರಾಣಿ ಕಾಟಮ್ಮ ಆಳಿಕೆ ಮಾಡಿದರು. ಕೊನೆಯ ಅರಸ ಜಡಿಸೋಮಪ್ಪನಾಯಕ (1901–48). ಇವನಿಗೆ ತಿಪ್ಪರಾಜಾ ಸರ್ಜಾಬಹದ್ದೂರ್ ಎಂಬ ಬಿರುದಿತ್ತು.

ಆಡಳಿತದ ಅನುಕೂಲಕ್ಕಾಗಿ ಮೌಲ್, ಫೌಜದಾರಿ, ದಿವಾನಿ, ಪೊಲೀಸ್ ಎಂಬ ನಾಲ್ಕು ವಿಭಾಗಗಳಿದ್ದವು. ಪ್ರಜೆಗಳೊಂದಿಗೆ ಉತ್ತಮ ಸಂಬಂಧವನ್ನು ಹೊಂದಿದ್ದ ಇವರು ಸರ್ವಧರ್ಮ ಸಹಿಷ್ಣುಗಳಾಗಿದ್ದರು. ಇವರು ಎಲ್ಲಾ ಧರ್ಮದವರನ್ನು ಸಮಾನ ದೃಷ್ಟಿಯಿಂದ ಕಾಣುತ್ತಿದ್ದರು. ಕಕ್ಕೇರಿಯ ಸೋಮನಾಥ ಇವರ ಕುಲದೈವ. ಗುಡಗುಂಟಿಯ ಅಮರೇಶ್ವರ ಆರಾಧ್ಯ ದೈವ. ಪ್ರತಿವರ್ಷ ನಡೆಯುವ ಅಮರೇಶ್ವರನ ರಥೋತ್ಸವದಲ್ಲಿ ಈ ಮನೆತನದ ಪ್ರಭುಗಳು ಫಲಪುಷ್ಪಗಳನ್ನು ಅರ್ಪಿಸಿದ ಬಳಿಕವೇ ರಥ ಸಾಗುತ್ತಿತ್ತು. ಇದು ಇಂದಿಗೂ ಮುಂದುವರೆದಿದೆ. ಇವರು ಕಲೆ, ವಾಸ್ತುಶಿಲ್ಪಕ್ಕೆ ತಮ್ಮದೇ ಆದ ಕೊಡುಗೆಗಳನ್ನು ನೀಡಿದ್ದಾರೆ. ಅನೇಕ ದೇವಾಲಯ, ಮಸೀದಿ, ಕೋಟೆ, ಕೆರೆ, ಬಾವಿಗಳನ್ನು ನಿರ್ಮಿಸಿದ್ದಾರೆ. ಇವರು ನಿರ್ಮಿಸಿದ ಅರಮನೆ ಇಂದಿಗೂ ಸುಸಜ್ಜಿತವಾಗಿದೆ. ಇಲ್ಲಿಯ ರಂಗಮಹಲ್ ಮತ್ತು ದರ್ಬಾರ್ ಹಾಲ್‍ಗಳು ಸೊಗಸಾಗಿವೆ. (ಎ.ವೈ.)

**ಗುಡಾರ :** ಗುಡಾರಗಳು, ಹಗ್ಗ, ದಪ್ಪ ಬಟ್ಟೆಗಳಿಂದ ಕಟ್ಟಿ ನಿಲ್ಲಿಸಬಹುದಾದ ಮತ್ತು ಸ್ಥಳದಿಂದ ಸ್ಥಳಕ್ಕೆ ಒಯ್ಯಬಹುದಾದ ಹಂಗಾಮಿ ತಂಗುಸಾಧನ. ಡೇರೆ ಎಂದೂ ಕರೆವುದಿದೆ (ಟೆಂಟ್). ಗುಡಾರದ ಮೂಲವನ್ನು ಪ್ರಾಚೀನ ಕಾಲದಿಂದಲೂ ಮಾನವ ಬುಡಕಟ್ಟುಗಳು ನಿರ್ಮಿಸಿಕೊಳ್ಳುತ್ತ ಉಪಯೋಗಿಸುತ್ತ ಬಂದಿರುವ ಗಾಳಿತಡೆ, ನೆರಳುಮರೆ ಮುಂತಾದವುಗಳಲ್ಲಿ ಕಾಣುತ್ತೇವೆ. ಗಾಳಿತಡೆಗಳು ಹಂಬುರೆಂಬೆಗಳಿಂದ ಸುಲಭವಾಗಿಯೂ ಕ್ಷಿಪ್ರವಾಗಿಯೂ ಎಬ್ಬಿಸಬಲ್ಲಂಥವು. ಇವುಗಳ ಚಾವಣಿಗಳು ಒಪ್ಪಾರವಾಗೂ (ಚಿತ್ರ 1) ಇಪ್ಪಾರವಾಗೂ (ಚಿತ್ರ 2) ಇರುತ್ತವೆ. ಇಪ್ಪಾರವನ್ನು ಕವೆಕೋಲುಗಳಿಂದ ಭದ್ರಗೊಳಿಸಿದರೆ (ಚಿತ್ರ 3) ಮರೆಯೂ ನೆರಳೂ ಹೆಚ್ಚಾಗುತ್ತವೆಂದು ಹೇಳಬೇಕಾಗಿಲ್ಲ. ಹೆಣೆದ ಗರಿಗಳನ್ನು ಚಾವಣಿಗಳ ಮುಚ್ಚಾಗಿ ಬಳಸುವುದು ವಾಡಿಕೆಯಾಗಿದೆ. ಲ್ಯಾಪ್‍ಲೆಂಡಿನ ಗುಡಿಸಲುಗಳ ದೂಲಗಳ ಮಧ್ಯೆ ಎರೆಮಣ್ಣನ್ನು ಮೆತ್ತಿ ಬಿರುಕಿಲ್ಲದಂತೆ ಮಾಡಿರುತ್ತಾರೆ (ಚಿತ್ರ 4) ಬೆತ್ತದಂಥ ಸಣ್ಣರೆಂಬೆಗಳಿಂದ ಕಟ್ಟಿದ ಗುಡಿಸಲು ತೆರನ ಬಿಡಾರ (ಚಿತ್ರ 5) ಬ್ರಿಟನ್ನಿನ ವಸಾಹತುಗಳಲ್ಲಿ ಇರುತ್ತಿತ್ತು. ಬೆತ್ತ ಅಥವಾ ಬಿದಿರು ದೆಬ್ಬೆಗಳನ್ನು ಕಮಾನಾಗಿ ಬಗ್ಗಿಸಿ, ಎರಡು ಕೊನೆಯನ್ನೂ ನೆಲದೊಳಕ್ಕೆ ಹುದುಗಿಸಿ ಇಟ್ಟು, ಮೇಲೆ ನೀರು ತೂರದ




ಬಟ್ಟೆಯ ಕಿರುಗೋಡೆ ಮತ್ತು ಬಟ್ಟೆಯ ಕದ ಇರುವಂಥಹ ಗುಡಾರ

ಮೇಣಗಬಟವನ್ನೊ ರಟ್ಟುಬಟ್ಟೆಯನ್ನೊ ಹೊದಿಸಿ, ಅದರ ಅಂಚುಗಳನ್ನು ದಪ್ಪ ಕಲ್ಲುಗಳ ಮೂಲಕ ನೆಲಕ್ಕೆ ಗುತ್ತಾಗಿ ಹೊಂದಿಸಿಟ್ಟು, ಕಂದಾರೆಯವರೂ ಜಿಪ್ಸಿಗಳೂ ಗಂಗೆಯ ಮಕ್ಕಳೂ ಗುಡಾರ ಮಾಡಿಕೊಳ್ಳುವುದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ (ಚಿತ್ರ 6). ಎಸ್ಕಿಮೊ ಜನರದ್ದು ಇನ್ನೂ ಸರಳವಾದ ಉಪಾಯ. ಕೋಲನ್ನು ನಿಲ್ಲಿಸಿ ಹಗ್ಗವನ್ನು ಎಳೆದು ಚಾವಣಿಯ ಏಣು ಮಾಡಿ, ಅಗಲ ಚಕ್ಕಳವನ್ನು ಮೇಲಿನಿಂದ ಇಕ್ಕಡೆಗೂ ಇಳಿಬೀಳಿಸಿ, ಅಂಚಿನ ಮೇಲೆ ಭಾರದ ಕಲ್ಲುಗಳನ್ನಿಟ್ಟು ಮರೆ ಮಾಡಿಕೊಳ್ಳುತ್ತಾರೆ (ಚಿತ್ರ 7).

ಏಷ್ಯಖಂಡದ ಪಶ್ಚಿಮ ಉತ್ತರ ಮಧ್ಯೆ ಭಾಗಗಳಲ್ಲಿ ಹಲವು ತಾಂಡ್ಯಗಳು ಅನಿವಾರ್ಯವಾಗಿ ಬೀಡು ಬದಲಾಯಿಸುತ್ತ ಬದುಕಬೇಕಾಗುತ್ತಿತ್ತು. ಏತಕ್ಕೆಂದರೆ ಋತುಧರ್ಮದ ಪರಿಣಾಮವಾಗಿ ನೀರಿನ ಕೊರತೆ, ಮೇವು ಹುಲ್ಲು ಮೈದಾನ ಅಭಾವ, ಅತಿಉಷ್ಣ, ಅತಿಶೀತ, ಮೊದಲಾದುವನ್ನು ಅವರು ಎದುರಿಸಿ ಗೆಲ್ಲಬೇಕಾಗುತ್ತಿತ್ತು. ಚಿರಕಾಲದ ಅನುಭವದಿಂದ ಅವರು ಬಿಡಾರ ನಿರ್ಮಾಣದಲ್ಲಿ ನಿಪುಣರಾಗಿದ್ದಾರೆ. ಅರೇಬಿಯದ ಚರಜೀವಿಗಳ ಕುಟುಂಬ ವಸತಿಯ ಉದ್ದ 6.1ರಿಂದ 7.6 ಮೀ ಕೆಲವು ಕಡೆ 12.2ಮೀ ನಷ್ಟು ಉದ್ದವೂ ಉಂಟು. ಅವುಗಳ ಆ ಪಕ್ಕ ಈ ಪಕ್ಕದಲ್ಲಿ ಮೂರು ಮೂರು ನಿಲುಕಂಬಗಳೂ ನಡುಭಾಗದಲ್ಲಿ ಮೂರು ಹೆಚ್ಚು ಎತ್ತರದ ಕಂಬಗಳೂ ಇರುತ್ತವೆ. ಅವುಗಳ ನೆತ್ತಿಯಲ್ಲಿ ಅಡ್ಡ ತೊಲೆಗಳ ಹಾಸೊಂದುಂಟು. ನಡುವಣ ಎತ್ತರ 2.1ಮೀ ಪಾರ್ಶ್ವ ಗೋಡೆಗಳ ಎತ್ತರ 1.5 ಮೀ ಕಡಿಮೆ ಇರುವುದಿಲ್ಲ. ಏಣಿನಿಂದ ಆ ಕಡೆಗೂ ಈ ಕಡೆಗೂ ಬಿಗಿಯಿಂದ ಇಳಿಯುವ ಕಪ್ಪು ಉಣ್ಣೆಯ ಫೆಲ್ಟು ಬಟ್ಟೆಯೇ ಮೇಲುಚಾವಣಿ; ಕೆಲವೊಮ್ಮೆ ಹೊರಗಡೆಗೆ ಬಿಳಿಯ ಪಟ್ಟಿಗಳನ್ನು ಬಳಿದಿರುವುದುಂಟು. ಪಕ್ಕದ ಗೋಡೆಗಳೂ ಫೆಲ್ಟು ಬಟ್ಟೆಯಿಂದ ಆದವು; ಅವನ್ನು ಬೇಕಾದಾಗ ಎತ್ತಿ ಕಟ್ಟಬಹುದು (ಚಿತ್ರ 8). ಬಾಗಿಲಿನ ಅವಕಾಶ ಇರುವುದು ಅಪೂರ್ವ. ಗುಡಾರದ ಒಳಗಡೆ ಎರಡು ಭಾಗ; ಹಿಂಬದಿಯದು ಅಡುಗೆ ಮನೆ, ಮಹಿಳಾವಿಲಾಸ. ಮುಂಬದಿಯದು ಪುರುಷರದ್ದು.

ಮಂಗೋಲಿಯದ ಕಿರ್ಗೀಸರ ಗರ್ ಅಥವಾ ಯೂರ್ಚ್ ಇನ್ನೂ ಅಚ್ಚು ಕಟ್ಟಾದ ಹೆಚ್ಚು ಸೌಕರ್ಯವುಳ್ಳ ಗೃಹರಚನೆ. ಕುಕ್ಕೆ ಕಡ್ಡಿ ಅಥವಾ ವಿಲೊ ಎಂಬ ಬಗೆಯ ಮೆತುಕಡ್ಡಿಗಳಿಂದ ಹೆಣೆದು ಮಾಡಿದ ಭಾಗಗಳನ್ನು ವರ್ತುಳಾಕಾರವಾಗಿ ಜೋಡಿಸಿ, ಬಾಗಿಲು ಮತ್ತು ಬಾಗಿಲುವಾಡದೊಡನೆ ನೆಲದ ಮೇಲೆ ಇಡುತ್ತಾರೆ. ಮೇಲೆ ಎರಡು ಸಾಲು ಗಟ್ಟಿ ಕಡ್ಡಿಗಳನ್ನು ಇರಿಸಿ ಶಿಖರದ ಲೋಹದುಂಗುರಕ್ಕೆ ಬಿಗಿಯುತ್ತಾರೆ. ಹೀಗೆ ಒಂದು ದೈತ್ಯ ಮಂಕರಿ ಸಿದ್ಧವಾಗುತ್ತದೆ (ಚಿತ್ರ 9). ತರುವಾಯ ದಪ್ಪ ಫೆಲ್ಟು ಬಟ್ಟೆಯ ಉದ್ದಗಲದ ಹೊದಿಕೆಗಳನ್ನು ಸಮನಾಗಿ ಹೊಂದಿಸಿ, ಹಗ್ಗಗಳಿಂದ ಬಿಗಿದು ಕಟ್ಟಿ ಡೇರೆ ಮನೆಯನ್ನು ತಯಾರಿಸಿಕೊಳ್ಳುತ್ತಾರೆ (ಚಿತ್ರ 10). ಫೆಲ್ಟು ಮೇಲು ಮುಸುಕಿನ ಕೆಳಗಡೆ ಅಂಚುಗಳನ್ನು ಹೊಲಿದು ಕೂಡಿಸಬಹುದು ಅಥವಾ ಅಲ್ಲಲ್ಲಿ ಭಾರದ ಕಲ್ಲು ಹೇರಬಹುದು.



ಗಂಟೆ ಡೇರೆ

ಪಾಶ್ಚಾತ್ಯ ದೇಶಗಳಲ್ಲಿ ಸೈನಿಕರು ಪಯಣಿಗರು ಶೋಧಕರು ಪರ್ವತಾರೋಹಿಗಳು ಸ್ಕೌಟುಗಳು ಇತ್ಯಾದಿ ಪ್ರವಾಸಿಗರಿಗೆ ಸಮಂಜಸವಾದ ಗುಡಾರ ಅತ್ಯಾವಶ್ಯಕ. ಅಲ್ಲದೆ ಔತಣ ಸಮಾರಂಭಗಳಿಗೂ ಮಾರ್ಕ್ವೀ ಎಂಬ ಎತ್ತರದ ವಿಶಾಲ ಡೇರೆ ಬಹಳ ಉಪಯುಕ್ತ; ಸುತ್ತ ಎಷ್ಟು ಎತ್ತರಕ್ಕೆ ಬೇಕೊ ಅಷ್ಟು ಕನಾತು ಕಿರುಗೋಡೆಗಳನ್ನು ಕಟ್ಟಿ ಮರೆ ಮಾಡಿಕೊಳ್ಳಬಹುದು. ಬಟ್ಟೆ ಬಾವುಟ ಗೊಂಡೆ ಮುಂತಾದ ಅಲಂಕಾರ ವಸ್ತುಗಳನ್ನು ತೂಗುಬಿಟ್ಟು ಮಾರ್ಕ್ವೀಯನ್ನು ಇಷ್ಟಬಂದಂತೆ ಸಿಂಗರಿಸಲು ಬರುತ್ತದೆ. ಅದರ ಕ್ಯಾನ್‍ವಾಸ್ ಅಥವಾ ಲಿನೆನ್ ಬಟ್ಟೆಗೆ ಬಣ್ಣ ಬಣ್ಣದ ಉದ್ದಪಟ್ಟೆ ಬಳಿಯುವುದೂ ಉಂಟು (ಚಿತ್ರ11).

ವನಪಾಲಕರೂ ಇತರ ಸಂಚಾರಿಗಳೂ ತಾತ್ಕಾಲಿಕವಾಗಿ ನೆರಳನ್ನೂ ಮರೆಯನ್ನೂ ಸುಲಭವಾಗಿ ಮಾಡಿಕೊಳ್ಳಲು ಕ್ಯಾನ್‍ವಾಸ್ ಅಥವಾ ರಟ್ಟುಬಟ್ಟೆಯನ್ನು ಪರಿಸರದಲ್ಲಿಯೇ ದೊರಕುವ ಕೋಲು ಕಡ್ಡಿಗಳ ಮೇಲೆ ಹಾಸು ಬಿಟ್ಟು (ಚಿತ್ರ12). ಹುರಿಗಳಿಂದ ಭದ್ರಪಡಿಸಿ, ನೆಮ್ಮದಿ ಪಡೆಯುತ್ತಾರೆ. ಹೆಚ್ಚು ವಜನ್ನಿನ ಸಾಮಾನಾವುದೂ ಅವರಿಗೆ ಬೇಡ.

ಆದರೆ ವಿಶೇಷವಾಗಿ ಬಳಕೆಯಲ್ಲಿ ಇರುವ ಉಪಕರಣ ಟೆಂಟ್‍ದ ಆಬ್ರಿಯೆಂಬ ಸಾಮಾನ್ಯ ಗುಡಾರ; ಹಂಸಪಾದದ ಆಕಾರದಲ್ಲಿ ನಿಲ್ಲುತ್ತದೆ. ಪಕ್ಕಗಳಲ್ಲಿ ಕಿರುಗೋಡೆಯಂಥ ಬಟ್ಟೆಗಳಿರಬಹುದು (ಚಿತ್ರ 13). ಅವು ಇಲ್ಲದೆ ಮುಂದೂ ಹಿಂದೂ ತ್ರಿಕೋನಾಕಾರದ ಬಟ್ಟೆಕದ ಇರಬಹುದು (ಚಿತ್ರ 14). ನೆಲದ ಮೇಲೆ ಕಟ್ಟಿದ ಜಗಲಿಯ ಮೇಲೆ ಗುಡಾರವನ್ನು ನಿಲ್ಲಿಸಲೂ ಬರುತ್ತದೆ (ಚಿತ್ರ 15). ಪಕ್ಕದ ಭಿತ್ತಿ ಬಟ್ಟೆಗಳನ್ನು ಸ್ವಲ್ಪ ಎತ್ತರವಾಗಿ ಇರಿಸಿಕೊಳ್ಳುವುದೂ ಸಾಧ್ಯ (ಚಿತ್ರ 16). ಅದರಿಂದ ಒಳಗಡೆಯ ಇಕ್ಕಟ್ಟು ಕೊಂಚ ಕಡಿಮೆಯಾಗುತ್ತದೆ. ಆದರೂ ಈ ಗುಡಾರ ಆರು ಜನರಿಗೆ ಮಲಗಲೂ




ಗುಡಾರದ ವಿವಿಧ ಬಗೆಗಳು

ಕೂರಲೂ ಅವಕಾಶ ಒದಗಿಸುವುದಕ್ಕಾಗಿ ಮಾತ್ರ ರಚಿತವಾಗಿದೆ; ಅದರ ಮಧ್ಯದಲ್ಲಿ ತಲೆಯೆತ್ತಿ ನಿಲ್ಲಬಹುದೇ ಹೊರತು ಮಿಕ್ಕ ಕಡೆ ಆಗುವುದಿಲ್ಲ. ಬಹಳ ಉಪಯುಕ್ತವೂ ವಿಶ್ವವ್ಯಾಪಿಯೂ ಆದ ಈ ಗುಡಾರದ ಅಂಗಾಂಗಗಳನ್ನು (ಚಿತ್ರ 17) ಅರಿತುಕೊಳ್ಳುವುದು ಅಗತ್ಯ.

a : ಮೇಲ್ಛಾವಣಿ ಬಟ್ಟೆ (ಇನ್ನೊಂದು ಕಡೆಯಲ್ಲೂ ಅದೇ ಬಗೆಯ ಇಳಿಜಾರು). b : ಕಿರುಗೋಡೆ ಬಟ್ಟೆ. c : ಚಾವಣಿಯ ಏಣು. ಜ: ತ್ರಿಕೋಣಾಕೃತಿಯ ಬಾಗಿಲು ಬಟ್ಟೆ. e : ನಿಲುಗಂಬ. (ಮುಂದಣ ಮತ್ತು ಹಿಂದಣ ನಿಲುಗಂಬಗಳ ಮೇಲಿರುವ ಅಡ್ಡತೊಲೆ ಕಾಣಿಸುತ್ತಿಲ್ಲ). f : ಬಿಗಿ ಹಗ್ಗಗಳು. g : ಕಬ್ಬಿಣದ ಅಥವಾ ಮರದ ಗೂಟಗಳು. ಈ ಗುಡಾರವನ್ನು ಕೇವಲ ಐದಾರು ನಿಮಿಷದಲ್ಲಿ ಎತ್ತಿ ನಿಲ್ಲಿಸಬಹುದು, ಬಿಚ್ಚಿಡಬಹುದು; ಹೆಚ್ಚು ತೂಕವೂ ಇಲ್ಲದ್ದರಿಂದ ಸಾಗಾಣಿಕೆಗೆ ಅಷ್ಟೇನೂ ತ್ರಾಸ ಪಡಬೇಕಾದ್ದಿಲ್ಲ. ಕೆಲಮೊಮ್ಮೆ ಚಾವಣಿಯ ಮೇಲೆ ಇನ್ನೊಂದು ಚಾವಣಿ ಬಟ್ಟೆಯನ್ನೂ ಹರಡುತ್ತಾರೆ. ಕನಾತು ಬಟ್ಟೆಗಳ ಮೂಲಕ ಒಳಗಡೆ ಏಕಾಂತ ಕೊಠಡಿ ಏರ್ಪಡಿಸಿ ಕೊಳ್ಳಬಹುದು; ಆದರೆ ಅದಕ್ಕೆ ಗುಡಾರ ದೊಡ್ಡದಾಗಿ ಇರಬೇಕು. ಸೈನ್ಯದ ಕಾರ್ಯಾಚರಣೆಯಲ್ಲಿ ಟೆಂಟ್‌ದ ಆಬ್ರಿಗಳ ಜೊತೆಗೆ ಶಂಕುವಿನ ಆಕೃತಿಯ ಗಂಟೆ ಡೇರೆ (ಬೆಲ್ ಟೆಂಟ್) ಅಧಿಕಾರಿಗಳಿಗಾಗಿ ಇರುತ್ತವೆ. ಇದು ಒಳಗೆ ಸಾಕಷ್ಟು ಎತ್ತರವೂ ವಿಶಾಲವೂ ಆಗಿರುತ್ತದೆ. ಮಹಲಿನ ದಿವಾನಖಾನೆಯಂತೆಯೇ ಅಲ್ಲಿಯೂ ಮೇಜು ಕುರ್ಚಿ ಹಾಕಿಕೊಂಡು, ಮಾತುಕಥೆ ಮಂತ್ರಾಲೋಚನೆ ನಡೆಸಬಹುದು.

ಇವಲ್ಲದೆ ಛತ್ರಿ ಗುಡಾರ (ಅಂಬ್ರೇಲಾ ಟೆಂಟ್), ಆಕಾಶಬುಟ್ಟಿ ಗುಡಾರ (ಬಲೂನ್ ಟೆಂಟ್) ಮೊದಲಾದ ವಿರಚನೆಗಳೂ ಉಂಟು. ಅವುಗಳಲ್ಲಿ ನಿಲುಗಂಬಗಳ ಅವಶ್ಯಕತೆ ಬಹಳ ಕಡಿಮೆ. ಗೋಳಾಕಾರದ ಚಾವಣಿ ಬಟ್ಟೆಗಳನ್ನು ಬಿಗಿಯಾಗಿ ಎಳೆದು ನೆಲದ ಮೇಲೆ ಭದ್ರವಾಗಿ ಹಿಡಿದಿಡುವುದು ಸಾಧ್ಯ.

ಸರ್ಕಸ್ಸಿನವರು, ಕೆಲವೊಮ್ಮೆ ಟೆಂಟ್ ಸಿನಿಮಾದವರೂ ಊರ ಹೊರಗಿನ ಮೈದಾನದಲ್ಲಿ ದೊಡ್ಡ ಗುಡಾರ ಕಟ್ಟುವುದನ್ನು ಎಲ್ಲರೂ ಕಂಡಿದ್ದಾರೆ. ನೆಲವನ್ನು ಅಗೆದು ಕಂಬಗಳನ್ನು ನೆಡದೆ ಗುಡಾರ ಎಬ್ಬಿಸುವ ಜಾಣ್ಮೆಯನ್ನು ಸರ್ಕಸ್ಸಿನವರಲ್ಲಿ ಕಾಣಬಹುದು.

ಈಚೆಗೆ ಗುಡಾರಗಳ ಬಳಕೆ ಬಹಳ ಹೆಚ್ಚುತ್ತಿದೆ. ಸ್ಕೌಟುಗಳು, ಸೈನಿಕ ಇಲಾಖೆಯವರು, ಟೆಲಿಫೋನ್ ಕೆಲಸಗಾರರು, ವಾರಾಂತ್ಯ ವಿಹಾರಕ್ಕಾಗಿ ಹೋಗುವ ಕುಟುಂಬದವರು ಬೇಕೆಂದಲ್ಲಿ ತಮ್ಮ ಗುಡಾರಗಳನ್ನು ಎಬ್ಬಿಸುತ್ತಾರೆ. ಹೀಗೆ ಕ್ಯಾನ್‌ವಾಸ್ ಪ್ರಪಂಚ ವೈವಿಧ್ಯಮಯವೂ ವಿಶಾಲವೂ ಆಗಿದೆ. (ಎಸ್.ವಿ.ಆರ್.)

**ಗುಡಿಕೋಟೆ :** ಬಳ್ಳಾರಿ ಜಿಲ್ಲೆ ಕೂಡ್ಲಿಗಿ ತಾಲ್ಲೂಕಿನಲ್ಲಿ ಕಸಬೆಯಿಂದ 28ಕಿಮೀ ಪೂರ್ವಕ್ಕಿರುವ ಗ್ರಾಮ, ಹೋಬಳಿ ಕೇಂದ್ರ.

ಇದು ಹಿಂದೆ ಒಂದು ಪಾಳೆಯಪಟ್ಟಿನ ಕೇಂದ್ರವಾಗಿದ್ದು ಪಾಳೆಯಗಾರರ ಕಾಲದಲ್ಲಿ ಕಟ್ಟಿದ ಕೋಟೆ ಊರಿಗೆ ತಾಗಿ ನಿಂತ ಬೆಟ್ಟದ ಮೇಲೆ ಇದೆ. ಆ ಕೋಟೆಗೆ ಹೊಂದಿಸಿರುವ ಬಂಡೆಗಳ ಗಾತ್ರ ಬೆರಗುಗೊಳಿಸುತವಂತಹುದು. ಬ್ರೂಸ್‌ಫೂಟ್ ಎಂಬಾತ ಇದರ ವಿಷಯವಾಗಿ ಬರೆಯುತ್ತ ದಕ್ಷಿಣ ಭಾರತದ ಯಾವ ಕೋಟೆಯಲ್ಲಿಯೂ ಇಷ್ಟು ಭಾರಿ ಬಂಡೆಗಳನ್ನು ತಾನು ಕಂಡಿಲ್ಲವೆನ್ನುತ್ತಾನೆ. ಈ ಬೆಟ್ಟವೇರಲು ಅನೇಕ ಕಡಿದಾದ ಒಳದಾರಿಗಳಿವೆ. ಬೆಟ್ಟದ ಮೇಲೆ ಎರಡು ಭಿನ್ನ ರೀತಿಯ ಬಾವಿಗಳಿವೆ. ತೊಟ್ಟಿಲುಬಾವಿ ಎಂದು ಕರೆಯುವ ಒಂದರ ಬಾಯಿ ದೋಣಿಯಂತಿದೆ. ಇನ್ನೊಂದು 35' ಚದುರದ ಚೌಕನೆಯದು. ಇದರ ಒಳಮೈ ಸೈಜುಗಲ್ಲುಗಳಿಂದ ನಿರ್ಮಿತವಾಗಿದೆ. ಅದನ್ನು ನಿರ್ಮಿಸಿರುವ ತಾಣ ಸ್ವಾರಸ್ಯಕರವಾಗಿದೆ. ನೋಡಿದಾಗ ಗೂಡಿನೊಳಗೆ ಬಾವಿ ತೋಡಿಸಿದಂತೆ ಭಾಸವಾಗುತ್ತದೆ. ಏಕೆಂದರೆ ಬಾವಿಯ ಮೇಲೆ ಮುಂಚಾವಣಿಯಂತೆ ಚಾಚಿ ನಿಂತಿರುವ ಬಂಡೆಗಳ ಕೂಡುವಿಕೆ ಹಾಗೆ ಇದೆ. ಈ ಚಾಚುಬಂಡೆಗಳು ತೂಗುಬಂಡೆಗಳಂತೆ ಗೋಚರಿಸುತ್ತವೆ. ಗ್ರಾಮದಲ್ಲಿ ಕೆಲವು ಚಿಕ್ಕ ದೇವಸ್ಥಾನಗಳಿವೆ. ಇಲ್ಲಿಯ ಪಾಳೆಯಗಾರ ಕಟ್ಟಿಸಿದನೆನ್ನಲಾದ ಬೊಮ್ಮಲಿಂಗನ ಕೆರೆಯ ಬಳಿ ಅನೇಕ ನಾಗರಕಲ್ಲುಗಳೂ ಇವೆ. ಕೆಲವು ನಾಗರಕಲ್ಲುಗಳು 6' ಎತ್ತರ ಇವೆ.

ಗುಡಿಕೋಟೆಯ ಪಾಳೆಯಗಾರರು ಬೇಡ ಕುಲದವರು. ಇವರು ಅಸ್ತಿತ್ವಕ್ಕೆ ಬಂದ ತರುಣದಲ್ಲಿಯೇ (ಸು.16ನೆಯ ಶತಮಾನ) ಗುಡಿಕೋಟೆಗೆ ಹೊಂದಿದ ಸುತ್ತಮುತ್ತಲಿನ ಗ್ರಾಮಗಳನ್ನು ಅಧೀನಕ್ಕೆ ತಂದುಕೊಂಡು ಪಾಳೆಯಪಟ್ಟನ್ನು ವಿಸ್ತರಿಸಿದರು. ಇವರು ಚಿತ್ರದುರ್ಗದ ಪಾಳೆಯಗಾರರಿಗೆ ಅಧೀನರಾಗಿದ್ದರೆಂದು ತಿಳಿದುಬರುತ್ತದೆ. ಬಿಳಿಚೋಡು ಮನೆತನಕ್ಕೆ ಸೇರಿದ ಚಿತ್ರದುರ್ಗದ ಪಾಳೆಯಗಾರ 1ನೆಯ ಭರಮಪ್ಪನಾಯಕನ ಹೆಂಡತಿ ಬಂಗಾರವ್ವ ನಾಗಿತಿ ಗುಡಿಕೋಟೆ ಪಾಳೆಯಗಾರರ ಸಂತತಿಯವಳು. ಕೈಬಿಟ್ಟುಹೋಗಿದ್ದ ಅಣಜಿ ಕೋಟೆಯನ್ನು ಹರಪನಹಳ್ಳಿ ಪಾಳೆಯಗಾರರಿಂದ ಗೆದ್ದುಕೊಳ್ಳಲು ಗುಡಿಕೋಟೆ ಪಾಳೆಯಗಾರರು ಭರಮಪ್ಪನಾಯಕನಿಗೆ ನೆರವಾಗಿದ್ದರು. ಈ ಪಾಳೆಯಪಟ್ಟು 1777ರಲ್ಲಿ ಹೈದರ್ ಅಲಿಯಿಂದ ನಾಶವಾಯಿತು. ಎರಡು ಶತಮಾನಗಳ ಕಾಲ ಅಸ್ತಿತ್ವದಲ್ಲಿದ್ದರೂ ಅವರ ಪೀಳಿಗೆಯ ಬಗೆಗಿನ ಹೆಚ್ಚಿನ ದಾಖಲೆಗಳು ಉಪಲಬ್ಧವಾಗಿಲ್ಲ. ಚೀರನೂರು ಗ್ರಾಮದಲ್ಲಿ ದೊರೆತ ಎರಡು ಶಾಸನಗಳಿಂದ ಒಂದಿಬ್ಬರು ಪಾಳೆಯಗಾರರ ಹೆಸರು ಅವರು ಆಳಿದ ಕಾಲ ತಿಳಿದುಬರುತ್ತದೆ. 1676ರಲ್ಲಿ ಸೊಂಡೂರು ರಾಜಪ್ಪನಾಯಕ ಪಾಳೆಯಗಾರನಾಗಿದ್ದ. ಚೆಲಿಮಿನಾಯಕ ವಿಧಿಸಿದ್ದ ತಲೆಹೊರೆ, ಗಾಡಿಹೊರೆ, ಮಿತಸಂತಾನ ಮತ್ತು ನಾಯಿಂದ ತೆರಿಗೆಗಳಿಗೆ ಈ ರಾಜಪ್ಪ ನಾಯಕ ಚೀಕದಕೆರೆ, ಚಿಕೇರು ವಿಭಾಗದಲ್ಲಿ ಶಾಶ್ವತವಾದ ವಿನಾಯಿತಿ ಕೊಟ್ಟ. ಇವನ ಮಗ ಇಮ್ಮಡಿ ರಾಜಪ್ಪನಾಯಕ 1690ರಲ್ಲಿ ಪಾಳೆಯಗಾರನಾಗಿದ್ದನೆಂದೂ ಅವನಿಗೊಬ್ಬ ಸೋದರನಿದ್ದನೆಂದೂ ತಿಳಿದುಬರುತ್ತದೆ. ಈ ಪಾಳೆಯಗಾರರ ಹೆಸರಿನೊಂದಿಗೆ ಸಂಡೂರು ಎಂದು ಸೇರಿರುವುದರಿಂದ ಮೂಲತಃ ಇವರು ಸಂಡೂರಿನವರಿರಬಹುದು ಎಂದು ಊಹಿಸುವ ಅವಕಾಶವಿದೆ. (ಸಿ.ಕೆ.ಎನ್.)

**ಗುಡಿಗಾರಿಕೆ :** ಗಂಧದ ಕಟ್ಟಿಗೆ, ಬೆಂಡು, ಕೆಲಮಟ್ಟಿಗೆ ಮಣ್ಣು–ಇವುಗಳ ಕುಶಲ ಕೆಲಸಕ್ಕೆ ಈ ಹೆಸರಿದೆ. ಕಟ್ಟಿಗೆಯ ಕುಶಲ ಕೈಗಾರಿಕೆ ವಾಸ್ತು ಶಿಲ್ಪಗಳಷ್ಟೇ ಪ್ರಾಚೀನವಾದುದು. ಅರಮನೆಗಳ, ದೇವಸ್ಥಾನಗಳ, ಹಳೆಯ ಕಾಲದ ಮನೆಗಳ ಮಹಾದ್ವಾರ, ಮೊದಲ ಬಾಗಿಲು, ಛತ್ತು, ರಥ, ಕಿಟಕಿಯ ಚೌಕಟ್ಟುಗಳು ಮೊದಲಾದುವನ್ನು ಚಿತ್ರವಿಚಿತ್ರವಾಗಿ ಕೆತ್ತಿ ಅಲಂಕರಣ ಮಾಡುವುದು ಹಿಂದಿನಿಂದ ಬಂದಿರುವ ಸಂಪ್ರದಾಯ. ಗಂಧದ ಕಟ್ಟಿಗೆಯಲ್ಲಿ ಕೆತ್ತನೆಯ ಕೌಶಲವನ್ನು ತೋರಿಸುವ ಒಂದು ಸಾಂಪ್ರದಾಯಿಕ ಕಾಯಕಕ್ಕೆ ಸಂಬಂಧಿಸಿದವರನ್ನು ಈಗ ಗುಡಿಗಾರರೆನ್ನುತ್ತಾರೆ.



ಭಾರತ ಭಾಗ್ಯವಿಧಾತರು: ತಯಾರಿಸಿದವರು – ಶಾಂಬಾ ಅನಂತ ಶೇಟಿ ಗುಡಿಗಾರ, ಕುಮಟ

ಕನ್ನಡ ನಾಡಿನ ಗುಡಿಗಾರರು ಗೋವದಿಂದ ಬಂದವರು. ಶಿವಮೊಗ್ಗ ಜಿಲ್ಲೆಯ ಸೊರಬ ಸಾಗರ ತಾಲ್ಲೂಕುಗಳಲ್ಲಿಯೂ ಉತ್ತರ ಕನ್ನಡದ ಶಿರಸಿ, ಕುಮಟ, ಹೊನ್ನಾವರ, ಸಿದ್ದಾಪುರ ತಾಲ್ಲೂಕುಗಳಲ್ಲಿ ಇವರು ವಾಸಿಸುತ್ತಿದ್ದಾರೆ. ಜಡೆ, ಬಿಳಿಗೋಡು, ತವಂದೆ, ಜಿಂಗಿಕೊಪ್ಪ, ತಾಳಗುಪ್ಪ, ಹೊನ್ನೆಕೇರಿ, ಬನವಾಸಿ, ಕೊಪ್ಪ, ಇಸಳೂರ, ಹೆಬ್ಬಳ್ಳಿ, ಖರ್ಲೂ, ಬೀಳಗಿ, ಹೆರೂರುಗಳಲ್ಲಿನವರು ಗುಡಿಗಾರಿಕೆಯನ್ನೂ ಕೃಷಿಯನ್ನೂ ಒಟ್ಟಾಗಿ ನಡೆಸಿಕೊಂಡು ಬಂದಿದ್ದಾರೆ. ಕುಮಟ, ಹೊನ್ನಾವರಗಳಲ್ಲಿ ಇವರನ್ನು ಶೆಟ್ಟಿಗಳೆಂದು ಕರೆಯುತ್ತಾರೆ. ಸಾಗರ ಸೊರಬಗಳಲ್ಲಿ ವೃತ್ತಿಯಿಂದಲೇ ಇವರನ್ನು ಗುರುತಿಸಬೇಕಾಗುತ್ತದೆ. ಶೆಟ್ಟಿಗಳ ಮನೆಮಾತು ಕೊಂಕಣಿಯಾದರೆ ಉಳಿದವರದು ಕನ್ನಡ.

**ಇವರು ಶೈವ ಧರ್ಮೀಯರು :** ಜನಿವಾರ ಧರಿಸುತ್ತಾರೆ. ಇವರ ಮಠ ಶೃಂಗೇರಿ; ಕುಲದೇವತೆಗಳ ದೇವಸ್ಥಾನಗಳು ಗೋವದಲ್ಲಿವೆ. ಹವ್ಯಕ ಬ್ರಾಹ್ಮಣರು ಇವರ ಧರ್ಮಕಾರ್ಯಗಳನ್ನು ನಡೆಸಿಕೊಡುತ್ತಾರೆ. ಗೌಡ ಚಿತ್ರಕರೆಂಬ ಮತ್ತೊಂದು ಹೆಸರು ಇವರಿಗುಂಟು. ಇವರು ಭಾರದ್ವಾಜ, ವಸಿಷ್ಠ, ಗೌತಮ, ಕಶ್ಯಪ ಮತ್ತು ಕೌಂಡಿಣ್ಯ ಗೋತ್ರದವರು. ಇವರಲ್ಲಿ ಮಾಂಸಾಹಾರಕ್ಕೆ ನಿಷೇಧವಿಲ್ಲ. ಕುಟುಂಬ ಅವಿಭಕ್ತ ಪದ್ಧತಿಯದು. ಗಂಡಸರು ಗಂಧದ ಕೆಲಸವನ್ನೂ ಹೆಂಗಸರು ಬೆಂಡಿನ ಕೆಲಸವನ್ನೂ ಮಾಡುತ್ತಾರೆ. ಬೆಂಡಿನಿಂದ ಹೂ, ಹೂಮಾಲೆ, ಗುಚ್ಛಗಳನ್ನು ಹೆಂಗಸರು ಮಾಡಿದರೆ, ಬಾಸಿಂಗ, ಮೊಗ್ಗಿನ ತುರಾಯಿಯನ್ನು ಗಂಡಸರೇ ಮಾಡುತ್ತಾರೆ. ಪ್ರತಿವರ್ಷ ಶ್ರಾವಣ, ಭಾದ್ರಪದ ಮಾಸಗಳಲ್ಲಿ ಗುಡಿಗಾರರು ಗಣಪತಿಯನ್ನು ಮಾಡಿ ಮಾರುತ್ತಾರೆ. ಇದೂ ಬಾಸಿಂಗ ತಯಾರಿಕೆಯೂ ತಕ್ಕಮಟ್ಟಿಗೆ ಆದಾಯ ತರುವ ಬಾಬುಗಳು. ಗಂಧದ

ಕಟ್ಟಿಗೆ, ಹಸ್ತಿದಂತ, ಉಸುಕಿನ ಕಾಗದ, ಮೇಣದ ಪಾಲೀಷು–ಇವು ಗುಡಿಗಾರರ ಕಚ್ಚಾಸಾಮಗ್ರಿಗಳು. ತಮ್ಮ ಕೆಲಸದಲ್ಲಿವರು ಗರಗಸ, ಉಜ್ಜುಗೊರಡು, ನಾನಾತರದ ಚಾಣ, ಮೊಳೆ, ತಿರುಗು ಮೊಳೆ, ಮರಡುಗಳನ್ನು (ಹಿಂಜಸ್) ಬಳಸುತ್ತಾರೆ. ಮೊದಲು ತಾವು ಮಾಡಬಯಸಿದ ಕಲಾಕೃತಿಗೆ ಅಳತೆಗನುಗುಣವಾಗಿ ಕಟ್ಟಿಗೆಯನ್ನು ಕತ್ತರಿಸಿಕೊಳ್ಳುತ್ತಾರೆ. ಆಮೇಲೆ ಆ ತುಂಡಿಗೆ ಸಾಮಾನ್ಯ ಕಲಾಕೃತಿಯ ರೂಪಕೊಟ್ಟು ತದನಂತರ ಅದನ್ನು ಸೂಕ್ಷ್ಮ ಕೆತ್ತನೆಯಿಂದ ತಿದ್ದುತ್ತಾರೆ. ಕೊನೆಯಲ್ಲಿ ಉಸುಕಿನ ಕಾಗದ ಮತ್ತು ಮೇಣದ ಪಾಲೀಷಿನಿಂದ ಹೊಳಪು ಕೊಡುತ್ತಾರೆ.



ಗಂಧದ ಮೂರ್ತಿಗಳ ಕೆತ್ತನೆ

ಗುಡಿಗಾರರ ಕೃತಿಗಳು ವಾಸ್ತು ಮತ್ತು ಶಿಲ್ಪದ ಸಾಂಪ್ರದಾಯಿಕ ಶೈಲಿಯನ್ನು ಹೋಲುತ್ತದೆ. ರಾಮಾಯಣ, ಮಹಾಭಾರತ, ಹಿಂದೂ ಪುರಾಣಗಳು ಇವರ ಆಕಾರಗಳು. ದೇವರ ಮೂರ್ತಿಗಳು, ಒಡವೆಯ ಪೆಟ್ಟಿಗೆಗಳು, ಫೋಟೋ ಚೌಕಟ್ಟುಗಳು, ವ್ಯಾಸಪೀಠ, ಕಾಗದವನ್ನು ಕತ್ತರಿಸುವ ಚಾಕುಗಳು, ಬೀಸಣಿಕೆಗಳು, ವಿಸಿಟಿಂಗ್ ಕಾರ್ಡುಗಳು, ಆನೆ, ಹೂಮಾಲೆ ಇತ್ಯಾದಿಗಳನ್ನು ಇವರು ಸಾಮಾನ್ಯವಾಗಿ ತಯಾರಿಸುತ್ತಾರೆ. ಈಗೀಗ ಆಧುನಿಕ ಬೇಡಿಕೆಗಳನ್ನು ಗಮನಿಸಿ ಹೊಸ ಹೊಸ ವಸ್ತುಗಳನ್ನು ಸಿದ್ಧಪಡಿಸಿಕೊಡುತ್ತಿದ್ದಾರೆ. ಗುಡಿಗಾರಿಕೆಯಲ್ಲಿ ಕಚ್ಚಾವಸ್ತುವಿನ ಕಿಮ್ಮತ್ತಿಗೂ ಕಲಾಕೃತಿಯ ಬೆಲೆಗೂ ನೇರವಾದ ಸಂಬಂಧವಿಲ್ಲ. ಗುಡಿಗಾರರು ಸ್ವತಂತ್ರ ವೃತ್ತಿಯವರು. ಕೇವಲ ಕೆಲವೇ ಕೆಲಸಗಾರರನ್ನು ನಿಯಮಿಸಿಕೊಳ್ಳುತ್ತಾರೆ. ಬೆಂಗಳೂರು, ಮೈಸೂರು, ತಮಿಳುನಾಡು, ಮುಂಬೈ, ಕೋಲ್ಕತ ದೆಹಲಿಗಳು ಗುಡಿಗಾರರ ಮಾರುಕಟ್ಟೆಗಳು. ನೂರಕ್ಕೆ ಅರವತ್ತರಷ್ಟು ಗುಡಿಗಾರರಿಗೆ ಸ್ವಂತ ಜಮೀನಿದ್ದು ಕೃಷಿ ಮಾಡುತ್ತಾರೆ. ಶೇ.80 ಗುಡಿಗಾರರ ಉತ್ಪನ್ನ ಸಾಮಾನ್ಯವಾಗಿ ತಿಂಗಳಿಗೆ ಸುಮಾರು 500–1000 ರೂಪಾಯಿಗಳವರೆಗೆ ಇದೆ. ಶೇ. 30 ಭಾಗ ವ್ಯಾಪಾರ ಸಹಕಾರಿ ಸಂಘಗಳ ಮುಖಾಂತರವೂ, ಉಳಿದುದು ನೇರವಾಗೂ ಆಗುತ್ತದೆ. ಶಿವಮೊಗ್ಗ, ಕುಮಟಗಳಲ್ಲಿ ಗುಡಿಗಾರರ ತರಬೇತಿಗಾಗಿ ಅರ್ಟಿಸಾನ್ ಟ್ರೇನಿಂಗ್ ಇನ್‌ಸ್ಟಿಟ್ಯೂಟ್ ಎಂಬ ಸಂಸ್ಥೆಗಳಿರುವವಲ್ಲದೆ, ಮೈಸೂರಿನ ಚಾಮರಾಜೇಂದ್ರ ಟೆಕ್ನಿಕಲ್ ಇನ್‌ಸ್ಟಿಟ್ಯೂಟ್ ಮತ್ತು ಮುಂಬೈಯಿನ ಜೆ. ಜೆ. ಸ್ಕೂಲ್ ಆಫ್ ಆರ್ಟ್ಸ್ ಸಂಸ್ಥೆಗಳಲ್ಲೂ ತರಬೇತಿಯ ಅವಕಾಶವುಂಟು. ಗುಡಿಗಾರರ ಕಲಾಕೌಶಲ ಜಗತ್ಪ್ರಸಿದ್ಧವಾಗಿದೆ. 1871ರಲ್ಲಿ ಅಂತಾರಾಷ್ಟ್ರೀಯ ವಾರ್ಷಿಕ ಪ್ರದರ್ಶನದಲ್ಲಿ ಇವರ ಕಲಾಕೃತಿಗಳು ಪ್ರದರ್ಶಿಸಲ್ಪಟ್ಟಿವೆ. ಪ್ಯಾರಿಸ್‌ನಲ್ಲಿ ನಡೆದ ಜಾಗತಿಕ ವಸ್ತುಪ್ರದರ್ಶನದಲ್ಲಿ ಕೆಲವು ಕೃತಿಗಳು ಬೆಳ್ಳಿಯ ಪದಕಗಳನ್ನು ಪಡೆದಿವೆ. ಈ ಉದ್ಯೋಗ ಲಾಭದಾಯಕವಲ್ಲದ್ದರಿಂದ ಹೊಸ ಪೀಳಿಗೆ ನೌಕರಿಯನ್ನು ಸೇರತೊಡಗಿದೆ. ಇಂದು ಈ ಉದ್ಯೋಗದಲ್ಲಿರುವವರು ಜಾತಿಯ ವೈಶಿಷ್ಟ್ಯವೆಂಬ ಅಭಿಮಾನದಿಂದ ಮಾತ್ರ ಈ ಕಲೆಯನ್ನು ನಡೆಯಿಸಿಕೊಂಡು ಹೋಗುತ್ತಿದಾರೆ. ಈಚೆಗೆ ಆಲ್ ಇಂಡಿಯ ಹ್ಯಾಂಡಿಕ್ರಾಫ್ಟ್ ಬೋರ್ಡ್ ಈ ಕೈಕಸಬನ್ನು ಸಂರಕ್ಷಿಸುವುದಕ್ಕಾಗಿ ಶ್ರಮಿಸುತ್ತಿದೆ. ಹೊನ್ನಾವರದ ಎಸ್. ವೆಂಕಪ್ಪ, ಸೊರಬದ



ಮುರಲೀಧರ; ಗಂಧ ಹಾಗೂ ಹಸ್ತಿದಂತದ ಸೂಕ್ಷ್ಮ ಕಲಾಕೃತಿ: ತಯಾರಿಸಿದವರು ಶಾಂಬಾ ಅನಂತ ಶೇಟಿ ಗುಡಿಗಾರ, ಕುಮಟ

ಹಿರಿಯಣ್ಣಪ್ಪಾ, ಕುಮಟದ ವಾಮನ ಸುಬ್ರಾಯ ಸೇಟ್, ಅದೇ ಊರಿನ ಸುಬ್ರಾಯ ರಾಮಚಂದ್ರ ಸೇಟ್ ಮತ್ತು ಶಂಬಾ ಅನಂತ ಶೇಟ್, ಸಿದ್ದಾಪುರದ ವೆಂಕಟಗಿರಿ ಚಿದಂಬರ ಚಿತ್ರಕ್ ಮೊದಲಾದವರು ಗುಡಿಗಾರಿಕೆಯಲ್ಲಿ ಪ್ರಸಿದ್ಧರಾದವರು **(ನೋಡಿ– ಕೆತ್ತನೆ ಕೆಲಸ; ಗಂಧದಮರ; ತೇರು; ದಂತದ ಕೆತ್ತನೆ).** (ಆರ್.ಜಿ.ಆರ್.ಎ.)

**ಗುಡಿಬಂಡೆ :** ಚಿಕ್ಕಬಳ್ಳಾಪುರ ಜಿಲ್ಲೆಗೆ ಸೇರಿದ ಒಂದು ತಾಲ್ಲೂಕು. ಜಿಲ್ಲೆಯ ಅತ್ಯಂತ ಚಿಕ್ಕ ತಾಲ್ಲೂಕು. ಹಿಂದೆ ಬಾಗೇಪಲ್ಲಿಯ ಉಪತಾಲ್ಲೂಕಾಗಿತ್ತು. ದಕ್ಷಿಣದಲ್ಲಿ ಚಿಕ್ಕಬಳ್ಳಾಪುರ, ಪೂರ್ವದಲ್ಲಿ ಶಿಡ್ಲಘಟ್ಟ ಮತ್ತು ಬಾಗೇಪಲ್ಲಿ, ಪಶ್ಚಿಮದಲ್ಲಿ ಗೌರಿಬಿದನೂರು ತಾಲ್ಲೂಕುಗಳು, ಉತ್ತರದಲ್ಲಿ ಸ್ವಲ್ಪ ದೂರದವರೆಗೆ ಆಂಧ್ರಪ್ರದೇಶದ ಗಡಿ ಇವುಗಳಿಂದ ಸುತ್ತುವರಿಯಲ್ಪಟ್ಟಿದೆ. ತಾಲ್ಲೂಕಿನ ವಿಸ್ತೀರ್ಣ 222ಚ.ಕಿಮೀ. ಕಸಬೆ ಮತ್ತು ಸೋಮೇನಹಳ್ಳಿ ಹೋಬಳಿಗಳು. ಒಟ್ಟು ಗ್ರಾಮಗಳು 105. ಜನಸಂಖ್ಯೆ 55618 (2011).

ತಾಲ್ಲೂಕು ಹೆಚ್ಚುಮಟ್ಟಿಗೆ ಕಣಶಿಲೆಯ ಬೆಟ್ಟಗಳ ಪ್ರದೇಶ. ಭೂಮಿ ಉತ್ತರಕ್ಕೆ ಇಳಿಜಾರಾಗಿದ್ದು ಅನೇಕ ಏರು ತಗ್ಗುಗಳಿಂದ ಕೂಡಿದೆ. ನಂದಿಬೆಟ್ಟದ ಉತ್ತರದಲ್ಲಿ ಅವಲುಕೊಂಡ ಎಂಬಲ್ಲಿ ಹುಟ್ಟುವ ಕುಶಾವತಿ ನದಿ ಈ ತಾಲ್ಲೂಕಿನ ಮೂಲಕ ಉತ್ತರಕ್ಕೆ ಹರಿದು ಮುಂದೆ ಚಿತ್ರಾವತಿ ನದಿಯನ್ನು ಸೇರಿಕೊಳ್ಳುತ್ತದೆ. ತಾಲ್ಲೂಕಿನ ಮುಖ್ಯ ಕೆರೆಯಾಗಿರುವ ಬೈರಸಾಗರಕ್ಕೆ ಇದೇ ಮುಖ್ಯ ಆಸರೆ. ಈ ಕೆರೆಯ ಎರಡು ನಾಲೆಗಳಲ್ಲಿ ಒಂದು ಸುಮಾರು 2.5ಕಿಮೀ ದೂರದವರೆಗೂ ಮತ್ತೊಂದು 6.5ಕಿಮೀ ದೂರದವರೆಗೂ ಸಾಗುತ್ತದೆ. ಈ ತಾಲ್ಲೂಕಿನಲ್ಲಿ ನುರುಜುಗಲ್ಲಿನಿಂದ, ಕಲ್ಲುಗಳಿಂದ ಕೂಡಿದ ಭೂಪ್ರದೇಶವೇ ಹೆಚ್ಚು. ಈ ತಾಲ್ಲೂಕಿನ ವಾರ್ಷಿಕ ಸರಾಸರಿ ಮಳೆ 733.84ಮಿಮೀ. ಮಳೆ ಕಡಿಮೆಯಾದರೂ ಕೆರೆ ಬಾವಿಗಳ ಆಸರೆಯಿಂದ ನೆಲಗಡಲೆ, ರಾಗಿ, ಬತ್ತ, ಕಬ್ಬು, ಆಲೂಗೆಡ್ಡೆ, ಈರುಳ್ಳಿ, ಮೆಣಸಿನಕಾಯಿ ಮತ್ತು ದ್ವಿದಳ ಧಾನ್ಯಗಳನ್ನು

ಬೆಳೆಯುತ್ತಾರೆ. ಗುಡಿಬಂಡೆಯ ಸುತ್ತಮುತ್ತಲೂ ಹುಣಿಸೆ ಮರಗಳನ್ನು ಹೆಚ್ಚಾಗಿ ಕಾಣಬಹುದು. ಮೈದಾನ ಪ್ರದೇಶಗಳಲ್ಲಿ ಮಾವಿನ ತೋಪುಗಳಿವೆ. ಪಶುಸಂಪತ್ತಿನ ಅಭಿವೃದ್ಧಿಗೆ ಹೆಚ್ಚು ಗಮನ ನೀಡಲಾಗುತ್ತಿದ್ದು, ಗುಡಿಬಂಡೆಯಲ್ಲಿ ತಾಲ್ಲೂಕು ಮಟ್ಟದ ಒಂದು ಪಶುವೈದ್ಯಾಲಯವೂ ಯಲ್ಲೋಡಿನಲ್ಲಿ ಗ್ರಾಮಮಟ್ಟದ ಪಶುವೈದ್ಯಾಲಯವೂ ಇವೆ.

ಗುಡಿಬಂಡೆ ತಾಲ್ಲೂಕು ಬೆಲ್ಲ ಮತ್ತು ಕಲ್ಲುಸಕ್ಕರೆ ತಯಾರಿಕೆಗೆ, ರೇಷ್ಮೆನೂಲಿಗೆ ಮತ್ತು ಕೊಟ್ಟಣದ ಅಕ್ಕಿಗೆ ಪ್ರಸಿದ್ಧ. ಗೌರಿಬಿದನೂರು ಮತ್ತು ಚಿಕ್ಕಬಳ್ಳಾಪುರದ ರೈಲು ನಿಲ್ದಾಣಗಳೇ ಈ ತಾಲ್ಲೂಕಿಗೆ ಹತ್ತಿರವಿರುವ ರೈಲುಸಂಪರ್ಕ. ಗುಡಿಬಂಡೆಯಿಂದ ಸುತ್ತಲ ಮುಖ್ಯ ಸ್ಥಳಗಳಿಗೆ ಉತ್ತಮ ಮಾರ್ಗಗಳಿವೆ. *

ಗುಡಿಬಂಡೆ ಈ ತಾಲ್ಲೂಕಿನ ಮುಖ್ಯ ಸ್ಥಳ. ನಂದಿದುರ್ಗ ಬೆಟ್ಟಸಾಲಿನಲ್ಲಿ ಕೋಲಾರದ ವಾಯವ್ಯಕ್ಕೆ 95ಕಿಮೀ ದೂರದಲ್ಲಿದೆ. ಗುಡಿಯಿಂದ ಕೂಡಿದ ಬಂಡೆಯೊಂದರ ದಕ್ಷಿಣದ ಬುಡದಲ್ಲಿ ಈ ಪಟ್ಟಣವಿರುವುದರಿಂದ ಇದಕ್ಕೆ ಗುಡಿಬಂಡೆ ಎಂಬ ಹೆಸರು ಬಂದಿದೆ. ಈ ಸುತ್ತಲ ಪ್ರದೇಶಕ್ಕೆ ಇದೇ ವ್ಯಾಪಾರಕೇಂದ್ರ.

ಔರಂಗಜೇಬನ ಕರ್ನಾಟಕ ಭಾಗದ ಫೌಜುದಾರ ಖಾಸಿಂಖಾನ್ ದೊಡ್ಡಬಳ್ಳಾಪುರ ವನ್ನು ವಶಪಡಿಸಿಕೊಂಡಮೇಲೆ ಗುಡಿಬಂಡೆ ಮತ್ತು ಅದರ ಸುತ್ತಲಿನ ಅರಣ್ಯ ಭಾಗಗಳನ್ನು ಹಾವಳಿ ಬೈರೇಗೌಡನಿಗೆ ಕೊಟ್ಟ. ಹಾವಳಿ ಬೈರೇಗೌಡ ಮಕ್ಕಳಿಲ್ಲದೆ ಮೃತಪಟ್ಟ. ಅವನ ಮೈದುನ ರಾಮೇಗೌಡ ಉತ್ತರಾಧಿಕಾರಿಯಾದ. 1689ರಲ್ಲಿ ಗುಡಿಬಂಡೆ ಚಿಕ್ಕಬಳ್ಳಾಪುರದ ಪಾಳೆಯಗಾರ ಬೈಚೇಗೌಡನ ವಶವಾಯಿತು.

ಹಾವಳಿ ಬೈರೇಗೌಡ ಮೊದಲು ಹಳೆಯ ಗುಡಿಬಂಡೆಯ ಕೋಟೆಯನ್ನೂ ಅನಂತರ ಈಗಿನ ಬಂಡೆಯ ತಳದ ಗುಡಿಬಂಡೆ ಪಾಳೆಯವನ್ನೂ ಸ್ಥಾಪಿಸಿದ. ಕೋಟೆಯ ಭಾಗದಲ್ಲಿ ಈಗಲೂ ಅನೇಕ ಬಂಡೆದ್ವಾರಗಳು, ಬಂಡೆಗಳಲ್ಲಿ ಬಿಡಿಸಿದ ಸೋಪಾನಗಳು, ಸಿಹಿನೀರಿನ ದೊಣೆಗಳು, ಗುಡಿಗಳು, ಹಗೇವುಗಳು, ಮದ್ದಿನ ಉಗ್ರಾಣಗಳು ಇವೆ. ಕೋವಿಯ ಮದ್ದನ್ನು ತಯಾರಿಸಲು ಉಪಯೋಗಿಸುತ್ತಿದ್ದ ಬೀಸುವ ಕಲ್ಲು ಸಹ ಇದೆ.

ಈ ಊರಿನ ಹೆಸರಿಗೆ ಕಾರಣವಾದ ಬಂಡೆಯ ಮೇಲಿರುವ ಗುಡಿ ಅಹೋಬಲ ಓಬಲ ನರಸಿಂಹಸ್ವಾಮಿಯದು. ಇದೊಂದು ನೈಸರ್ಗಿಕ ಗವಿ. ಗವಿಯು ಗರ್ಭಗುಡಿ ಮತ್ತು ಹೊರ ಅಂಕಣವೆಂದು ಎರಡಾಗಿ ವಿಂಗಡಿತವಾಗಿದೆ. ಹೊರ ಅಂಕಣದ ಮಂಟಪದ ದ್ವಾರದಲ್ಲಿ ದ್ವಾರಪಾಲಕ ವಿಗ್ರಹಗಳೂ ಮಂಟಪದ ಉತ್ತರದ ಗೋಡೆಯ ಮೇಲೆ ವಾಮನ, ರಾಮ, ವರಾಹ ಮತ್ತು ಉಗ್ರನರಸಿಂಹಸ್ವಾಮಿಯ ಉಬ್ಬುಚಿತ್ರಗಳೂ ಇವೆ. ಗರ್ಭಗುಡಿಯಲ್ಲಿ ವಿಗ್ರಹದ ಬದಲು ಉದ್ಭವ ಶಿಲೆ ಇದೆ. ಗವಿಯ ಸುತ್ತಲೂ ಕಲ್ಲಿನ ಗೋಡೆ ಇದೆ. ಗುಡಿಬಂಡೆಯಲ್ಲಿ ಎರಡು ಜಿನಾಲಯಗಳೂ ಇವೆ. (ಎಚ್.ಪಿ.ಕೆ.)

**ಗುಡಿಯಮ್ :** ತಮಿಳುನಾಡು ರಾಜ್ಯದ ತಿರುವಳ್ಳೂರು ಜಿಲ್ಲೆಯಲ್ಲಿರುವ ಹಳೆಶಿಲಾಯುಗದ ಗುಹಾನೆಲೆ. ಕೋರ್ತಲಯಾರ್ ನದಿ ತೀರದಲ್ಲಿರುವ ಈ ಗುಹೆ ಅಳ್ಳಿಕುಳ್ಳಿ ಬೆಟ್ಟಶ್ರೇಣಿಯಲ್ಲಿದೆ. ಗುಹೆಯೊಳಗಿನ ಅವಶೇಷಗಳನ್ನು ರಾಬರ್ಟ್ ಬ್ರೂಸ್‌ಫುಟ್ ಪತ್ತೆಹಚ್ಚಿದ. ಕೆ.ಡಿ.ಬ್ಯಾನರ್ಜಿಯವರು 1963–64 ರಲ್ಲಿ ಇಲ್ಲಿ ಉತ್ಖನನ ನಡೆಸಿದರು. ಗುಹೆಯ ಒಳಗೆ ಅಗೆದ ಗುಂಡಿಯಲ್ಲಿ ಅತ್ಯಂತ ಕೆಳಗಿನ ಜಲ್ಲಿಕಲ್ಲಿನ ಸ್ತರದಿಂದ ಅತ್ಯಂತ ಮೇಲಿನ ಹೂಳುಮಣ್ಣಿನ ಸ್ತರದವರೆಗೆ ಹಳೆ ಶಿಲಾಯುಗದ ಉಪಕರಣಗಳು ಅಧಿಕವಾಗಿ ಕಂಡುಬಂದವು. ಕೆಳಗಿನ ಸ್ತರಗಳಲ್ಲಿ ಆದಿ ಹಳೆಶಿಲಾಯುಗೋತ್ತರ ಉಪಕರಣಗಳೂ ಮೇಲಿನ ಸ್ತರಗಳಲ್ಲಿ ಮಧ್ಯ ಹಳೆಶಿಲಾಯುಗೋತ್ತರ ಉಪಕರಣಗಳೂ ಬೆರಳೆಣಿಕೆಯಲ್ಲಿ ಲಭಿಸಿದವು.

ಈ ಹಳ್ಳಿಯ ಬಳಿಯಿರುವ ಗದ್ದೆಯೊಂದರಲ್ಲಿ ಅಗೆದ ಒಂದು ಗುಂಡಿಯಲ್ಲಿ ಜಲ್ಲಿಕಲ್ಲಿನ ಭೂಸ್ತರದಲ್ಲಿ ಹಳೆಶಿಲಾಯುಗದ ಉಪಕರಣಗಳಿದ್ದವು. ಅಪೂರ್ಣ ಕೈಗೊಡಲಿ, ಕಡಿಕತ್ತಿ, ಕೊಚ್ಚುಗತ್ತಿ, ಮೂಲ ಶಿಲೆಗಳಲ್ಲದೆ ದೊಡ್ಡ ಚಕ್ಕೆಗಳು ಇದರಲ್ಲಿ ಅನೇಕ ಸಂಖ್ಯೆಯಲ್ಲಿದ್ದವು. ಇದರ ಮೇಲಿದ್ದ ಕಂದುಮಣ್ಣಿನ ಸಡಿಲವಾದ ಪದರದಲ್ಲಿ ಮಿಶ್ರ ಉಪಕರಣಗಳು, ಅಂದರೆ ಚಕ್ಕೆ, ಮೊನೆ, ಹೆರೆಚಕ್ಕೆ, ಕೈಗೊಡಲಿ, ಕಡಿಕತ್ತಿ, ಅಲಗುಗಳು ಮೊದಲಾದವು ಇದ್ದವು.

ಶ್ರೀಕೃಷ್ಣಪುರಂ ಹಳ್ಳಿಯ ಬಳಿ ಅಗೆದ ಗುಂಡಿಯಲ್ಲಿ ಜಂಬುಮಣ್ಣಿನ ಪದರದಲ್ಲಿ ಮಧ್ಯ ಹಳೆಶಿಲಾಯುಗ ಮತ್ತು ಅಂತ್ಯ ಅಶೂಲಿಯನ್ ಮಾದರಿಯ ಉಪಕರಣಗಳು ಮಿಶ್ರವಾಗಿದ್ದವು. ಈ ಪದರದ ಕೆಳಗೆ ಸವೆದು ಚೂರಾದ ಜಂಬುಕಲ್ಲಿನ ಪದರವಿದ್ದು ಇದರಲ್ಲಿ ಅಂತ್ಯ ಅಶೂಲಿಯನ್ ಮಾದರಿಯ ಉಪಕರಣಗಳಿದ್ದವು. ಕ್ವಾರ್ಟ್ಸೈಟ್ ಕಲ್ಲಿನಿಂದ ಮಾಡಿದ ಮೊನೆ, ಸಣ್ಣ ಚಕ್ಕೆ, ಹೆರೆಚಕ್ಕೆ, ಬಿಲ್ಲೆಯಾಕಾರದ ಉಪಕರಣಗಳು, ಮೂಲಶಿಲೆ, ಕೊಚ್ಚುಗತ್ತಿ, ಕಡಿಗತ್ತಿ, ಕೈಗೊಡಲಿಗಳು ಇಲ್ಲಿ ಸಿಕ್ಕ ಇತರ ಉಪಕರಣಗಳು. (ಪಿ.ಕೆ.)

**ಗುಡಿಸಿಲು ಕೈಗಾರಿಕೆಗಳು :** ಮನೆಯಲ್ಲಿ ಅಥವಾ ಗುಡಿಸಿಲಿನಲ್ಲಿ ನಡೆಸುವ ಕೈಗಾರಿಕೆಗಳು, ಕುಟೀರ ಕೈಗಾರಿಕೆಗಳು (ಕಾಟೇಜ್ ಇಂಡಸ್ಟ್ರೀಸ್). ಇದು ನಾಗರಿಕತೆಯಷ್ಟೇ ಹಳೆಯದು. ಮನುಷ್ಯ ಸ್ವರಕ್ಷಣೆಗಾಗಿ ಮತ್ತು ಬೇಟೆಗಾಗಿ ಆಯುಧಗಳನ್ನೂ ಉಪಕರಣಗಳನ್ನೂ ತಯಾರಿಸತೊಡಗಿದಾಗ ಈ ಕೈಗಾರಿಕೆಯ ಉದಯವಾಯಿತು. ಅವನು ಮುಂದೆ ಉಡುಪು, ವ್ಯವಸಾಯದ ಉಪಕರಣ ಮುಂತಾದವನ್ನು ಮಾಡಲು ಪ್ರಾರಂಭಿಸಿದಾಗ ಇದು ಬೆಳೆಯಿತು. ಪುರಾತನ ನಾಗರಿಕತೆಗಳಲ್ಲಿ ನಾನಾ ಉಪಯುಕ್ತ ಮತ್ತು ಭೋಗ ವಸ್ತುಗಳ ಕೈಗಾರಿಕೆಗಳಿಗೆ ರಾಜರಿಂದಲೂ ಚಕ್ರವರ್ತಿಗಳಿಂದಲೂ ಶ್ರೀಮಂತರಿಂದಲೂ ಪೋಷಣೆಯಿತ್ತು. ಅವರು ತಯಾರಿಸಿದ ಸರಕುಗಳು ದೂರದ ಮಾರುಕಟ್ಟೆಗಳಲ್ಲಿ ವಿಕ್ರಯವಾಗುತ್ತಿದ್ದುವು. ಆದರೆ ಕೈಗಾರಿಕಾ ಕ್ರಾಂತಿಯಾದ ಮೇಲೆ



ಪಾತ್ರೆ ತಯಾರಿಕೆ

ಉಂಟಾದ ತ್ವರಿತ ಮತ್ತ ವ್ಯಾಪಕವಾದ ಕೈಗಾರಿಕಾಕರಣ ಗೃಹ ಕೈಗಾರಿಕೆಗಳ ಕ್ಷೀಣ ದಶೆಗೆ ಕಾರಣವಾಯಿತು. ಆದರೂ ಈ ಕೈಗಾರಿಕೆಗಳು ಸಂಪೂರ್ಣವಾಗಿ ಕಣ್ಮರೆಯಾಗಿಲ್ಲ. ಕೆಲವು ಕಾರಣಗಳಿಂದಾಗಿ ಅವು ಇಂದಿಗೂ ಉಳಿದುಬಂದಿವೆ. ಕೆಲವು ಉಪಯುಕ್ತ ವಸ್ತುಗಳಿಗೆ ಬೇಡಿಕೆ ಸ್ಥಳೀಯವೂ ಪರಿಮಿತವೂ ಆಗಿರುತ್ತದೆ. ಅಂಥ ವಸ್ತುಗಳನ್ನು ದೊಡ್ಡ ಕೈಗಾರಿಕೆಗಳಲ್ಲಿ ಬೃಹದ್ಗಾತ್ರದಲ್ಲಿ ಉತ್ಪಾದನೆ ಮಾಡುವುದು ಸಾಧ್ಯವಿಲ್ಲ ಗುಡಿಸಿಲು ಕೈಗಾರಿಕೆಗಳಲ್ಲಿ ಅವನ್ನು ಸಣ್ಣ ಗಾತ್ರದಲ್ಲಿ ಉತ್ಪಾದಿಸಬಹುದು. ಅದೂ ಅಲ್ಲದೆ ಗೃಹ ಕೈಗಾರಿಕೆಗಳು ಜನಗಳ ರುಚಿ ಮತ್ತು ಬೇಡಿಕೆಗಳಿಗೆ ಅನುಗುಣವಾಗಿ ಸರಕುಗಳನ್ನು ತಯಾರಿಸುತ್ತವೆ. ಈ ಕಾರಣಗಳಿಂದಾಗಿ ಗುಡಿಸಿಲು ಕೈಗಾರಿಕೆಗಳು ಈಗಿನ ಬೃಹತ್ ಕೈಗಾರಿಕಾ ಪ್ರಪಂಚದಲ್ಲೂ ಜೀವಂತವಾಗಿ ಉಳಿದಿವೆ. ಕೆಲವು ವಿಶಿಷ್ಟ ಕ್ಷೇತ್ರಗಳಲ್ಲಿ ಪ್ರವರ್ಧಮಾನವಾಗಿವೆ. ಈಚೆಗೆ ಸರ್ಕಾರಗಳು ಇವಕ್ಕೆ ಉತ್ತೇಜನ ನೀಡುತ್ತಿವೆ. ಇದಕ್ಕೆ ನಾನಾ ಕಾರಣಗಳುಂಟು : 1. ಈ ಕೈಗಾರಿಕೆಗಳು ಕೂಲಿಗಾರರ ಹೆಚ್ಚಳವಿರುವ ಮತ್ತು ಕಡಿಮೆ ಬಂಡವಾಳವಿರುವ ದೇಶಗಳಿಗೆ ಚೆನ್ನಾಗಿ ಹೊಂದಿಕೊಳ್ಳುತ್ತವೆ. 2. ಇವು ಸ್ಥಳೀಯವಾಗಿ ದೊರೆಯುವ ಕಚ್ಚಾಸಾಮಗ್ರಿ ಮತ್ತು ಕುಶಲತೆಯನ್ನು ಉಪಯೋಗಿಸಿ ಕೊಂಡು ಅನೇಕ ಉಪಯುಕ್ತ ಮತ್ತು ಅನುಭೋಗ ವಸ್ತುಗಳನ್ನು ತಯಾರಿಸುವುದರಿಂದ ದೇಶದ ಆರ್ಥಿಕ ಪ್ರಗತಿಗೆ ಸಹಾಯ ಮಾಡುತ್ತವೆ. 3. ಗುಡಿಸಲು ಕೈಗಾರಿಕೆಗಳು ಮನೆಯಲ್ಲೇ ಇರುವ ಮುದುಕರು, ಕುರುಡರು ಮತ್ತು ಮಕ್ಕಳುಗಳ ಸೇವೆಯನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಳ್ಳಲು ಸಹಾಯಕವಾಗುತ್ತದೆ. 4. ಸಮಾನ ಆರ್ಥಿಕ ಅವಕಾಶ ಕಲ್ಪಿಸುವುದಕ್ಕೂ ರಾಷ್ಟ್ರದ ವರಮಾನ ಮತ್ತು ಸಂಪತ್ತಿನ ಸಮಾನ ಹಂಚಿಕೆಗೂ ಕೆಲವು ದೇಶಗಳು ಗುಡಿಸಿಲು ಕೈಗಾರಿಕೆಗಳನ್ನು ಉತ್ತೇಜಿಸುತ್ತಿವೆ. ಈ ರಂಗಗಳಲ್ಲಿ ಗೃಹಕೈಗಾರಿಕೆಗಳು ವ್ಯಾಪಕವಾಗಿ ಕಂಡುಬರುತ್ತವೆ; ಪುಸ್ತಕಗಳನ್ನು ಹೊಲಿಯುವುದು; ನೂಲಿಗೆ ಬಣ್ಣ ಕಟ್ಟುವುದು; ಬಟ್ಟೆಬರೆಗಳ ತಯಾರಿಕೆ; ಬೀಜಗಳಿಂದ ಎಣ್ಣೆ ತೆಗೆಯುವುದು; ಚಿನ್ನ, ಬೆಳ್ಳಿ ಮತ್ತು ಇತರ ಆಭರಣಗಳ ತಯಾರಿಕೆ; ಚರ್ಮವಸ್ತುಗಳ ತಯಾರಿಕೆ; ಚಾಪೆ ಹೆಣೆಯುವುದು: ಸಂಗೀತ ಸಾಧನಗಳ ತಯಾರಿಕೆ; ವ್ಯವಸಾಯೋ ಪಕರಣಗಳ ತಯಾರಿಕೆ: ಮಣ್ಣಿನ ಕೆಲಸ ಮತ್ತು ಕುಂಬಾರಿಕೆ; ಬಿದಿರು ಮತ್ತು ಅನೇಕ ಬೆತ್ತದ ಸಾಮಾನುಗಳ ತಯಾರಿಕೆ; ಜಮಖಾನದ ತಯಾರಿಕೆ; ಮಣ್ಣಿನ ಪ್ರತಿಮೆಗಳ ತಯಾರಿಕೆ; ತಾಮ್ರದ ಸಾಮಾನುಗಳ ತಯಾರಿಕೆ; ಗರಿಯಿಂದ ಸಾಮಾನುಗಳ ತಯಾರಿಕೆ; ಆಟದ ಸಾಮಾನುಗಳು ಮತ್ತು ಬೊಂಬೆ ಮಾಡುವುದು; ರಬ್ಬರ್ ವಸ್ತುಗಳು ಮತ್ತು ರಬ್ಬರ್ ಅಚ್ಚುಗಳು; ಕಸೂತಿ ಕೆಲಸ ಮತ್ತು ವಸ್ತುಗಳು.

## ಗುಡಿಸಿಲು ಕೈಗಾರಿಕೆಗಳು

ಗುಡಿಸಿಲು ಕೈಗಾರಿಕೆಗಳಲ್ಲಿ ತೊಡಕಿಲ್ಲದ ಮತ್ತು ಸಾಮಾನ್ಯವಾದ ಉತ್ಪಾದನ ತಂತ್ರಗಳನ್ನು ಉಪಯೋಗಿಸುತ್ತಾರೆ. ಅನೇಕ ಕೈಗಾರಿಕೆಗಳಲ್ಲಿ ಹಳೆಯ ಕಾಲದ ಯಂತ್ರ ಸಲಕರಣೆಗಳಿಂದ ಉತ್ಪಾದನ ಕಾರ್ಯ ನಡೆಯುತ್ತದೆ. ಕೆಲವರು ಸುಧಾರಿಸಿದ ಉತ್ಪಾದನ ಕ್ರಮ ಮತ್ತು ಉಪಕರಣಗಳನ್ನು ಬಳಸುವುದೂ ವಾಡಿಕೆಯಲ್ಲಿದೆ. ಈ ಕೈಗಾರಿಕೆಗಳು ತಾಂತ್ರಿಕ ಪ್ರಗತಿಯಿಂದ ಸಂಪೂರ್ಣವಾಗಿ ವಂಚಿತವಾಗಿಯೇನೂ ಇಲ್ಲ. ಆದರೆ ನವೀನ ಉತ್ಪಾದನ ವಿಧಾನಗಳನ್ನು ಅಳವಡಿಸುವುದರಲ್ಲಿ ನಿಧಾನ ಹೆಚ್ಚು. ಕೆಲವು ಕೈಗಾರಿಕೆಗಳಲ್ಲಿ ವಿದ್ಯುಚ್ಛಕ್ತಿಯನ್ನು ಬಳಸುವುದುಂಟು. ಆಧುನಿಕ ಕಾರ್ಖಾನೆಗಳೊಂದಿಗೆ ಹೊಂದಿಕೊಂಡು ಉತ್ಪಾದನ ಕಾರ್ಯನಿರತರಾದ ಗುಡಿಸಿಲು ಕೈಗಾರಿಕೆಗಳು ಇವೆ. ಗಿರಣಿಯ ನೂಲನ್ನು ಬಳಸಿಕೊಂಡು ಮಗ್ಗದಲ್ಲಿ ಬಟ್ಟೆ ನೇಯುವುದು ಒಂದು ಉದಾಹರಣೆ. ಕಮ್ಮಾರರಲ್ಲಿ ತಿರುಗು ಯಂತ್ರದ ಬಳಕೆ ಹೆಚ್ಚುತ್ತಿದೆ. ಹೀಗೆ ನಿಧಾನವಾಗಿ ಯಾದರೂ ತಾಂತ್ರಿಕ ಪ್ರಗತಿ ಗುಡಿಸಿಲು ಕೈಗಾರಿಕೆಗಳ ಉತ್ಪಾದನ ಕ್ರಮವನ್ನು ಬದಲಾಯಿಸುತ್ತಿದೆ.



ಬಿದಿರಿನ ಕೆಲಸ

ಅನೇಕ ಗುಡಿಸಿಲು ಕೈಗಾರಿಕೆಗಳಲ್ಲಿ ವಿಶೇಷ ಕುಶಲತೆಯ ಅವಶ್ಯಕತೆಯಿರುವುದಿಲ್ಲ. ಅನೇಕ ಉಪಯುಕ್ತ ಸರಕುಗಳನ್ನು ಸಾಧಾರಣವಾದ ಕುಶಲತೆಯಿಂದಲೇ ಉತ್ಪಾದಿಸಬಹುದು. ಆದರೆ ಕೆಲವು ಕೈಗಾರಿಕೆಗಳಲ್ಲಿ ಉನ್ನತ ಮಟ್ಟದ ಕುಶಲತೆ ಮತ್ತು ಕೆಲಸಗಾರಿಕೆ ಅಗತ್ಯವಾಗುತ್ತದೆ. ವಂಶಪಾರಂಪರ್ಯವಾದ ಕೌಶಲದ ಬಲದಿಂದ ನಡೆಯುವ ಕೈಗಾರಿಕೆಗಳೂ ಉಂಟು. ಕುಶಲ ಕರ್ಮಿ ತನ್ನ ಮಕ್ಕಳಿಗೆ ತರಬೇತಿಕೊಟ್ಟು ಅವರನ್ನು ಆ ಕೆಲಸದಲ್ಲಿ ನಿಪುಣರನ್ನಾಗಿ ಮಾಡುತ್ತಾನೆ. ಈ ಕಾರಣದಿಂದಾಗಿ ಕೆಲವು ಉತ್ಪಾದನ ವಿಧಾನಗಳು ಮತ್ತು ಕೌಶಲಗಳು ಕೆಲವೇ ಕುಟುಂಬಗಳಿಗೆ ಸೀಮಿತವಾಗಿರುತ್ತವೆ. ಈಚಿನ ವರ್ಷಗಳಲ್ಲಿ ಕೆಲವು ವೃತ್ತಿ ಸಂಸ್ಥೆಗಳು ಗುಡಿಸಿಲು ಕೈಗಾರಿಕೆಯಲ್ಲಿ ತೊಡಗಿರುವ ಮತ್ತು ತೊಡಗುವ ಕೆಲಸಗಾರರಿಗೆ ತರಬೇತು ಒದಗಿಸುತ್ತಿವೆ. ಆದಾಗ್ಯೂ ಇದು ಸಾಕಷ್ಟು ವ್ಯಾಪಕವಾಗಿಲ್ಲ. ಗುಡಿಸಿಲು ಕೈಗಾರಿಕೆಯಲ್ಲಿ ತೊಡಗಿರುವ ಬಹಳ ಜನ ಯಾವ ವಿಧವಾದ ವ್ಯವಸ್ಥಿತ ತರಬೇತನ್ನೂ ಪಡೆದಿಲ್ಲದಿರುವುದೇ ಸಾಮಾನ್ಯವಾಗಿದೆ.

ಎಲ್ಲ ಗುಡಿಸಿಲು ಕೈಗಾರಿಕೆಗಳಿಗೂ ಸಾಮಾನ್ಯವಾದ ಕೆಲವು ಸಮಸ್ಯೆಗಳುಂಟು. ಬಂಡವಾಳದ ಅಭಾವ ಒಂದು ಮುಖ್ಯ ಸಮಸ್ಯೆ. ಈ ಕೈಗಾರಿಕೆಗಳಿಗೆ ಅಲ್ಪ ಬಂಡವಾಳವೇ ಸಾಕಾದರೂ ಅಷ್ಟು ಬಂಡವಾಳವನ್ನು ಕೂಡ ಅನೇಕ ಉತ್ಪಾದಕರು ಹೊಂದಿಸಿಕೊಳ್ಳಲು ಅಸಮರ್ಥರಾಗಿರುತ್ತಾರೆ. ಬೃಹತ್ ಕೈಗಾರಿಕೆಗಳಂತೆ ಇವಕ್ಕೂ ಅಲ್ಪಾವಧಿ ಮತ್ತು ದೀರ್ಘಾವಧಿ ಸಾಲಗಳು ಬೇಕಾಗುತ್ತವೆ. ಉಪಕರಣಗಳು, ಯಂತ್ರಗಳು ಮತ್ತು ಕಟ್ಟಡಗಳಿಗಾಗಿ ದೀರ್ಘಾವಧಿ ಸಾಲಗಳು ಅಗತ್ಯ. ಕಚ್ಚಾ ಸಾಮಗ್ರಿಯನ್ನು ಕೊಳ್ಳಲು, ತಯಾರಾದ ಪದಾರ್ಥಗಳನ್ನು ಮತ್ತು ತಯಾರಿಕೆಗೆ ಬೇಕಾದ ವಸ್ತುಗಳನ್ನು ಶೇಖರಿಸಲು, ಮಾರಾಟ ಮಾಡಲು ಮತ್ತು ಕೆಲಸಗಾರರಿಗೆ ಕೂಲಿ ಕೊಡಲು ಅಲ್ಪಾವಧಿ ಸಾಲ ಬೇಕಾಗುತ್ತದೆ. ಗುಡಿಸಿಲು ಕೈಗಾರಿಕೆಗಳು ಸಂಘಟಿತ ಉದ್ಯಮಗಳಲ್ಲವಾದ್ದರಿಂದ ಬಂಡವಾಳ ಒದಗಿಸುವುದು ಮತ್ತು ಸಾಲ ಪಡೆಯುವುದು ಸುಲಭವಲ್ಲ. ಬ್ಯಾಂಕುಗಳು ಮತ್ತು ಇತರ ಸಂಸ್ಥೆಗಳಿಂದ ಹಣ ಪಡೆಯಲು ಇವು ಅಗತ್ಯವಾದ ಆಧಾರ ಮತ್ತು ಆಸ್ತಿ ಒದಗಿಸಲಾರವು. ಈ ಕಾರಣಗಳಿಂದಾಗಿ ಇವು ಸಂಘಟಿತ ಸಂಸ್ಥೆಗಳಿಂದ ಹಣ ಪಡೆಯುವುದು ಕಷ್ಟ. ಗುಡಿಸಿಲು ಕೈಗಾರಿಕೆಗಳಲ್ಲಿ ತೊಡಗಿರುವವರಿಗೆ ಅಗತ್ಯವಾದ ಬಂಡವಾಳ ಬಹುತೇಕ ಒದಗುತ್ತಿರುವುದು ಸಾಹುಕಾರರು ಮತ್ತು ವರ್ತಕರಿಂದ, ಸ್ನೇಹಿತರಿಂದ ಮತ್ತು ಸಂಬಂಧಿಕರಿಂದ ಹಣ ಪಡೆಯುವುದೂ ಸಾಮಾನ್ಯ. ಕೆಲವು ದೇಶಗಳಲ್ಲಿ ಸರ್ಕಾರಗಳು ಪರಿಮಿತ ಗಾತ್ರದಲ್ಲಿ ಈ ಕೈಗಾರಿಕೆಗಳಿಗೆ ಹಣ ಸಹಾಯ ಮಾಡುತ್ತವೆ. ಪರಿಸ್ಥಿತಿಗಳಲ್ಲಿ ಸಹಕಾರ ಸಂಘಗಳು ಹಣವನ್ನೂ ಕಚ್ಚಾ ಸಾಮಗ್ರಿಯನ್ನೂ ಒದಗಿಸುತ್ತವೆ. ಭಾರತದಲ್ಲಿ ಈಗ ವಾಣಿಜ್ಯ ಬ್ಯಾಂಕುಗಳು ಮತ್ತು ಸಹಕಾರಿ ಬ್ಯಾಂಕುಗಳು ಇವಕ್ಕೆ ಹಣ ಒದಗಿಸಲು ಆಸಕ್ತಿ ವಹಿಸುತ್ತಿವೆ. ಇಷ್ಟಾದರೂ ಗುಡಿಸಿಲು ಕೈಗಾರಿಕೆಗಳ ಹಣಕಾಸಿನ ಸ್ಥಿತಿ ತೃಪ್ತಿಕರವಾಗಿಲ್ಲವೆಂದೇ ಹೇಳಬೇಕು.



ಬೆತ್ತದ ಕೆಲಸ


ಕಚ್ಚಾ ಸಾಮಗ್ರಿಯನ್ನು ಹೊಂದಿಸಿಕೊಳ್ಳುವುದು ಗುಡಿಸಿಲು ಕೈಗಾರಿಕೆಗಳ ಮತ್ತೊಂದು ಮುಖ್ಯ ಸಮಸ್ಯೆ. ವಿವಿಧ ವಸ್ತುಗಳ ತಯಾರಿಕೆಯಲ್ಲಿ ತೊಡಗಿರುವ ಅವಕ್ಕೆ ನಾನಾ ಬಗೆಯ ಕಚ್ಚಾ ಸಾಮಗ್ರಿಗಳು ಬೇಕಾಗುತ್ತವೆ. ಕಚ್ಚಾ ಸಾಮಗ್ರಿಕೊಳ್ಳಲು ಮತ್ತು ಸಾಕಷ್ಟು ಶೇಖರಿಸಲು ಹಣ ಇರುವುದಿಲ್ಲ. ಈ ವಿಚಾರದಲ್ಲಿ ಬೃಹದ್ಗಾತ್ರ ಕೈಗಾರಿಕೆಗಳ ಸ್ಥಿತಿ ಉತ್ತಮವಾದದ್ದು. ಹೆಚ್ಚು ಗಾತ್ರದಲ್ಲಿ ಕಚ್ಚಾ ಸಾಮಗ್ರಿಯನ್ನೂ ತಮಗೆ ಬೇಕಾದ ಇತರ ವಸ್ತುಗಳನ್ನೂ ಕೊಳ್ಳುತ್ತವೆ. ಆದ್ದರಿಂದ ಆ ಕೈಗಾರಿಕೆಗಳಿಗೆ ಅವನ್ನು ಕೊಳ್ಳುವಾಗ ಬೆಲೆಯಲ್ಲಿ ಮಿಗಿತಾಯವಾಗುತ್ತದೆ. ಗುಡಿಸಿಲು ಕೈಗಾರಿಕೆಗಳಿಗೆ ಈ ಅವಕಾಶಗಳಿರುವುದಿಲ್ಲ. ಈ ಉತ್ಪಾದಕರು ಕೆಲವು ವಾರಗಳಿಗೆ ಸಾಕಾಗುವಷ್ಟು ಕೂಡ ಕಚ್ಚಾ ಸಾಮಗ್ರಿಯನ್ನು ಕೊಂಡು ಶೇಖರಿಸುವುದಕ್ಕಾಗುವುದಿಲ್ಲ. ಅಲ್ಲದೆ ಇವರು ಅವನ್ನು ಅಲ್ಪ ಪ್ರಮಾಣಗಳಲ್ಲಿ ಕೊಳ್ಳುವುದರಿಂದ ಒಟ್ಟು ಕೊಳ್ಳುವಿಕೆಯ ಅನುಕೂಲಗಳು ಲಭ್ಯವಾಗುವುದಿಲ್ಲ. ಗುಡಿಸಿಲು ಕೈಗಾರಿಕೆಯ ಉತ್ಪಾದಕರು ತಮಗೆ ಅಗತ್ಯವಾದ ಕಚ್ಚಾ ಸಾಮಗ್ರಿಯನ್ನು ವರ್ತಕರಿಂದಲೋ ದಳ್ಳಾಳಿಗಳ ಮೂಲಕವೋ ಪಡೆಯುತ್ತಾರೆ. ತಾವು ತಯಾರಿಸಿದ ವಸ್ತುಗಳನ್ನು ಸಾಮಾನ್ಯವಾಗಿ ಅವರಿಗೇ ಮಾರುತ್ತಾರೆ. ಕೆಲವು ವೇಳೆ ಕಚ್ಚಾಸಾಮಗ್ರಿಯನ್ನು ಸ್ಥಳೀಯ ವರ್ತಕರಿಂದ ಸಾಲದ ಮೇಲೆ ಪಡೆಯುತ್ತಾರೆ. ತಯಾರಿಸಿದ ವಸ್ತುಗಳನ್ನು ಮಾರಿದ ಮೇಲೆ ಅವರಿಗೆ ಹಣ ಸಂದಾಯ ಮಾಡುತ್ತಾರೆ. ಕಚ್ಚಾಸಾಮಗ್ರಿಯ ಮತ್ತು ಉತ್ಪಾದನೆಗೆ ಅಗತ್ಯವಾದ ಇತರ ವಸ್ತುಗಳ ಪೂರೈಕೆ ಸಾಕಾಗದೆ ಗುಡಿಸಿಲು ಕೈಗಾರಿಕೆಗಳ ಉತ್ಪಾದನೆ ಆಗಾಗ್ಗೆ ನಿಲ್ಲುವುದು ಸಾಮಾನ್ಯ.

ಗುಡಿಸಿಲು ಕೈಗಾರಿಕೆಗಳಲ್ಲಿ ಉತ್ಪಾದಿಸಿದ ಪದಾರ್ಥಗಳನ್ನು ಮಾರಲು ವ್ಯವಸ್ಥಿತ ಮಾರುಕಟ್ಟೆಗಳಿಲ್ಲ. ಅವುಗಳ ಉತ್ಪಾದಕರು ಬೃಹದ್ಗಾತ್ರ ಕೈಗಾರಿಕೆಗಳಂತೆ, ತಮ್ಮ ಸರಕುಗಳ ಮಾರಾಟಕ್ಕೆ ಸೂಕ್ತವಾದ ಮತ್ತು ಸಂಘಟಿತವಾದ ಏರ್ಪಾಡು ಮಾಡಲು ಶಕ್ತರಲ್ಲ. ಅನೇಕ ವೇಳೆ ಸರಕುಗಳನ್ನು ನೇರವಾಗಿ ತಾವೇ ತಮ್ಮ ಹಳ್ಳಿಯ ಅಥವಾ ಸುತ್ತಮುತ್ತಲಿನ ಹಳ್ಳಿಗಳ ಗ್ರಾಹಕರಿಗೆ ವಿಕ್ರಯಿಸುತ್ತಾರೆ. ಕೆಲವರು ಹತ್ತಿರದ ಸಂತೆಗಳಿಗೆ ಸರಕುಗಳನ್ನು ತೆಗೆದುಕೊಂಡು ಹೋಗಿ ವಿಕ್ರಯಿಸುತ್ತಾರೆ. ಹಲವೊಮ್ಮೆ ಸರಕುಗಳನ್ನು ಪಟ್ಟಣಗಳಲ್ಲಿಯ ಸಗಟು ವ್ಯಾಪಾರಿಗೋ ಚಿಲ್ಲರೆ ವ್ಯಾಪಾರಿಗೋ ವಿಕ್ರಯಿಸುವುದುಂಟು. ದಳ್ಳಾಳಿಗಳನ್ನು ಅಥವಾ ಬಂಡವಾಳಿಗರನ್ನು ಆಶ್ರಯಿಸುವ ಸಂದರ್ಭಗಳಿಲ್ಲದಿಲ್ಲ. ಅವರಿಂದ ಸಾಲವನ್ನೊ ಕಚ್ಚಾ ಸಾಮಗ್ರಿಯನ್ನೊ ಪಡೆದಿದ್ದು, ತಾವು ಉತ್ಪಾದಿಸಿದ ಸರಕುಗಳನ್ನು ಅವರಿಗೇ ಒಪ್ಪಿಸುವುದುಂಟು. ಅವರು ಆ ಸಾಮಾನುಗಳನ್ನು ಸ್ಥಳೀಯ ಮಾರುಕಟ್ಟೆಗಳಲ್ಲೋ ದೂರದ ಮಾರುಕಟ್ಟೆಗಳಲ್ಲೋ ವಿಕ್ರಯಿಸಿ ಹೆಚ್ಚು ಲಾಭ ಪಡೆಯುವುದುಂಟು. ಗುಡಿಸಿಲು ಕೈಗಾರಿಕೆಗಳ ಸರಕುಗಳ ಮಾರಾಟ ಕಷ್ಟವಿರುವುದರಿಂದ ಕೆಲವು ದೇಶಗಳಲ್ಲಿ ಸರ್ಕಾರಗಳು ಇವುಗಳ ಮಾರಾಟಕ್ಕೆ ಸಂಸ್ಥೆಗಳನ್ನು ಸ್ಥಾಪಿಸಿವೆ. ಸಹಕಾರ ಸಂಘಗಳೂ ಇವುಗಳ ಮಾರಾಟಕ್ಕೆ ಸಹಾಯ ಮಾಡುತ್ತವೆ. ಗುಡಿಸಿಲು ಕೈಗಾರಿಕೆಗಳಲ್ಲಿ ಉತ್ಪಾದಿಸಿದ ಹಲವು ಸರಕುಗಳಿಗೆ ಅಂತರರಾಷ್ಟ್ರೀಯ ಮಾರುಕಟ್ಟೆಯುಂಟು.

**ವಿವಿಧ ದೇಶಗಳಲ್ಲಿ:** ಹಿಂದುಳಿದ ದೇಶಗಳಲ್ಲಿ ಮಾತ್ರವಲ್ಲದೆ ಆರ್ಥಿಕಾಭಿವೃದ್ಧಿ ಹೊಂದಿದ ದೇಶಗಳಲ್ಲೂ ಗುಡಿಸಿಲು ಕೈಗಾರಿಕೆಗಳು ವ್ಯಾಪಕವಾಗಿವೆ. ದೊಡ್ಡ ಯಂತ್ರಗಳನ್ನು ಸ್ಥಾಪಿಸಲಾಗದ, ಸಣ್ಣ ಹಾಗೂ ಸೂಕ್ಷ್ಮ ಯಂತ್ರಗಳನ್ನು ಬಳಸಬೇಕಾಗಿರುವ, ಕೌಶಲಪೂರ್ಣವಾದ, ಉತ್ಪಾದನ ಕ್ಷೇತ್ರಗಳಲ್ಲಿ ಗುಡಿಸಿಲು ಕೈಗಾರಿಕೆಗಳಿವೆ. ಕೆಲವು ಗ್ರಾಹಕರು ಗುಡಿಸಿಲು ಕೈಗಾರಿಕೆಗಳ ವಸ್ತುಗಳನ್ನೇ ಬೇಡುವುದರಿಂದ ಕೆಲವು ವಲಯಗಳಲ್ಲಿ ಈ ಕೈಗಾರಿಕೆಗಳು ಉಳಿದುಕೊಂಡು ಬಂದಿವೆ. ಆರ್ಥಿಕವಾಗಿ ಹಿಂದುಳಿದಿರುವ ದೇಶಗಳಲ್ಲಿ ಕೆಲವು ಮುಖ್ಯ ಕಾರಣಗಳಿಗಾಗಿ ಗುಡಿಸಿಲು ಕೈಗಾರಿಕೆಗಳಿಗೆ ಉತ್ತೇಜನ ಕೊಡಲಾಗುತ್ತಿದೆ. ಈ ಕೈಗಾರಿಕೆಗಳು ನಿರುದ್ಯೋಗ ಸಮಸ್ಯೆಯನ್ನು ದಮನ ಮಾಡಲು ಸಹಾಯಕವಾಗುತ್ತವೆ. ಸ್ಥಳೀಯವಾಗಿ ದೊರೆಯುವ ಕೌಶಲ, ಕಚ್ಚಾಸಾಮಗ್ರಿ ಮುಂತಾದವುಗಳನ್ನು ಉಪಯೋಗಿಸಿಕೊಂಡು ಗ್ರಾಹಕರಿಗೆ ಬೇಕಾದ ವಸ್ತುಗಳನ್ನು ತಯಾರಿಸಿ ಅವರ ಬೇಡಿಕೆಗಳನ್ನು ಇವು ಪೂರೈಸುತ್ತವೆ. ದೇಶದ ಐಶ್ವರ್ಯ ಮತ್ತು ವರಮಾನಗಳ ವಿತರಣೆಯಲ್ಲಿ ಅಸಮತೆಯನ್ನು ಕಡಿಮೆ ಮಾಡಲು ಈ ಕೈಗಾರಿಕೆಗಳು ಸಹಾಯಕವಾಗುವುವೆಂದು ನಂಬಲಾಗಿದೆ. ಈ ಕಾರಣಗಳಿಗಾಗಿ ಹಿಂದುಳಿದ ರಾಷ್ಟ್ರಗಳು ಈ ಕೈಗಾರಿಕೆಗಳ ಅಭಿವೃದ್ಧಿಗೆ ಶ್ರಮಿಸುತ್ತಿವೆ. ಗುಡಿಸಿಲು ಕೈಗಾರಿಕೆಗಳು ಎಲ್ಲ ದೇಶಗಳಲ್ಲೂ ಕಂಡುಬಂದರೂ ಅವುಗಳಲ್ಲಿ ತೊಡಗಿಸಿರುವ ಬಂಡವಾಳ, ಕೆಲಸ ಮಾಡುವ ಕೂಲಿಗಾರರು, ರಾಷ್ಟ್ರದ ವರಮಾನಕ್ಕೆ ಅವುಗಳ ಕೊಡುಗೆ ಇವುಗಳ ಬಗ್ಗೆ ಖಚಿತವಾದ ಅಂಕಿಅಂಶಗಳು ದೊರೆಯುವುದಿಲ್ಲ. ಪ್ರಪಂಚದ ಅತ್ಯಂತ ಮುಂದುವರಿದ ರಾಷ್ಟ್ರವಾದ ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲೂ ಗುಡಿಸಿಲು ಕೈಗಾರಿಕೆಗಳು ಇವೆ. ಆ ದೇಶದಲ್ಲಿ ಈ ಕೈಗಾರಿಕೆಗಳು ನಗರಗಳಲ್ಲೂ ಪಟ್ಟಣಗಳಲ್ಲೂ ವ್ಯಾಪಕವಾಗಿವೆ. ಅವು ವ್ಯವಸಾಯ ಮತ್ತು ಗಣಿಗಾರಿಕೆ ಕ್ಷೇತ್ರಗಳಲ್ಲಿ ಅಪರೂಪ. ಆ ದೇಶದಲ್ಲಿ ಸಾಮಾನ್ಯವಾಗಿ ಕಸೂತಿ, ಕೃತಕ ಹೂ, ಗುಂಡು ಸೂಜಿ, ಗುಂಡಿಗಳು, ಮಕ್ಕಳ ಬಟ್ಟೆ, ಆಟಿಕೆ ಮತ್ತು ಗೊಂಬೆ, ರಟ್ಟಿನ ಪೆಟ್ಟಿಗೆ, ಆಹಾರ, ಒಡವೆ, ಕುಂಚ ಇತ್ಯಾದಿಗಳ ತಯಾರಿಕೆಯಲ್ಲಿ ತೊಡಗಿವೆ. ಕೆಲವು ವ್ಯವಸಾಯ ಪ್ರದೇಶಗಳಲ್ಲಿ ರೈತರ ಹೆಂಗಸರು ಬಟ್ಟೆಗಳನ್ನು ಮಾಡುವುದರಲ್ಲೂ, ಹೊಗೆಸೊಪ್ಪಿನ ವಸ್ತುಗಳ ತಯಾರಿಕೆಯಲ್ಲಿಯೂ ತೊಡಗಿರುತ್ತಾರೆ. ಅವರಿಗೆ ಬೇಕಾದ ಕಚ್ಚಾ ಸಾಮಗ್ರಿಗಳನ್ನು ನಗರದ ಉತ್ಪಾದಕರು ಒದಗಿಸುತ್ತಾರೆ. ಅನಂತರ ಅವರು ತಯಾರಿಸಿದ ವಸ್ತುಗಳನ್ನು ಮಾರಾಟಕ್ಕಾಗಿ ಸಂಗ್ರಹ ಮಾಡುತ್ತಾರೆ. ಬ್ರಿಟನ್ನಿನಲ್ಲಿ ಗುಡಿಸಿಲು ಕೈಗಾರಿಕೆಗಳು ಬಹಳ ಕಡಿಮೆ. ಇರುವ ಗುಡಿಸಿಲು ಕೈಗಾರಿಕೆಗಳಲ್ಲಿ ಬಹುಪಾಲು ಉಡುಪುಗಳ ತಯಾರಿಕೆಯಲ್ಲಿ ತೊಡಗಿವೆ. ಕೆಲವು ಕಲಾತ್ಮಕ ವಸ್ತುಗಳೂ ತಯಾರಾಗುತ್ತವೆ. ಫ್ರಾನ್ಸಿನಲ್ಲಿ ಗುಡಿಸಿಲು ಕೈಗಾರಿಕೆಗಳು ಬಹಳವಾಗಿವೆ. ಅವುಗಳಲ್ಲಿ ಹೆಚ್ಚು ಮಂದಿ ಕೆಲಸಗಾರರು ಉಡುಪುಗಳ ತಯಾರಿಕೆ ಮತ್ತು ಕಸೂತಿ ಕೆಲಸದಲ್ಲಿ ತೊಡಗಿದ್ದಾರೆ. ಗುಡಿಸಲು ಕೈಗಾರಿಕೆಗಳಲ್ಲಿ ಪಾದರಕ್ಷೆ ತಯಾರಿಕೆ ಸಾಮಾನ್ಯ. ಪಾದರಕ್ಷೆ ಉದ್ಯಮಗಳಲ್ಲಿ ಬಹಳವಾಗಿ ಗಂಡಸರೇ ಕೆಲಸ ಮಾಡುತ್ತಾರೆ. ಇವು ನಗರಗಳ ಬಳಿ ಹೆಚ್ಚು. ಪ್ಯಾರಿಸ್ ಮತ್ತು ಇತರ ಮುಖ್ಯ ನಗರಗಳಲ್ಲಿ ಅನೇಕ ಗುಡಿಸಿಲು ಕೈಗಾರಿಕೆಗಳು ಕೃತಕ ಹೂಗಳು ಮತ್ತು ಇತರ ಕಲಾತ್ಮಕ ವಸ್ತುಗಳನ್ನು ತಯಾರಿಸುತ್ತವೆ. ಇನ್ನು ಕೆಲವು ಸರಿಗೆ, ಗರಿ ಕೆಲಸ, ಪೂಜಾವಸ್ತುಗಳು, ಒಡವೆ, ಕೆತ್ತನೆ ಕೆಲಸ, ಕೊಡೆ ಇತ್ಯಾದಿಗಳ ತಯಾರಿಕೆಯಲ್ಲಿ ತೊಡಗಿವೆ. ರಷ್ಯದಲ್ಲಿ ಕ್ರಾಂತಿಗೆ ಮುಂಚೆ ಗುಡಿಸಿಲು ಕೈಗಾರಿಕೆಗಳು ಅತ್ಯಂತ ವ್ಯಾಪಕವಾಗಿದ್ದುವು. ಆಗ ಅವು ಬಹುಮಟ್ಟಿಗೆ ಕೃಷಿಗೆ ಅಗತ್ಯವಾದ ವಸ್ತುಗಳನ್ನು– ಮರದ ಸಾಮಾನು, ಮರದ ತಟ್ಟೆಗಳು ಮತ್ತು ಚಮಚ, ಆಟಿಕೆ, ಚಾಪೆ ಮುಂತಾದವನ್ನು–ಉತ್ಪಾದಿಸುತ್ತಿದ್ದುವು. ಚರ್ಮ ಹದಮಾಡುವುದು, ಕುರಿ ಚರ್ಮದಿಂದ ಉಡುಪು ತಯಾರಿಕೆ, ಇಟ್ಟಿಗೆ ಮತ್ತು ಹೆಂಚು ತಯಾರಿಕೆ–ಇವು ಇನ್ನೂ ಕೆಲವು ಕೈಗಾರಿಕೆಗಳು. ಈಚಿನ ವರ್ಷಗಳಲ್ಲಿ ರಷ್ಯದಲ್ಲಿ ಗುಡಿಸಿಲು ಕೈಗಾರಿಕೆಗಳು ಕ್ಷೀಣಿಸುತ್ತಿರುವಂತೆ ಕಾಣುತ್ತದೆ. ಈಗ ಇರುವ ಗುಡಿಸಿಲು ಕೈಗಾರಿಕೆಗಳಿಗೆ ಸರ್ಕಾರ ಮತ್ತು ಸಹಕಾರ ಸಂಘಗಳು ಕಚ್ಚಾ ಸಾಮಗ್ರಿ ಮತ್ತು ಬಂಡವಾಳ ಒದಗಿಸುತ್ತವೆ. ಇವು ಉತ್ಪತ್ತಿ ಮಾಡಿದ ವಸ್ತುಗಳನ್ನು ಸರ್ಕಾರ ಅಥವಾ ಸಹಕಾರ ಸಂಘಗಳು ಸಂಗ್ರಹಿಸಿ ಮಾರಾಟಕ್ಕೆ ತಕ್ಕ ವ್ಯವಸ್ಥೆ ಮಾಡುತ್ತವೆ.

ಭಾರತದಲ್ಲಿ ಗುಡಿಸಿಲು ಕೈಗಾರಿಕೆಗಳು ಪ್ರಾಚೀನ ಕಾಲದಿಂದಲೂ ಬಂದಿವೆ. ಬ್ರಿಟಿಷರ ಕಾಲದಲ್ಲಿ ಯಂತ್ರೋದ್ಯಮ ಕೈಗಾರಿಕೆಗಳ ಪೈಪೋಟಿಯಿಂದ ಇವು ಕ್ಷೀಣ ಸ್ಥಿತಿಗೆ ಬಂದಿದ್ದವು. ಸ್ವಾತಂತ್ರ್ಯದ ಅನಂತರ ಕೇಂದ್ರ ಸರ್ಕಾರ ಮತ್ತು ಸ್ಥಳೀಯ ಸರ್ಕಾರಗಳು ಗೃಹ ಕೈಗಾರಿಕೆಗಳಿಗೆ ಉತ್ತೇಜನ ನೀಡಿ ಅವುಗಳ ಅಭಿವೃದ್ಧಿಗೆ ನಾನಾ ರೀತಿಯಲ್ಲಿ ಶ್ರಮಿಸುತ್ತಿವೆ. ಈ ಕೈಗಾರಿಕೆಗಳು ನಾನಾ ವಿಧವಾದ ಉಪಯುಕ್ತವಾದ ಮತ್ತು ಭೋಗವಸ್ತುಗಳನ್ನು ತಯಾರಿಸುತ್ತಿವೆ. ಗುಡಿಸಿಲು ಕೈಗಾರಿಕೆಗಳು ಮನೆಗೆಲಸದ ಪದಾರ್ಥಗಳಾದ ಕೊಡಗಳು, ನೀರಿನ ಹೂಜಿಗಳು, ಲೋಟಗಳು, ತಟ್ಟೆಗಳು ಮೊದಲಾದವನ್ನು ಹಿತ್ತಾಳೆ ಮತ್ತು ತಾಮ್ರದಿಂದ ತಯಾರಿಸುತ್ತಿವೆ. ಚಿನಿವಾರಿಕೆ ಭಾರತದ ಅತಿ ಪ್ರಾಚೀನ ಗುಡಿಸಲು ಕೈಗಾರಿಕೆ, ಇವು ಹಳ್ಳಿಗಳು, ಪಟ್ಟಣ ಮತ್ತು ನಗರಗಳಲ್ಲೂ ಹರಡಿವೆ. ಇವು ಚಿನ್ನ ಮತ್ತು ಬೆಳ್ಳಿಯಿಂದ ಅನೇಕ ವಿಧವಾದ ಒಡವೆಗಳನ್ನು ತಯಾರಿಸುತ್ತಿವೆ. ಅಗರಬತ್ತಿ ಮತ್ತು ಧೂಪ ಸರಕು ಕೈಗಾರಿಕೆ ಕೆಲವು ಸಂಸಾರಗಳಲ್ಲಿ ಮಾತ್ರ ಕಾಣಬರುತ್ತದೆ. ಅವರಲ್ಲಿ ಮುಸಲ್ಮಾನರೇ ಹೆಚ್ಚು. ಶ್ರೀಗಂಧದ ಕೆತ್ತನೆ ಕೆಲಸ ಮತ್ತೊಂದು ಚಿರಪರಿಚಿತ ಗೃಹಕೈಗಾರಿಕೆ. ಸುಂದರ ಚಿತ್ರಗಳು, ದೇವರ ಮತ್ತು ಇತರ ಪ್ರತಿಮೆಗಳು ಶ್ರೀಗಂಧದ ಮರದಿಂದ ತಯಾರಾಗುತ್ತವೆ. ಇನ್ನೂ ಕೆಲವು ಗೃಹ ಕೈಗಾರಿಕೆಗಳು ಬೊಂಬು ಮತ್ತು ಬೆತ್ತದ ಕೆಲಸಗಳಲ್ಲಿ ತೊಡಗಿವೆ. ಅವು ಉಪಯುಕ್ತವಾದ ನಾನಾ ರೀತಿಯ ಬುಟ್ಟಿಗಳು, ಕುರ್ಚಿಗಳು, ಅಚ್ಚ ಮಣೆಗಳು ಮತ್ತು ಮಂಚಗಳನ್ನು ಸಹ ಉತ್ಪಾದಿಸುತ್ತವೆ. ಕೊಂಬಿನ ಬಾಚಣಿಗೆ, ಹೂವಿನ ಕುಂಡಗಳು, ಅಳತೆಕೋಲುಗಳು, ಆಟದ ಸಾಮಾನುಗಳು, ಹಕ್ಕಿಗಳು, ಬೂದಿ ಹರಿವಾಣಗಳು ಮುಂತಾದ ಉಪಯುಕ್ತವಾದ ಸಾಮಾನುಗಳ ತಯಾರಿಕೆಯೂ ಗುಡಿಸಲು ಕೈಗಾರಿಕೆಯೇ. ಗ್ರಾಮಪ್ರದೇಶಗಳಲ್ಲಿ ಅನೇಕ ಗುಡಿಸಿಲು ಕೈಗಾರಿಕೆಗಳುಂಟು. ಅವುಗಳಲ್ಲಿ ಬಹುಪಾಲು ಕೃಷಿ ಉಪಕರಣಗಳ ತಯಾರಿಕೆಯಲ್ಲಿ ತೊಡಗಿವೆ. (ಎಸ್.ಎನ್.ಎನ್.)

**ಗುಡ್ನಾಪುರ :** ಉತ್ತರಕನ್ನಡ ಜಿಲ್ಲೆ ಶಿರಸಿ ತಾಲ್ಲೂಕಿನಲ್ಲಿ ಬನವಾಸಿಯ ವಾಯವ್ಯಕ್ಕೆ ಸು. 8 ಕಿಮೀ ದೂರದಲ್ಲಿರುವ ಗ್ರಾಮ. ಕದಂಬರ ಕಾಲದಲ್ಲಿ ಇದು ಬನವಾಸಿ ರಾಜಧಾನಿಯ ಭಾಗವಾಗಿದ್ದಂತೆ ತೋರುತ್ತದೆ. ಇಲ್ಲಿಯ ವೀರಭದ್ರ ದೇವಾಲಯದ ಬಳಿ ಸು. 6 ಮೀ ಎತ್ತರದ ಭಗ್ನವಾದ ಒಂದು ಶಾಸನ ಕಂಬವಿದೆ. ಕಂಬದ ಮೇಲ್ಭಾಗ ಒಡೆದು ಹೋಗಿರುವುದರಿಂದ ಇಡೀ ಕಂಬದ ಉದ್ದ ಎಷ್ಟಿತ್ತೆಂದು ಹೇಳಲಾಗದು.



ಅರಮನೆ ಮತ್ತು ದೇವಾಲಯದ ಆವರಣ

ಕಂಬದ ನಾಲ್ಕೂ ಮುಖಗಳಲ್ಲಿ ಶಾಸನವೊಂದನ್ನು ಕೆತ್ತಿದೆ. ಇದು ಕದಂಬ ರವಿವರ್ಮನ (ಸು.485–519) ಶಾಸನ. ಇದರಿಂದ ಕದಂಬ ಮಯೂರಶರ್ಮನ ತಂದೆ ಬಂಧುಷೇಣ, ತಾತ ವೀರಶರ್ಮ ಎಂಬ ಹೊಸ ವಿಷಯಗಳು ತಿಳಿದುಬಂದಿವೆ. ಶಾಸನದಲ್ಲಿ ರವಿವರ್ಮ ಮನ್ಮಥನಿಗಾಗಿ ಆಲಯವೊಂದನ್ನು ಕಟ್ಟಿಸಿದನೆಂದು ಹೇಳಿದೆ. ಜಿನಾಲಯವೆಂದು ಓದಿದಲ್ಲಿ ಆಲಯ ಬಾಹುಬಲಿಯದೆಂದು, ಬಾಹುಬಲಿಯ ಕಲ್ಪನೆ ಮತ್ತು ಒಂದು ದೇವಾಲಯ 6ನೆಯ ಶತಮಾನದಲ್ಲಿಯೇ ಇತ್ತು ಎಂದು ದೃಢವಾಗುತ್ತದೆ. ಪ್ರಸ್ತುತ ಶಾಸನದಲ್ಲಿ ಗುಡ್ನಾಪುರವನ್ನು ಗುಡ್ಡತಟಾಕ ಎಂದು ಕರೆಯಲಾಗಿದೆ. ಈಗಲೂ ಗುಡ್ನಾಪುರಕ್ಕೆ ಹೊಂದಿದಂತೆ ಆ ಭಾಗದಲ್ಲಿಯ ವಿಸ್ತಾರವಾದ ದೊಡ್ಡಕೆರೆಯನ್ನು ಶಾಸನೋಲ್ಲೇಖಿತ ಗುಡ್ಡತಟಾಕವೆಂದು ಗುರುತಿಸಬಹುದು.


ಈ ಶಾಸನದಲ್ಲಿ ಗಮನಾರ್ಹವಾದ ಅನೇಕ ಸಂಗತಿಗಳನ್ನು ಪ್ರಸ್ತಾಪಿಸಿದೆ. ಶಾಸನ ಹತ್ತಿರದಲ್ಲಿ ಅರಸರ ಅರಮನೆಯಿದ್ದು ಅದರ ಬದಿಯಲ್ಲಿ ನಾಟ್ಯಶಾಲೆಯಿರುವ ವಿಷಯ, ಕಲ್ಲಿಲ್ಲಿ ಎಂಬ ಗ್ರಾಮದಲ್ಲಿ ಪದ್ಮಾವತಿ ಚೈತ್ಯಾಲಯವಿರುವ ವಿಷಯ, ಪದ್ಮಾವತಿ ಪಾರ್ಶ್ವನಾಥ ತೀರ್ಥಂಕರ ಯಕ್ಷಿ ವಿಷಯ (ಇದುವರೆಗೆ ತಿಳಿದಮಟ್ಟಿಗೆ ಈ ಪದ್ಮಾವತಿ ಯಕ್ಷಿಯ ಪ್ರತ್ಯೇಕ ಚೈತ್ಯಾಲಯ ಅತ್ಯಂತ ಪ್ರಾಚೀನವಾದದ್ದು ಇದೊಂದೆ) ದಾಖಲಾಗಿದೆ. ಈ ಶಾಸನದಲ್ಲಿ 1–10ರವರೆಗಿನ ಸಂಖ್ಯೆಗಳು ಉಲ್ಲೇಖಗೊಂಡಿವೆ. (ಬಿ.ಆರ್.ಜಿ.)

ಈ ನೆಲೆಯ ಅಂಚಿನಲ್ಲಿದ್ದ ಒಂದು ಬಂಡೆಯ ಮೇಲೆ ಕುತೂಹಲಕರವಾದ ರೇಖಾಚಿತ್ರಗಳಿವೆ. ಅವು ವಜ್ರ, ನಾಲ್ಕು ಸಮಬಾಹು ಚತುರ್ಭುಜವುಳ್ಳ ಒಂದು ಆಯಾತಾ ಕೃತಿ, ಕೊನೆಯಿಲ್ಲದ ನಾಲ್ಕು ಗಂಟಿನಾಕೃತಿ, ಅಕ್ಕಪಕ್ಕದಲ್ಲಿ ಚಕ್ರಗಳು. ನಾಲ್ಕು ಗಂಟಿನಾಕೃತಿ ಚಿತ್ರ ಮೊಹೆಂಜೋದಾರೊದಲ್ಲಿಯ ಹರಪ್ಪ ನಾಗರಿಕತೆಯ ಎರಡು ತಾಮ್ರದ ಬಿಲ್ಲೆಗಳ ಮೇಲೂ ಇದೆ. ಪ್ರಾಯಶಃ ಶ್ರೀವತ್ಸ ಚಿಹ್ನೆ ಸೂಕ್ಷ್ಮ ಸಂಕೇತವೆಂದು ಕಾಣುತ್ತದೆ.

ಉತ್ಖನನ: ಅಂತಃಪುರದ ಸಹಿತ ಅರಮನೆ, ನಾಟ್ಯಶಾಲೆ, ಮನ್ಮಥ ದೇವಾಲಯ/ಜಿನಾಲಯ ಮುಂತಾದವುಗಳ ಶಾಸನದ ಉಲ್ಲೇಖಗಳನ್ನು ಗಮನಿಸಿ ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ ಬೆಂಗಳೂರು ವಿಭಾಗ ಶಾಸನವಿದ್ದ ನೆಲೆಯಲ್ಲಿ 1994–96ರಲ್ಲಿ ಉತ್ಖನನ ನಡೆಸಿತು. ಸ್ವಾರಸ್ಯವೆಂದರೆ ಶಾಸನದಲ್ಲಿ ಉಲ್ಲೇಖಗೊಂಡಿರುವಂತೆ ವ್ಯವಸ್ಥಿತವಾಗಿ ಇಟ್ಟಿಗೆಯಿಂದ ನಿರ್ಮಿಸಿದ ಪ್ರದಕ್ಷಿಣಾಪಥ, ಸಭಾಮಂಟಪ ಮತ್ತು ಗರ್ಭಗೃಹವುಳ್ಳ ಮನ್ಮಥ ಆಲಯ, ಅರಮನೆ ಮತ್ತು ನಾಟ್ಯಶಾಲೆ ಮುಂತಾದ ಅಪರೂಪದ ವಾಸ್ತುಶಿಲ್ಪ ವಿಶೇಷಗಳು ಹಾಗೂ ಇತಿಹಾಸ ಕಾಲದ ಲೌಕಿಕ ಕಟ್ಟಡಗಳಿದ್ದುದ್ದು.

ಇಲ್ಲಿ ಕೆಲವು ಅಪೂರ್ವ ವಿಗ್ರಹಗಳು ದೊರೆತಿವೆ. ಕೆರೆಯ ಸಮೀಪದಲ್ಲಿ ಕೆಸರಿನಲ್ಲಿ ಹುದುಗಿಹೋಗಿದ್ದ ಸು. 12ನೆಯ ಶತಮಾನದ ಒಂದು ಜಿನವಿಗ್ರಹ ಮತ್ತು ಪ್ರಾಯಶಃ ಕುಳಿತ ಭಂಗಿಯಲ್ಲಿಯ ಯಕ್ಷ–ಯಕ್ಷಿಯರ ಚೆಲುವಾದ ಶಿಲಾಮೂರ್ತಿಗಳಿವೆ. ಜಿನಮೂರ್ತಿ ಸಿದ್ಧಾಸನದಲ್ಲಿದೆ. ಆದರೆ ಅದರ ಶಿರ ಮತ್ತು ಬಾಹುಗಳು ಒಡೆದು ಹೋಗಿವೆ. ಯಕ್ಷ ವಿಗ್ರಹ ಕುಸುರಿನ ಕೆತ್ತನೆಯುಳ್ಳ ಕಿರೀಟ ಹಾಗೂ ಹಾರಗಳನ್ನು ಧರಿಸಿದೆ. ಇದರಂತೆಯೇ ಯಕ್ಷಿ ವಿಗ್ರಹವೂ ಇವಲ್ಲದೆ ಊರೊಳಗೆ ಸು. 2ನೆಯ ಶತಮಾನದ ಕುಬ್ಜ ಯಕ್ಷ ಶಿಲಾಮೂರ್ತಿಯಿದೆ. ಕುಬ್ಜವಿಗ್ರಹ ಸ್ಥೂಲವಾದ ದುಂಡುಶರೀರದ ಪುರುಷನದು. ಉಬ್ಬಿದ ಹೊಟ್ಟೆ, ಕುತ್ತಿಗೆ ಕಾಣಿಸದೆ ದೇಹಕ್ಕೆ ಅಂಟಿದಂತಿರುವ ಶಿರ, ಹೊಟ್ಟೆ ಮೊಣಕಾಲವರೆಗೂ ಜೋತು ಬಿದ್ದಂತಿದ್ದು, ಕಾಲುಗಳು ಪ್ರತ್ಯೇಕವಾಗಿ ಕಾಣಿಸದಿರುವುದು, ಮೇಲಕ್ಕೆತ್ತಿ ಕಟ್ಟಿದ ಗುಂಗುರುಕೂದಲು, ಕಚ್ಚೆ ಹಾಕಿ ಧೋತರ ಉಟ್ಟು ಹಲವು ಎಳೆಗಳ ಹಾರದಿಂದ ಅಲಂಕೃತವಾಗಿದೆ. ಈ ವಿಗ್ರಹಗಳು ಕಲ್ಯಾಣ ಚಾಳುಕ್ಯ ಕಾಲದ ಶಿಲ್ಪಗಳನ್ನು ಹೋಲುತ್ತವೆ. ಇದೇ ಗ್ರಾಮದಲ್ಲಿ ಒಂದೇ ಕಲ್ಲಿನಲ್ಲಿ ಕೆತ್ತಿದ ರತಿಮನ್ಮಥರ ವಿಗ್ರಹ ವೀರಭದ್ರ ದೇವಾಲಯದಲ್ಲಿ ದೊರೆತಿದ್ದು, ಮನ್ಮಥನ ಕೈಯಲ್ಲಿ ಕಬ್ಬಿನ ಜಲ್ಲೆ, ರತಿಯ ಕೈಯಲ್ಲಿ ಕಮಲದ ದಂಟು ಕಾಣಿಸುತ್ತದೆ. ಇದು ಸು. 11–12ನೆಯ ಶತಮಾನದ ವಿಗ್ರಹ. (ಎಸ್.ಜಿ.ಎಸ್.)

**ಗುಡ್‌ಇಯರ್, ಚಾರ್ಲ್ಸ್ :** 1800–60. ಅಮೆರಿಕದ ಉಪಜ್ಞೆಕಾರ. ರಬ್ಬರನ್ನು ಅನೇಕ ರಂಗಗಳಲ್ಲಿ ಉಪಯೋಗಿಸಲು ಸಾಧ್ಯವಾಗುವಂಥ ವಲ್ಕನೀಕರಣ ವಿಧಾನವನ್ನು ಕಂಡುಹಿಡಿದು ಇಂದಿನ ರಬ್ಬರ್ ಉದ್ಯಮಕ್ಕೆ ನಾಂದಿ ಹಾಕಿದವ. ಜೀವಮಾನವಿಡೀ ಸಾಲದ ಬವಣೆ, ಸೋಲಿನ ಹತಾಶೆ ಅನುಭವಿಸುತ್ತಿದ್ದರೂ ಅದಮ್ಯ ಸಾಹಸ ಪ್ರವೃತ್ತಿಯಿಂದ ಮುನ್ನುಗ್ಗಿದ ಉದ್ಯಮ ಶೀಲ ವ್ಯಕ್ತಿ. ಅಮೆರಿಕ ಸಂಯುಕ್ತ ಸಂಸ್ಥಾನಗಳ ಕನೆಕ್ಟಿಕಟ್ ಪ್ರಾಂತದ ಮುಖ್ಯ ಪಟ್ಟಣ ನ್ಯೂಹೇವನ್‌ನಲ್ಲಿ 29 ಡಿಸೆಂಬರ್ 1800ರಂದು ಜನಿಸಿದ. ಬಾಲ್ಯವನ್ನೂ ನ್ಯೂಹೇವನ್‌ನಲ್ಲಿಯೇ ಮುಗಿಸಿದ ಬಳಿಕ ವ್ಯವಸಾಯ ಉಪಕರಣ ಮತ್ತು ಇತರ ಲೋಹ ಸಲಕರಣೆಗಳ ತಯಾರಿಕೆಯಲ್ಲಿ ನಿಪುಣನಾಗಿದ್ದ ತನ್ನ ತಂದೆಯ ಸಂಸ್ಥೆಯಲ್ಲಿ ಕೆಲಸ ಮಾಡಿ (1821–30) ಅನಂತರ ಸ್ವತಂತ್ರವಾಗಿ ಕೆಲಸ ಮಾಡಲು ತೊಡಗಿದ. ಈತ ತನ್ನ ತಂದೆಯಿಂದ ಬೇರೆಯಾಗುವ ವೇಳೆಗಾಗಲೇ ರಬ್ಬರ್ ಇವನನ್ನು ಆಕರ್ಷಿಸಿತ್ತು. ಅತಿ ಶೀತ ಮತ್ತು ಅತಿ ಉಷ್ಣದ ಪರಿಸ್ಥಿತಿಗಳಲ್ಲಿಯೂ ಸಮರ್ಪಕವಾಗಿ ಕೆಲಸಮಾಡುವಂತೆ ರಬ್ಬರ್‌ನ್ನು ಮಾರ್ಪಡಿಸುವುದೇ ಇವನ ಕನಸಾಯಿತು. ಈ ಮಾರ್ಪಾಡಿಗಾಗಿ ಇವನು ಲೆಕ್ಕವಿಲ್ಲದಷ್ಟು ಪ್ರಯೋಗಗಳನ್ನು ನಡೆಸಿದ. ರಬ್ಬರ್ ನೈಟ್ರಿಕ್ ಆಮ್ಲ ಮಿಶ್ರಣಗಳೊಡನೆ ಇವನು ಮಾಡಿದ ಆರಂಭ ಪ್ರಯೋಗಗಳು ಮೊದಮೊದಲು ಆಶಾದಾಯಕವೆಂಬಂತೆ ತೋರಿದರೂ ಈ ಬಗೆಯಲ್ಲಿ ಮಾರ್ಪಡಿಸಿದ ರಬ್ಬರ್ ಅತ್ಯುಷ್ಣ ಪರಿಸ್ಥಿತಿಗಳಲ್ಲಿ ಸಮರ್ಪಕವಾಗಿರಲಿಲ್ಲ. ಅದೇ ಸಮಯದಲ್ಲಿ ನೆರೆಯೂರಾದ ರಾಕ್ಸ್ ಬರಿಯ ರಬ್ಬರ್ ಕಾರ್ಖಾನೆಗಳಲ್ಲಿ ನೇಥೇನಿಯಲ್ ಹ್ಯಾವರ್ಡ್ ಎಂಬಾತ ರಬ್ಬರಿನ ಮೇಲೆ ಗಂಧಕದ ಪರಿಣಾಮಗಳನ್ನು ಕುರಿತು ಅಭ್ಯಾಸ ಮತ್ತು ಪ್ರಯೋಗಗಳನ್ನು ನಡೆಸುತ್ತಿದ್ದ. ಹ್ಯಾವರ್ಡನ ಪರಿಚಯವಾದ ಮೇಲೆ ಆತ ಉಪಯೋಗಿಸುತ್ತಿದ್ದ ವಿಧಾನಗಳ ಮೇಲೆ ಹಕ್ಕನ್ನು ಕೊಂಡುಕೊಂಡು ಗುಡ್‌ಇಯರ್ ಆ ವಿಧಾನಗಳನ್ನು ಉತ್ತಮಗೊಳಿಸಲು ಪ್ರಯತ್ನ ಮಾಡತೊಡಗಿದ. ಈ ಪ್ರಯೋಗಗಳಲ್ಲಿ ನಿರತನಾಗಿದ್ದಾಗ 1839ರಲ್ಲಿ ಒಂದು ದಿನ ಆಕಸ್ಮಿಕವಾಗಿ ರಬ್ಬರ್–ಗಂಧಕದ ಮಿಶ್ರಣ ಗುಡ್‌ಇಯರ್‌ನ ಕೈಯಿಂದ ಹಾರಿ ಬೆಂಕಿಯಲ್ಲಿ ಬಿತ್ತು. ಬೆಂಕಿಯಲ್ಲಿ ಬಿದ್ದ ಮಿಶ್ರಣವನ್ನು ಹೊರತೆಗೆದಾಗ ಪಡೆದಿದ್ದನ್ನು ಈತ ಗಮನಿಸಿದ. ರಬ್ಬರ್‌ಗಳನ್ನು ಗಂಧಕದೊಡನೆ ಕಾಯಿಸಿ ರಬ್ಬರಿನ ಗುಣಗಳನ್ನು ಮಾರ್ಪಡಿಸುವ ಈ ವಿಧಾನವನ್ನು ಮತ್ತೆ ಹಲವಾರು ಪ್ರಯೋಗಗಳನ್ನು ಮಾಡಿ ಖಚಿತಗೊಳಿಸಿ ಪರಿಪೂರ್ಣಗೊಳಿಸಿದ. ಇದಕ್ಕೆ ವಲ್ಕನೀಕರಣವೆಂದು (ರೋಮನ್ ಪುರಾಣದಲ್ಲಿ ವಲ್ಕನ್ ಎಂದರೆ ಅಗ್ನಿದೇವತೆ) ಹೆಸರಿಟ್ಟು 1844 ರಲ್ಲಿ ತನ್ನ ಮೊದಲ ಏಕಸ್ವಾಮ್ಯವನ್ನು ಪಡೆದ. ಈ ವಿಧಾನ ಬಲು ಸರಳವಾದದ್ದರಿಂದ ಏಕಸ್ವಾಮ್ಯದ ನಿಯಮಗಳನ್ನು ಉಲ್ಲಂಘಿಸಿ ಸ್ವತಂತ್ರವಾಗಿ ವಲ್ಕನೀಕೃತ ರಬ್ಬರನ್ನು ತಯಾರಿಸುವ ಅನುಕರಣಕಾರರು ಪ್ರಪಂಚದಾದ್ಯಂತ ತಲೆ ಎತ್ತಿದರು. ಇವರ ವಿರುದ್ಧ ಕಾದಾಡಬೇಕಾಯಿತು. ಏಕಸ್ವಾಮ್ಯದ ಬರೆವಣಿಗೆಯಲ್ಲಿ ಕುಂದುಕೊರತೆಗಳಿದ್ದುದರಿಂದ ಫ್ರಾನ್ಸ್ ಮತ್ತು ಇಂಗ್ಲೆಂಡಿನ ಕೋರ್ಟುಗಳಲ್ಲಿ ಇವನಿಗೆ ಸೋಲಾಯಿತು. ಅಮೆರಿಕದ ನ್ಯಾಯಾಲಯದಲ್ಲಿ ಇವನಿಗೆ ವಿಜಯ ದೊರೆಯಿತು (1852). ಆದರೆ ಇವನಿಗೆ ಸ್ವಲ್ಪವೂ ಲಾಭವಾಗದಂತೆ ಆ ವಿಧಾನವನ್ನು ಇವನ ಅನುಮತಿಯಿಲ್ಲದೆ ಅನೇಕ ಮಂದಿ ಉಪಯೋಗಿಸಿದರು.



ತನ್ನ ಸಂಶೋಧನೆಗಳನ್ನು ಕುರಿತ 'ಗಮ್ ಇಲಾಸ್ಟಿಕ್ಸ್, ಅಂಡ್ ಇಟ್ಸ್ ವೆರೈಟೀಸ್' ಎಂಬ ಪುಸ್ತಕವನ್ನು 1853–55ರ ಅವಧಿಯಲ್ಲಿ ಬರೆದು ಎರಡು ಸಂಪುಟಗಳಾಗಿ ಪ್ರಕಟಿಸಿದ. ಗುಡ್ ಇಯರ್‌ನ ಸಂಶೋಧನೆ ಹಾಗೂ ವಿಧಾನಗಳನ್ನು ಉಪಯೋಗಿಸಿ ಅನೇಕ ಜನ ಲಕ್ಷಾಧೀಶರಾದರೂ ಈತ ಮಾತ್ರ ನಿರ್ಗತಿಕನಾಗಿಯೇ ಉಳಿದ. ಫ್ರಾನ್ಸಿನಲ್ಲಿ ಇವನಿಗೆ ಸಂಭಾವನೆ ಹಣ ಕೊಟ್ಟು ಇವನ ವಿಧಾನವನ್ನು ಉಪಯೋಗಿಸುತ್ತಿದ್ದ ಕಾರ್ಖಾನೆಯೊಂದು ದಿವಾಳಿಯೆದ್ದಿತು. ಬಾಕಿಯಿದ್ದ ಸಾಲಗಳನ್ನು ತೀರಿಸದೇ ಹೋದದ್ದರಿಂದ ಈತ ಪ್ಯಾರಿಸಿನಲ್ಲಿ ಸೆರೆಮನೆ ಕಾಣಬೇಕಾಯಿತು (1853). ಐದು ವರ್ಷಗಳ ಅನಂತರ ಮಾಡಲು ಉದ್ಯೋಗವಿಲ್ಲದೆ, ಜೀವನದಲ್ಲಿ ಪೂರ್ಣ ನಿರಾಶನಾಗಿ, ನಿರ್ಗತಿಕನಾಗಿ ನ್ಯೂಯಾರ್ಕ್ ನಗರದಲ್ಲಿ 1 ಜುಲೈ 1860ರಂದು ನಿಧನ ಹೊಂದಿದ. ಇವನ ಹೆಸರಿನಲ್ಲಿ ಗುಡ್‌ಇಯರ್ ಟೈರ್ ಅಂಡ್ ರಬ್ಬರ್ ಕಂಪನಿಯನ್ನು 1898ರಲ್ಲಿ ಸ್ಥಾಪಿಸಲಾಯಿತು. (ಕೆ.ಟಿ.ಎಸ್.)

**ಗುಡ್ರುನ್ :** ಸಾಹಿತ್ಯಾಭ್ಯಾಸಿಗಳಿಗೆ ಪರಿಚಿತವಾಗಿರುವ ಕಾವ್ಯನಾಯಿಕೆಯ ಹೆಸರು. 12ನೆಯ ಶತಮಾನದ್ದೆಂದು ವಿದ್ವಾಂಸರು ನಿರ್ಣಯಿಸಿರುವ ಎಡ (**ನೋಡಿ**) ಎಂಬ ಸ್ಕ್ಯಾಂಡಿನೇವಿಯದ ಪುರಾಣ ಕಾವ್ಯದಲ್ಲಿ ಬರುವ ನಾಯಕಿಯ ಹೆಸರು ಇದು. ಈ ಕಾವ್ಯವನ್ನು ಸೀಮುಂಡ್ ಸೀಗ್‌ಫ್ಯೂಸನ್ ಎಂಬಾತ ಸಂಗ್ರಹಿಸಿದ್ದಾನೆ. ಗುಡ್ರುನ್ ನಾಯಕಿಯ ಮೂರು ವಿವಾಹಗಳು ಈ ಕಾವ್ಯದ ವಸ್ತುವಾಗಿದೆ. ಈಕೆಯ ಮೊದಲ ಪತಿ ಸಿಗುರ್ಡ್. ಆತನ ಮರಣದ ಅನಂತರ ಆಟ್ಲಿ ಎಂಬಾತನನ್ನು ಈಕೆ ವಿವಾಹವಾದಳು. ಆದರೆ, ಆತ ಕ್ರೂರಿಯಾಗಿದ್ದುದರಿಂದ ಆತನನ್ನು ಕೊಂದು, ತಾನೂ ಸಮುದ್ರಕ್ಕೆ ಹಾರಿಕೊಂಡಳು. ಈಕೆಯನ್ನು ಸಮುದ್ರದಿಂದ ಎತ್ತಿದ ಯೊನಾಕುಮ್ ದೊರೆ ಈಕೆಯನ್ನು ವರಿಸಿದ ಮೂರನೆಯ ಪತಿ.

ಗುಡ್ರುನ್ ಎಂಬ ಹೆಸರಿನ 13ನೆಯ ಶತಮಾನದ ಹಳೆಯ ಕಾವ್ಯವೊಂದರ ನಾಯಕಿಯೊಬ್ಬಳ ಹೆಸರು ಗುಡ್ರುನ್. ಇದು ಆಂಗ್ಲೋ – ಸ್ಯಾಕ್ಸನ್ ಕಾವ್ಯ. ಇದರಲ್ಲಿ ಬರುವ ಗುಡ್ರುನ್ ಪತಿವ್ರತೆಯ ಪ್ರತೀಕವಾಗಿದ್ದಾಳೆ. ಈಕೆಯನ್ನು ಹರ್ವಿಗ್ ಎಂಬ ದೊರೆಗೆ ಮದುವೆ ಮಾಡಿಕೊಡಲು ನಿರ್ಧಾರವಾಗಿತ್ತು. ಆದರೆ, ನಾರ್ವೆಯ ರಾಜ ಹರ್‌ಮೂತ್ ಎಂಬಾತ ಈಕೆಯ ತಂದೆಯಾದ ಹೆಟ್ಟೆಲ್‌ನನ್ನು ಕೊಂದು ತನ್ನನ್ನು ಮದುವೆಯಾಗುವಂತೆ ಈಕೆಯನ್ನು ಬಲತ್ಕರಿಸಿದ. ಕೊನೆಗೂ ಈಕೆ ಹರ್‌ಮೂತ್‌ನನ್ನು ಜಯಿಸಿದ ಹರ್‌ವಿಗ್‌ನನ್ನು ವಿವಾಹವಾದಳು.

19ನೆಯ ಶತಮಾನದ ವಿಲಿಯಂ ಮಾರಿಸ್ ಎಂಬ ಕವಿ ಐಸ್ಲೆಂಡಿನ ಲಾಕ್ಸ್‌ಲೇಲ್ ಸಾಗಾ ಎಂಬ ಪದ್ಯದ ಪರಿಚಯವನ್ನು ಮಾಡಿಕೊಡುವ ಅರ್ಥ್‌ಲಿ ಪ್ಯಾರಡೈಸ್ (ಭೂಲೋಕ ಸ್ವರ್ಗ) ಎಂಬ ಕಥನಕವನವನ್ನು ಬರೆದಿದ್ದಾನೆ. ಅದರಲ್ಲಿ ಗುಡ್ರುನ್ನಳ ಪ್ರೇಮಿಗಳು ಎಂಬ ಕಥನಕವನವೊಂದಿದೆ. ಅದರ ಕಥಾನಾಯಕಿ ಗುಡ್ರುನ್. (ಕೆ.ಕೆ.ಐ.)

**ಗುಣಕ :** ವಿನಿಯೋಜನೆಯಲ್ಲಿಯ (ಇನ್ವೆಸ್ಟ್‌ಮೆಂಟ್) ವ್ಯತ್ಯಾಸದ ಪರಿಣಾಮವಾಗಿ ವರಮಾನದಲ್ಲಾಗುವ ವ್ಯತ್ಯಾಸವೆಷ್ಟೆಂಬುದನ್ನು ಸೂಚಿಸುವ ಸಂಖ್ಯೆ (ಮಲ್ಟಿಪ್ಲೈಯರ್). ಅರ್ಥಶಾಸ್ತ್ರಜ್ಞ ಜೆ.ಎಂ. ಕೇನ್ಸನ ಒಂದು ವಿವರಣೆ. ಒಂದು ಆರ್ಥಿಕತೆಯಲ್ಲಿಯ ವಿನಿಯೋಜನೆಯಲ್ಲಾಗುವ ಬದಲಾವಣೆಗಳು ಅನುಭೋಗದ ಮೇಲೆ ಪ್ರಭಾವ ಬೀರುವುದರ ಮೂಲಕ ವರಮಾನದ ಮೇಲೆ ಉಂಟುಮಾಡುವ ಸಂಚಿತ ಪರಿಣಾಮವನ್ನು ಗುಣಕತತ್ತ್ವ ವಿವರಿಸುತ್ತದೆ. ಗುಣಕತತ್ತ್ವ ಕೆಲಸಮಾಡುವ ಬಗೆಯನ್ನು ವಿವರಿಸಲು ಒಂದು

ಉದಾಹರಣೆಯನ್ನು ಕೊಡಬಹುದು. ರಾಷ್ಟ್ರೀಯ ವರಮಾನ ರೂ. 100 ಕೋಟಿ ಆಗಿದ್ದು, ಅದರಲ್ಲಿ ರೂ. 80 ಕೋಟಿಗಳನ್ನು ಅನುಭೋಗಕ್ಕಾಗಿಯೂ ರೂ. 20 ಕೋಟಿಗಳನ್ನು ಉತ್ಪಾದನೆಯ ಮೇಲೂ ಖರ್ಚು ಮಾಡಲಾಗುತ್ತಿರಬಹುದು. ಅನುಭೋಗ ಪ್ರವೃತ್ತಿ (ಪ್ರೊಪೆನ್ಸಿಟಿ ಟು ಕನ್ಸ್ಯೂಂ) ಮತ್ತು ವಿನಿಯೋಜನೆಗಳು ಸ್ಥಿರವಾಗಿರುವವರೆಗೆ ರಾಷ್ಟ್ರೀಯ ವರಮಾನದಲ್ಲಿ ಯಾವ ಬದಲಾವಣೆಯೂ ಆಗುವುದಿಲ್ಲ.

ಯಾವುದೇ ಕಾರಣದಿಂದ ವಿನಿಯೋಜನೆ ರೂ. 10 ಕೋಟಿಗಳಷ್ಟು ಹೆಚ್ಚಿದಾಗ ಒಟ್ಟು ವಿನಿಯೋಜನೆ ರೂ. 30 ಕೋಟಿ ಆಗುತ್ತದೆ. ಇದರಿಂದ ರಾಷ್ಟ್ರೀಯ ವರಮಾನದ ಮೇಲೆ ಯಾವ ಬದಲಾವಣೆಯಾಗುತ್ತದೆ ಎಂಬುದನ್ನು ನೋಡಬೇಕು. ರೂ.10 ಕೋಟಿಗಳ ಹೆಚ್ಚು ವಿನಿಯೋಜನೆಯಿಂದ ಬಂಡವಾಳ ಸರಕುಗಳ ಉತ್ಪಾದನೆಯಲ್ಲಿ ನಿರತರಾದವರ ವರಮಾನ ರೂ.10 ಕೋಟಿಗಳಷ್ಟು ಅಧಿಕವಾಗುತ್ತದೆ. ಅವರ ವರಮಾನ ಅಧಿಕವಾಗುವುದರಿಂದ ಅವರು ಅನುಭೋಗ ಸರಕುಗಳ ಮೇಲೆ ಹೆಚ್ಚಾಗಿ ಖರ್ಚು ಮಾಡುತ್ತಾರೆ. ಅನುಭೋಗ ಸರಕುಗಳ ಮೇಲೆ ಮಾಡುವ ಖರ್ಚು ಸೀಮಾಂತ ಅನುಭೋಗ ಪ್ರವೃತ್ತಿಯಿಂದ ನಿರ್ಧರಿಸಲ್ಪಡುತ್ತದೆ. ವರಮಾನದಲ್ಲಿ ಬದಲಾವಣೆಯಾದಾಗ ಅನುಭೋಗ ಖರ್ಚು ಯಾವ ಪ್ರಮಾಣದಲ್ಲಿ ಬದಲಾಗುತ್ತದೆಯೆಂಬುದೇ ಸೀಮಾಂತ ಅನುಭೋಗ ಪ್ರವೃತ್ತಿ. ಸೀಮಾಂತ ಅನುಭೋಗ ಪ್ರವೃತ್ತಿ ವರಮಾನದ 1/2 ಅಥವಾ 0.5 ಎಂದು ಭಾವಿಸಬಹುದು. ಬಂಡವಾಳ ಸರಕುಗಳನ್ನು ವಿಕ್ರಯಿಸಿ ಬಂದ ರೂ. 10 ಕೋಟಿ ವರಮಾನದಲ್ಲಿ ರೂ. 5 ಕೋಟಿ (1/2 ಅಥವಾ 0.5) ಅನುಭೋಗಕ್ಕಾಗಿ ಖರ್ಚಾಗುತ್ತದೆ. ಆಗ ಅನುಭೋಗ ಸರಕುಗಳ ಉತ್ಪಾದಕರ ವರಮಾನ ರೂ. 5 ಕೋಟಿಗಳಷ್ಟು ಅಧಿಕವಾಗುತ್ತದೆ. ಅವರು ರೂ. 5 ಕೋಟಿಗಳ 1/2 ಭಾಗವನ್ನು ಅಂದರೆ 2.5 ಕೋಟಿ ರೂಪಾಯಿಗಳನ್ನು ಅನುಭೋಗಕ್ಕಾಗಿ ಖರ್ಚು ಮಾಡುತ್ತಾರೆ. ವರಮಾನದ ಮೊತ್ತ ಬರಿದಾಗುವವರೆಗೆ ಇದೇ ಬಗೆಯ ಪ್ರಕ್ರಿಯೆ ಮುಂದುವರಿಯುತ್ತದೆ. ಹೀಗೆ ಜನರು ತಮ್ಮ ವರಮಾನ ಹೆಚ್ಚಿದಂತೆಲ್ಲ ಅದರ 1/2 ಭಾಗವನ್ನು ಅನುಭೋಗದ ಮೇಲೆ ಖರ್ಚು ಮಾಡುತ್ತ ಹೋದರೆ ಕೊನೆಯಲ್ಲಿ ಒಟ್ಟು ವರಮಾನ ರೂ. 20 ಕೋಟಿಗಳಷ್ಟು ಅಧಿಕವಾಗುತ್ತದೆ. (10 + 5 + 2.5 + 1.25 + 0.625 + 0.3125 + 0.15625 ........) ಎಂದರೆ ರೂ. 10 ಕೋಟಿಗಳ ವಿನಿಯೋಜನೆಯಿಂದ ರಾಷ್ಟ್ರೀಯ ವರಮಾನ ರೂ. 20 ಕೋಟಿಗಳವರೆಗೆ ವಿಸ್ತರಣೆಯಾಗುತ್ತದೆ. ಇದರಲ್ಲಿ ರೂ. 10 ಕೋಟಿ ಪ್ರಾಥಮಿಕ ವಿನಿಯೋಜನೆ ರೂ. 10 ಕೋಟಿ ದ್ವಿತೀಯಕ ಅನುಭೋಗ ಪುನರ್ ಖರ್ಚು.

**ಗುಣಕ ಮತ್ತು ಸೀಮಾಂತ ಅನುಭೋಗ ಪ್ರವೃತ್ತಿ:** ಗುಣಕದ ಬೆಲೆಗೂ ಸೀಮಾಂತ ಅನುಭೋಗ ಪ್ರವೃತ್ತಿಗೂ ಇರುವ ಸಂಬಂಧ ನಿಕಟವಾದ್ದು. ಸೀಮಾಂತ ಅನುಭೋಗ ಪ್ರವೃತ್ತಿ ಅಧಿಕವಾದರೆ ಗುಣಕವೂ ಅಧಿಕವಾಗುತ್ತದೆ. ವರಮಾನದ ಪ್ರಮಾಣ ಹೆಚ್ಚಾಗುತ್ತದೆ. ಸೀಮಾಂತ ಕಡಿಮೆಯಾದರೆ ಗುಣಕವೂ ಕಡಿಮೆಯಾಗುತ್ತದೆ. ವರಮಾನದ ಪ್ರಮಾಣವೂ ಕಡಿಮೆಯಾಗುತ್ತದೆ. ಗುಣಕ, ಸೀಮಾಂತ ಅನುಭೋಗ ಪ್ರವೃತ್ತಿ ಇವುಗಳ ಸಂಬಂಧವನ್ನು ಸೂಚಿಸುವ ಸಮೀಕರಣವನ್ನು ಮುಂದೆ ಕೊಟ್ಟಿದೆ.


$$M = \frac{1}{1-r}$$

ಇಲ್ಲಿ $M =$ ಗುಣಕ, $r =$ ಸೀಮಾಂತ ಅನುಭೋಗ ಪ್ರವೃತ್ತಿ.

ಕೇನ್ಸನ ಗುಣಕ ತತ್ತ್ವದ ವಿರುದ್ಧವಾಗಿ ಮೂರು ಮುಖ್ಯ ಟೀಕೆಗಳುಂಟು: 1 ವರಮಾನದ ಮೇಲೆ ಪ್ರಚೋದಿತ ಅನುಭೋಗದ ಪರಿಣಾಮವನ್ನು ಮಾತ್ರ ಗುಣಕ ಗಣನೆಗೆ ತೆಗೆದುಕೊಂಡು, ವಿನಿಯೋಜನೆಯ ಮೇಲೆ ಪ್ರಚೋದಿತ ಅನುಭೋಗದ ಪರಿಣಾಮವೇನೆಂಬುದನ್ನು ಕಡಿಗಣಿಸಿದೆ. 2 ಕೇನ್ಸನ ಗುಣಕ ತತ್ತ್ವ ನಿಂತಿರುವುದು ಎರಡು ಸಾಮಾನ್ಯ ಊಹೆಗಳ ಆಧಾರದ ಮೇಲೆ: ವರಮಾನಗಳನ್ನು ಅನುಭೋಗ ಅವಲಂಬಿಸಿದೆ ಎಂಬುದು ಒಂದು ಊಹೆ. ಆದ್ದರಿಂದ ವರಮಾನ ಅಧಿಕವಾದಾಗ ಅನುಭೋಗವೂ ಅಧಿಕವಾಗುತ್ತದೆಯೆನ್ನಲಾಗಿದೆ. ಸೀಮಾಂತ ಅನುಭೋಗ ಪ್ರವೃತ್ತಿ ವರಮಾನದ ಸಮಾನತೆಗಿಂತ ಕಡಿಮೆ ಇದ್ದು ಸ್ಥಿರವಾಗಿದೆ ಎಂಬುದು ಇನ್ನೊಂದು ಊಹೆ. ಆದರೆ ವಾಸ್ತವವಾಗಿ ವರಮಾನವನ್ನು ಅನುಭೋಗ ಅವಲಂಬಿಸಿರುವುದಿಲ್ಲ ಮತ್ತು ಸೀಮಾಂತ ಪ್ರವೃತ್ತಿ ಸ್ಥಿರವಾಗಿರುವುದಿಲ್ಲ. 3 ಕೇನ್ಸನ ಗುಣಕ ತತ್ತ್ವ ಸ್ಥಿತ್ಯಾತ್ಮಕವಾದ್ದೇ ಹೊರತು ಚಲನಾತ್ಮಕವಾದ್ದಲ್ಲ.


ಕೇನ್ಸನ ಗುಣಕ ತತ್ತ್ವದ ವಿರುದ್ಧ ಇರುವ ಟೀಕೆಗಳಲ್ಲಿ ಸತ್ಯಾಂಶವಿದ್ದರೂ ಆರ್ಥಿಕ ವಿಶ್ಲೇಷಣೆಯಲ್ಲಿ ಅದರ ಮಹತ್ತ್ವವನ್ನು ಯಾರೂ ಕಡೆಗಣಿಸುವಂತಿಲ್ಲ. ಆರ್ಥಿಕ ನಿಯಮಗಳ ಮೇಲೆ ಗುಣಕದ ಪ್ರಭಾವ ಬಹಳವಿದೆ. ಕೇನ್ಸ್ ಗುಣಕವನ್ನು ವರಮಾನ ವೃದ್ಧಿ ವಿಶ್ಲೇಷಣೆಗೆ ಒಂದು ಪ್ರಮುಖ ಸಾಧನವಾಗಿಸಿದ್ದಾನೆ. ಕೇನ್ಸ್ ಗುಣಕದ ಆಧಾರದ ಮೇಲೆ ಮುಗ್ಗಟ್ಟಿನ ಸಮಯದಲ್ಲಿ ಸಾರ್ವಜನಿಕ ವಿನಿಯೋಜನೆಯನ್ನು ಪ್ರತಿಪಾದಿಸಿದ್ದಾನೆ. ವಿನಿಯೋಜನೆ ಅಧಿಕವಾದರೆ ವರಮಾನ ಅಧಿಕವಾಗುತ್ತದೆ ಮತ್ತು ಉದ್ಯೋಗಾವ ಕಾಶಗಳು ಹೆಚ್ಚಾಗುತ್ತವೆ–ಎಂಬುದನ್ನು ಗುಣಕ ತತ್ತ್ವ ಸಾರುತ್ತದೆ. ಮುಗ್ಗಟ್ಟಿನ ಕಾಲದಲ್ಲಿ ಸರ್ಕಾರ ಲೋಕೋಪಯೋಗಿ ಕಾರ್ಯಗಳಲ್ಲಿ ವಿನಿಯೋಜನೆಯನ್ನು ಹೆಚ್ಚಿಸುವುದರ ಮೂಲಕ ವರಮಾನ ಮತ್ತು ಉದ್ಯೋಗಾವಕಾಶಗಳನ್ನು ಹೆಚ್ಚಿಸಬಹುದು. ವ್ಯಾಪಾರ ಆವರ್ತಗಳ ವಿವಿಧಾವಸ್ಥೆಗಳನ್ನು ವಿವರಿಸಲು ಗುಣಕ ವಿಧಾನ ಉಪಯುಕ್ತವಾಗಿದೆ. (ಕೆ.ಜಿ.ಓ.)

**ಗುಣಕ, ಗೀಗರ್ – ಮುಲ್ಲರ್ :** ಅಯಾನೀಕರಿಸುವ ವಿಕಿರಣವನ್ನು (ಅಯನೈಸಿಂಗ್ ರೇಡಿಯೇಷನ್) ಅಳತೆ ಮಾಡುವ ಒಂದು ಉಪಕರಣ (ಗೀಗರ್–ಮುಲ್ಲರ್ ಕೌಂಟರ್). ಸಂಕ್ಷೇಪವಾಗಿ ಜಿಎಂ ಗುಣಕ ಇಲ್ಲವೇ ಗೀಗರ್ ಗುಣಕ ಎಂದು ಹೇಳುವುದುಂಟು. ವಿಕಿರಣ ಪಟುತ್ವವನ್ನು (ರೇಡಿಯೋ ಆ್ಯಕ್ಟಿವಿಟಿ) ಪತ್ತೆ ಮಾಡುವಲ್ಲಿ ಇದರ ಪಾತ್ರ ಬಲು ಮುಖ್ಯ. ವೇಗವಾಗಿ ಚಲಿಸುವ ವಿದ್ಯುದಾವಿಷ್ಟಕಣ (ಚಾರ್ಜ್‌ಡ್ ಪಾರ್ಟಿಕಲ್) ಅನಿಲಗಳ ಮೂಲಕ ಹಾದುಹೋದಾಗ ಉಂಟಾಗುವ ಆಘಾತಗಳನ್ನು ಎಲೆಕ್ಟ್ರಾನಿಕ್ ಆವರ್ತಕಗಳಿಂದ ಗುರ್ತಿಸಿ ಎಣಿಸಬಹುದಾದ ಸಾಧ್ಯತೆಯ ಮೇಲೆ ಗುಣಕಗಳು ರಚಿನೆಗೊಂಡಿವೆ. ಸಾಮಾನ್ಯವಾಗಿ ಗುಣಕಗಳಲ್ಲಿ, ಕಡಿಮೆ ಒತ್ತಡದಲ್ಲಿರುವ ಆರ್ಗಾನ್ ಅಥವಾ ಯಾವುದಾರೂ ಒಂದು ಹ್ಯಾಲೋಜೆನ್ನಿನಿಂದ ತುಂಬಿದ ಗಾಜಿನ ಕೊಳವೆಯಲ್ಲಿ ಕೊಳವೆಯ ಒಳಪದರಕ್ಕೆ ಸೇರಿದಂತೆ ವರ್ತುಲ ಸ್ತಂಭಾಕೃತಿಯ, ತಾಮ್ರ ಅಥವಾ ಅಲ್ಯೂಮಿನಿಯಮಿನ ಋಣ ವಿದ್ಯುತ್ ಧ್ರುವವೂ (ಕ್ಯಾಥೋಡ್) ಋಣ ವಿದ್ಯುತ್ ಧ್ರುವದ ಅಕ್ಷದಲ್ಲಿ ಹಾದು ಹೋಗುವ ಟಂಗ್‌ಸ್ಟನ್ ತಂತಿಯ ಧನವಿದ್ಯುತ್ ಧ್ರುವವೂ (ಆ್ಯನೋಡ್) ಇರುತ್ತವೆ. ಸುಮಾರು 1000 ವೋಲ್ಟುಗಳಷ್ಟು ವಿಭವದಲ್ಲಿ (ಪೊಟೆನ್ಶಿಯಲ್) ಆ್ಯನೋಡ್‌ನ್ನು ಇಟ್ಟು ಯಾವುದಾದರೂ ಒಂದು ವಿದ್ಯುದಾವಿಷ್ಟಕಣವನ್ನು ಗುಣಕದಲ್ಲಿ ಕಳುಹಿಸಿದಾಗ ಅದು ಅನಿಲದ ಅಣುಗಳೊಡನೆ ಘರ್ಷಿಸಿ ಅವನ್ನು ಅಯಾನೀಕೃತ ಕಣಗಳನ್ನಾಗಿ ಮಾರ್ಪಡಿಸುತ್ತದೆ. ಆ್ಯನೋಡ್ ಹೆಚ್ಚಿನ ವಿಭವದಲ್ಲಿರುವುದರಿಂದ ಎಲೆಕ್ಟ್ರಾನುಗಳು ಹೆಚ್ಚಿನ ಶಕ್ತಿಯನ್ನು ರೂಢಿಸಿಕೊಂಡು ಟಂಗ್‌ಸ್ಟನ್ ತಂತಿಯನ್ನು ತಲಪುವ ಮುಂಚೆ ಮತ್ತೆ ಅನಿಲದ ಅಣುಗಳೊಡನೆ ಅನುಕ್ರಮ ಘರ್ಷಣೆಯಿಂದ ಎಲೆಕ್ಟ್ರಾನುಗಳ ಪ್ರವಾಹವನ್ನೇ ಉಂಟು ಮಾಡುತ್ತವೆ. ಎಲೆಕ್ಟ್ರಾನ್ ಸಮೂಹಗಳಿಂದಾದ ವಿದ್ಯುದಾಘಾತಗಳನ್ನು ಪ್ರವರ್ಧಿಸಿ (ಆ್ಯಂಪ್ಲಿ ಫೈ) ಅವನ್ನು ವಿದ್ಯುದ್ಯಂತ್ರಗಳಿಂದ ದಾಖಲೆ ಮಾಡಬಹುದು ಅಥವಾ ಧ್ವನಿವರ್ಧಕಗಳಲ್ಲಿ ಶಬ್ದದ ರೂಪದಲ್ಲಿ ಅಲಿಸಬಹುದು.



**ಚಿತ್ರ 1. 1. ಸ್ತಂಭಾಕೃತಿಯ ಗೈಗರ್ ಮುಲ್ಲರ್ ಗುಣಕ: 1. ಧನ ವಿದ್ಯುತ್ ಧ್ರುವ (ಆ್ಯನೋಡ್), 2. ಗಾಜಿನ ಕೊಳವೆ, 3. ಕೊಳವೆಯನ್ನು ಸುತ್ತಿರುವ ಋಣ ವಿದ್ಯುತ್ ಧ್ರುವ, 4. ಟಂಗ್‌ಸ್ಟನ್ ತಂತಿ ಸುರುಳಿ, G ಕೊಳವೆಯೊಳಗಣ ಅನಿಲ**

ಗುಣಕಗಳ ಪರಿಣಾಮ, ಅವುಗಳಲ್ಲಿ ಉಪಯೋಗಿಬೇಕಾದ ಲೋಹ, ತುಂಬಿರಬೇಕಾದ ಅನಿಲ ಮುಂತಾದವು ಆ ಗುಣಕಗಳನ್ನು ಉಪಯೋಗಿಸುವ ರೀತಿಯ ಅನುಕೂಲಕ್ಕೆ ಸಂಬಂಧಪಟ್ಟಿರುತ್ತವೆ. ಆ್ಯನೋಡಿನಲ್ಲಿಡಬೇಕಾದ ವಿಭವ ನಿರ್ದಿಷ್ಟ ಗುಣಕದ ವಿಶೇಷ ಲಕ್ಷಣಗಳನ್ನು ಅವಲಂಬಿಸಿರುತ್ತದೆ. ಯಾವುದಾದರೂ ಒಂದು ಗುಣಕದ ಘಟನಾವಳಿಗಳ ಎಣಿಕೆಯ ವೇಗವನ್ನು (ಚಿತ್ರ 2ರಲ್ಲಿ *Oy* ಅಕ್ಷ) ವಿಭವದ (*Ox* ಅಕ್ಷ) ಎದುರಾಗಿ ಗ್ರಾಫ್ ತಯಾರಿಸಿದರೆ ಚಿತ್ರದಲ್ಲಿರುವಂತೆ ರೇಖೆ ಬರುತ್ತದೆ. A ಜಾಗದ ವಿಭವಕ್ಕೆ ದೇಹಲೀ ವಿಭವ (ಥ್ರೆಶೋಲ್ಡ್ ಪೊಟೆನ್ಶಿಯಲ್) ಎಂದೂ B ಭಾಗಕ್ಕೆ ಪೀಠ ವಿಭವ (ಪ್ಲ್ಯಾಟೂ ಪೊಟೆನ್ಶಿಯಲ್) ಎಂದೂ ಹೆಸರು. ಗುಣಕದ ದಕ್ಷತಮ ಕಾರ್ಯ ಸಾಮರ್ಥ್ಯ ಪೀಠ ವಿಭವರೇಖೆಯ ಸಂವಾದಿಯಾಗಿರುವ ವಿಭವದಲ್ಲಿ ಇರುತ್ತದೆ.




ಗುಣಕಗಳನ್ನು ಕೈಗಾರಿಕೆಗಳಲ್ಲಿ, ಔಷಧ ವೈದ್ಯದಲ್ಲಿ, ಖನಿಜ ಪರಿಶೋಧನೆಯಲ್ಲಿ ಮತ್ತು ವೈಜ್ಞಾನಿಕ ಸಂಶೋಧನೆಗಳಲ್ಲಿ ಬಹಳವಾಗಿ ಉಪಯೋಗಿಸುತ್ತಾರೆ. (ಜಿ.ಎಸ್.)

**ಗುಣಗಳು :** ಸಾಂಖ್ಯದ ಪ್ರಕಾರ ಗುಣಗಳು ಮೂರು–ಸತ್ತ್ವ, ರಜಸ್ಸು ಮತ್ತು ತಮಸ್ಸು. ಇವನ್ನು ಕುರಿತ ಪ್ರಕ್ರಿಯೆ ಆ ದರ್ಶನದಲ್ಲಿ ಬಹು ಮುಖ್ಯವಾದದು. ಗುಣಗಳ ಸಾಮ್ಯಾವಸ್ಥೆ ಎನ್ನುವುದೇ ಪ್ರಕೃತಿ. ಪುರುಷನ ಸಂಯೋಗದಿಂದ ಈ ಸಾಮ್ಯಾವಸ್ಥೆ

ಒಡೆದು ಪ್ರಕೃತಿಯ ಪರಿಣಾಮಕ್ಕೆ ದಾರಿಯಾಗುತ್ತದೆ. ಎಲ್ಲ ಪ್ರಕೃತಿವಿಕೃತಿಗಳಿಗೂ ವಿಕಾರಗಳಿಗೂ ಕಾರಣ ಈ ಗುಣಗಳೇ. ಇವುಗಳ ವಿಶೇಷ ಭೇದದಿಂದ ಪ್ರಕೃತಿ ವಿಕೃತಿಯಾಗುವುದೆಂದು ಸಾಂಖ್ಯರ ಮತ. ಸತ್ತ್ವವೆನ್ನುವುದು ಲಘು, ಪ್ರಕಾಶ ಮತ್ತು ಪ್ರಿಯದಾಯಕ, ರಜಸ್ಸೆನ್ನುವುದು ಚಲನಕಾರಿ, ಉದ್ರೇಕಕಾರಿ, ತಮಸ್ಸೆನ್ನುವುದು ಭಾರವಾದದ್ದು ಮತ್ತು ಆವರಿಸತಕ್ಕದ್ದು. (ಕೆ.ಬಿ.ಆರ್.)

ಕಾವ್ಯಮೀಮಾಂಸೆಯಲ್ಲಿ ಗುಣಗಳ ಪ್ರಸ್ತಾಪ ಬರುತ್ತದೆ. ಶ್ಲೇಷ, ಪ್ರಸಾದ, ಸಮತೆ, ಮಾಧುರ್ಯ, ಸೌಕುಮಾರ್ಯ, ಅರ್ಥವ್ಯಕ್ತಿ, ಉದಾರತ್ವ, ಓಜಸ್ಸು, ಕಾಂತಿ, ಸಮಾಧಿ– ಈ ಹತ್ತೂ ಕಾವ್ಯಗುಣಗಳೆಂದು ಭರತಾದಿ ಪ್ರಾಚೀನಾಲಂಕಾರಿಕರ ಮತ. ದಂಡಿ ಮತ್ತು ನಾಗವರ್ಮರು ಇವನ್ನು ಹೇಳಿದ್ದಾರೆ. ಇವುಗಳ ಲಕ್ಷಣಗಳನ್ನು ನೋಡಿದರೆ ಶ್ಲೇಷ, ಸಮತೆ, ಸೌಕುಮಾರ್ಯ ಮತ್ತು ಓಜಸ್ಸುಗಳು ಶಬ್ದಗುಣಗಳೆಂದೂ ಮಾಧುರ್ಯ ಉಭಯಗುಣವೆಂದೂ ಉಳಿದವು ಅರ್ಥಗುಣಗಳೆಂದೂ ತಿಳಿದುಬರುತ್ತದೆ.

ಧ್ವನಿ, ರಸ, ವಕ್ರೋಕ್ತಿ, ರೀತಿ ಮತ್ತು ಗುಣಗಳು ಕಾವ್ಯಸೌಂದರ್ಯಕ್ಕೆ ಕಾರಣಗಳಷ್ಟೆ. ಇವುಗಳಲ್ಲಿ ಧ್ವನಿ ಮತ್ತು ರಸಗಳು ಕಾವ್ಯದ ಅತ್ಮವಿದ್ದಂತೆ. ರೀತಿ ಮಾರ್ಗ ಮೊದಲಾದವು ಅಂಗಾಂಗ ಸನ್ನಿವೇಶ ವಿಶೇಷತೆಗಳಂತೆ. ಗುಣಗಳು ಶೌರ್ಯಧೈರ್ಯಾದಿಗಳಂತೆ. ಅಲಂಕಾರಗಳೋ ಮೇಲೆ ತೊಡುವ ಆಭರಣಾದಿಗಳಿದ್ದಂತೆ. *

**ಗುಣನಂದಿ :** ಪ್ರಾಚೀನ ಕನ್ನಡ ಕವಿಗಳಲ್ಲಿ ಗುಣನಂದಿಯೆಂಬ ಹೆಸರಿನ ಕವಿಯೊಬ್ಬನಿದ್ದನೆಂಬುದು ಮುಖ್ಯವಾಗಿ ಮಲ್ಲಿಕಾರ್ಜುನನ (ಸು. 1245) ಸೂಕ್ತಿ ಸುಧಾರ್ಣವ ಮತ್ತು ಕೇಶಿರಾಜನ (ಸು.1260) ಶಬ್ದಮಣಿದರ್ಪಣ ಎಂಬ ಗ್ರಂಥಗಳಲ್ಲಿ ದೊರೆಯುವ ಎರಡು ಸ್ಪಷ್ಟವಾದ ಉಲ್ಲೇಖಗಳಿಂದ ತಿಳಿದುಬಂದಿದೆ. ಸೂಕ್ತಿಸುಧಾರ್ಣವದ ಪೀಠಿಕಾಪ್ರಕರಣದಲ್ಲಿ 'ಜನ್ನನ ದೇಸೆ ಪಂಪನ ಗುಣಂ ಗುಣನಂದಿಯ ತೊಂಡು..... ಸಮಾನುರುಕ್ತಿಯಿಂ । ದನ್ನೆಲಸಿರ್ಪುವೀ ಸುಕವಿಮಲ್ಲನ ಕಾವ್ಯವಿಳಾಸಗೇಹದೊಳ್' ಎಂದೂ ಶಬ್ದಮಣಿದರ್ಪಣದಲ್ಲಿ 'ಗಜಗನಗುಣನಂದಿಯ ಮನ । ಸಿಜನಸಗನ...... ಸುಮಾರ್ಗಮಿದಱೊಳೆ ಲಕ್ಷ್ಯಂ' ಎಂದೂ ಉಕ್ತವಾಗಿದೆ. ಇಷ್ಟಲ್ಲದೆ, ಶಬ್ದಮಣಿದರ್ಪಣದಲ್ಲಿಯೇ ಸಂಧಿ ಪ್ರಕರಣದಲ್ಲಿ ಸೂತ್ರವೊಂದಕ್ಕೆ ಪ್ರಯೋಗವಾಗಿ 'ಚುರ್ಚಿದವೊಲ್ ಬಿಸಿಲಳುರೆ ಕಿ । ಮುಚ್ಚಿದ ಲತೆಯಂತೆ ನೊಂದು ಗುಣನಂದಿ....' ಎಂಬ ಕಂದಪದ್ಯದ ಭಾಗವೊಂದುಂಟು.

ಇಲ್ಲಿ ಬಂದಿರುವ ಗುಣನಂದಿಯೆಂಬ ಹೆಸರಿನ ಮೇಲೆ, ಈ ಕಂದಭಾಗ ಗುಣನಂದಿ ಕೃತವಾದ ಗ್ರಂಥದಿಂದ ತೆಗೆದುದೋ ಇಲ್ಲವೇ ಅವನ ವಿಷಯವಾಗಿ ಹುಟ್ಟಿರುವ ಬೇರೆ ಗ್ರಂಥದಿಂದ ತೆಗೆದುದೋ ತಿಳಿಯದು– ಎಂಬುದಾಗಿ ಕರ್ಣಾಟಕ ಕವಿಚರಿತೆಕಾರರು ತಮ್ಮ ಊಹೆಯನ್ನು ಮಂಡಿಸಿದ್ದಾರೆ. ಸ್ವಲ್ಪ ಈಚಿನ ನಂಜುಂಡಕವಿ (ಸು.1525) ರಾಮನಾಥಚರಿತವೆಂಬ ತನ್ನ ಸಾಂಗತ್ಯಗ್ರಂಥದಲ್ಲಿ ಗುಣನಂದಿಯೆಂಬವನನ್ನು ಸ್ತುತಿಸಿರುವುದು ಕಾಣುತ್ತದೆ. ಈ ಗುಣನಂದಿಯೂ ಮೊದಲಿನೆರಡು ಉಲ್ಲೇಖಗಳ ಗುಣನಂದಿಯೂ ಒಬ್ಬ ವ್ಯಕ್ತಿಯೋ ಬೇರೆಬೇರೆಯೋ ಹೇಳುವುದು ಕಷ್ಟ. ಶಬ್ದಮಣಿದರ್ಪಣದ ಪ್ರಯೋಗಭಾಗದ ಆಶಯವೂ ಸಂದಿಗ್ಧವಾದ್ದು. ಇದಕ್ಕೆ ಮೊದಲಿನ ಎರಡು ಉಲ್ಲೇಖಗಳೇ ಗುಣನಂದಿಯೆಂಬ ಕನ್ನಡ ಕವಿಯೊಬ್ಬನ ಅಸ್ತಿತ್ವವನ್ನು ಸ್ಥಾಪಿಸಲು ಸಮರ್ಥವಾದವು. ಮಲ್ಲಿಕಾರ್ಜುನನೂ ಆತನ ಮಗ ಕೇಶಿರಾಜನೂ ತಂತಮ್ಮ ಗ್ರಂಥಗಳಿಗೆ ಗುಣನಂದಿಯೆಂಬ ಪೂರ್ವಕವಿಯೊಬ್ಬನ ಒಂದೋ ಹಲವೋ ಗ್ರಂಥಗಳಿಂದ ಪದ್ಯಗಳನ್ನೂ ಪ್ರಯೋಗಗಳನ್ನೂ ಕ್ರಮವಾಗಿ ಆಯ್ದುಕೊಂಡಿರುವ ಸಾಧ್ಯತೆಯನ್ನು ಒಪ್ಪಬಹುದು. ಆ ಗ್ರಂಥ ಅಥವಾ ಗ್ರಂಥಗಳು ಯಾವುವೆಂಬುದು ಮಾತ್ರ ತಿಳಿಯವಂತಿಲ್ಲ. ಕವಿಚರಿತೆಕಾರರು, ಪೂಜ್ಯಪಾದಕೃತವಾದ ಜೈನೇಂದ್ರ ವ್ಯಾಕರಣಕ್ಕೆ ಈ ಗುಣನಂದಿ ಪ್ರಕ್ರಿಯಾವತಾರ ಎಂಬ ವ್ಯಾಖ್ಯಾನ ಗ್ರಂಥವೊಂದನ್ನು ಬರೆದಿದ್ದಾನೆಂದು ತಿಳಿಸಿದ್ದಾರೆ. ಈ ವ್ಯಾಖ್ಯಾನಕರ್ತೃ ಗುಣನಂದಿಯೂ ಮಲ್ಲಿಕಾರ್ಜುನಕೇಶಿರಾಜೋಕ್ತ ಕನ್ನಡಕವಿ ಗುಣನಂದಿಯೂ ಒಬ್ಬನೇ ವ್ಯಕ್ತಿಯೆಂದು ತಿಳಿಯುವುದಕ್ಕೆ ತಕ್ಕ ಪ್ರಮಾಣಗಳಿಲ್ಲ. ಕನ್ನಡ ಕವಿ ಗುಣನಂದಿ ಬರೆದ ಕೃತಿ ಲಭ್ಯವಾಗದೆ ಇದರ ವಿಮರ್ಶೆ ಸಾಧ್ಯವಾಗಲಾರದು.

ಗುಣನಂದಿ ಕವಿಯ ಕಾಲವನ್ನು ಕರ್ಣಾಟಕ ಕವಿಚರಿತಕಾರರು ಸು.900 ಎಂದು ಹೇಳಿದ್ದಾರೆ. ಶ್ರವಣಬೆಳ್ಗೊಳದ 66,117, 127ನೆಯ ಶಾಸನಗಳಲ್ಲಿ ಕೀರ್ತಿತ ನಾಗಿರುವ ಗುಣನಂದಿಪಂಡಿತಯತಿಯೇ ಮೇಲೆ ಉಲ್ಲೇಖಿಸಿರುವ ಗುಣನಂದಿಕವಿ ಯೆಂಬುದು ಅವರ ಗ್ರಹಿಕೆ. ಈ ಗ್ರಹಿಕೆಗೆ ಕಾಲನಿರ್ಣಯಕ್ಕೆ ಮುಖ್ಯ ಕಾರಣವೆಂದರೆ ಆ ಯತಿಗೆ ಹೇಳಿರುವ ವಿಶೇಷಣಗಳು ಮತ್ತು ಶಾಸನೋಕ್ತ ಗುರುಪರಂಪರೆ. ಪೂರ್ವೋಕ್ತ ಶಾಸನಗಳಲ್ಲಿ ಈತನನ್ನು ಚಾರಿತ್ರಚಕ್ರೇಶ್ವರ, ತರ್ಕವ್ಯಾಕರಣಾದಿ ಶಾಸ್ತ್ರನಿಪುಣ, ಸಾಹಿತ್ಯವಿದ್ಯಾಪತಿ ಮುಂತಾಗಿ ಕರೆದಿದೆ. ಅಲ್ಲದೆ ಈತನಿಗೆ 300 ಜನ ಶಿಷ್ಯರಿದ್ದರೆಂದೂ ಇವರಲ್ಲಿ ದೇವೇಂದ್ರಸೈದ್ಧಂತಿಕನೆಂಬುವನು ಉತ್ಕೃಷ್ಟತಮನೆಂದೂ ಹೇಳಿದೆ. 1115ರಲ್ಲಿ ಹುಟ್ಟಿದ 127ನೆಯ ಶಾಸನದ ಗುರುಪರಂಪರೆಯನ್ನು ಗಮನಿಸಿ. ಈ ದೇವೇಂದ್ರ ಸೈದ್ಧಾಂತಿಕನೇ ಪಂಪನ (941) ಗುರುವಾದ ದೇವೇಂದ್ರಮುನಿಯಾಗಿರಬೇಕೆಂದೂ ಆದಕಾರಣ, ಪಂಪನ ಗುರುವಿನ ಗುರು ಗುಣನಂದಿ ಸು. 900 ರಲ್ಲಿದ್ದಿರಬಹುದೆಂದೂ ಕವಿಚರಿತಕಾರರು ಊಹೆ ಮಾಡಿದ್ದಾರೆ.

ಈ ಊಹೆಯನ್ನು ಎ. ವೆಂಕಟಸುಬ್ಬಯ್ಯನವರು ಅಲ್ಲಗಳೆದಿದ್ದಾರೆ. ಶ್ರವಣಬೆಳ್ಗೊಳದ 127ನೆಯ ಶಾಸನದ ಗುರುಪರಂಪರೆಯನ್ನು ಕುರಿತು ಕವಿಚರಿತಕಾರರು ಅಭಿಪ್ರಾಯ ಸಾಧುವಾಗಿಲ್ಲವೆಂದು ಹೇಳಿ ಅದನ್ನು ವಿಮರ್ಶಿಸಿ, ಶಾಸನೋಕ್ತ ಗುಣನಂದಿಯೂ ಆತನ ಶಿಷ್ಯ ದೇವೇಂದ್ರಮುನಿಯೂ ಪ್ರ.ಶ. 700ಕ್ಕಿಂತ ಹಿಂದೆ ಇದ್ದವರು, ಪ್ರ.ಶ.ಸು. 900 ರಲ್ಲಿದ್ದವರಲ್ಲ ಎಂದು ವಾದಿಸಿದ್ದಾರೆ. ಹಾಗಾದರೆ ಶ್ರವಣಬೆಳ್ಗೊಳದ ಶಾಸನದಲ್ಲಿ ಈತನನ್ನು ಸಾಹಿತ್ಯ ವಿದ್ಯಾಪತಿ ಮುಂತಾಗಿ ಸ್ತುತಿಸಿದೆಯಲ್ಲ. ಕನ್ನಡದಲ್ಲಿ ಅಷ್ಟು ಹಿಂದೆಯೇ ಈತ ಏನಾದರೂ ಬರೆದಿದ್ದಿರಬಹುದೇ ಎಂಬ ಪ್ರಶ್ನೆಗೆ ಏನು ಉತ್ತರ? ಈತನಿಗೆ ಹೇಳಿರುವ ವಿಶೇಷಣಗಳಿಂದ ಈತನನ್ನು ಪಂಡಿತನೆಂದು ತಿಳಿಯಬಹುದಲ್ಲದೆ ಕವಿಯೆಂದೇನೂ ತಿಳಿಯಬೇಕಾಗಿಲ್ಲ. ಒಂದು ಪಕ್ಷ ಈತ ಕನ್ನಡದಲ್ಲಿ ಕೃತಿರಚನೆ ಮಾಡಿದ್ದಿದ್ದರೆ ಕವಿರಾಜಮಾರ್ಗ, ಕಾವ್ಯಾವಲೋಕನಗಳಲ್ಲಿ ಈತನ ಹೆಸರಿನ ಪ್ರಸ್ತಾಪವಿರುತ್ತಿದ್ದಿತು– ಎಂದು ವೆಂಕಟಸುಬ್ಬಯ್ಯನವರು ಹೇಳಿ, ಅಂಥ ಸಾಧ್ಯತೆಯನ್ನು ಅಲ್ಲಗಳೆದಿದ್ದಾರೆ. ಅವರ ನಿರ್ಣಯ ಎಂದರೆ– ಶಾಸನೋಕ್ತ ಗುಣನಂದಿ ಪ್ರ.ಶ.ಸು. 700ಕ್ಕೆ ಪೂರ್ವದಲ್ಲಿದ್ದ ಒಬ್ಬ ಬೇರೆಯೇ ವ್ಯಕ್ತಿ. ಸೂಕ್ತಿ ಸುಧಾರ್ಣವ, ಶಬ್ದಮಣಿದರ್ಪಣ ಗಳಲ್ಲಿ ಉಕ್ತನಾಗಿರುವ ಗುಣನಂದಿ ಇನ್ನೊಬ್ಬ ಬೇರೆಯೇ ವ್ಯಕ್ತಿ. ಈ ಎರಡನೆಯಾತ ಆಚಣ್ಣ, ಜನ್ನ, ಪಾರ್ಶ್ವಪಂಡಿತ, ಗುಣವರ್ಮ ಮುಂತಾದ 13ನೆಯ ಶತಮಾನದ ಕವಿಗಳಿಂದ ಉಲ್ಲೇಖಿಸಲ್ಪಡದಿರುವ ಕಾರಣ ಅವರಿಂದ ಈಚೆಗೆ ಸೂಕ್ತಿಸುಧಾರ್ಣವ, ಶಬ್ದಮಣಿದರ್ಪಣಗಳ ಕಾಲಕ್ಕಿಂತ ಮುಂಚೆ, ಸು.1250ರಲ್ಲಿದ್ದು ಕನ್ನಡದಲ್ಲಿ ಕಾವ್ಯರಚನೆ ಮಾಡಿದ.

ಹೀಗೆ ಗುಣನಂದಿಕವಿಯ ಚರಿತ್ರೆಯಲ್ಲಿ ಕೆಲವು ತೊಡಕುಗಳಿರುವುದು ದಿಟವಾದರೂ ಮಲ್ಲಿಕಾರ್ಜುನ ಕೇಶಿರಾಜರಿಗೆ ಮೊದಲು ಗುಣನಂದಿಯೆಂಬ ಒಬ್ಬ ಕವಿಯಿದ್ದುದೂ ಆತ ಕನ್ನಡದಲ್ಲಿ ಕೃತಿರಚನೆ ಮಾಡಿದ್ದುದೂ ಸ್ಪಷ್ಟವಾದ ವಿಷಯ. ಆಯಿಬ್ಬರೂ ಉಲ್ಲೇಖಿಸಿರುವ ಗುಣನಂದಿ ಹಾಗೂ ಶಾಸನಗಳಲ್ಲಿ ಉಕ್ತನಾಗಿರುವ ಗುಣನಂದಿ ಇಬ್ಬರೂ ಅಭಿನ್ನರೋ ಅನ್ಯಾನ್ಯರೋ ಎನ್ನುವ ಅಂಶ ಮಾತ್ರ ಇನ್ನೂ ನಿಷ್ಕೃಷ್ಟವಾಗಿ ತಿಳಿದಿಲ್ಲ. ಪ್ರಸ್ತುತ ಗುಣನಂದಿಕವಿಯ ಪ್ರಸ್ತಾಪ ಬಂದಾಗ, ವಿದ್ವಾಂಸರು ಕರ್ಣಾಟಕ ಕವಿಚರಿತೆಕಾರರ ಅಭಿಪ್ರಾಯವನ್ನೇ ಉದ್ಧರಿಸುವುದು ಕಾಣುತ್ತೇವೆ. (ಟಿ.ವಿ.ವಿ.)

**ಗುಣನಿಯಂತ್ರಣ, ಸಂಖ್ಯಾಕಲನೀಯ :** ಕಾರ್ಖಾನೆಗಳಲ್ಲಿ ಭಾರಿ ಪ್ರಮಾಣದಲ್ಲಿ ತಯಾರಾಗುವ ವಸ್ತುಗಳ ಗುಣವನ್ನು ನಿಶ್ಚಿತಮಟ್ಟದಲ್ಲಿ ಇಡಲು ಆ ವಸ್ತುಗಳಿಂದ ಯಾದೃಚ್ಛಿಕವಾಗಿ ಕೆಲವನ್ನು ಆಯ್ದು ಅವುಗಳ ಮೇಲೆ ಪರೀಕ್ಷಣೆ ಮತ್ತು ವಿಶ್ಲೇಷಣೆ ನಡೆಸಿ ಬಳಿಕ ಸಂಖ್ಯಾಕಲನೀಯ ವಿಧಾನಗಳ ಅನ್ವಯದಿಂದ ತೀರ್ಮಾನ ತಳೆಯುವಿಕೆ (ಸ್ಟ್ಯಾಟಿಸ್ಟಿಕಲ್ ಕ್ವಾಲಿಟಿ ಕಂಟ್ರೋಲ್), 1920ರಿಂದ ಈಚೆಗೆ ವಿಶೇಷವಾಗಿ ವಿಕಸಿಸಿರುವ ಶಾಸ್ತ್ರವಿದು. ಇದು ತಿಳಿಸುವ ತಂತ್ರಗಳ ಉಪಯೋಗ ಕೈಗಾರಿಕೆಗಳಲ್ಲಿ ಬಹಳ ವ್ಯಾಪಕ. ಉತ್ಪಾದಿತ ವಸ್ತುಗಳ ಅಳೆಯಲ್ಪಟ್ಟ ಗುಣ ಸಾಂದರ್ಭಿಕತೆಯ ಪರಿಣಾಮವಾಗಿ ಯಾವಾಗಲೂ ಸ್ವಲ್ಪ ಏರಿಳಿತಗಳಿಗೆ ಒಳಗಾಗಿರುವುದು ಸಹಜ. ಯಾವುದೇ ಒಂದು ಉತ್ಪಾದನಾ ಮತ್ತು ಪರೀಕ್ಷಾ ವಿಧಾನದಲ್ಲಿ ಸಾಂದರ್ಭಿಕ ಕಾರಣಗಳ ಒಂದು ನಿಶ್ಚಲವ್ಯವಸ್ಥೆ ಅಡಕವಾಗಿರುತ್ತದೆ. ಇದರ ಒಳಗೆ ಏರಿಳಿತ ಅನಿವಾರ್ಯ; ಹೊರಗೆ ಇರುವ ಏರಿಳಿತಗಳ ಕಾರಣಗಳನ್ನು ಪತ್ತೆಹಚ್ಚಿ ತೊಡೆದು ಹಾಕಬಹುದು. ಈ ಉದ್ದೇಶ ಸಾಧನೆಗೆ ಶೂಹಾರ್ಟ್ ನಿಯಂತ್ರಣ ನಕ್ಷೆ ಒಂದು ಸರಳ ಆದರೂ ಪ್ರಬಲ ಸಲಕರಣೆ. ಇದು ಮೂಲತಃ ಅಮೆರಿಕದ ಬೆಲ್ ಟೆಲಿಫೋನ್ ಪ್ರಯೋಗಾಲಯಗಳ ಮೇಧಾವಿತಜ್ಞ ವಾಲ್ಟರ್ ಎ. ಶೂಹಾರ್ಟ್ ಎಂಬಾತನ ಸಾಧನೆಯ (1921–24) ಮೂರ್ತಫಲ.

ಏರಿಳಿತ ಪ್ರಕೃತಿಗತ ಮತ್ತು ಸಾರ್ವತ್ರಿಕ. ನಿಜಜೀವನದಲ್ಲಿ ನಿಶ್ಚಲತೆ ಎಂಬುದಿಲ್ಲ. ಆದರೂ ನಿಶ್ಚಲ ಕಾರಣವ್ಯವಸ್ಥೆ ಎಂಬುದಿದೆ. ಈ ವ್ಯವಸ್ಥೆಯಿಂದ ಪ್ರೇರಿತ ಫಲಿತಾಂಶಗಳು ಒಂದು ಅಗಲವಾದ ಅಥವಾ ಅಗಲಕಿರಿದಾದ ಪಟ್ಟಿಯಲ್ಲಿ ಏರಿಳಿಯುತ್ತಿರಬಹುದು. ಆದರೂ ನಿಶ್ಚಲ ಕಾರಣ ವ್ಯವಸ್ಥೆ ಕಾರ್ಯಲಿಪ್ತವಾಗಿರುವ ವರೆಗೆ ಈ ಏರಿಳಿಯುತ್ತಿರುವ ಫಲಿತಾಂಶಗಳ ನಿರ್ದಿಷ್ಟ ಶೇಕಡಾ ಭಾಗಗಳು ಸತತವಾಗಿ ನಿರ್ದಿಷ್ಟ ಪರಿಮಿತಿಗಳ ನಡುವೆ ಬೀಳುತ್ತಿರುತ್ತವೆ. ಹೀಗಾಗಿ ವೈಯಕ್ತಿಕ ಮೌಲ್ಯಗಳು ಏರಿಳಿಯುತ್ತಿದ್ದರೂ ಅವು ಒಟ್ಟಾಗಿ ಒಂದು ಸ್ಥಿರ ಪ್ರರೂಪದ (ಪ್ಯಾಟರ್ನ್) ಒಳಗೆ ಓರಣವಾಗಿ ಹೊಂದಿಕೊಳ್ಳುತ್ತವೆ. ಇಲ್ಲಿ ನಿಶ್ಚಲವಾಗಿರುವುದು ಕಾರಣವ್ಯವಸ್ಥೆ ಮತ್ತು ಅದರಿಂದಾಗಿ ಸ್ಥಿರವಾಗಿರುವುದು ಫಲಿತಾಂಶಗಳ ಸಂಭಾವ್ಯತಾ ವಿತರಣೆ (ಪ್ರಾಬೆಬಿಲಿಟಿ ಡಿಸ್ಟ್ರಿಬ್ಯೂಷನ್). ಉತ್ಪಾದನವಿಧಾನ ಇಂಥ ಸ್ಥಿರತೆಯನ್ನು ತೋರ್ಪಡಿಸುವ ಫಲಿತಾಂಶಗಳನ್ನು ಉತ್ಪಾದಿಸುವ ಮೂಲಕ

ನಿಶ್ಚಲ ಕಾರಣವ್ಯವಸ್ಥೆಯಂತೆ ವರ್ತಿಸುತ್ತಿದ್ದರೆ ಆಗ ಆ ವಿಧಾನ ಸಂಖ್ಯಾಕಲನೀಯ ನಿಯಂತ್ರಣದಲ್ಲಿದೆ ಎನ್ನುತ್ತೇವೆ.

ಏರಿಳಿತಗಳ ಹಿನ್ನಲೆಯಲ್ಲಿ ಕಾರಣಗಳನ್ನು ನಿರ್ದಿಷ್ಟಕಾರಣಗಳು (ಅಸ್ಸೈನೆಬಲ್ ಕಾಸಸ್) ಮತ್ತು ಅನಿರ್ದಿಷ್ಟ ಕಾರಣಗಳು (ಚಾನ್ಸ್ ಕಾಸಸ್) ಎಂದು ದ್ವಿವಿಧವಾಗಿ ವರ್ಗೀಕರಿಸಬಹುದು. ನಿದರ್ಶನಕ್ಕಾಗಿ, ಮಕ್ಕಳ ಆಹಾರವನ್ನು ಉತ್ಪಾದಿಸುವ ಒಂದು ಕಾರ್ಖಾನೆ ತನ್ನ ಉತ್ಪನ್ನವನ್ನು ಡಬ್ಬಗಳಲ್ಲಿ ಒಂದೊಂದು ಕಿಲೋಗ್ರಾಮಿನಂತೆ ಯಾಂತ್ರಿಕವಾಗಿ ತುಂಬಿಸಿ ಮಾರುಕಟ್ಟೆಗೆ ಕಳುಹಿಸುತ್ತಿದೆ ಎಂದು ಭಾವಿಸೋಣ. ಹೆಚ್ಚಿನ ಸಂಖ್ಯೆಯಲ್ಲಿ ಅಂಥ ಡಬ್ಬಗಳನ್ನು ತುಂಬಿಸುವಾಗ ಪ್ರತಿಯೊಂದರಲ್ಲಿರುವ ಆಹಾರದ ತೂಕವನ್ನು ನಿಖರವಾಗಿ ಒಂದು ಕಿಲೋಗ್ರಾಮಿಗೆ ಬಂಧಿಸಿಡುವುದು ಅಸಾಧ್ಯ. ಆ ತೂಕದಲ್ಲಿ ತುಸು ಏರಿಳಿತ ಸಹಜ, ಅನಿವಾರ್ಯ. ಆದರೂ ಆ ತೂಕ ನಿಗದಿಮಾಡಲ್ಪಟ್ಟ ಎರಡು ಪರಿಮಿತಿಗಳ ನಡುವೆ (ಉದಾಹರಣೆಗೆ 998 ಮತ್ತು 1002 ಗ್ರಾಮುಗಳ ನಡುವೆ) ಇರುವಂತೆ ಪ್ರಯತ್ನಿಸಬಹುದು. ಇದು ಸಾಧ್ಯ ಕೂಡ. ಮೇಲೆ ವಿವರಿಸಿದ ತೂಕದ ಏರಿಳಿತ ಯಾಂತ್ರಿಕ ಸಂಯೋಜನೆಯ ದೋಷದಿಂದ ಉಂಟಾಗುತ್ತಿರಬಹುದು. ಇದು ಒಂದು ನಿರ್ದಿಷ್ಟ ಕಾರಣ. ಒಂದು ದತ್ತ ಸಂದರ್ಭದಲ್ಲಿ ಇಂಥ ಕಾರಣಗಳು ಒಂದು ಅಥವಾ ಎರಡು ಇರಬಹುದು ಅಥವಾ ಒಂದೂ ಇಲ್ಲದಿರಬಹುದು. ಅವು ಇದ್ದಾಗ ಉತ್ಪಾದಿತ ವಸ್ತುಗಳ ಗುಣದ ಮೌಲ್ಯಗಳ ಮೇಲೆ ಅವುಗಳ ಪ್ರಭಾವ ಲಕ್ಷ್ಯಾರ್ಹ ವಾಗಿರುತ್ತದೆ. ಅಂಥ ಕಾರಣಗಳ ಇರುವಿಕೆಯನ್ನು ಪತ್ತೆಹಚ್ಚಿ ವಿಧಾನಗಳಲ್ಲಿ ಅವಶ್ಯವಿರುವ ಬದಲಾವಣೆಗಳನ್ನು ಮಾಡುವುದರ ಮೂಲಕ ಅವನ್ನು ತೊಡೆದು ಹಾಕಬಹುದು. ಹಾಗೆ ಮಾಡುವುದು ಆರ್ಥಿಕವಾಗಿಯೂ ಸೂಕ್ತ. ಇನ್ನು ಉಳಿದ ಕಾರಣಗಳ ಪ್ರಭಾವ ಲಕ್ಷ್ಯಾರ್ಹವಲ್ಲದಿರಬಹುದು. ಅವನ್ನು ಪತ್ತೆಹಚ್ಚುವುದು ಕಷ್ಟ ಮತ್ತು ಆರ್ಥಿಕವಾಗಿಯೂ ಸೂಕ್ತವಲ್ಲ. ಇವು ಅನಿರ್ದಿಷ್ಟ ಕಾರಣಗಳು. ಶೂಹಾರ್ಟ್ ವಿಧಾನದ ಸಾಫಲ್ಯ ನಿರ್ದಿಷ್ಟಕಾರಣಗಳನ್ನು ಅನಿರ್ದಿಷ್ಟಕಾರಣಗಳಿಂದ ಪ್ರತ್ಯೇಕಿಸುವ ಅದರ ಸಾಮರ್ಥ್ಯದಲ್ಲಿದೆ. ವಿಧಾನದಲ್ಲಿರುವ ನಿರ್ದಿಷ್ಟಕಾರಣಗಳನ್ನು ಪತ್ತೆಹಚ್ಚಿ ತೊಡೆದುಹಾಕುವುದಕ್ಕೆ ವಿಧಾನವನ್ನು ಸಂಖ್ಯಾಕಲನೀಯ ನಿಯಂತ್ರಣಕ್ಕೆ ತರುವುದು ಎಂದು ಹೆಸರು.

ಹಿನ್ನಲೆಯಲ್ಲಿರುವ ಸಂಭಾವ್ಯತಾ ವಿತರಣೆ ಸ್ಥಿರವಾಗಿರುವಾಗ ವಸ್ತುಗುಣದ ಮೌಲ್ಯಗಳ ಏರಿಳಿತಗಳಿಗೆ ಸ್ವಾಭಾವಿಕ ಪರಿಮಿತಿಗಳನ್ನು (ನ್ಯಾಚುರಲ್ ಲಿಮಿಟ್ಸ್) ರಚಿಸಬಹುದು. ಅಂದರೆ, ಹಿನ್ನಲೆಯಲ್ಲಿರುವ ಸಂಭಾವ್ಯತಾ ವಿತರಣೆ ಬದಲಾಗದ ಹೊರತು ಯಾವುದೇ ಒಂದು ಮೌಲ್ಯ ಇಂಥ ಪರಿಮಿತಿಗಳನ್ನು ಉಲ್ಲಂಘಿಸುವುದು ಅಪರೂಪ. ಹೀಗಾಗಿ ಇಂಥ ವಿದ್ಯಾಮಾನವನ್ನು ಹಿನ್ನಲೆಯಲ್ಲಿರುವ ವಿತರಣೆ ಬದಲಾವಣೆಗೊಂಡುದರ ಸೂಚಕವಾಗಿ ತೆಗೆದುಕೊಳ್ಳುತ್ತೇವೆ.

$\overline{R} = \frac{1}{k}\sum_{i=1}^{k} R_i$

ಉಪಯೋಗಕ್ಕೆ ಅರ್ಹತೆಯೇ ವಸ್ತುವಿನ ಗುಣ. ಮಕ್ಕಳ ಆಹಾರದ ಡಬ್ಬಗಳ ನಿದರ್ಶನದಲ್ಲಿ ಡಬ್ಬಗಳ ಒಂದು ಗುಣ ಅವುಗಳಲ್ಲಿರುವ ಆಹಾರದ ತೂಕ. ಈ ಗುಣವನ್ನು ಅಳೆದು ಸಂಖ್ಯಾರೂಪದಲ್ಲಿ ಹೇಳಬಹುದು. ಉದಾಹರಣೆಗೆ 998 ಗ್ರಾಮುಗಳು. ಇಂಥ ಗುಣಗಳು ಚರಗಳು. ವಸ್ತುಗಳನ್ನು ಇಂಥ ಒಂದು ಗುಣಕ್ಕೆ ಅನುಸಾರವಾಗಿ ವರ್ಗೀಕರಿಸಿದರೆ, ಆ ವರ್ಗೀಕರಣಕ್ಕೆ ಚರಾತ್ಮಕ ವರ್ಗೀಕರಣ ಎಂದು ಹೆಸರು. ಅನೇಕ ವೇಳೆ ಗುಣಗಳನ್ನು ಅಳೆದು ಸಂಖ್ಯಾರೂಪದಲ್ಲಿ ಹೇಳುವುದು ಸಾಧ್ಯವಿಲ್ಲ ಅಥವಾ ಸೂಕ್ತವಲ್ಲ. ನಿದರ್ಶನಕ್ಕಾಗಿ, ಗಾಜಿನ ಒಂದು ಹಾಳೆಯಲ್ಲಿ ಬಿರುಕು ಇರಬಹುದು ಅಥವಾ ಇಲ್ಲದಿರಬಹುದು. ಇದು ವಸ್ತುಗಳ ದೋಷಯುಕ್ತ–ದೋಷಮುಕ್ತ ಎಂಬ ದ್ವಿವಿಧ ವರ್ಗೀಕರಣ. ಎರಡೂ ತರದ ವರ್ಗೀಕರಣಗಳಿಗೆ ಹೊಂದಿಕೊಳ್ಳುವ ನಿಯಂತ್ರಣ ನಕ್ಷೆಗಳಿವೆ. ಗಣಿತೀಯ ಸಂಖ್ಯಾಕಲನಶಾಸ್ತ್ರದಲ್ಲಿ ದತ್ತಾಂಶಗಳ ವಿಶ್ಲೇಷಣೆಗೆ ಉಪಯೋಗಿಸುವ ಹೆಚ್ಚಿನ ಎಲ್ಲ ತಂತ್ರಗಳನ್ನು ವಸ್ತುಗುಣದ ನಿಯಂತ್ರಣಕ್ಕೆ ಉಪಯೋಗಿಸಿಕೊಳ್ಳಬಹುದು. ಇಂಥ ಎಲ್ಲ ತಂತ್ರಗಳ ಉಪಯೋಗದ ಸಮಗ್ರತೆಯನ್ನು ಸಂಖ್ಯಾಕಲನೀಯ ಗುಣನಿಯಂತ್ರಣ ಎನ್ನಬಹುದು. ಆಚರಣೆಯಲ್ಲಿ ನಾಲ್ಕು ವಿಭಿನ್ನ ಆದರೆ ಸಂಬಂಧಿತ ತಂತ್ರಗಳ ಬಳಕೆ ವ್ಯಾಪಕವಾಗಿದೆ.

**1 ಚರಾತ್ಮಕ ವರ್ಗೀಕರಣಕ್ಕೆ ಸರಿಹೊಂದುವ ನಿಯಂತ್ರಣ ನಕ್ಷೆಗಳು ( ಮತ್ತು $R$ ಅಥವಾ $X$ ಮತ್ತು $\sigma$–ನಕ್ಷೆಗಳು).** ಪರೀಕ್ಷೆಗೆ ಒಳಪಟ್ಟಿರುವ ವಸ್ತುಗುಣವನ್ನು $X$ ಎಂದು ಸೂಚಿಸೋಣ. ಸಮಷ್ಟಿಯಲ್ಲಿ (ಯೂನಿವರ್ಸ್) $X$ನ ಸಂಭಾವ್ಯತಾ ವಿತರಣೆ ನಿರೀಕ್ಷೆ (ಎಕ್ಸ್‌ಪೆಕ್ಟೆಡ್ ವ್ಯಾಲ್ಯೂ) $\overline{X'}$ಮತ್ತು ವಿಚರಣೆ (ವೇರಿಯನ್ಸ್) $\sigma'^2$ ಇರುವ ಪ್ರಸಾಮಾನ್ಯ ವಿತರಣೆ (ನಾರ್ಮಲ್ ಡಿಸ್ಟ್ರಿಬ್ಯೂಷನ್) ಎಂದು ಭಾವಿಸೋಣ. ಈ ಸಮಷ್ಟಿಯಿಂದ ಪ್ರತಿಯೊಂದರಲ್ಲಿ $n$ ವಸ್ತುಗಳಿರುವ $k$ ಉಪಗುಂಪುಗಳನ್ನು ಆರಿಸಲಾಗಿದೆ, ಉಪಗುಂಪು i ಯಲ್ಲಿರುವ ವಸ್ತು jಯ ಗುಣದ ಮೌಲ್ಯ $X_{ij}\left(j = 1, 2, \cdots, n\,;\, i = 1, 2, \cdots k\right)$

$$\overline{X}_i = \frac{1}{n}\sum_{j=1}^{n} X_{ij}\quad,\quad i = 1, 2, \cdots, k$$

$$\overline{\overline{X}} = \frac{1}{k}\sum_{i=1}^{k} \overline{X}_i$$

$$R_i = X_{i(max)} - X_{i(min)}\quad,\quad i = 1, 2, \cdots, k$$

=ಉಪಗುಂಪು $i$ ಯಲ್ಲಿ ಮೌಲ್ಯಗಳ ವ್ಯಾಪ್ತಿ

$$\sigma_i^{\,2} = \frac{1}{n}\sum_{i=1}^{n}\left(X_{ij} - \overline{X}_i\right)^2,\quad i = 1, 2, \cdots, k$$

$$\overline{\sigma} = \frac{1}{k}\sum_{i=1}^{k}\sigma_i$$

$\overline{X}-$ನಕ್ಷೆಯಲ್ಲಿ $\overline{X}_i$ ಯ ಮೌಲ್ಯಗಳನ್ನು ಗುರುತಿಸಲಾಗುವುದು. $\left(\overline{X}' \mp 3\sigma'/\sqrt{n}\right)$ ಗಳು $\overline{X}_i$ ಯ ಮೌಲ್ಯಗಳಿಗೆ ಸ್ವಾಭಾವಿಕ ಪರಿಮಿತಿಗಳು. ಹೀಗಾಗಿ $\overline{X}_i$ ಯ ಮೌಲ್ಯಕ್ಕೆ $\left(\overline{X}' - 3\sigma'/\sqrt{n}\right)$ ಎಂಬುದನ್ನು ಕನಿಷ್ಠ ನಿಯಂತ್ರಣ ಪರಿಮಿತಿ (ಕ.ನಿ.ಪ. $\overline{X}$ ) ಮತ್ತು $\left(\overline{X}' + 3\sigma'/\sqrt{n}\right)$ ಎಂಬುದನ್ನು ಗರಿಷ್ಠ ನಿಯಂತ್ರಣ ಪರಿಮಿತಿ (ಗ.ನಿ.ಪ. $\overline{X}$ ) ಆಗಿ ಉಪಯೋಗಿಸಬಹುದು. $\overline{X}'$ಎಂಬುದು $\overline{X}-$ ನಕ್ಷೆಯಲ್ಲಿ ಮಧ್ಯರೇಖೆ. ನಿರ್ದಿಷ್ಟ ಕಾರಣಗಳ ಇರುವಿಕೆಯನ್ನು ಇಂಥ ನಕ್ಷೆಯಲ್ಲಿ ಕೆಳಗಿನ ವೈಶಿಷ್ಟ್ಯಗಳು ತೋರಿಸುತ್ತವೆ.

(a) ಗ.ನಿ.ಪ. $\overline{X}$ನ ಮೇಲಿರುವ ಬಿಂದುಗಳು

(b) ಕ.ನಿ.ಪ $\overline{X}$ನ ಕೆಳಗಿರುವ ಬಿಂದುಗಳು

(c) ಮಧ್ಯರೇಖೆ $\overline{X}$ನ ಒಂದೇ ಪಾರ್ಶ್ವದಲ್ಲಿ ಇರುವ ಹಲವು ಬಿಂದುಗಳ ಅವಿರತ ಸರಣಿ. ಉದಾಹರಣೆಗೆ 14 ಬಿಂದುಗಳ ಪೈಕಿ 12 ಅಥವಾ ಅದಕ್ಕಿಂತ ಹೆಚ್ಚು ಬಿಂದುಗಳ ಸರಣಿ.

$\overline{X}', \sigma'$ಗಳ ಮೌಲ್ಯಗಳು ಅವ್ಯಕ್ತವಾಗಿರುವಾಗ ಅವುಗಳ ಅಂದಾಜು ಮೌಲ್ಯಗಳಾಗಿ ಅನುಕ್ರಮವಾಗಿ $\overline{\overline{X}}$, $\overline{R}/d_2$ ಗಳನ್ನು ಉಪಯೋಗಿಸುತ್ತೇವೆ. ಗುಣಾಂಕ $d_2$ರ ಮೌಲ್ಯಗಳನ್ನು ಕೊಡುವ ಮುದ್ರಿತ ಕೋಷ್ಟಕಗಳಿವೆ.

$R-$ನಕ್ಷೆ ಉಪಗುಂಪುಗಳ ವ್ಯಾಪ್ತಿಗಳನ್ನು ತೋರಿಸುತ್ತದೆ. ಇದರಲ್ಲಿ ಮಧ್ಯರೇಖೆ $_R = \overline{R}$ ಕ.ನಿ.ಪ $R = D_3\overline{R}$ ಮತ್ತು ಗ.ನಿ.ಪ. $R = D_4\overline{R}$. $\sigma-$ ನಕ್ಷೆಯಲ್ಲಿ ಮಧ್ಯರೇಖೆ ಕ.ನಿ.ಪ ಗ.ನಿ.ಪ. ಗುಣಾಂಕಗಳಾದ $D_3, D_4, B_3$ ಮತ್ತು $B_4$ಗಳ ಮೌಲ್ಯಗಳನ್ನು ಕೊಡುವ ಮುದ್ರಿತ ಕೋಷ್ಟಕಗಳಿವೆ. $R$ ಮತ್ತು $\sigma-$ ನಕ್ಷೆಗಳೆರಡೂ ಮೌಲ್ಯಗಳ ಚದರಿಕೆಯನ್ನು (ಡಿಸ್ಪರ್ಶನ್) ತೋರಿಸುವ ನಕ್ಷೆಗಳಾದ್ದರಿಂದ ಆಚರಣೆಯಲ್ಲಿ ಅವುಗಳ ಪೈಕಿ ಯಾವುದಾದರೂ ಒಂದನ್ನೇ ಬಳಸುವುದು ರೂಢಿ. ಅದರಲ್ಲೂ ನಕ್ಷೆಯ ಉಪಯೋಗವೇ ಜಾಸ್ತಿ. ಕೆಲವೊಂದು ವಿಶಿಷ್ಟ ಸಂದರ್ಭಗಳಿಗೆ ಹೊಂದಿಕೊಳ್ಳುವ $\overline{X}, R$ ಮತ್ತು $\sigma-$ನಕ್ಷೆಗಳ ರೂಪಾಂತರಗಳಿವೆ.

**(2) ನಕ್ಷೆ:** ಒಂದು ವಸ್ತುವಿನಲ್ಲಿ ನಿಗದಿಮಾಡಿದ ಅರ್ಹತೆಗಳು ಇಲ್ಲದಿದ್ದರೆ ಅದನ್ನು ದೋಷಯುಕ್ತ ಎನ್ನುತ್ತೇವೆ. ಅದರಲ್ಲಿ ಅಂಥ ಅರ್ಹತೆಗಳು ಇದ್ದರೆ ಅದು ದೋಷಮುಕ್ತ. ಯಾವುದೇ ಒಂದು ಪರೀಕ್ಷಾ ವಿಧಾನದಲ್ಲಿ ದೊರೆತ ದೋಷಯುಕ್ತ ವಸ್ತುಗಳ ಸಂಖ್ಯೆಯನ್ನು ಪರೀಕ್ಷಿಸಲ್ಪಟ್ಟ ವಸ್ತುಗಳ ಒಟ್ಟು ಸಂಖ್ಯೆಯಿಂದ ಭಾಗಿಸಿದರೆ ಸಿಗುವ ಭಿನ್ನರಾಶಿ $p$, $p$- ನಕ್ಷೆಯಲ್ಲಿ ಈ ಭಿನ್ನರಾಶಿಯ ಮೌಲ್ಯಗಳನ್ನು ಗುರುತಿಸಲಾಗುವುದು. ಈ ನಕ್ಷೆಯ ಸೈದ್ಧಾಂತಿಕ ತಳಹದಿ ದ್ವಿಪದಸಂಭಾವ್ಯತಾ ವಿತರಣೆ (ಬೈನಾಮಿಯಲ್ ಪ್ರಾಬೆಬಿಲಿಟಿ ಡಿಸ್ಟ್ರಿಬ್ಯೂಷನ್). ಪರೀಕ್ಷಿಸಲ್ಪಟ್ಟ ವಸ್ತುಗಳ ಸಂಖ್ಯೆ $n$ ಆಗಿದ್ದು ದೊರೆತ ದೋಷಯುಕ್ತ ವಸ್ತುಗಳ ಸಂಖ್ಯೆ $d$ ಆಗಿದ್ದರೆ $p$ ತೆಗೆದುಕೊಳ್ಳ ಬಹುದಾದ ಮೌಲ್ಯಗಳು, ಮತ್ತು ಅನುರೂಪವಾದ ಸಂಭಾವ್ಯತೆಗಳು $\left[p' + (1 - p')\right]^n$ನ ದ್ವಿಪದ ವಿಸ್ತರಣೆಯ ಅನುಕ್ರಮಪದಗಳು.

ಇಲ್ಲಿ $p'$= ಉತ್ಪಾದನಾ ವಿಧಾನದಲ್ಲಿ ದೋಷಯುಕ್ತ ವಸ್ತುಗಳ ಪ್ರಮಾಣ. ಆಗ

ಮಧ್ಯರೇಖೆ ಕ.ನಿ.ಪ. ಗ.ನಿ.ಪ.

$_p = p' + 3\sqrt{\frac{p'(1-p')}{n}}$ . $p'$ ಅವ್ಯಕ್ತವಾಗಿರುವಾಗ ಅದನ್ನು $\overline{p} =$ ಒಟ್ಟು ದೊರೆತ ದೋಷಯುಕ್ತ ವಸ್ತುಗಳ ಪ್ರಮಾಣ ಎಂದು ಅಂದಾಜು ಮಾಡಬಹುದು. ನಕ್ಷೆ ನಕ್ಷೆಯ ಒಂದು ರೂಪಾಂತರ. ಅದು ದೋಷಯುಕ್ತ ವಸ್ತುಗಳ ಸಂಖ್ಯೆ ಯನ್ನು ತೋರಿಸುತ್ತದೆ.

**(3)** $C$-**ನಕ್ಷೆ** : ಯಾವುದೇ ಒಂದು ಪರೀಕ್ಷಾ ವಿಧಾನದಲ್ಲಿ ಒಂದು ವಸ್ತುವಿನಲ್ಲಿ (ಅಥವಾ ವಸ್ತುಗಳ ಒಂದು ಗುಂಪಿನಲ್ಲಿ) ಕಂಡುಹಿಡಿಯಲ್ಪಟ್ಟ ದೋಷಗಳ ಸಂಖ್ಯೆಯನ್ನು $C$ ಎಂದು ಸೂಚಿಸುತ್ತೇವೆ. $C$– ನಕ್ಷೆಯಲ್ಲಿ $C$ಯ ಮೌಲ್ಯಗಳನ್ನು ಗುರುತಿಸಲಾಗುವುದು. ವಸ್ತುವಿನಲ್ಲಿ ದೋಷಗಳಿರಲು ವಿಪುಲ ಅವಕಾಶವಿದ್ದರೂ ಅದರ ಯಾವುದೇ ಒಂದು ಬಿಂದುವಿನಲ್ಲಿ ದೋಷವಿರುವ ಸಂಭಾವ್ಯತೆ ಬಹಳ ಕಡಿಮೆ ಇದ್ದರೆ ಅಂಥ ಸಂರ್ಭದಲ್ಲಿ $C$ ಒಂದು ಪ್ಯೊಸೋನ್ ವಿತರಣೆಯುಳ್ಳ ಯಾದೃಚ್ಛಿಕ ಚರ ಎಂದು ಹೇಳಬಹುದು. $C'$ಎಂಬುದು ಈ ವಿತರಣೆಯ ನಿರೀಕ್ಷೆಯಾದರೆ ಆಗ ಮಧ್ಯರೇಖೆ $c = C'$, ಕ.ನಿ.ಪ. ಮತ್ತು ಗ.ನಿ.ಪ. $c = C' + 3\sqrt{C^1}$ . $C^1$ ಅವ್ಯಕ್ತವಾಗಿದ್ದರೆ ಅದನ್ನು ಒಟ್ಟು ದೊರೆತ ದೋಷಗಳ ಸರಾಸರಿ ಸಂಖ್ಯೆ ಎಂದು ಅಂದಾಜು ಮಾಡಬಹುದು. $p$ ಮತ್ತು $C$- ನಕ್ಷೆಗಳು ಮತ್ತು ಅವುಗಳ ರೂಪಾಂತರಗಳು ದ್ವಿವಿಧ ವರ್ಗೀಕರಣಕ್ಕೆ ಸೂಕ್ತವಾಗಿವೆ.

ನಿಯಂತ್ರಣನಕ್ಷೆಯ ವಿಧಾನ ಪರಿಣಾಮಕಾರಿಯಾಗಬೇಕಾದರೆ ಯಾವುದೇ ಒಂದು ಉಪಗುಂಪಿನಲ್ಲಿರುವ ವಸ್ತುಗಳ ಗುಣದ ಮೌಲ್ಯಗಳಲ್ಲಿ ಏರಿಳಿತಕ್ಕೆ ಆದಷ್ಟು ಕಡಿಮೆ ಅವಕಾಶ ಇದ್ದು ಏರಿಳಿತಗಳು ಉಪಗುಂಪುಗಳ ನಡುವೆ ಹಂಚಿಹೋಗಬೇಕು. ಶೂಹಾರ್ಟ್ ಇವನ್ನು ಪರಿಮೇಯ ಉಪಗುಂಪುಗಳು ಎಂದು ಕರೆದಿದ್ದಾನೆ. ಉಪಗುಂಪುಗಳಲ್ಲಿರುವ ವಸ್ತುಗಳ ಆದರ್ಶಸಂಖ್ಯೆ $n$ = 4ಎಂದೂ ಸೂಚಿಸಿದ್ದಾನೆ. ಬಳಕೆಯಲ್ಲಿ $n$ = 5ರ ಉಪಯೋಗ ವ್ಯಾಪಕವಾಗಿದೆ.

**4 ಸ್ವೀಕಾರ ಪ್ರತಿಚಯನ ವಿಧಾನಗಳು (ಆ್ಯಕ್ಸೆಪ್ಟೆನ್ಸ್ ಸ್ಯಾಂಪ್ಲಿಂಗ್ ಪ್ರೊಸೀಜರ್ಸ್):** ವಸ್ತುಗಳನ್ನು ಸ್ವೀಕರಿಸುವ ಮೊದಲು ಅವುಗಳ ಗುಣಮಟ್ಟವನ್ನು ಖಾತ್ರಿಮಾಡಿಕೊಳ್ಳಲು ಉತ್ಪಾದನೆಯ ಹಲವು ಹಂತಗಳಲ್ಲಿ ಮತ್ತು ಕೊನೆಗೆ ಬಳಕೆದಾರರು ಕೊಂಡುಕೊಳ್ಳುವ ಮೊದಲು ಪರೀಕ್ಷಿಸುವ ಪದ್ಧತಿ ಬಳಕೆಯಲ್ಲಿದೆ. ಈ ಉದ್ದೇಶಸಾಧನೆಗೆ ಬಳಸಬಹುದಾದ ವಿವಿಧ ತಂತ್ರಗಳ ಸಮಗ್ರತೆಗೆ ಸ್ವೀಕಾರ ಪ್ರತಿಚಯನ ವಿಧಾನಗಳು ಎಂದು ಹೆಸರು. ಚರಾತ್ಮಕ ಮತ್ತು ದ್ವಿವಿಧ ವರ್ಗೀಕರಣಗಳಿಗೆ ಅನ್ವಯಿಸುವ ಇಂಥ ವಿಧಾನಗಳಿವೆ.

ಸಂಖ್ಯಾಕಲನೀಯ ಗುಣನಿಯಂತ್ರಣ ಅನೇಕ ಉತ್ಪಾದನಾತೊಡಕುಗಳನ್ನು ಗುರುತಿಸಿ ನಿವಾರಿಸಲು ಎಡೆಮಾಡಿಕೊಡುತ್ತದೆ; ವಸ್ತುಗುಣದಲ್ಲಿ ಗಮನಾರ್ಹ ಅಭಿವೃದ್ಧಿಗೆ ಕಾರಣವಾಗುತ್ತದೆ. ಅದೂ ಅಲ್ಲದೆ ಕೆಲವೊಂದು ಏರಿಳಿತಗಳನ್ನು ಅನಿವಾರ್ಯವೆಂದು ಗುರುತಿಸಿ ಅನಾವಶ್ಯಕವಾದ ಪದೇ ಪದೇ ಬದಲಾವಣೆಗಳನ್ನು ತಡೆಯುತ್ತದೆ. ಈ ವಿಧಾನದ ಉಪಯೋಗ ಕೇವಲ ಕೈಗಾರಿಕಾ ರಂಗಕ್ಕೆ ಸೀಮಿತವಾಗಿಲ್ಲ. ವಸ್ತುಗುಣದ ಬಗ್ಗೆ ಆಸಕ್ತಿವಹಿಸಬೇಕಾದ ಎಲ್ಲ ರಂಗಗಳಿಗೆ ಇದರ ವ್ಯಾಪ್ತಿಯಾಗುತ್ತದೆ. (ಎಸ್.ಟಿ.)

**ಭಾರತದಲ್ಲಿ ಗುಣನಿಯಂತ್ರಣ:** 1936ರಿಂದೀಚೆಗೆ ಭಾರತದಲ್ಲಿ ಗುಣನಿಯಂತ್ರಣ ಬಳಕೆಗೆ ಬಂದಿದೆ. ಮಹಾಲನೋಬಿಸ್ ಇದರ ಆದ್ಯಪ್ರವರ್ತಕರೆನ್ನಬಹುದು. 1944ರಲ್ಲಿ ಕೇಂದ್ರ ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾಮಂಡಲಿ ಸಂಖ್ಯಾಕಲನೀಯ ಗುಣನಿಯಂತ್ರಣದ ಉಪಯೋಗ ಪಡೆಯುವ ಸಾಧ್ಯತೆಯ ಬಗ್ಗೆ ಪರಿಶೀಲನೆ ನಡೆಸಲು ಸಂಖ್ಯಾಸಂಗ್ರಹಣ ದರ್ಜೆ ಮತ್ತು ಗುಣನಿಯಂತ್ರಣ ಮಂಡಲಿಯೊಂದನ್ನು ಸ್ಥಾಪಿಸಿತು. ಇದಾದ ಬಳಿಕ ಭಾರತ ಗುಣಯಂತ್ರಣ ಕ್ಷೇತ್ರದಲ್ಲಿ ಉತ್ತಮಪ್ರಗತಿ ಸಾಧಿಸಿದೆ. ಈಗ ಪ್ರತಿಯೊಂದು ರಾಜ್ಯದಲ್ಲೂ ಸಂಖ್ಯಾಕಲನೀಯ ಗುಣನಿಯಂತ್ರಣ ಕೇಂದ್ರಗಳು ಕೇಂದ್ರಸರ್ಕಾರದ ಸ್ವಾಮ್ಯದಲ್ಲಿ ನಡೆಯುತ್ತಿದ್ದು ಪದಾರ್ಥಗಳ ಗುಣಮಟ್ಟವನ್ನು ನಿಯಂತ್ರಿಸಲು ಮತ್ತು ಸಾಧಿಸಲು ಬಹುವಾಗಿ ಶ್ರಮಿಸುತ್ತಿವೆ. ಭಾರತದಲ್ಲಿ ಈಗಾಗಲೇ ಅನೇಕ ವಸ್ತುಗಳು ಗುಣನಿಯಂತ್ರಣಕ್ಕೊಳಗಾಗಿವೆ. ಅವುಗಳಲ್ಲಿ ಮುಖ್ಯವಾದವು ಸೆಣಬು, ಹೊಗೆಸೊಪ್ಪು, ಉಣ್ಣೆ, ಗಂಧದೆಣ್ಣೆ, ಅಲ್ಯೂಮಿನಿಯಂ ವಸ್ತುಗಳು ಮತ್ತು ಚಹಾರವಾನೆ ಪೆಟ್ಟಿಗೆ. ಪ್ರಪಂಚದಲ್ಲಿ ಗುಣನಿಯಂತ್ರಣದ ಕ್ಷೇತ್ರದಲ್ಲಿ ಅತ್ಯಂತ ಹೆಚ್ಚಿನ ಪ್ರಗತಿಯನ್ನು ಸಾಧಿಸಿರುವ ದೇಶ ಜಪಾನ್. ಆದ್ದರಿಂದಲೇ ಅದಕ್ಕೆ ಪ್ರಪಂಚದ ಮಾರುಕಟ್ಟೆಯಲ್ಲಿಯೇ ಬಹುಮುಂದುವರಿದಿರುವ ರಾಷ್ಟ್ರಗಳ ಸಂಗಡ ಸ್ಪರ್ಧಿಸಿ ತನ್ನ ವಸ್ತುಗಳನ್ನು ಅತ್ಯಂತ ಕಡಿಮೆ ಬೆಲೆಯಲ್ಲಿ ಮಾರಲು ಸಾಧ್ಯವಾಗಿದೆ. (ಕೆ.ಎಸ್.ಎಸ್.)

**ಗುಣಭದ್ರ :** ಆದಿಪುರಾಣಕಾರರಾದ ಜಿನಸೇನರ ಶಿಷ್ಯ; ಉತ್ತರಪುರಾಣದ ಕರ್ತೃ. ತ್ರಿಷಷ್ಟಿಶಲಾಕಾಪುರುಷರ ಚರಿತ್ರೆಯನ್ನು ವಿಸ್ತಾರವಾಗಿ ವರ್ಣಿಸಬೇಕೆಂಬ ಬಯಕೆಯಿಂದ ಗುರು ಜಿನಸೇನರು ಮಹಾಪುರಾಣವನ್ನು ಆರಂಭಿಸಿದರು. ರಾಷ್ಟ್ರಕೂಟ ಅರಸನಾದ ನೃಪತುಂಗನ (ಪ್ರ.ಶ. 9ನೆಯ ಶತಮಾನ) ಆಶ್ರಯದಲ್ಲಿ. ಆದರೆ 42 ಪರ್ವಗಳ 15000 ಶ್ಲೋಕಗಳನ್ನು ಅವರು ರಚಿಸಿದರೂ ಮರಣಕಾಲಕ್ಕೆ ಮೊದಲನೆಯ ತೀರ್ಥಂಕರನಾದ ಆದಿನಾಥನ ಚರಿತ್ರೆಯೇ ಇನ್ನೂ ಮುಗಿದಿರಲಿಲ್ಲ; ಅಷ್ಟು ಬೃಹತ್ತಾದ ಕಲ್ಪನೆ ಜಿನಸೇನರದು. ಗುರುಗಳು ಆರಂಭಿಸಿದ ಮಹಾಕಾರ್ಯವನ್ನು ಸಮರ್ಥವಾಗಿ ಮುಗಿಸಿದ ಮಹಾಕೀರ್ತಿ ಶಿಷ್ಯ ಗುಣಭದ್ರನದು. ಉಳಿದ 23 ತೀರ್ಥಂಕರರ ಚರಿತ್ರೆಯನ್ನೂ ಜೀವಂಧರನೇ ಮುಂತಾದವರ ವೃತ್ತಾಂತವನ್ನೂ ಶಲಾಕಾಪುರುಷರ ಜೀವನವನ್ನೂ ಸಂಕ್ಷಿಪ್ತವಾದರೂ ಸಮಗ್ರವಾಗಿ ನಿರೂಪಿಸಿ, ಮುಂದಿನ ಜೈನಪುರಾಣಕಾರರೆಲ್ಲರಿಗೂ ಏಕಮಾನ್ಯ ಆಕರಗ್ರಂಥವೆನಿಸಿದ ಉತ್ತರಪುರಾಣವನ್ನು ಈತ ಕರ್ನಾಟಕದಲ್ಲಿಯೇ ಬರೆದು ಮುಗಿಸಿದ. ಮುನಿಸುವ್ರತನ ಚರಿತ್ರೆಯ ಅಂಗವಾಗಿ ಜೈನ ರಾಮಾಯಣದ ಕಥಾಭಾಗವೂ ಇಲ್ಲಿಯೇ ಬರುತ್ತದೆ. ಪ್ರಹೀಣಕಾಲದ ಅಭಿರುಚಿಯನ್ನು ಗಮನಿಸಿ, ಈತ ಅತಿ ವಿಸ್ತಾರಕ್ಕೆ ಹೋಗಿಲ್ಲ.

ಆದಿಪುರಾಣದ ಕಡೆಯ 4 ಪರ್ವ (ಮತ್ತು ಮೂರು ಶ್ಲೋಕಗಳು), ಮತ್ತು ಉತ್ತರಪುರಾಣದ ಸುಮಾರು 8,000 ಶ್ಲೋಕಗಳು ಗುಣಭದ್ರನ ರಚನೆ. ಈತನಿಗೆ ಗುರುಭಕ್ತಿ ಅಪಾರ; ಕಬ್ಬಿನಂತೆ ಪೂರ್ವಾರ್ಧವು ರಸವತ್ತಾಗಿರುತ್ತದೆ; ಅದರಂತೆಯೆ ಉತ್ತರಾರ್ಧವು ಆಗಿರಲಿ; ನನ್ನ ಮಾತು ಸವಿಯಾಗಿದ್ದರೆ ಅದಕ್ಕೆ ಗುರುಗಳ ಮಹಿಮೆಯೇ ಕಾರಣ–ಎನ್ನುತ್ತಾನೆ, ಗುಣಭದ್ರ. ಉತ್ತರಪುರಾಣದಲ್ಲಿ ಕಥಾಭಾಗಕ್ಕೆ, ಘಟನಾಬಾಹುಲ್ಯಕ್ಕೆ, ಪ್ರಾಧಾನ್ಯವಿದ್ದರೂ ವರ್ಣನಾಚಮತ್ಕಾರ ಕಡಿಮೆಯಾಗಿಲ್ಲ. ಜಿನಸೇನರ ಸಮಕ್ಕೆ ಬಾರದಿದ್ದರೂ ಕವಿತಾಗುಣದಲ್ಲಿ ಪ್ರಸನ್ನತೆ, ಮಾಧುರ್ಯಗಳಿವೆ. ಹೀಗೆ ಧಾರ್ಮಿಕ ಪುರಾಣವೆಂಬ ದೃಷ್ಟಿಯಿಂದ ಇದು ಪೂಜ್ಯ ಗ್ರಂಥವಾಗಿರುವುದಷ್ಟೇ ಅಲ್ಲ, ಕಥಾಗಾತ್ರದ ದೃಷ್ಟಿಯಿಂದ ಗೌರವಾಸ್ಪದವಾಗಿದೆ. ಕಾವ್ಯಸೌಂದರ್ಯದ ದೃಷ್ಟಿಯಿಂದಲೂ ಆದರಣೀಯವಾಗಿದೆ. ಎಲ್ಲಕ್ಕಿಂತ ಹೆಚ್ಚಾಗಿ, ಈ ಗ್ರಂಥ ಸಂಸ್ಕೃತ, ಪ್ರಾಕೃತ, ಅಪಭ್ರಂಶ, ಕನ್ನಡ, ತಮಿಳು, ಗುಜರಾತಿ ಮುಂತಾದ ಭಾರತೀಯ ಭಾಷೆಗಳಲ್ಲೆಲ್ಲ ಮುಂದಿನ ಜೈನಕಾವ್ಯಕಾರರಿಗೆ ಉಪಜೀವ್ಯವಾದ ಆಧಾರಗ್ರಂಥವೆಂಬ ಅದ್ವಿತೀಯ ಪುರಸ್ಕಾರಕ್ಕೆ ಪಾತ್ರವಾಗಿದೆ.

ಉತ್ತರಪುರಾಣವಲ್ಲದೆ ಗುಣಭದ್ರ ಆತ್ಮಾನುಶಾಸನವೆಂಬ ಮತ್ತೊಂದು ಧರ್ಮ–ನೀತಿ–ವೈರಾಗ್ಯಪರ 272 ಸಂಸ್ಕೃತ ವಿವಿಧ ವೃತ್ತದಲ್ಲಿಯ ಪದ್ಯಗಳುಳ್ಳ ಚಿಕ್ಕ ಗ್ರಂಥವನ್ನು ರಚಿಸಿದ್ದಾನೆ. ಇದರ ಮೇಲೆ ಪ್ರಭಾಚಂದ್ರನ ಸಂಸ್ಕೃತ ಟೀಕೆಯು ಉಪಲಬ್ಧವಿದೆ. ಮತ್ತು ಹಲವು ಭಾಷೆಗಳಲ್ಲಿದು ಅನುವಾದಿತವಾಗಿದೆ.

ಉತ್ತರಪುರಾಣದ ಪ್ರಶಸ್ತಿಯಲ್ಲಿ ಶಕ ವರ್ಷ 820 (ಪ್ರ.ಶ. 898)ರಲ್ಲಿ ಸಮಾಪ್ತವಾದ ಉಲ್ಲೇಖವಿದೆ. ಮುಂದೆ ರಾಷ್ಟ್ರಕೂಟ ಅರಸ ಅಕಾಲವರ್ಷ ಕೃಷ್ಣ II (878–914), ಬಂಕಾಪುರದ ಅವನ ಸಾಮಂತ ಲೋಕಾದಿತ್ಯರ ಪ್ರಶಂಸೆಯಿದೆ. ಈ ಕಾಲನಿರ್ದೇಶ ಪುರಾಣರಚನಾ ಕಾಲಕ್ಕೆ ಅನ್ವಯಿಸುವುದೋ ಇಲ್ಲವೆ ಲಿಪಿಕರಣದ ಸಮಾಪ್ತಿಕಾಲಕ್ಕೆ ಅನ್ವಯಿಸುವುದೋ ಸ್ಪಷ್ಟವಿಲ್ಲ. (ಕೆ.ಕೆ.)

**ಗುಣರತ್ನಸೂರಿ :** ಅನೇಕ ಶಾಖೋಪಶಾಖೆಗಳಿಂದೊಡಗೂಡಿ ವಿಪುಲವಾಗಿ ಬೆಳೆದಿರುವ ಭಾರತೀಯ ತತ್ತ್ವಶಾಸ್ತ್ರದ ಎಲ್ಲ ವಿಭಾಗಗಳಲ್ಲಿಯೂ ನೈಪುಣ್ಯ ಪಡೆದ ಕೆಲವೇ ವ್ಯಕ್ತಿಗಳಲ್ಲಿ ಒಬ್ಬ. ಕಾಲ ಪ್ರ.ಶ.ಸು. 1343 ರಿಂದ 1418. ತತ್ತ್ವಶಾಸ್ತ್ರದಲ್ಲಿ ಮಾತ್ರವಲ್ಲದೆ ವ್ಯಾಕರಣವೇ ಮುಂತಾದ ಇತರ ಶಾಸ್ತ್ರಗಳಲ್ಲಿಯೂ ಈತನ ಪಾಂಡಿತ್ಯ ಅಗಾಧ. ಈತನ ಸಮಕಾಲೀನವಾದ ಮುನಿಸುಂದರಸೂರಿಯಿಂದ ರಚಿತವಾಗಿರುವ ಗುರ್ವಾವಲಿಯಲ್ಲಿ ಹೇಳಿರುವಂತೆ ವಾದ ವಿದ್ಯೆಯಲ್ಲಿ ಕುಶಲನಾಗಿದ್ದ ಈತ ಅನೇಕ ಪರವಾದಿಗಳನ್ನು ಜಯಿಸಿದ. ತರ್ಕ, ವ್ಯಾಕರಣ, ಸಾಹಿತ್ಯ, ಆಗಮ ಮತ್ತು ಜ್ಯೋತಿಷ್ಯ ವಿದ್ಯೆಗಳಲ್ಲಿ ಈತ ನಿಪುಣ. ಸತತವಾಗಿ ಧರ್ಮ ಪ್ರಭಾವನಾ ಕಾರ್ಯದಲ್ಲಿ ನಿರತನಾಗಿದ್ದು ಶ್ವೇತಾಂಬರ ಜೈನಪಂಥದ ಆಚಾರ್ಯ ಸಂತತಿಯಲ್ಲಿ ಸನ್ಮಾನ್ಯಸ್ಥಾನ ಪಡೆದ ಈತನ ಕಾರ್ಯಕ್ಷೇತ್ರ ಗುಜರಾತ್ ಮತ್ತು ರಾಜಸ್ಥಾನಗಳಾಗಿದ್ದುವೆಂದು ತಿಳಿದುಬರುತ್ತದೆ.

ಆಚಾರ್ಯ ಹರಿಭದ್ರಸೂರಿ ವಿರಚಿತ ಷಡ್ದರ್ಶನ ಸಮುಚ್ಚಯಕ್ಕೆ ಈತ ರಚಿಸಿರುವ ತರ್ಕರಹಸ್ಯ ದೀಪಿಕಾ ಎಂಬ ಟೀಕೆ ಭಾರತೀಯ ತತ್ತ್ವಶಾಸ್ತ್ರದಲ್ಲಿ ಈತನಿಗಿದ್ದ ಅಸೀಮ ಪಾಂಡಿತ್ಯವನ್ನು ಸಾಕ್ಷೀಕರಿಸುವುದು. ಕ್ರಿಯಾರತ್ನಸಮುಚ್ಚಯ ಇವನ ವ್ಯಾಕರಣಪಾಂಡಿತ್ಯದ ಸಾಕ್ಷಿಯಾಗಿದೆ. ಕಲಾಂತರ್ವಾಚ್ಯ, ಚತುಃಶರಣಾದಿ ಪ್ರಕೀರ್ಣ ಕಾವಚೂರಿ, ಕರ್ಮಗ್ರಂಥ ಅವಚೂರಿ, ಕ್ಷೇತ್ರಸಮಾಸ ಅವಚೂರ್ಣಿ ಮತ್ತು ವಾಸೋಂತಿಕ ವಿತಂಡಾ ವಿಡಂಬನ ಪ್ರಕರಣಗಳು–ಇವು ಈತನ ಆಗಮ ಜ್ಞಾನಸಂಪತ್ತಿಯ ದ್ಯೋತಕಗಳಾಗಿವೆ. (ಎಂ.ಡಿ.ವಿ.)

**ಗುಣವರ್ಮ 2 :** ಪುಷ್ಪದಂತ ಪುರಾಣ ಮತ್ತು ಚಂದ್ರನಾಥಾಷ್ಟಕಗಳ ಕರ್ತೃ. ಕವಿ ತನ್ನ ಕೃತಿರಚನೆಯ ಕಾಲದ ಬಗೆಗೆ ತನ್ನ ಬರೆಹಗಳಲ್ಲೆಲ್ಲೂ ನೇರವಾದ ನಿರ್ದೇಶವನ್ನು ಮಾಡಿಲ್ಲ. ಆದರೆ ಈತ 13ನೆಯ ಶತಮಾನದ ಪೂರ್ವಭಾಗದಲ್ಲಿ ಜೀವಿಸಿದ್ದನೆಂಬುದಕ್ಕೆ ಆಧಾರಗಳುಂಟು. 13ನೆಯ ಶತಮಾನದ ಪ್ರಾರಂಭದ ದಶಕಗಳಲ್ಲಿದ್ದ ಜನ್ನನನ್ನು ಈತ ಸ್ಮರಿಸಿರುವುದರಿಂದಲೂ 13ನೆಯ ಶತಮಾನದ ಮಧ್ಯಭಾಗದಲ್ಲಿದ್ದ ಮಲ್ಲಿಕಾರ್ಜುನ ತನ್ನ ಸೂಕ್ತಿಸುಧಾರ್ಣವದಲ್ಲಿ ಈತನ ಪದ್ಯಗಳನ್ನು ಉದ್ಧರಿಸಿರುವುದರಿಂದಲೂ ಈತನ ಕಾಲ 13ನೆಯ ಶತಮಾನದ ಪೂರ್ವಭಾಗವೆಂದು ನಿಸ್ಸಂದೇಹವಾಗಿ ಹೇಳಬಹುದು. ಈತ ತನ್ನ ಪುಷ್ಪದಂತ ಪುರಾಣದಲ್ಲಿ ಆದರಪೂರ್ವಕವಾಗಿ ಹೆಸರಿಸಿದ ಗುರು ಮುನಿಚಂದ್ರ ಹಾಗೂ ಪೋಷಕ ಶಾಂತಿವರ್ಮನ ಹೆಸರುಗಳು ಪ್ರ.ಶ. 1229ರಲ್ಲಿ ರಚಿತವಾದ ಸೌಂದತ್ತಿಯ ಶಾಸನದಲ್ಲಿ ಉಲ್ಲೇಖಿಸಲ್ಪಟ್ಟಿವೆ. ಈ ಸಂಗತಿಯೂ ಮೇಲೆ ಸೂಚಿಸಿದ ಕಾಲನಿರ್ಣಯಕ್ಕೆ ಪುಷ್ಟಿ ಕೊಡುತ್ತದೆ.

ಪುಷ್ಪದಂತ ಪುರಾಣ ಜೈನ ಸಂಪ್ರದಾಯದಂತೆ ರಚಿತವಾದ ಪುರಾಣಕಾವ್ಯ; ಚಂಪೂಕೃತಿ. ಇಪ್ಪತ್ತನಾಲ್ಕು ತೀರ್ಥಂಕರರಲ್ಲಿ ಒಂಬತ್ತನೆಯವನಾದ ಪುಷ್ಪದಂತನ ಚರಿತ್ರೆ ಈ ಪುರಾಣಕಾವ್ಯದ ಕಥಾವಸ್ತು. ಈ ಕಥಾವಸ್ತು ಗಾತ್ರದಲ್ಲಿ ಕಿರಿದು. ಆದರೆ ಕಥಾನಾಯಕ ಉನ್ನತನೆಂಬ ಕಾರಣದಿಂದ ಕವಿ ಅದನ್ನು ವಿಸ್ತರಿಸಿ 14 ಆಶ್ವಾಸಗಳಾಗಿ ವಿಸ್ತರಿಸಿದ್ದಾನೆ; ಪೋಷಕನೂ ನಾಡಪ್ರಭುವೂ ಆಗಿದ್ದ ಶಾಂತಿವರ್ಮನಿಗೆ ಅದನ್ನು ವಿನಯಪೂರ್ವಕ ಸಮರ್ಪಿಸಿದ್ದಾನೆ. ಗ್ರಂಥದ ಆರಂಭದಲ್ಲಿ ಕೊಂಡ ಕುಂದಾಚಾರ್ಯ ನಿಂದ ಹಿಡಿದು ಸ್ವಗುರುವಾದ ಮುನಿಚಂದ್ರನವರೆಗಿನ ತನ್ನ ಗುರುಪರಂಪರೆಯನ್ನು ಅರುಹಿದ್ದಾನೆ. ಪೂರ್ವದಲ್ಲಿ ಕೃತಿರಚನೆ ಮಾಡಿದಂತೆ ತಿಳಿದುಬಂದ ಸಮಂತಭದ್ರ, ಪೂಜ್ಯಪಾದ, ಕವಿಪರಮೇಷ್ಠಿಗಳ ಹೆಸರುಗಳು ಈ ಗುರುಪರಂಪರೆಯಲ್ಲಿ ಸಮಾವೇಶ ವಾಗಿರುವುದು ಗಮನಾರ್ಹವಾಗಿದೆ. ಪೂರ್ವದ ಕವಿಗಳಲ್ಲಿ ಪಂಪ, ಪೊನ್ನ, ರನ್ನ, ನಾಗವರ್ಮ, ನಾಗಚಂದ್ರ, ನೇಮಿಚಂದ್ರರನ್ನು ಮಾತ್ರವಲ್ಲದೆ ಹೆಚ್ಚು ಕಡಿಮೆ ಸಮಕಾಲೀನನಾಗಿರಬಹುದಾದ ಜನ್ನ ಕವಿಯನ್ನೂ ಸ್ಮರಿಸಿದ್ದಾನೆ.

ಗುಣವರ್ಮನ ಕಾವ್ಯಬಂಧ ಪ್ರೌಢವಾಗಿದೆ; ಪ್ರಾಸಬದ್ಧವಾಗಿದೆ. ಭಾಷಾಸರಣಿ ತಿಳಿಗನ್ನಡವನ್ನು ಹಿತವಾಗಿ ಒಳಗೊಂಡಿದೆ. ಮೃದುಪದಗತಿಯಲ್ಲಿ ಸುರುಚಿರ ಅರ್ಥವೂ ಅಲ್ಲಲ್ಲಿ ಸೂಸಿದೆ. ಪ್ರಕೃತಿವರ್ಣನೆ ಋತುವರ್ಣನೆಗಳು ಮನೋಹರವಾಗಿವೆ. 13ನೆಯ ಶತಮಾನದ ಹೊತ್ತಿಗಾಗಲೆ ಇಳಿಮುಖವಾಗಿದ್ದ ಚಂಪೂ ಶೈಲಿಯನ್ನು ಮತ್ತೆ ಸಮರ್ಥವಾಗಿ ಕೈಗೆತ್ತಿಕೊಂಡ ಕೀರ್ತಿ ಗುಣವರ್ಮನಿಗೆ ಸಲ್ಲುತ್ತದೆ.

ಚಂದ್ರನಾಥಾಷ್ಟಕದಲ್ಲಿ ಮಹಾಸ್ರಗ್ಧರಾವೃತ್ತದಲ್ಲಿ ರಚಿತವಾದ ಸ್ತುತಿಪದ್ಯಗಳಿವೆ. ಕೊಲ್ಲಾಪುರದ ತ್ರಿಭುವನತಿಲಕ ಜಿನಾಲಯದ ಚಂದ್ರನಾಥನಲ್ಲಿ ಕವಿ ತಳೆದ ಭಕ್ತಿ ಅವುಗಳಲ್ಲಿ ಅಭಿವ್ಯಕ್ತವಾಗಿದೆ. ಚಂದ್ರನಾಥಾಷ್ಟಕದ ಪ್ರತಿ ಪದ್ಯದ ಕೊನೆಯಲ್ಲೂ ಚಂದ್ರನಾಥನ ಹೆಸರು ಬಂದಿದೆಯಲ್ಲದೆ ಎಂಟು ಪದ್ಯಗಳ ಕೊನೆಯಲ್ಲಿ ಬರುವ ಒಂಬತ್ತನೆಯ ಪದ್ಯ '...ಮಾಟಕ್ಕೆ ಭವ್ಯರ್ಗೆ ಸೌಖ್ಯಾವಹಮಂ ಕೊಲ್ಲಾಪುರಶ್ರೀ ತ್ರಿಭುವನಾಲಂಕೃತಂ ಚಂದ್ರನಾಥಂ' ಎಂದು ಕೊನೆಗೊಳ್ಳುತ್ತದೆ. (ಡಿ.ಎಸ್.ಕೆ.)

**ಗುಣವಾ :** ಬಿಹಾರ ಪ್ರಾಂತ್ಯದ ಪಟಣ ಜಿಲ್ಲೆಯಲ್ಲಿ ಗಯೆಯ ಬಳಿಯಿರುವ ಒಂದು ಜೈನ ಕ್ಷೇತ್ರ. ಇದು ಗಯ–ಪಟಣ ರೈಲುಮಾರ್ಗದಲ್ಲಿ ನವದಾ ರೈಲು ನಿಲ್ದಾಣದಿಂದ 3 ಕಿಮೀ ದೂರದಲ್ಲಿದೆ. ಈ ಕ್ಷೇತ್ರದಲ್ಲಿ ಮಹಾವೀರನ ಗಣಧರನಾದ ಗೌತಮಸ್ವಾಮಿ ನಿರ್ವಾಣವಾದನೆನ್ನಲಾಗಿದೆ. (ಬಿ.ಜಿ.)

**ಗುಣಾಢ್ಯ :** ಖ್ಯಾತ ಬೃಹತ್ಕಥೆಯ ಕರ್ತೃ. ಈ ಬೃಹತ್ಕಥೆ ಪೈಶಾಚೀ ಎಂಬ ಒಂದು ಬಗೆಯ ಪ್ರಾಕೃತಭಾಷೆಯಲ್ಲಿ ರಚಿತವಾಗಿತ್ತು ಎಂದು ತಿಳಿದುಬಂದಿದೆ. ಗ್ರಂಥ ಈಗ ಇಲ್ಲ. ಲುಪ್ತವಾಗಿ ಹೋಗಿದೆ. ಪ್ರಕೃತ ಉಪಲಬ್ಧವಾಗಿರುವುದು ಅದರ ಕೇವಲ ಮೂರು ಸಂಸ್ಕೃತ ಪದ್ಯಾತ್ಮಕ ಸಂಗ್ರಹರೂಪಗಳು–ಮೊದಲನೆಯದು ನೇಪಾಳದ ಬುಧ ಸ್ವಾಮಿಯಿಂದ ಪ್ರ.ಶ. ಒಂಬತ್ತನೆಯ ಶತಮಾನದಲ್ಲಿ ರಚಿತವಾದ ಬೃಹತ್ಕಥಾ ಶ್ಲೋಕಸಂಗ್ರಹ. ಎರಡನೆಯದು ಪ್ರ.ಶ. 1047ರಲ್ಲಿ ಕಾಶ್ಮೀರದ ಕ್ಷೇಮೇಂದ್ರ ರಚಿಸಿದ ಬೃಹತ್ಕಥಾಮಂಜರಿ, ಮೂರನೆಯದು ಪ್ರ.ಶ. 1070ರಲ್ಲಿ ಕಾಶ್ಮೀರದ ಸೋಮದೇವ ಬರೆದ ಕಥಾಸರಿತ್ಸಾಗರ. ಇವುಗಳ ಜೊತೆಗೆ ಪೆರುಂಗತ್ತೈ ಎಂಬ ತಮಿಳು ರೂಪಾಂತರವೂ ಇದೆ. ಇವುಗಳ ಆಕಾರ ಸ್ವರೂಪಗಳನ್ನು ಪರಿಶೀಲಿಸಿದರೆ ಮೂಲಬೃಹತ್ಕಥೆ ನಿಜವಾಗಿಯೂ ಬೃಹದ್ಗ್ರಂಥವೆಂಬುದನ್ನೂ ಅದು ಅನೇಕಾನೇಕ ಸ್ವಾರಸ್ಯವಾದ ಕಥೆಗಳ ಆಕರವಾಗಿತ್ತೆಂಬುದನ್ನೂ ಮನಗಾಣಬಹುದು. ಅಷ್ಟೇ ಅಲ್ಲದೆ ಆರ್ಯಾಸಪ್ತಶತಿಯ ಕರ್ತೃ ಗೋವರ್ಧನ ಗುಣಾಢ್ಯನನ್ನು ವಾಲ್ಮೀಕಿ ವ್ಯಾಸರ ಪಂಕ್ತಿಯಲ್ಲಿ ಮೂರನೆಯವನನ್ನಾಗಿ ಪರಿಗಣಿಸಿರುವುದೂ ರಾಮಾಯಣ ಮಹಾಭಾರತಗಳಂತೆಯೇ ಬೃಹತ್ಕಥೆಯೂ ಭಾರತೀಯ ಕವಿಗಳಿಗೆ ಉಪಜೀವ್ಯಕಾವ್ಯವಾಗಿರುವುದೂ ಗಮನಾರ್ಹ.

ಗುಣಾಢ್ಯನ ಮತ್ತು ಅವನ ಬೃಹತ್ಕಥಾ ರಚನೆಯ ವಿಚಾರವಾಗಿ ಸೋಮದೇವ ಕಥಾಸರಿತ್ಸಾಗರದಲ್ಲಿ ಹೇಳಿರುವುದು ಹೀಗಿದೆ; ಒಂದು ದಿನ ಶಿವ ಪಾರ್ವತಿಗೆ ಏಕಾಂತವಾಗಿ ಸಪ್ತ ವಿದ್ಯಾಧರ ಚಕ್ರವರ್ತಿಗಳ ಮನೋಹರವಾದ ಕಥೆಗಳನ್ನು ಹೇಳುತ್ತಿದ್ದ. ಅದನ್ನು ಶಿವಗಣಗಳಲ್ಲೊಬ್ಬನಾದ ಪುಷ್ಪದಂತ ಮರೆಯಲ್ಲಿ ನಿಂತು ಕೇಳಿದ್ದಲ್ಲದೆ ತನ್ನ ಹೆಂಡತಿ ಜಯಾ ಎಂಬುವಳಿಗೆ ತಿಳಿಸಿದ. ಜಯಾ ಪಾರ್ವತಿಯ ಚೇಟಿ. ಅವಳು ತನ್ನ ಸಖಿಯರಿಗೆಲ್ಲ ಆ ಕಥೆಯನ್ನು ಹೇಳಿದಳು. ಕ್ರಮೇಣ ಅದು ಕರ್ಣಾಕರ್ಣಿಕೆಯಾಗಿ ಪಾರ್ವತಿಯ ಕಿವಿಗೂ ಬಿತ್ತು. ಆಗ ಅವಳು ಪುಷ್ಪದಂತನನ್ನೂ ಮಧ್ಯೆ ಪ್ರವೇಶಿಸಿದ ಅವನ ಸೋದರ ಮಾಲ್ಯವಂತನನ್ನೂ ಭೂಲೋಕದಲ್ಲಿ ಹುಟ್ಟುವಂತೆ ಶಪಿಸಿಬಿಟ್ಟಳು. ಆಗ ಜಯೆ ಮೊರೆಯಿಡಲು ಪುಷ್ಪದಂತ ತಾನು ಕೇಳಿದ್ದ ಕಥೆಗಳನ್ನು ವಿಂಧ್ಯಾಟವಿಯಲ್ಲಿ ವಾಸಿಸುತ್ತಿದ್ದ ಕಾಣಭೂತಿಯೆಂಬ ಪಿಶಾಚಕ್ಕೆ ಹೇಳಿತಿಳಿಸಿದರೆ ಅವನು ಶಾಪವಿಮುಕ್ತ ನಾಗುವನೆಂದೂ ಮಾಲ್ಯವಂತ ಅದೇ ಕಥೆಗಳನ್ನು ಕಾಣಭೂತಿಯಿಂದ ತಿಳಿದು ಭೂಲೋಕದಲ್ಲಿ ಪ್ರಚುರಪಡಿಸಿದರೆ ಅವನ ಶಾಪವಿಮೋಚನೆ ಆಗುವುದೆಂದೂ ಪಾರ್ವತಿ ಹೇಳಿದಳು. ಅದರಂತೆ ಪುಷ್ಪದಂತ ಕೌಶಾಂಬಿಯಲ್ಲಿ ವರರುಚಿಯಾಗಿ ಹುಟ್ಟಿ ನವನಂದರ ಕೊನೆಯ ಅಮಾತ್ಯನಾದ; ಕೊನೆಗೆ ಅಧಿಕಾರವನ್ನು ತ್ಯಜಿಸಿ, ವಿಂಧ್ಯಾಟವಿಗೆ ಹೋಗಿ, ಕಾಣಭೂತಿಯನ್ನು ಸಂಧಿಸಿ, ಅವನಿಗೆ ಸಪ್ತವಿದ್ಯಾಧರ ಚಕ್ರವರ್ತಿಗಳ ಕಥೆಯನ್ನು ಹೇಳಿ ಶಾಪದಿಂದ ಬಿಡುಗಡೆ ಹೊಂದಿದ. ಮಾಲ್ಯವಂತ ಗುಣಾಢ್ಯನಾಗಿ ಹುಟ್ಟಿ ಪ್ರತಿಷ್ಠಾನದ ರಾಜ ಶಾತವಾಹನನ ಅಮಾತ್ಯನಾದ; ರಾಜನಿಗೆ ಸಂಸ್ಕೃತ ಕಲಿಸುವ ವಿಚಾರವಾಗಿ ಮತ್ತೊಬ್ಬ ಮಂತ್ರಿಯಾದ ಶರ್ವವರ್ಮನೊಡನೆ ಪಣ ತೊಟ್ಟು ಸೋತು, ಆ ಪಣದಂತೆ ತಾನು ಅಲ್ಲಿಂದ ಮುಂದೆ ಸಂಸ್ಕೃತವನ್ನು ಉಪಯೋಗಿಸುವುದಿಲ್ಲವೆಂದು ಶಪಥಮಾಡಿ ರಾಜಸೇವೆಯನ್ನು ತ್ಯಜಿಸಿಬಿಟ್ಟ. ಬಳಿಕ ವಿಂಧ್ಯಾಟವಿಯಲ್ಲಿ ಸುತ್ತಾಡಿ ಕಾಣಭೂತಿಯನ್ನು ಕಂಡು ಅವನಿಂದ ಸಪ್ತವಿದ್ಯಾಧರ ಚಕ್ರವರ್ತಿಗಳ ಕಥೆಯನ್ನು ಕೇಳಿ ತಿಳಿದುಕೊಂಡು ತನ್ನ ಶಪಥದಂತೆ ಸಂಸ್ಕೃತವನ್ನು ಬಳಸದೆ, ಪ್ರಾಕೃತಭಾಷೆಯ ಒಂದು ಪ್ರಭೇದವಾದ ಪೈಶಾಚೀ ಎಂಬ, ಆ ಪ್ರಾಂತ್ಯದ ಆಡುಭಾಷೆಯಲ್ಲಿ ಆ ಕಥೆಗಳನ್ನು ಅಚ್ಚುಮೆಚ್ಚಾದ ರೀತಿಯಲ್ಲಿ ತನ್ನ ರಕ್ತದಿಂದಲೇ ಬರೆದಿಟ್ಟ. ಅಮೋಘವಾದ ಕೃತಿಯನ್ನು ಗುಣಾಢ್ಯನ ಶಿಷ್ಯರು ರಾಜನಿಗೆ ತೋರಿಸಲು ಅವನು ಅದನ್ನು ಓದದೆಯೇ ಅಲ್ಲಗಳೆದುದರಿಂದ ವಿಷಣ್ಣನಾದ ಗುಣಾಢ್ಯ ಆ ಕಥೆಗಳನ್ನು ಒಂದೊಂದಾಗಿ ಅಗ್ನಿಯೊಳಕ್ಕೆ ಎಸೆಯಲಾರಂಭಿಸಿದ; ಶಿಷ್ಯರ ನಿರ್ಬಂಧದಿಂದ ಕೊನೆಯ ಕಥೆಯನ್ನು ಮಾತ್ರ ಬೆಂಕಿಗೆ ಹಾಕಲಿಲ್ಲ. ಹೀಗೆ ಉಳಿದ ಕಥೆಯೇ ಬೃಹತ್ಕಥೆ–ಒಂದು ಲಕ್ಷಗ್ರಂಥಗಳ ಬೃಹತ್ಕೃತಿ. ಪ್ರಚಲಿತವಾಗಿರುವ ಜನಪ್ರಿಯ ಕಥೆಗಳಲ್ಲಿ ಇದೇ ಅತ್ಯಂತ ಪ್ರಾಚೀನ.

ಕೌಶಾಂಬಿಯ ಉದಯನರಾಜನ ಮಗನಾದ ನರವಾಹನದತ್ತನ ಸಾಹಸಗಳ ವೃತ್ತಾಂತವೇ ಬೃಹತ್ಕಥೆಯ ವಸ್ತು. ನರವಾಹನ ಮದನಮಂಜೂಷಿಕಾ ಎಂಬ ವಿದ್ಯಾಧರ ರಾಜಕುಮಾರಿಯನ್ನು ಮದುವೆಯಾದುದು, ಮಾನಸವೇಗ ಅವಳನ್ನು ಅಪಹರಿಸಿದುದು, ತನ್ನ ಗೆಳೆಯನಾದ ಗೋಮುಖನ ಸಹಾಯದಿಂದ ನರವಾಹನ ಅವಳನ್ನು ಪುನಃ ಪಡೆದು ವಿದ್ಯಾಧರ ಚಕ್ರವರ್ತಿಯಾದುದು–ಇದೇ ಕಥೆಯ ಸ್ಥೂಲರೂಪ. ಇದರೊಡನೆ ಅನೇಕ ಉಪಕಥೆಗಳೂ ಅವುಗಳ ವ್ಯೂಹಗಳೂ ಸೇರಿ ಪ್ರಧಾನಕಥೆ ತೀರ ಜಟಿಲವಾಗಿ ಬೃಹದಾಕಾರ ತಾಳಿಬಿಟ್ಟಿದೆ.

ಬೃಹತ್ಕಥೆಯಲ್ಲಿರುವ ಉದಯನಚರಿತವನ್ನು ಭಾಸ ಕಾಳಿದಾಸಾದಿಗಳು ತಮ್ಮ ಕೃತಿಗಳಲ್ಲಿ ನಿರೂಪಿಸಿದ್ದಾರೆ ಇಲ್ಲವೆ ಬಳಸಿಕೊಂಡಿದ್ದಾರೆ. ಆಂಧ್ರಭೃತ್ಯವಂಶದ ಶಾತವಾಹನ ನನ್ನು ಗುಣಾಢ್ಯ ಆಶ್ರಯದಾತನೆಂದು ಸೋಮದೇವ ಹೇಳಿದ್ದಾನೆ. ಈ ಕಾರಣಗಳಿಂದ ಗುಣಾಢ್ಯ ಪ್ರ.ಶ. ಒಂದನೆಯ ಶತಮಾನದವನೆಂದು ಹೇಳಬೇಕಾಗುತ್ತದೆ. ಬಾಣನೂ ದಂಡಿಯೂ ಬೃಹತ್ಕಥೆಯನ್ನು ಉಲ್ಲೇಖಿಸಿರುವುದರಿಂದ ಅದರ ಕರ್ತೃ ಪ್ರ.ಶ. ಐದನೆಯ ಶತಮಾನಕ್ಕಿಂತ ಹಿಂದಿನವನೇ ಆಗಿರಬೇಕೆಂಬುದರಲ್ಲಿ ಸಂಶಯವಿಲ್ಲ.

ಗುಣಾಢ್ಯನ ಬೃಹತ್ಕಥೆಯ ರಚನೆಗೆ ಬಳಸಿದ ಪೈಶಾಚೀ ಪ್ರಾಕೃತಭಾಷೆ ಗೋದಾವರೀ ತೀರದ ವಿಂಧ್ಯಪ್ರದೇಶ ಭಾಗದಲ್ಲಿ ಬಳಕೆಯಲ್ಲಿತ್ತು. ಆ ಪ್ರದೇಶದ ನೆರೆಯ ಪ್ರತಿಷ್ಠಾನದಲ್ಲೇ ಗುಣಾಢ್ಯ ವಾಸವಾಗಿದ್ದುದು. ಅವನ ತಾಯಿ ಶ್ರುತಾರ್ಥಾ ಎಂಬ ಬ್ರಾಹ್ಮಣಕನ್ಯೆಯೆಂದೂ ತಂದೆ ನಾಗರಾಜ ವಾಸುಕಿಯ ಸಂಬಂಧಿ ಕೀರ್ತಿಸೇನನೆಂದೂ ಕಥಾಸರಿತ್ಸಾಗರದಲ್ಲಿ ಹೇಳಿದೆ **(ನೋಡಿ– ಬೃಹತ್ಕಥೆ).** (ಎಸ್.ಆರ್.)


**ಗುಣೋತ್ತರ ವಿತರಣೆ: ನೋಡಿ – ಜ್ಯಾಮಿತೀಯ ವಿತರಣೆ**

**ಗುತ್ತರು :** ಕರ್ನಾಟಕದಲ್ಲಿ ಆಳಿದ ಮಹಾಮಂಡಲೇಶ್ವರ ಮನೆತನಗಳಲ್ಲಿ ಪ್ರಮುಖವಾದ ಒಂದರ ದೊರೆಗಳು. ಪ್ರ.ಶ.ಸು. 12ನೆಯ ಶತಮಾನದ ಪ್ರಾರಂಭದಿಂದ 13ನೆಯ ಶತಮಾನದ ಕೊನೆಯವರೆಗೆ ಇವರು ಸಾಮಂತರಾಗಿ ಕರ್ನಾಟಕದ ರಾಜಕೀಯದಲ್ಲಿ ಪಾಲ್ಗೊಂಡಿದ್ದರು.

ಗುತ್ತು ಎನ್ನುವ ಪದ ಗುಪ್ತ ಎಂಬ ಸಂಸ್ಕೃತ ಪದದಿಂದ ಬಂದಿರಬೇಕೆಂದು ಅನೇಕ ಚರಿತ್ರಾಕಾರರು ಅಭಿಪ್ರಾಯಪಟ್ಟಿದ್ದಾರೆ. ಗುತ್ತರ ಶಾಸನಗಳಲ್ಲಿ ಇವರಿಗೆ ಚಂದ್ರಗುಪ್ತ ವಂಶೋದ್ಭವ. ವಿಕ್ರಮಾದಿತ್ಯವಂಶೋದ್ಭವ, ಗುಪ್ತವಂಶತ್ರಿನೇತ್ರ, ಉಜ್ಜಯಿನೀಪುರವಾಧೀಶ್ವರ, ಪಾಟಲೀಪುರವರಾಧೀಶ್ವರ ಎಂಬ ಬಿರುದುಗಳು ಇರುವುದು ಕಾಣಬರುತ್ತದೆ. ಆದ್ದರಿಂದ ಗುತ್ತರು ಗುಪ್ತವಂಶದ ಎರಡನೇ ಚಂದ್ರಗುಪ್ತನ ವಂಶದವರೆಂದು ಇವರು ಮೊದಲು ಉಜ್ಜಯಿನಿಯಲ್ಲಿ ಆಳುತ್ತಿದ್ದರೆಂದು ಕೆಲವರ ಮತ. ವಿಕ್ರಮಶಕೆಯನ್ನು ಸ್ಥಾಪಿಸಿದ ವಿಕ್ರಮಾದಿತ್ಯನೇ ಗುತ್ತರ ಮೂಲ ಪುರುಷ ಎಂದು ಮತ್ತೆ ಕೆಲವರ ವಾದ. ಇವರು ಪಾಟಲೀಪುತ್ರದಲ್ಲಿ ಆಳಿದ ಮೌರ್ಯದೊರೆ ಚಂದ್ರಗುಪ್ತನ ವಂಶಜರಾಗಿದ್ದಿರುವುದು ಸಾಧ್ಯವೆಂದು ಮತ್ತೆ ಕೆಲವರ ಅಭಿಪ್ರಾಯ. ಈ ವಾದಗಳೆಲ್ಲ ನಿಜವಲ್ಲವೆಂದು ಗುತ್ತರದು ಕರ್ನಾಟಕದಲ್ಲಿಯೇ ಬೆಳಕಿಗೆ ಬಂದ ಸಾಮಂತ ರಾಜಮನೆತನವೆಂದು ಇವರ ಮೂಲನಿವಾಸ ಸ್ಥಾನ ಉಜ್ಜಯಿನೀ ಅಥವಾ ಪಾಟಲೀಪುತ್ರವಲ್ಲವೆಂದೂ ಇವರು ಕರ್ನಾಟಕದವರೆಂದೂ ಕೆಲವರ ಅಭಿಪ್ರಾಯ ಪಡುತ್ತಾರೆ. ಈ ವಾದದಲ್ಲಿಯೇ ಹೆಚ್ಚು ತಿರುಳಿರುವಂತೆ ತೋರುತ್ತದೆ. ಗುತ್ತವೊಳಲು ಇವರ ಸ್ಥಳ. ಈಗಿನ ರಾಣೆಬೆನ್ನೂರು, ಕರಜಗಿ ಮುಂತಾದ ಪ್ರದೇಶಗಳನ್ನೊಳಗೊಂಡ ಗುತ್ತವೊಳಲು ಪ್ರಾಂತ್ಯಕ್ಕೆ ಗುತ್ತವೊಳಲು ನಗರ ರಾಜಧಾನಿಯಾಗಿತ್ತು. ಈ ನಗರ ಕರಜಗಿಗೆ ಪೂರ್ವದಲ್ಲಿ 10 ಕಿಮೀ ದೂರದಲ್ಲಿದೆ.

ಮಹಾಗುತ್ತ ಅಥವಾ ಮಾಗುತ್ತನೇ ಗುತ್ತವಂಶದ ಮೊದಲನೆಯ ದೊರೆ. ಇವನು ಬಹುಶಃ ಪ್ರ.ಶ. 11ನೆಯ ಶತಮಾನದಲ್ಲಿ ಚಾಳುಕ್ಯರ ಸಾಮಂತನಾಗಿದ್ದಿರಬೇಕೆಂದು ಊಹೆ. ಇವನ ಅನಂತರ ಇವನ ಮಗನಾದ 1ನೆಯ ಗುತ್ತ ರಾಜನಾದ. ಇವನು ಹಾನುಗಲ್ ಕದಂಬರ ಮೇಲೆ ಯುದ್ಧ ಮಾಡಿ ಅವರನ್ನು ಸೋಲಿಸಿ ರಾಜ್ಯವನ್ನು ವಿಸ್ತರಿಸಿದ. ಇವನಾದ ಅನಂತರ ಇವನ ಮಗನಾದ ಮಲ್ಲಿದೇವ ರಾಜನಾದ. ಇವನೊಬ್ಬ ಪ್ರಸಿದ್ಧರಾಜ. ಇವನು ಬನವಾಸಿಯ ರಾಜ್ಯಪಾಲ ಗೋವಿಂದರಸನ ಆಶ್ರಯದಲ್ಲಿ ಗುತ್ತವೊಳಲಿನಲ್ಲಿ ಆಳುತ್ತಿದ್ದ. ಮಲ್ಲಿದೇವ ಸಾಮಂತನಾಗಿಯೇ ಇದ್ದ. ಇವನ ಸಮಕಾಲೀನ ಹೊಯ್ಸಳ ದೊರೆ ವಿಷ್ಣುವರ್ಧನ ಇವನನ್ನು ಜಯಿಸಿದಂತೆ ಕಾಣಬರುವುದಿಲ್ಲ. 1139ರಲ್ಲಿ ಇವನು ಮರಣಹೊಂದಲು ಇವನ ಮಗನಾದ ಮೊದಲನೆಯ ವಿಕ್ರಮಾದಿತ್ಯ ರಾಜನಾದ. ಈ ವೇಳೆಗೆ ಕರ್ನಾಟಕದಲ್ಲಿ ಅನೇಕ ರಾಜಕೀಯ ಬದಲಾವಣೆಗಳುಂಟಾಗಿದ್ದುವು. ಚಾಳುಕ್ಯರ ಪ್ರಾಬಲ್ಯ ಕಡಿಮೆಯಾಗಿ, ಕಲ್ಯಾಣದ ಕಳಚೂರ್ಯರು ತಲೆ ಎತ್ತುತ್ತಿದ್ದರು. ಬಹುಶಃ ವಿಕ್ರಮಾದಿತ್ಯ, ಇತರ ಸಾಮಂತ ರಾಜರಂತೆ ಚಾಳುಕ್ಯರನ್ನು ಕಡೆಗಣಿಸಿ ಕಳಚೂರ್ಯರ ಸಾಮಂತನಾಗಿರಬೇಕು. ಇವನು ಸು. 1170ರಲ್ಲಿ ಮರಣಹೊಂದಿದ. ಇವನ ಮಗನಾದ 1ನೆಯ ಜೋಯಿದೇವ ರಾಜನಾದ. 1179 ಮತ್ತು 1181ರಲ್ಲಿ ಇವನು ಬರೆಯಿಸಿದ ಎರಡು ಶಾಸನಗಳಲ್ಲಿ ಇವನು ಕಳಚೂರ್ಯ ದೊರೆಗಳಾದ ಸಂಕಮದೇವ ಮತ್ತು ಆಹವಮಲ್ಲರ ಅಧೀನದಲ್ಲಿ ಮಹಾ ಮಂಡಲೇಶ್ವರನಾಗಿದ್ದನೆಂದು ಹೇಳಿದೆ. ಇಷ್ಟರಲ್ಲಿ ಕಳಚೂರ್ಯರ ಪ್ರಾಬಲ್ಯ ಕಡಿಮೆಯಾಗಿ ಚಾಳುಕ್ಯರು ಮತ್ತೆ ತಲೆ ಎತ್ತಿದ್ದರು. ಇದನ್ನು ಗಮನಿಸಿದ ಜೋಯಿದೇವ ಕಳಚೂರ್ಯರನ್ನು ಕಡೆಗಣಿಸಿ, ಚಾಳುಕ್ಯರ ಸಾಮಂತನಾದ. ಇವನ ರಾಜ್ಯಕ್ಕೆ ನಾಗರಖಂಡ ಪ್ರಾಂತ್ಯದ ಕೆಲವು ಭಾಗಗಳು ಸೇರಿದ್ದುವು.

ಜೋಯಿದೇವನ ಮರಣಾನಂತರ ಅವನ ಸಹೋದರನ ಮಗನಾದ 2ನೆಯ ವಿಕ್ರಮಾದಿತ್ಯ 1185ರಲ್ಲಿ ರಾಜನಾದ. ಇವನು ಗುತ್ತರಲ್ಲೆಲ್ಲ ಅತ್ಯಂತ ಶ್ರೇಷ್ಠನಾದ ಮಹಾಮಂಡಲೇಶ್ವರ. ಇವನು ರಾಜನಾದಾಗ ಕರ್ನಾಟಕದ ರಾಜಕೀಯದಲ್ಲಿ ಹೊಯ್ಸಳ ಇಮ್ಮಡಿ ಬಲ್ಲಾಳನೂ ಸೇವುಣ 5ನೆಯ ಭಿಲ್ಲಮನೂ ತಮ್ಮ ತಮ್ಮಲ್ಲೇ ಯುದ್ಧಗಳನ್ನು ಮಾಡುತ್ತಿದ್ದರು. ಇದರಿಂದ ಇವರಿಬ್ಬರಿಗೂ ಗುತ್ತರನ್ನು ಸೋಲಿಸುವಷ್ಟು ವ್ಯವಧಾನವಿರಲಿಲ್ಲ. ಇದನ್ನು ಗಮನಿಸಿದ ವಿಕ್ರಮಾದಿತ್ಯ ಸ್ವತಂತ್ರನಾಗಿ ರಾಜ್ಯಭಾರ ಮಾಡಲು ಪ್ರಾರಂಭಿಸಿದ. ಇವನ ಈ ಕಾಲದ ಶಾಸನಗಳಲ್ಲಿ ಹೊಯ್ಸಳರ ಅಥವಾ ಸೇವುಣರಾಜರ ಉಲ್ಲೇಖವೇ ಕಾಣುವುದಿಲ್ಲ. 1233ರಲ್ಲಿ ಬರೆಸಲಾದ ಕನಕವಳ್ಳಿಯ ಶಾಸನದಲ್ಲಿ ಮಹಾಮಂಡಳೇಶ್ವರ ವಿಕ್ರಮಾದಿತ್ಯ ತನ್ನ ಪ್ರಧಾನಿಯೊಂದಿಗೆ ಬನವಾಸಿ ನಾಡನ್ನು ಆಳುತ್ತಿದ್ದನೆಂದು ಹೇಳಿದೆ. ಬಹುಶಃ ಇವನು ತನ್ನ ಮರಣದವರೆಗೂ ಸ್ವತಂತ್ರನಾಗಿಯೇ ಇದ್ದನೆಂದು ತೋರುತ್ತದೆ. ಇವನಿಗೆ ಪಟ್ಟಮಹಾದೇವಿ ಎಂಬ ರಾಣಿಯಿಂದ ಜೋಯಿದೇವ, ವಿಕ್ರಮಾದಿತ್ಯ ಮತ್ತು ತುಳುವಲಾದೇವಿ ಎಂಬ ಮಕ್ಕಳಿದ್ದರು. ವಿಕ್ರಮಾದಿತ್ಯನ ಮರಣಾನಂತರ 2ನೆಯ ಜೋಯಿದೇವ 1233ರಲ್ಲಿ ದೊರೆಯಾದ. ಈ ಸಮಯದಲ್ಲಿ ಸೇವುಣ ಸಿಂಘಣ ಅತ್ಯಂತ ಬಲಿಷ್ಠನಾಗಿ ಕರ್ನಾಟಕದ ಬಹು ಭಾಗವನ್ನು ತನ್ನ ಅಧೀನದಲ್ಲಿಟ್ಟುಕೊಂಡಿದ್ದ. ಗುತ್ತ ಎರಡನೆಯ ಜೋಯಿದೇವನನ್ನು ಸಿಂಘಣನ ಮಂತ್ರಿಯಾದ ಬೀಚ ತನ್ನ ಅಧೀನಕ್ಕೆ ತಂದ. 1238ರಲ್ಲಿ ಬರೆಸಲಾದ ಶಾಸನವೊಂದರಲ್ಲಿ 2ನೆಯ ಜೋಯಿದೇವ ಸಿಂಘಣನ ಪಾದಪದ್ಮೋಪ ಜೀವಿ ಎಂದು ಹೇಳಿಕೊಂಡಿದ್ದಾನೆ. ಸೇವುಣರ ಪರವಾಗಿ ಸಿಂಘಣ ತನ್ನ ದಂಡ ನಾಯಕ ಚಿಕ್ಕದೇವನನ್ನು ಗುತ್ತವೊಳಲಿನಲ್ಲಿ ಇರಿಸಿದ. ಜೋಯಿದೇವ 1248ರಲ್ಲಿ ಮರಣಹೊಂದಿದಾಗ ಅವನ ತಮ್ಮನಾದ 3ನೆಯ ವಿಕ್ರಮಾದಿತ್ಯ ಮಹಾಮಂಡಲೇಶ್ವರನಾದ. ಈತ ಸೇವುಣ ದೊರೆ ಕೃಷ್ಣನ ಆಶ್ರಯದಲ್ಲಿದ್ದ. 3ನೆಯ ಗುತ್ತದೇವ, ಹಿರಿಯದೇವ ಮತ್ತು 3ನೆಯ ಜೋಯಿದೇವ ಇವರು ವಿಕ್ರಮಾದಿತ್ಯನಿಗೆ ರಾಣಿ ಮೈಲಾಳದೇವಿಯಿಂದ ಜನಿಸಿದ ಮಕ್ಕಳು. ವಿಕ್ರಮಾದಿತ್ಯನ ಮರಣಾನಂತರ ಇವನ ಜ್ಯೇಷ್ಠಪುತ್ರ 3ನೆಯ ಗುತ್ತ 1259ರಲ್ಲಿ ಮಹಾಮಂಡಲೇಶ್ವರನಾದ. ಇವನು ಸ್ವಲ್ಪಕಾಲದಲ್ಲಿಯೇ ಸೇವುಣ ಕೃಷ್ಣನ ಆಧಿಪತ್ಯದಿಂದ ಸ್ವತಂತ್ರನಾಗಲು ಹವಣಿಸಿದ. ಆದರೆ ಕೃಷ್ಣ ತನ್ನ ಸೇನಾಧಿಪತಿಗಳನ್ನು ಕಳುಹಿಸಿ ಈ ಪ್ರಯತ್ನವನ್ನು ಅಡಗಿಸಿದ. ಇಷ್ಟರಲ್ಲಿ ಸೇವುಣ ಕೃಷ್ಣ ಮರಣ ಹೊಂದಿ ಮಹಾದೇವ ಸೇವುಣ ರಾಜನಾಗಿದ್ದ. ಮಹಾದೇವ ಸಾಳುವ ತಿಕ್ಕಮನೆಂಬ ದಳಪತಿಯ ನೇತೃತ್ವದಲ್ಲಿ ಹೊಯ್ಸಳರ ಮೇಲೆ ಒಂದು ಸೈನ್ಯವನ್ನು ಕಳುಹಿಸಿದ. ಈ ಸೈನ್ಯ ಗುತ್ತವೊಳಲಿಗೆ ಬಂದು ಅಲ್ಲಿ ತಂಗಿತು. ಇಷ್ಟರಲ್ಲಿ ಸೇವುಣ ರಾಮಚಂದ್ರ ದೊರೆಯಾಗಿದ್ದ. ರಾಮಚಂದ್ರನ ಆದೇಶದಂತೆ ಗುತ್ತರಾಜ ಸಾಳುವ ತಿಕ್ಕಮನಿಗೆ ಸೈನ್ಯ ಸಹಾಯವನ್ನು ಒದಗಿಸಿದ. ಈ ಯುದ್ಧದಲ್ಲಿ ಸಹಾಯ ನೀಡುವುದರಲ್ಲಿಯೇ ಗುತ್ತನ ಕಾಲವೆಲ್ಲ ಕಳೆಯಿತು. ಸು. 1280ರಲ್ಲಿ ಇವನು ಮರಣಹೊಂದಿದ. ಇವನ ಅನಂತರ ಇವನ ಸಹೋದರರು ಮಹಾಮಂಡಲೇಶ್ವರ ರಾಜರಾಗಿದ್ದರೇ ಎಂಬುದು ಖಚಿತವಾಗಿ ಗೊತ್ತಿಲ್ಲ. ಆದರೆ ಇವನ ತಮ್ಮ 3ನೆಯ ಜೋಯಿದೇವನ ಮಗ 4ನೆಯ ವಿಕ್ರಮಾದಿತ್ಯ 1283ರಲ್ಲಿ ಸೇವುಣ ರಾಮಚಂದ್ರನ ಆಶ್ರಯದಲ್ಲಿದ್ದನೆಂದು ಹಿರೇಬಿದ್ರಿ ಎಂಬಲ್ಲಿ ದೊರಕಿರುವ ಶಾಸನದಿಂದ ಗೊತ್ತಾಗುತ್ತದೆ. ಇವನು ತನ್ನ ರಾಣಿ ಪದ್ಮಲಾದೇವಿಯ ಸಮೇತ ಕಲ್ಲಿನಾಥ ದೇವಾಲಯಕ್ಕೆ ಕೆಲವು ದತ್ತಿಗಳನ್ನು ಬಿಟ್ಟ ವಿಚಾರವನ್ನು ಈ ಶಾಸನ ತಿಳಿಸುತ್ತದೆ. ಈ ವಿಕ್ರಮಾದಿತ್ಯ ಎಲ್ಲಿಯವರೆಗೆ ಆಳಿದನೆಂಬುದು ತಿಳಿದಿಲ್ಲ. ಬಹುಶಃ ರಾಮಚಂದ್ರ ಮಹಮ್ಮದೀಯರಿಗೆ ಸೋತ ಅನಂತರ ಗುತ್ತರ ವಂಶವೂ ನಾಶವಾಗಿರಬೇಕೆಂದು ಊಹಿಸಬಹುದು.




(ಎ.ವಿ.ಎನ್.)

**ಗುದ** : ಜಠರಗರುಳಿನ ನಾಳದ ಕೆಳಕೊನೆಯ ಕಂಡಿ (ಏನಸ್). ಇದನ್ನು ಸ್ನಾಯುಗಳು ಸುತ್ತುವರಿದಿವೆ. ಮಲ ಹೊರದೂಡಿಕೆಯನ್ನು ಹತೋಟಿಗೊಳಿಸುವ ಈ ಸ್ನಾಯುಗಳಿಗೆ ಗುದವನ್ನು ಕುಗ್ಗಿಸುವ ಸ್ನಾಯು (ಏನಲ್ ಸ್ಫಿಂಕ್ಟರ್) ಎಂದು ಹೆಸರಿಸಲಾಗಿದೆ. ಇದು ಕುಗ್ಗಿದಾಗ ಒಳಪಕ್ಕದಲ್ಲಿರುವ ಲೋಳೆ ಪೊರೆಯೂ ಹೊರಗಡೆ ಇರುವ ಚರ್ಮವೂ ಸುಕ್ಕುಗಟ್ಟುತ್ತವೆ. ಗುದದೊಳಗಿರುವ ಲೋಳೆಪೊರೆಯಲ್ಲಿನ ಅಪಧಮನಿಗಳು ಬಲವಿಲ್ಲದವಾಗಿ, ಹಿಗ್ಗಿ ರಕ್ತ ಗೂಡಿರುವುದಕ್ಕೆ ಮೊಳೆಗಳು (ಪೈಲ್ಸ್)

ಎಂದು ಹೆಸರು. ಇವು ಕೆಲವು ಸಂದರ್ಭಗಳಲ್ಲಿ ಗುದದಿಂದ ಹೊರಗೂ ಕಾಣಿಸಿಕೊಳ್ಳುವುವು. ಕೆಲವೇಳೆ ಮಲ ವಿಸರ್ಜನೆಯೊಂದಿಗೆ ನೋವಿಲ್ಲದೆಯೇ ಇವುಗಳಿಂದ ರಕ್ತ ಸುರಿದು ಹೋಗಬಹುದು. (ಡಿ.ಎಸ್.ಎಸ್.)

**ಗುನಾ :** ಮಧ್ಯಪ್ರದೇಶದ ಒಂದು ಜಿಲ್ಲೆ; ಜಿಲ್ಲೆಯ ಮುಖ್ಯಪಟ್ಟಣ. ಜಿಲ್ಲೆಯ ವಿಸ್ತೀರ್ಣ 11065ಚ.ಕಿಮೀ. ಜನಸಂಖ್ಯೆ 12.40.938 (2011). ಜಿಲ್ಲೆಯ ಹೆಚ್ಚಿನ ಭಾಗ ಗುಡ್ಡಗಳಿಂದ ಕೂಡಿದೆ; ಸಮುದ್ರಮಟ್ಟದಿಂದ 488 ಮೀ ಎತ್ತರದಲ್ಲಿದೆ. ಬೇತವಾ, ಪಾರ್ವತಿ, ಸಿಂಧ ಮತ್ತು ಬಿಲಾಸ್ ಇಲ್ಲಿಯ ಮುಖ್ಯ ನದಿಗಳು.

ಐತಿಹಾಸಿಕ ಮತ್ತು ಪುರಾತತ್ವ ದೃಷ್ಟಿಯಿಂದ ಈ ಜಿಲ್ಲೆ ಮಹತ್ತ್ವದ ಸ್ಥಾನ ಪಡೆದಿದೆ. ತುಂಭವನ್, ಚಾಚೋಡಾ, ಮ್ಯಾನಾ (ಮಾಯಾಪುರ), ಈಸಾಗಢ, ಚಂದೇರಿ ಮುಂತಾದ ಐತಿಹಾಸಿಕ ಸ್ಥಳಗಳು ಇಲ್ಲಿವೆ. ವ್ಯಾಪಾರ, ಕೈಗಾರಿಕೆ, ಸರಕು ಸಾಗಣೆ, ಶಿಕ್ಷಣ ಮತ್ತು ಸಾಂಸ್ಕೃತಿಕ ದೃಷ್ಟಿಗಳಿಂದ ಜಿಲ್ಲೆ ಅಷ್ಟಾಗಿ ಮುಂದುವರಿದಿಲ್ಲ. 1951ರಿಂದ ಈಚೆಗೆ ಎಣ್ಣೆ, ಬೇಳೆ, ಮಂಜುಗಡ್ಡೆ, ಸಕ್ಕರೆ ಮತ್ತು ಜವಳಿ ಕೈಗಾರಿಕೆಗಳು ಪ್ರಾರಂಭವಾಗಿವೆ. ಚಂದೇರಿಯಲ್ಲಿ ತಯಾರಾಗುವ ನೂಲು ಮತ್ತು ರೇಷ್ಮೆ ಬಟ್ಟೆಗಳು ದೇಶವಿದೇಶಗಳಲ್ಲಿ ಪ್ರಸಿದ್ಧವಾಗಿವೆ. ಇವಲ್ಲದೆ ಜರಿ ಕೆಲಸ, ಚರ್ಮ ಹದಮಾಡುವ ಮತ್ತು ಬೀಡಿ ಕಟ್ಟುವ ಉದ್ಯಮಗಳು ಬೆಳೆದಿವೆ.

ಗುನಾ ಪಟ್ಟಣ (ಉ.ಅ. $24^0$ 39' ಪೂ.ರೇ. $77^0$ 19') ಆಗ್ರಾ–ಮುಂಬಯಿ ಹೆದ್ದಾರಿಯಲ್ಲಿದೆ. ಮಧ್ಯ ರೈಲ್ವೆಯ ಬೀನಾ–ಬಾರನ್ ಉಪಶಾಖೆಯಲ್ಲಿ ಇದು ಒಂದು ನಿಲ್ದಾಣ. ಮೊದಲು ಇದೊಂದು ಚಿಕ್ಕ ಗ್ರಾಮವಾಗಿತ್ತು. 1844ರಲ್ಲಿ ಗ್ವಾಲಿಯರಿನ ಅಶ್ವಾರೋಹಿ ದಳದವರು ಇಲ್ಲಿ ಬೀಡುಬಿಟ್ಟರು. ಅಂದಿನಿಂದ ಗುನಾದ ಮಹತ್ತ್ವ ಹೆಚ್ಚುತ್ತಿದೆ. 1897ರಲ್ಲಿ ರೈಲುಮಾರ್ಗದ ವಿಸ್ತರಣ ಕಾರ್ಯ ನಡೆದದ್ದರಿಂದ ಇದು ವ್ಯಾಪಾರ ಕೇಂದ್ರವಾಯಿತು. (ಎಂ.ಎಸ್.ಎಚ್‌ಓ.;ಎಸ್.ಎನ್.ಎಆರ್‌ಇ.)

**ಗುನ್ನಾರ್‌ಸ್ಸನ್, ಗುನ್ನಾರ್ :** 1889–1975 ಐಸ್ಲೆಂಡಿನ ಪ್ರಸಿದ್ಧ ಕಾದಂಬರಿಕಾರ. ಸಮಕಾಲೀನ ಐಸ್ಲೆಂಡಿನ ಸಾಹಿತ್ಯ ಪ್ರಪಂಚದಲ್ಲಿ ಹಾಲ್‌ಡೊರ್ ಲ್ಯಾಕ್ಸ್‌ನೆಸ್‌ನಂತೆ ಹೆಸರಾದವ. ಈತ 1889ರ ಮೇ 18ರಂದು ಜನಿಸಿದ. ಎಳೆಯ ವಯಸ್ಸಿನಲ್ಲಿಯೆ ತಾಯಿಯನ್ನು ಕಳೆದುಕೊಂಡ. ಈತ 18 ವರ್ಷದವರೆಗೆ ಕುಟುಂಬಕ್ಕೆ ಸೇರಿದ ಜಮೀನಲ್ಲಿ ಕೆಲಸ ಮಾಡುತ್ತಾ ಹಳ್ಳಿಯ ಶಾಲೆಯಲ್ಲಿ ಅಭ್ಯಯಿಸುತ್ತಿದ್ದ. ಈತನ ಕುಟುಂಬ ಬಡತನದಲ್ಲಿ ಇದ್ದುದರಿಂದ ಸಂಪ್ರದಾಯಿಕ ಶಾಲೆಯಲ್ಲಿ ಅಭ್ಯಾಸ ಮಾಡಲು ಸಾಧ್ಯವಾಗಲಿಲ್ಲ. ಈತ 17ನೆಯ ವರ್ಷದಲ್ಲಿಯೇ ಪದ್ಯಗಳನ್ನು ಮತ್ತು ಸಣ್ಣ ಕಥೆಗಳನ್ನು ಪ್ರಾರಂಭಿಸಿದ. 1907ರಲ್ಲಿ ವಿದ್ಯಾರ್ಥಿಯಾಗಿ ಡೆನ್ಮಾರ್ಕಿಗೆ ಹೊರಟ. ವಿದ್ಯಾಭ್ಯಾಸ ಮಾಡುವಾಗ ಅಲ್ಲಿ 1912ರಲ್ಲಿ ಫ್ರಾನ್ಸಿಕ ಅಂತೋನಿಯಳನ್ನು ವಿವಾಹವಾದ. ಇತನ ಪತ್ನಿ ರೋಮನ್ ಕೆಥೊಲಿಕ್ ಪಂಗಡಕ್ಕೆ ಸೇರಿದವಳು. ಈತ ಪ್ರಾಟಿಸ್ಟೆಂಟ್ ಪಂಗಡದವನು. ಈತ 1938ರವರೆಗೆ ಅಲ್ಲಿಯೇ ಇದ್ದು ಐಸ್ಲೆಂಡಿಗೆ ಬಂದ. 1939ರಲ್ಲಿ ಪೂರ್ವ ಐಸ್ಲೆಂಡಿನಲ್ಲಿರುವ ಜಮೀನಿನಲ್ಲಿ ನೆಲಸಿ ಜರ್ಮನಿಯ ವಾಸ್ತುಶಿಲ್ಪಿಯ ವಿನ್ಯಾಸದಂತೆ ಮನೆಯನ್ನು ನಿರ್ಮಿಸಿದನು. ಅಲ್ಲಿ ವಾಸಿಸುತ್ತಿದ್ದನ್ನು ಅನಂತರ ಆ ಮನೆಯನ್ನು ಐಸ್ಲೆಂಡ್ ದೇಶಕ್ಕೆ ಕೊಡುಗೆಯಾಗಿ ನೀಡಿದನು. ಇದನ್ನು ಕಾದಂಬರಿಕಾರನ ನೆನಪಿನಲ್ಲಿ ಸಂಗ್ರಹಾಲಯವನ್ನಾಗಿ ಮಾರ್ಪಾಡು ಮಾಡಲಾಗಿದೆ. 1948ರಲ್ಲಿ ತನ್ನ ವಾಸಸ್ಥಳವನ್ನು ರಿಕಯವಿಕ್‌ಗೆ ಬದಲಾಯಿಸಿ ಅಲ್ಲೆಯೆ 1975ರವರೆಗೆ ವಾಸ ಮಾಡಿದ. 1975ರ ನವೆಂಬರ್ 21ರಂದು ನಿಧನವಾದ. 1976ರಲ್ಲಿ ಈತನ ಪತ್ನಿ ನಿಧನವಾದಳು. ಇವರಿಬ್ಬರ ಸಮಾಧಿಗಳು ಅಲ್ಲಿಯ ಕೆಥೊಲಿಕ್ ಚರ್ಚ್‌ನ ಸ್ಮಶಾನದಲ್ಲಿದೆ. (ಎನ್.ಎಲ್.)

ಈತ ಡೇನಿಷ್ ಭಾಷೆಯಲ್ಲಿ ಮೊದಲು ಕಾದಂಬರಿಗಳನ್ನು ಬರೆದ. ಅವು ಅನಂತರ ಐಸ್‌ಲ್ಯಾಂಡಿಕ್ ಭಾಷೆಗೆ ಅನುವಾದಗೊಂಡಿವೆ. ಐಸ್‌ಲ್ಯಾಂಡಿಕ್ ಭಾಷೆಯಲ್ಲೂ ಕ್ವಚಿತ್ತಾಗಿ ಈತ ಬರೆದುದುಂಟು.

ಈತನ ಶೈಶವ ಮತ್ತು ಯೌವನದ ನೆನಪುಗಳೇ ಈತನ ಕಾದಂಬರಿಯ ವಸ್ತು. ಸಾಮಾನ್ಯರ ಜೀವನ ಮತ್ತು ಜೀವನ ಸಾರ್ಥಕತೆಗಳನ್ನೂ ಈತನ ಕಾದಂಬರಿಗಳಲ್ಲಿ ಕಾಣಬಹುದಾಗಿದೆ. ಗ್ಪೆಸ್ಟ್ ದಿ ಒನ್–ಐಯ್ಡ್ (1912–14, ನಾಲ್ಕು ಸಂಪುಟ; ಇಂಗ್ಲಿಷ್ ಅನು: 1920) ಎಂಬುದರಲ್ಲಿ ಐಸ್ಲೆಂಡಿನ ಜನಜೀವನದ ಯಥಾರ್ಥ ಚಿತ್ರಣವಿದೆ. ಸೆವೆನ್ ಡೇಸ್ ಡಾರ್ಕ್‌ನೆಸ್‌ನಲ್ಲಿ (1920: ಇಂಗ್ಲಿಷ್ ಅನು : 1930) ಯುದ್ಧದಿಂದ ಉಂಟಾಗುವ ಸಮಸ್ಯೆಗಳ ನಿರೂಪಣೆ ಇದೆ. ಈತನ ಜೀವನಚರಿತ್ರೆಯಾದ ದಿ ಚರ್ಚ್ ಆನ್ ದಿ ಮೌಂಟನ್ (ಐದು ಸಂಪುಟಗಳು; 1924–28) ಎಂಬುದರ ಸ್ವಲ್ಪ ಭಾಗ ಷಿಪ್ಸ್ ಇನ್ ದಿ ಸ್ಕೈ (1938) ಮತ್ತು ದಿ ನೈಟ್ ಅಂಡ್ ದಿ ಡ್ರೀಮ್ ಎಂಬ ಹೆಸರಿನಲ್ಲಿ ಇಂಗ್ಲಿಷಿಗೆ ಅನುವಾದವಾಗಿದೆ. ಈತ ಆಧುನಿಕ ಐಸ್ಲೆಂಡಿನ ಹೆಸರಾಂತ ದ್ವಿಭಾಷಿ ಎನಿಸಿಕೊಂಡಿದ್ದಾನೆ. (ಕೆ.ಕೆ.ಐ.)

**ಗುಪ್ತಕೂಟ :** ವಿಧಾನಸಭೆಗಳಿಗೆ ಮತ್ತು ಚುನಾವಣೆ ಮಾಡಬೇಕಾದ ರಾಜಕೀಯ ಹುದ್ದೆಗಳಿಗೆ ಸ್ಪರ್ಧಿಗಳನ್ನು ಗೊತ್ತುಮಾಡಲೂ ಪಕ್ಷದ ಉದ್ದೇಶ, ರೀತಿ, ನೀತಿ ಇತ್ಯಾದಿಗಳನ್ನು ನಿರ್ಧರಿಸಲೂ ಗುಪ್ತವಾಗಿ ಸೇರುವ ಮುಖಂಡರ ಇಲ್ಲವೆ ಆಸಕ್ತರ ಕೂಟ (ಕಾಕಸ್). ಇದಕ್ಕೆ ನಿರ್ಧರಿಸಲ್ಪಟ್ಟ ಸದಸ್ಯರಾಗಲಿ ನಿಯಮಾವಳಿಯಾಗಲಿ ಇರುವುದಿಲ್ಲ. ಇದರ ವ್ಯವಹಾರಗಳು ಯಾವ ಕಟ್ಟುಪಾಡಿಗೂ ಒಳಪಟ್ಟಿರುವುದಿಲ್ಲ. ಇದರಲ್ಲಿ ಸೇರಿರುವ ಮುಖಂಡರ ಪ್ರಭಾವದಿಂದಾಗಿ, ಇಲ್ಲವೆ ಪಕ್ಷದ ಹೆಚ್ಚು ಸಂಖ್ಯೆಯ ಸದಸ್ಯರು ಇದರಲ್ಲಿ ಆಸಕ್ತರಾಗಿಲ್ಲದಿರುವುದರಿಂದ. ಇದರ ನಿರ್ಣಯಗಳನ್ನು ನಿರಾತಂಕವಾಗಿ ಪಕ್ಷ ಅನುಮೋದಿಸುವುದು.

ಇಂಗ್ಲಿಷಿನ ಕಾಕಸ್ ಎಂಬ ಶಬ್ದ ಉದ್ಭವವಾದ್ದು ಅಮೆರಿಕ ಸಂಯುಕ್ತ ಸಂಸ್ಥಾನದ ಬಾಸ್ಟನಿನಲ್ಲಿ, 18ನೆಯ ಶತಮಾನದ ಆರಂಭಕಾಲದಲ್ಲಿ. ಸಾರ್ವಜನಿಕ ವಿಚಾರಗಳನ್ನು ಚರ್ಚಿಸುವ, ಸ್ಥಳೀಯ ಚುನಾವಣೆಗಳಿಗೆ ವ್ಯವಸ್ಥೆ ಮಾಡುವ, ಅಧಿಕಾರಿಗಳಿಗೆ ಅಭ್ಯರ್ಥಿಗಳನ್ನು ಆರಿಸುವ ರಾಜಕೀಯ ಸಂಘವನ್ನು ಈ ಹೆಸರಿನಿಂದ ಕರೆಯಲಾಗುತ್ತಿತ್ತು. 1800ರಿಂದ 1824ರ ವರೆಗೆ ಅಲ್ಲಿಯ ಕಾಂಗ್ರೆಸಿನೊಳಗಿನ ಪಕ್ಷದ ಗುಪ್ತಕೂಟ ದೇಶದ ಅಧ್ಯಕ್ಷ ಉಪಾಧ್ಯಕ್ಷರ ಸ್ಥಾನಗಳಿಗೆ ಉಮೇದುವಾರರನ್ನು ನಾಮಕರಣ ಮಾಡುತ್ತಿತ್ತು. ನಾಮಕರಣಕ್ಕಾಗಿ ಸಭೆ ಸೇರುವ ಪದ್ಧತಿ ಆಮೇಲೆ ಬಂತು. ಗವರ್ನರ್ ಮತ್ತು ಲೆಫ್ಟನಂಟ್ ಗವರ್ನರ್‌ಗಳನ್ನು ಚುನಾಯಿಸಲೂ ಪಕ್ಷದ ವಿಧಾನಮಂಡಲದ ಸದಸ್ಯರು ಸಭೆ ಸೇರುತ್ತಿದ್ದರು. ಕಾಂಗ್ರೆಸ್, ರಾಜ್ಯ ವಿಧಾನಮಂಡಲ ಅಥವಾ ನಗರ ಸಭೆಯ ಒಂದು ಪಕ್ಷದ ಸದಸ್ಯರು ಯಾವೊಂದು ವಿಧೇಯಕದ ಬಗ್ಗೆ ಅಥವಾ ಅಧಿಕಾರಸ್ಥಾನದ ಬಗ್ಗೆ ತಮ್ಮ ಪಕ್ಷದ ನೀತಿಯೇನೆಂಬುದನ್ನು ನಿರ್ಧರಿಸಲು ಸೇರುವ ಸಭೆ–ಎಂಬ ವ್ಯಾಪಕಾರ್ಥದಲ್ಲಿ ಈ ಶಬ್ದ ಅಮೆರಿಕದಲ್ಲಿ ಬಳಕೆಯಲ್ಲಿದೆ. ಆದರೆ ಒಂದು ಪಕ್ಷದಲ್ಲಿರುವ, ಅತ್ಯಂತ ಶಿಸ್ತಿನ ಮನೋಭಾವದಿಂದ ವರ್ತಿಸುವ ಸಂವೃತ ಕೂಟವೆಂಬ ಅರ್ಥದಲ್ಲಿ ಇದು ಬಳಕೆಗೆ ಬಂದದ್ದು ಇಂಗ್ಲೆಂಡಿನಲ್ಲಿ. ಭಾರತದಲ್ಲೂ ರಾಜಕೀಯ ಪಕ್ಷಗಳ ಮುಖಂಡರೆನಿಸಿಕೊಂಡವರ ಒಳಕೂಟಗಳನ್ನು ಈ ರೀತಿ ಸಂಬೋಧಿಸುವುದುಂಟು. ಮಧ್ಯಮವರ್ಗದ ಸಹಾನುಭೂತಿಯೇ ಆಧಾರವಾಗಿ ಉಳ್ಳ ಸಂಪ್ರದಾಯವಾದಿ ಪಕ್ಷಗಳಲ್ಲಿ ಗುಪ್ತಕೂಟಗಳ ಪ್ರಭಾವ ಹೆಚ್ಚು. (ಎಸ್.ವಿ.ಡಿ.)

**ಗುಪ್ತನಿಧಿ :** ನೆಲದಲ್ಲಿ ಅಡಗಿದ್ದು ಸಿಕ್ಕಿದ, ಮಾಲೀಕರು ಗೊತ್ತಿಲ್ಲದ ನಾಣ್ಯ, ಚಿನ್ನ, ಬೆಳ್ಳಿ ಗಟ್ಟಿ, ನಗ ಮುಂತಾದ ಪದಾರ್ಥಗಳು (ಟ್ರೆಶರ್ ಟ್ರೋವ್). ಗುಪ್ತನಿಧಿ ಕಾಯಿದೆಯ ಪ್ರಕಾರ ಇದರ ಹಕ್ಕು ಸರ್ಕಾರದ್ದು. ಇದಕ್ಕೆ ಒಮ್ಮೆ ಮಾಲೀಕನಿದ್ದನಾದರೂ ಪತ್ತೆಯಾದಾಗ ಅವನು ಯಾರೆಂಬುದು ಗೊತ್ತಿರುವುದಿಲ್ಲವಾದ್ದರಿಂದ ಇದು ಸರ್ಕಾರಕ್ಕೆ ಸೇರತಕ್ಕದ್ದೇ ಹೊರತು, ಇದನ್ನು ಕಂಡವನಿಗಲ್ಲ. ಇದನ್ನು ಬಚ್ಚಿಡುವುದು ಆಪಾದಿಸಬಹುದಾದ ಅಪರಾಧ. ಆದರೆ ಇದನ್ನು ಬಳಸಿಕೊಳ್ಳುವ ಉದ್ದೇಶವಿದ್ದ ವಿನಾ ಇದು ಕ್ರಿಮಿನಲ್ ಅಪರಾಧವಾಗುವುದಿಲ್ಲ. ಇದನ್ನು ಪತ್ತೆ ಹಚ್ಚಿದವನು ಮತ್ತು ಈ ಬಗ್ಗೆ ತಿಳಿವಳಿಕೆ ಉಳ್ಳ ಯಾವನೂ ಸಂಬಂಧಪಟ್ಟ ಅಧಿಕಾರಿಗೆ ಈ ಬಗ್ಗೆ ವರದಿ ಮಾಡತಕ್ಕದ್ದು. ಪತ್ತೆಯಾದ್ದು ಗುಪ್ತನಿಧಿ ಹೌದೇ ಅಲ್ಲವೆ ಎಂಬುದನ್ನು ನಿರ್ಧರಿಸಲು ಆ ಅಧಿಕಾರಿ ಮಹಜರು ನಡೆಸುತ್ತಾನೆ. ಸ್ಥೂಲವಾಗಿ ಇವು ಇಂಗ್ಲೆಂಡಿನಲ್ಲೂ ಭಾರತದಲ್ಲೂ ಜಾರಿಯಲ್ಲಿರುವ ಕಾನೂನಿನ ಮುಖ್ಯಾಂಶಗಳು. ಅಮೆರಿಕದ ಸಂಯುಕ್ತಸಂಸ್ಥಾನಗಳಲ್ಲಿ ಸಾಮಾನ್ಯ ನ್ಯಾಯದ ಪ್ರಕಾರ ಗುಪ್ತನಿಧಿ ಸರ್ಕಾರದ ಬೊಕ್ಕಸಕ್ಕೆ ಸೇರಬೇಕಾಗಿದ್ದರೂ ವಾಸ್ತವವಾಗಿ ಅದನ್ನು ಕಂಡವನೇ ಇಟ್ಟುಕೊಳ್ಳಲು ಅವಕಾಶವಿದೆ. ಲುಯಿಸಿಯಾನದಲ್ಲಿ ನಿಧಿಯ ಅರ್ಧ ಅದನ್ನು ಕಂಡವನಿಗೂ ಉಳಿದರ್ಧ ನೆಲದ ಮಾಲೀಕನಿಗೂ ಹೋಗುತ್ತದೆ. (ಬಿ.ಡಿ.ಎಚ್.)

**ಗುಪ್ತ, ಬಿ.ಎನ್. :** 1895–1976. ಕರ್ನಾಟಕದ ಹಿರಿಯ ಪತ್ರಿಕೋದ್ಯಮಿಗಳಲ್ಲೊಬ್ಬರು. ಬೈಸಾನಿ ನರಸಿಂಹೇಶ್ವರ ಗುಪ್ತ ಆಂಧ್ರಪ್ರದೇಶದ ಚಿತ್ತೂರಿನಲ್ಲಿ 1895ರ ಡಿಸೆಂಬರ್ 16ರಂದು ಜನಿಸಿದರು. ತಂದೆ ರಂಗಯ್ಯ ಶೆಟ್ಟಿ, ತಾಯಿ ಶ್ರೀರಂಗ ನಾಂದಾರಮ್ಮ ತಮಿಳುನಾಡಿನಲ್ಲಿ (ಮದರಾಸು) ವಿದ್ಯಾಭ್ಯಾಸ ಮಾಡಿ ಕರ್ನಾಟಕದಲ್ಲಿ ಅನೇಕ ಕನ್ನಡ ಪತ್ರಿಕೆಗಳ ಹುಟ್ಟು ಬೆಳವಣಿಗೆಗಳಿಗೆ ಕಾರಣರಾದ ಇವರು ಪತ್ರಿಕೋದ್ಯಮ ಕ್ಷೇತ್ರದಲ್ಲಿ ಹಲವಾರು ಪ್ರಯೋಗಗಳನ್ನೂ ಅಳವಡಿಸಿದರು. ಇವರು ಮದರಾಸಿನಲ್ಲಿ ಅನಿಬೆಸೆಂಟರ ಪತ್ರಿಕೋದ್ಯಮ ಕಾಲೇಜಿನಲ್ಲಿ ಶಿಕ್ಷಣ ಪಡೆದು ಮದರಾಸಿನಲ್ಲೇ ನ್ಯೂ ಇಂಡಿಯ (ದಿನಪತ್ರಿಕೆ) ಮತ್ತು ಕಾಮನ್ ವೀಲ್ (ವಾರಪತ್ರಿಕೆ) ಇವುಗಳ ಸಂಪಾದಕೀಯ ವಿಭಾಗಗಳಲ್ಲಿ ಕೆಲಸ ಮಾಡುತ್ತಿದ್ದು, ಬೆಂಗಳೂರಿಗೆ ಮಾರುಹೋಗಿ ಅಲ್ಲೇ ನೆಲಸಲು ನಿರ್ಧರಿಸಿದರು. ಆಗಿನ ಮೈಸೂರು ಸಂಸ್ಥಾನದ ರಾಜಕೀಯ ಕ್ಷೇತ್ರಕ್ಕೆ ಧುಮುಕಿ ಪ್ರಜಾಪಕ್ಷ ಸ್ಥಾಪನೆಗೆ ದುಡಿದರು. ಮೈಸೂರಿನ ಪ್ರಥಮ ರಾಜಕೀಯ ಪಕ್ಷವೂ ಜವಾಬ್ದಾರಿ ಸರ್ಕಾರದ ಬೇಡಿಕೆಯನ್ನು ಪ್ರಥಮವಾಗಿ ಮಂಡಿಸಿದ್ದೂ ಆದ ಪ್ರಜಾಪಕ್ಷವನ್ನು

ಬೆಳೆಸುವುದಕ್ಕಾಗಿ ಪ್ರಜಾಮತ ವಾರಪತ್ರಿಕೆಯನ್ನು ಪ್ರಕಟಿಸಲು ಗುಪ್ತ ಅವರು ನಿರ್ಧರಿಸಿದರು. ಆದರೆ ಮಿರ್ಜಾ ಇಸ್ಮಾಯಿಲ್ ದಿವಾನರಾಗಿದ್ದ ಮೈಸೂರು ಸರ್ಕಾರ ಅದಕ್ಕೆ ಅನುಮತಿ ಕೊಡಲಿಲ್ಲ. ಗುಪ್ತ ಅವರು ಮದರಾಸಿಗೆ ಹೋಗಿ 1929ರಲ್ಲಿ ಪ್ರಜಾಮತ ಪ್ರಾರಂಭಿಸಿದರಲ್ಲದೆ ಎರಡು ವರ್ಷಗಳ ಅನಂತರ (1931) ಜನವಾಣಿ ದಿನಪತ್ರಿಕೆಯನ್ನು ಪ್ರಾರಂಭಿಸಿದರು. ಜನವಾಣಿಯಲ್ಲಿ ಪ್ರಕಟವಾದ ಒಂದು ಲೇಖನದಿಂದಾಗಿ ಆ ಪತ್ರಿಕೆ ನಿಂತುಹೋಯಿತು.




ಅಷ್ಟರಲ್ಲಿ ಮಿರ್ಜಾ ಅವರು ಆ ಪತ್ರಿಕೆಗಳನ್ನು ಬೆಂಗಳೂರಿನಲ್ಲಿ ಪ್ರಕಟಿಸಲು ಅನುಮತಿ ನೀಡಿದ್ದರಿಂದ 1933ರಲ್ಲಿ ಅವೆರಡೂ ಬೆಂಗಳೂರಿನಿಂದ ಪ್ರಕಟವಾಗಲಾ ರಂಭಿಸಿದುವು. ಬೆಂಗಳೂರಿಗೆ ಹಿಂದಿರುಗಿದ ಕೂಡಲೆ ಗುಪ್ತ ಅವರು ಮೈಸೂರು ಕಾಂಗ್ರೆಸ್ ಸ್ಥಾಪನೆಗಾಗಿ ಹೋರಾಡಲು ಪ್ರಾರಂಭಿಸಿದರು. ತಾವೇ ಹಿಂದೆ ಸ್ಥಾಪಿಸಿದ್ದ ಪ್ರಜಾಪಕ್ಷದ ವಿರುದ್ಧವಾಗಿಯೇ ಅಭ್ಯರ್ಥಿಗಳನ್ನು ನಿಲ್ಲಿಸಬೇಕಾಯಿತು. ಗುಪ್ತ ಅವರ ರಾಜಕೀಯ ಚಟುವಟಿಕೆಗಳು ಹೆಚ್ಚಾದಾಗ, ಅವರು ಮೈಸೂರಿನವರಲ್ಲವೆಂಬ ಕಾರಣವನ್ನು ನೀಡಿ, ಇಪ್ಪತ್ನಾಲ್ಕು ಗಂಟೆಗಳೊಳಗಾಗಿ ಸಂಸ್ಥಾನವನ್ನು ಬಿಟ್ಟು ಹೋಗುವಂತೆ ಮೈಸೂರು ಸರ್ಕಾರ ಆಜ್ಞೆ ಮಾಡಿತು. ಗುಪ್ತ ಅವರು ಹುಬ್ಬಳ್ಳಿಗೆ (ಆಗ ಹುಬ್ಬಳ್ಳಿ ಮುಂಬೈ ಪ್ರಾಂತ್ಯಕ್ಕೆ ಸೇರಿತು.) ತೆರಳಿ (1936) ಅಲ್ಲಿಂದ ಪ್ರಜಾಮತವನ್ನು ಪ್ರಕಟಿಸಲು ಪ್ರಾರಂಭಿಸಿದರು. (ಆ ವೇಳೆಗೆ ಜನವಾಣಿಯನ್ನು ಅವರು ಬೇರೆಯವರಿಗೆ ಕೊಟ್ಟಿದ್ದರು.) ಸಂಸ್ಥಾನದೊಳಕ್ಕೆ ಪ್ರಜಾಮತ ಬರಕೂಡದೆಂದು ಮೈಸೂರು ಸರ್ಕಾರ ಬಹಿಷ್ಕಾರ ಹಾಕಿತು. ಸಂಸ್ಥಾನದ ಹೊರಗೆ ಪ್ರಜಾಮತವೆಂಬ ಹೆಸರಿನಲ್ಲೇ ಪತ್ರಿಕೆ ನಡೆಯುತ್ತಿದ್ದರೂ ಇನ್ನೊಂದು ಹೆಸರಿನಲ್ಲಿ ಆ ಪತ್ರಿಕೆಯ ಸಂಚಿಕೆಗಳನ್ನು ಮೈಸೂರು ಸಂಸ್ಥಾನಕ್ಕೆ ಕಳುಹಿಸಲು ಗುಪ್ತ ಅವರು ಪ್ರಾರಂಭಿಸಿದರು. ಆ ಹೆಸರಿನ ಪತ್ರಿಕೆಗೂ ಸರ್ಕಾರ ಬಹಿಷ್ಕಾರ ಹಾಕಿತು. ಮತ್ತೆ ಪತ್ರಿಕೆಯ ಹೆಸರನ್ನು ಬದಲಾಯಿಸಲಾಯಿತು. ಮತ್ತೆ ಸರ್ಕಾರದ ಬಹಿಷ್ಕಾರ, ಮತ್ತೆ ಹೆಸರಿನ ಬದಲಾವಣೆ; ಹೀಗೆಯೇ ಸಾಗಿತು. ಇನ್ನು ಬಹಿಷ್ಕಾರ ಹಾಕುವುದರಿಂದ ಪ್ರಯೋಜನವಿಲ್ಲವೆಂದು ಸರ್ಕಾರ ಸುಮ್ಮನಾಯಿತು. 1938ರಲ್ಲಿ ಮಿರ್ಜಾ ಅವರು ಮತ್ತೆ ಗುಪ್ತ ಅವರನ್ನು ಬೆಂಗಳೂರಿಗೆ ಆಹ್ವಾನಿಸಿದರು. ಬೆಂಗಳೂರಿಗೆ ಹಿಂದಿರುಗಿದ ಮೇಲೆ ಗುಪ್ತ ಅವರು ಜನವಾಣಿಯನ್ನು ಪಡೆದುಕೊಂಡರು. ಬಹಿಷ್ಕಾರಗಳಿಂದಾಗಿ ಪ್ರಜಾಮತ ಪತ್ರಿಕೆ ಸ್ಥಳಾಂತರವಾಗುತ್ತಿದ್ದರೂ ಒಂದು ವಾರವೂ ಅದು ನಿಲ್ಲದೆ ಪ್ರಕಟವಾಗುತ್ತಿತ್ತು. 1948ರಲ್ಲಿ ಗುಪ್ತರು ಇವೆರಡು ಪತ್ರಿಕೆಗಳನ್ನೂ ಮಾರಿದರು. ಪ್ರಜಾಮತ ಆ ವೇಳೆಗೆ 36,000 ಪ್ರತಿಗಳ ಪ್ರಸಾರ ಸಂಖ್ಯೆಯನ್ನು ಮುಟ್ಟಿದ್ದ ಪ್ರಥಮ ಕನ್ನಡ ವಾರಪತ್ರಿಕೆಯಾಗಿತ್ತು. ಅನಂತರ 1959ರಲ್ಲಿ ಅವರು ಜನಪ್ರಗತಿ ವಾರಪತ್ರಿಕೆಯನ್ನು ಕೊಂಡರು. 1961ರಲ್ಲಿ ಮಲ್ಲಿಗೆ ಮಾಸಪತ್ರಿಕೆಯನ್ನು ಸ್ಥಾಪಿಸಿದರು. 1971ರ ವರೆಗೂ ನಡೆಸಿಕೊಂಡುಬಂದು ಅನಂತರ ಬೇರೆಯವರಿಗೆ ವಹಿಸಿಕೊಟ್ಟರು.

ಗುಪ್ತ ಅವರು ರಾಜಕೀಯ, ಪತ್ರಿಕೋದ್ಯಮ, ವಾಣಿಜ್ಯ–ಈ ಮೂರು ಕ್ಷೇತ್ರಗಳಲ್ಲಿಯೂ ಕೆಲಸ ಮಾಡಿದವರು. 1942ರಿಂದ 1946ರ ವರೆಗೆ ಅವರು ಬೆಂಗಳೂರು ಪೌರಸಭೆಯ, 1948ರಿಂದ ಮೈಸೂರು ವಿಶ್ವವಿದ್ಯಾನಿಲಯದ ಸೆನೇಟಿನ, 1949ರಿಂದ ಮೈಸೂರು ವಿಶ್ವವಿದ್ಯಾನಿಲಯ ಕೌನ್ಸಿಲಿನ, 1945ರಿಂದ 1949ರ ವರೆಗೆ ಮೈಸೂರಿನ ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿ, ಆ ಸಭೆಯಲ್ಲಿ ಕಾಂಗ್ರೆಸ್ ಪಕ್ಷದ ಉಪನಾಯಕರಾಗಿ ಇದ್ದರು. ಮೈಸೂರು ಬ್ಯಾಂಕಿನ ಮತ್ತು ಅನೇಕ ಕೈಗಾರಿಕಾ ಮತ್ತು ವಾಣಿಜ್ಯ ಸಂಸ್ಥೆಗಳ ನಿರ್ದೇಶಕರಾಗಿದ್ದರು. ಚಲನಚಿತ್ರ ಕ್ಷೇತ್ರದಲ್ಲಿ ವಿಜಯಾ ಟಾಕೀಸ್ ಡಿಸ್ಟ್ರಿಬ್ಯೂಟರ್ಸ್‌ನ ಪಾಲುದಾರರಾಗಿದ್ದರು. ಇದರ ಒಡೆತನದಲ್ಲಿ ಕೆಲವು ಚಿತ್ರಮಂದಿರಗಳೂ ಇದ್ದುವು. ಇವರ ಪ್ರಗತಿ ಪ್ರಕಟನಾಲಯ ಎಂಬತ್ತಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿದೆ. ಇವರು ಜಪಾನ್ ಮತ್ತು ಐರೋಪ್ಯ ದೇಶಗಳ ಪ್ರವಾಸ ಮಾಡಿದ್ದಾರೆ. ಇವರು ಅಖಿಲ ಭಾರತ ಉತ್ಪಾದಕ ಸಂಘದ ಉಪಾಧ್ಯಕ್ಷರಾಗಿಯೂ ಅದರ ರಾಜ್ಯಶಾಖೆಯ ಅಧ್ಯಕ್ಷರಾಗಿಯೂ ಇದ್ದರು. ವಿಶ್ವೇಶ್ವರಯ್ಯ ತಾಂತ್ರಿಕ ವಸ್ತು ಸಂಗ್ರಹಾಲಯ ಸ್ಥಾಪನೆಗೆ ಮುಖ್ಯ ಕಾರಣರು ಇವರು.

ಬಿ.ಎನ್. ಗುಪ್ತರದು ಧರ್ಮಕಾರ್ಯಗಳಿಗೆ ಪ್ರಸಿದ್ಧವಾದ ವಂಶ. ಅವರ ತಾತನವರು ಮದರಾಸಿನ ಬೈಸಾನಿ ಮಾಧವಚೆಟ್ಟಿ ಚಾರಿಟೀಸಿನ ಸ್ಥಾಪಕರು. ಗುಪ್ತರು ಅದಕ್ಕೆ ಅಧ್ಯಕ್ಷರಾಗಿದ್ದರು. 1970ರಲ್ಲಿ ಗುಪ್ತರು ಜನ್ಮಭೂಮಿ ಟ್ರಸ್ಟ್ ಸ್ಥಾಪಿಸಿದರು. ಪತ್ರಿಕೋದ್ಯಮ ಮತ್ತು ಕನ್ನಡ ಸಾಹಿತ್ಯಗಳ ಬೆಳೆವಣಿಗೆಯೂ ಈ ಕ್ಷೇತ್ರಗಳಲ್ಲಿ ದುಡಿದಿರುವ ಮಹನೀಯರ ಸನ್ಮಾನವೂ ಈ ನ್ಯಾಸದ ಉದ್ದೇಶಗಳು. ಇದರಿಂದ ಮೈಸೂರು, ಬೆಂಗಳೂರು ವಿಶ್ವವಿದ್ಯಾನಿಲಯಗಳಿಗೆ ಗುಪ್ತರು ದತ್ತಿಗಳನ್ನು ನೀಡಿದ್ದಾರೆ. ಸದಾಕ್ರಿಯಾಶೀಲರಾಗಿದ್ದ ಗುಪ್ತ 1976ರ ಜುಲೈ 28ರಂದು ನಿಧನರಾದರು. (ಬಿ.ವಿ.ವಿ.ವೈ.)

**ಗುಪ್ತ, ಪರಮೇಶ್ವರಿಲಾಲ್ :** 1914–2001. ಭಾರತದ ಹೆಸರಾಂತ ನಾಣ್ಯಶಾಸ್ತ್ರ ತಜ್ಞರು. ಭಾರತೀಯ ನಾಣ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನ ಸಂಸ್ಥೆಯ ಸಂಸ್ಥಾಪಕರು. ಉತ್ತರ ಪ್ರದೇಶದ ಆಜ಼ಮ್‌ಗಢ್‌ನಲ್ಲಿ ಜನಿಸಿದರು. 8ನೆಯ ತರಗತಿಯಲ್ಲಿದ್ದಾಗ ಜವಹರಲಾಲ್ ನೆಹರು ಬಂಧಿತರಾದಾಗ ಶಾಲೆಯನ್ನು ಬಹಿಷ್ಕರಿಸಿದರು. ಶಾಲೆ ಇವರಿಗೆ ದಂಡವನ್ನು ವಿಧಿಸಿತು. ಆದರೆ ಇವರು ದಂಡವನ್ನು ಕೊಡಲು ನಿರಾಕರಿಸಿದಾಗ ಇವರನ್ನು ಶಾಲೆಯಿಂದ ಹೊರಹಾಕಲಾಯಿತು. ಅನಂತರ



ಇವರು ಭಾರತ ರಾಷ್ಟ್ರೀಯ ಕಾಂಗ್ರೆಸ್ ಸೇರಿ ಕಾನೂನು ಭಂಗ ಚಳವಳಿಯ ನೇತೃತ್ವ ವಹಿಸಿದರು. ಇದರ ಪರಿಣಾಮವಾಗಿ ತಮ್ಮ ಪ್ರದೇಶದಲ್ಲಿ ಆಜ಼ಮ್‌ಗಟ್–ಕ–ನೆಹರು ಎಂದು ಪ್ರಸಿದ್ಧರಾದರು. ಸ್ವಾತಂತ್ರ್ಯ ಬಂದ ಅನಂತರ ರಾಜಕೀಯದಿಂದ ದೂರಸರಿದು ಶಾಸ್ತ್ರೀಯ ಅಧ್ಯಯನದಲ್ಲಿ ತಮ್ಮನ್ನು ತೊಡಗಿಸಿಕೊಂಡರು. 1948ರಿಂದ (18 ವರ್ಷಗಳ ಅನಂತರ) ತಮ್ಮ ವಿದ್ಯಾಭ್ಯಾಸ ಮುಂದುವರಿಸಿದರು. ಬಾಹ್ಯವಿದ್ಯಾರ್ಥಿಯಾಗಿ ಪದವಿ ಹಾಗೂ ಎಂ.ಎ. ಪದವಿಯನ್ನು ಮೊದಲ ಶ್ರೇಣಿಯಲ್ಲಿ ಪಡೆದರು. ಪಂಚ್ ಮಾರ್ಕ್ಡ್ ಕಾಯಿನ್ಸ್ ಇನ್ ಏನ್ಷೆಂಟ್ ಇಂಡಿಯ–ಇವರ ಪಿಎಚ್.ಡಿ. ಪ್ರಬಂಧ. ಈ ಸಂಶೋಧನೆ ಇವರಿಗೆ ಒಳ್ಳೆಯ ಹೆಸರನ್ನು ತಂದಿತು. 1953ರಲ್ಲಿ ಬೊಂಬಾಯಿನ ಪ್ರಿನ್ಸ್ ಆಫ್ ವೇಲ್ಸ್ ಮ್ಯೂಸಿಯಂನಲ್ಲಿ ಶಾಸನತಜ್ಞರಾಗಿ ನೇಮಕಗೊಂಡರು. 1962ರ ತನಕ ಅಲ್ಲಿ ಕೆಲಸ ಮಾಡಿದರು. 6 ತಿಂಗಳು ಬ್ರಿಟಿಷ್ ಮ್ಯೂಸಿಯಂನಲ್ಲಿ ಕೆಲಸ ಮಾಡಿದರು. 1963ರಲ್ಲಿ ಪಾಟ್ನ ವಸ್ತುಸಂಗ್ರಹಾಲಯದ ನಿರ್ದೇಶಕರಾದರು. 1972ರಲ್ಲಿ ನಿವೃತ್ತಿ ಹೊಂದಿದರು. ಇವರ ಪ್ರಶಂಸನೀಯ ಕಾರ್ಯವೆಂದರೆ ನಾಸಿಕದಲ್ಲಿಯ ಅಂಜನೇರಿ ಬಳಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ರಿಸರ್ಚ್ ಇನ್ ನ್ಯೂಮಿಸ್‌ಮ್ಯಾಟಿಕ್ ಸ್ಟಡೀಸ್ ಸಂಸ್ಥೆಯನ್ನು ತನ್ನ ಶಿಷ್ಯ ಕೆ.ಕೆ. ಮಹೇಶ್ವರಿಯವರನ್ನು ಪ್ರೇರೇಪಿಸಿ ಸ್ಥಾಪನೆ ಮಾಡಿದ್ದು. ಇದಕ್ಕೆ ತಮ್ಮ ಗ್ರಂಥ ಭಂಡಾರವನ್ನು ದಾನ ಮಾಡಿದರು. ಶಿಷ್ಯನ ಕೋರಿಕೆಯ ಮೇರೆಗೆ ಈ ಸಂಸ್ಥೆಯ ಮುಖ್ಯಸ್ಥರಾದರು. ಅನಾರೋಗ್ಯ ದಿಂದ 1989ರಲ್ಲಿ ಈ ಜವಾಬ್ದಾರಿ ಯಿಂದ ಬಿಡುಗಡೆ ಹೊಂದಿದರು. 2001 ಜುಲೈ 27ರಂದು ನಿಧನ ರಾದರು. ಇವರು ನಾಣ್ಯಗಳನ್ನು ಕುರಿತು ಸು. 250ಕ್ಕೂ ಹೆಚ್ಚು ಲೇಖನಗಳನ್ನೂ ಪುಸ್ತಕಗಳನ್ನೂ ಬರೆದಿದ್ದಾರೆ. ರಾಷ್ಟ್ರೀಯ ಪುಸ್ತಕ ಪ್ರಾಧಿಕಾರ ಪ್ರಕಟಿಸಿದ ಕಾಯಿನ್ಸ್ ಇವರ ಒಂದು ಮುಖ್ಯ ಕೃತಿ. ಇವರಿಗೆ ಯು.ಕೆ.ಯ ದಿ ರಾಯಲ್ ನ್ಯೂಮಿಸ್‌ಮ್ಯಾಟಿಕ್ ಸೊಸೈಟಿಯ ಲೋಟ್ಕ ಪಾರಿತೋಷಕ (1969), ಅಮೆರಿಕದ ನ್ಯೂಮಿಸ್‌ಮ್ಯಾಟಿಕ್ ಸೊಸೈಟಿಯ ಹಂಟಿಂಗ್‌ಟನ್ ಪ್ರಶಸ್ತಿ, ಭಾರತದ ನ್ಯೂಮಿಸ್‌ಮ್ಯಾಟಿಕ್ ಸೊಸೈಟಿ ಆಫ್ ಇಂಡಿಯದ ಚಕ್ರವಿಕ್ರಮ ಪದಕ (1954), ಏಷ್ಯಾಟಿಕ್ ಸೊಸೈಟಿ ಆಫ್ ಕಲ್ಕತ್ತ ಸಂಸ್ಥೆಯ ಜದುನಾಥ್ ಸರ್ಕಾರ್ ಪದಕ ಮೊದಲಾದ ಪ್ರತಿಷ್ಠಿತ ಪ್ರಶಸ್ತಿ ಪದಕಗಳು ಲಭಿಸಿವೆ. 1969–86ರ ವರೆಗೆ ಹಲವಾರು ಪ್ರತಿಷ್ಠಿತ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಸಂಸ್ಥೆಗಳು ಇವರಿಗೆ ವಿಶಿಷ್ಟ ಪದಕಗಳನ್ನು ನೀಡಿ, ತಮ್ಮ ತಮ್ಮ ಸಂಸ್ಥೆಗಳ ಗೌರವ ಸದಸ್ಯರನ್ನಾಗಿ ಮಾಡಿಕೊಂಡವು. (ಎ.ಎಸ್.)

**ಗುಪ್ತ ಭಾಷೆಗಳು :** ಒಬ್ಬಿಬ್ಬರಿಗೂ ಕೇವಲ ಕೆಲವರಿಗೂ ಮಾತ್ರ ಅರ್ಥವಾಗಬಲ್ಲ ಭಾಷೆಗಳು (ಸೀಕ್ರೆಟ್ ಲ್ಯಾಂಗ್ವೇಜಸ್). ಸಾಮಾನ್ಯವಾಗಿ ಭಾಷೆಯ ಉದ್ದೇಶ ಎಲ್ಲರಿಗೂ ಅರ್ಥವಾಗುವಂತಿರಬೇಕು ಎಂಬುದು. ಇದಕ್ಕೆ ವಿರುದ್ಧವಾದ ಉದ್ದೇಶ ಗುಪ್ತಭಾಷೆಗಳಿಗಿವೆ. ಗುಪ್ತಕಾರ್ಯಾಚರಣೆ ನಡೆಸುವ ಅನೇಕರಿಗೆ ಇಂಥ ಭಾಷೆಗಳ ಅಗತ್ಯ ಕಂಡುಬಂದಿದೆ. ಆಟಕ್ಕಾಗಿ ಮಕ್ಕಳು, ಪ್ರಣಯ ವಿನೋದಕ್ಕಾಗಿ ಪ್ರೇಮಿಗಳು, ರಹಸ್ಯ ವಾರ್ತಾವಹನಕ್ಕಾಗಿ ಗೂಢಚಾರರು ಹಾಗೂ ದರೋಡೆಕಾರರು ಇಂಥ ಭಾಷೆಗಳನ್ನು ಬಳಸುತ್ತಾರೆ. ಪ್ರಚಲಿತ ಭಾಷೆಯೊಂದನ್ನು ಗುಪ್ತಭಾಷೆಯಾಗಿ ಬಳಸಬಹುದು. ಉದಾಹರಣೆಗೆ, ತೋಡ ಭಾಷೆ. ಅದು ನೀಲಗಿರಿಯ ಸುತ್ತಣ ಪ್ರದೇಶಕ್ಕೆ ಮಾತ್ರ ಮೀಸಲಾದ ಒಂದು ಆದಿವಾಸಿ ಭಾಷೆ. ಅದನ್ನು ಬಳಸಿ ಲಂಡನ್ನಿನಲ್ಲಿರುವವರಿಗೆ ಪತ್ರ ಬರೆದಲ್ಲಿ ಅದರ ಅರ್ಥ ಉದ್ದೇಶಿತ ವ್ಯಕ್ತಿಗಳಿಗಲ್ಲದೆ ಉಳಿದವರಿಗೆ ಆಗದು. ಬಳಕೆ ತಪ್ಪಿದ್ದು ಕೇವಲ ವಸ್ತುಪ್ರದರ್ಶನಾಲಯದ ಆಶ್ಚರ್ಯವಾಗುಳಿದಿರುವ ಭಾಷೆಯೂ ಗುಪ್ತಭಾಷೆಯಾಗಬಲ್ಲದು. ಉದಾಹರಣೆಗೆ ಕ್ಯೂಬದಲ್ಲಿನ ಲುಕೂಮಿ ಎಂಬ ಆಫ್ರಿಕನ್ ಭಾಷೆ. ಎಷ್ಟೋ ವೇಳೆ ಕೃತಕಭಾಷೆಯೊಂದು ಗುಪ್ತಭಾಷೆಯಾಗಿ ಬಳಕೆಗೆ ಬರಬಹುದು. ಉದಾಹರಣೆಗಳಿಗೆ (**ನೋಡಿ–ಕೃತಕ ಭಾಷೆಗಳು**).

ರಹಸ್ಯ ಸಮಾಚಾರಗಳ ರಚನೆ ಮತ್ತು ರವಾನೆಗಳಿಗಾಗಿ ಬಗೆಬಗೆಯ ಗುಪ್ತ ಲೇಖನ ವಿಧಾನಗಳು ಜನ್ಮತಾಳಿವೆ. ರಹಸ್ಯ ಲೇಖನದಲ್ಲಿ ಮೂರು ಹಂತಗಳಿರುತ್ತವೆ. ಒಂದು–ಸಹಜ ಭಾಷೆಯಲ್ಲಿರುವ ಮಾಹಿತಿಗಳನ್ನು ಕೋಷ್ಟಕದ ಸಹಾಯದಿಂದ ಗುಪ್ತಭಾಷೆಗೆ ಪರಿವರ್ತಿಸುವುದು. ಎರಡು–ಗುಪ್ತಭಾಷೆಗಳನ್ನು ಗುರಿಗೆ ಪ್ರೇಷಿಸುವುದು. ಮೂರು–ಗುಪ್ತಲೇಖನವನ್ನು ಸಹಜ ಭಾಷೆಗೆ ಪರಿವರ್ತಿಸುವುದು. ಉದಾಹರಣೆಗೆ ಇಂಗ್ಲಿಷ್ ವರ್ಣಮಾಲೆಯ 26 ಅಕ್ಷರಗಳಿಗೂ ಬೇರೆ ಬೇರೆ ಅಕ್ಷರಗಳನ್ನು ಪ್ರತಿಕಿಸುವುದು. A ಗೆ L, B ಗೆ M ಹೀಗೆ. ಅನಂತರ ತಿಳಿಸಬೇಕಾದ ಮಾಹಿತಿ OPEN WESTERN FRONT ಎಂಬುದನ್ನು ಗುಪ್ತ ಅಕ್ಷರಗಳಾಗಿ ಪರಿವರ್ತಿಸುವುದು. ಈ ಪರಿವರ್ತಿತ ಸಂದೇಶವನ್ನು ಕೋಷ್ಟಕ ಗೊತ್ತಿದ್ದವನು ಮಾತ್ರ ಓದಲು ಸಾಧ್ಯ (**ನೋಡಿ– ಗುಪ್ತಲೇಖ ಶಾಸ್ತ್ರ**). (ಕೆ.ಕೆ.ಜಿ.)

**ಗುಪ್ತ ಮತದಾನ :** ಮತದಾರ ಯಾರಿಗೆ ಮತ ನೀಡಿದನೆಂಬುದು ಬೇರಾರಿಗೂ ಗೊತ್ತಾಗದಂತೆ ಮಾಡಿದ ಮತದಾನ; ಅಂಥ ಪದ್ಧತಿ, ವ್ಯವಸ್ಥೆ (ಸೀಕ್ರೆಟ್ ಬ್ಯಾಲಟ್). ಹೊರಗಿನ ಪ್ರಭಾವಗಳಿಂದ ಮತದಾರನನ್ನು ಮುಕ್ತನನ್ನಾಗಿ ಮಾಡಲು ಬಹುತೇಕ ಎಲ್ಲ ಪ್ರಜಾಸತ್ತಾತ್ಮಕ ದೇಶಗಳ ಸಂಘಸಂಸ್ಥೆ ಸಭೆಗಳ ಚುನಾವಣೆಗಳಲ್ಲೂ ಈ ಪದ್ಧತಿಯನ್ನು ಅನುಸರಿಸಲಾಗುತ್ತಿದೆ. ಮತದಾನದಲ್ಲಿ ರಹಸ್ಯವನ್ನು ಮೊಟ್ಟಮೊದಲು ಜಾರಿಗೆ ತಂದ ರಾಜ್ಯ ದಕ್ಷಿಣ ಆಸ್ಟ್ರೇಲಿಯ, 1858ರಲ್ಲಿ. ಆದ್ದರಿಂದ ಇದಕ್ಕೆ ಆಸ್ಟ್ರೇಲಿಯನ್ ಮತದಾನ ಪದ್ಧತಿ ಎಂದೂ ಹೆಸರಿದೆ.

ಭಾರತದಲ್ಲಿ ಇದಕ್ಕಾಗಿ ಚಚ್ಚೌಕವಾದ, ಮೇಲುಗಡೆ ಮುಚ್ಚಳವಿರುವ ಪೆಟ್ಟಿಗೆಯನ್ನು ಬಳಸಲಾಗುತ್ತದೆ. ಮತಪತ್ರವನ್ನು ಪೆಟ್ಟಿಗೆಯೊಳಕ್ಕೆ ಹಾಕುವುದು ಸಾಧ್ಯವಾಗುವಂತೆ ಈ ಪೆಟ್ಟಿಗೆಯ ಮುಚ್ಚಳದ ಮಧ್ಯದಲ್ಲಿ ಸೀಳುಗಂಡಿಯೊಂದಿರುತ್ತದೆ. ಚುನಾವಣೆ ಆರಂಭವಾಗುವುದಕ್ಕೆ ಮೊದಲು ಮತಗಟ್ಟೆಯ ಅಧಿಕಾರಿ ಅಭ್ಯರ್ಥಿಗಳ ಅಥವಾ ಅವರ ಪ್ರತಿನಿಧಿಗಳ ಎದುರಿನಲ್ಲಿ ಪೆಟ್ಟಿಗೆಯನ್ನು ತೆರೆದು ಅದು ಬರಿದೆಂಬುದನ್ನು ದೃಢಪಡಿಸಿ ಅದನ್ನು ಮುಚ್ಚಿ ಬಾಗಿಲಿಗೆ ಮುದ್ರೆ ಹಾಕುತ್ತಾನೆ. ಚುನಾವಣೆಯ ಕಾಲದಲ್ಲಿ ಮತದಾರರು ಇದರೊಳಕ್ಕೆ ತಮ್ಮ ಮತಪತ್ರಗಳನ್ನು ಹಾಕುತ್ತಾರೆ. ಚುನಾವಣೆ ಗೊತ್ತುಮಾಡಿದ ಕಾಲ ಮುಗಿದ ಮೇಲೆ ಅದನ್ನು ಸರಿಯಾದ ರಕ್ಷಣೆಗೆ ಒಳಪಡಿಸಿ ಇಟ್ಟಿದ್ದು, ಗೊತ್ತಾದ ಕಾಲದಲ್ಲಿ ಅಭ್ಯರ್ಥಿಗಳ ಅಥವಾ ಅವರ ಪ್ರತಿನಿಧಿಗಳ, ಸಾರ್ವಜನಿಕರ ಎದುರಿನಲ್ಲಿ ಪೆಟ್ಟಿಗೆಯ ಮುದ್ರೆಯೊಡೆದು ಅದನ್ನು ತೆರೆದು ಮತಪತ್ರಗಳನ್ನು ಎಣಿಸಲಾಗುತ್ತದೆ. ಮತ ನೀಡಿದವರನ್ನು ಗುರುತಿಸುವ ಯಾವ ಚಿಹ್ನೆಯಾಗಲಿ ಬರಹವಾಗಲಿ ಪತ್ರದ ಮೇಲೆ ಇರುವುದಿಲ್ಲವಾದ್ದರಿಂದ ಸರ್ವರೀತಿಯಲ್ಲೂ ರಹಸ್ಯವನ್ನು ಪಾಲಿಸಲು ಸಾಧ್ಯವಾಗುತ್ತದೆ.

ಮತದಾರ ಚುನಾವಣೆಯ ದಿನದಂದು, ಅದಕ್ಕಾಗಿ ನಿಗದಿಯಾದ ಕಾಲದಲ್ಲಿ, ಅವನಿಗಾಗಿ ಗೊತ್ತುಮಾಡಿದ ಮತಗಟ್ಟೆಗೆ ಮತ ನೀಡಲು ಹೋದಾಗ ಚುನಾವಣಾಧಿಕಾರಿ ಅವನ ಹೆಸರು, ವಯಸ್ಸು, ವಿಳಾಸ ಇತ್ಯಾದಿಗಳನ್ನು ಮತದಾರರ ಪಟ್ಟಿಯಲ್ಲಿ ಪರಿಶೀಲಿಸಿ ಅವನನ್ನು ಕುರಿತ ವಿವರಗಳು ಆ ಕಟ್ಟೆಗೆ ಸಂಬಂಧಿಸಿದಂತೆ ಪಟ್ಟಿಯಲ್ಲಿವೆಯೆಂಬುದು ದೃಢಪಟ್ಟಾಗ ಅವನ ಸಹಿ ತೆಗೆದುಕೊಂಡು ಕಾನೂನು ರೀತ್ಯ ಗೊತ್ತುಪಡಿಸಲಾದ ಆಕಾರದ ಕಾಗದದಲ್ಲಿ ಮುದ್ರಿಸಿದ, ಚುನಾವಣಾ ಅಭ್ಯರ್ಥಿಗಳ ಹೆಸರು, ಚಿಹ್ನೆ ಇರುವ, ಮತಪತ್ರ ಕೊಡುತ್ತಾನೆ. ಇದಲ್ಲದೆ ಬೇರೆ ಪತ್ರವನ್ನು ಉಪಯೋಗಿಸುವಂತಿಲ್ಲ. ಮತನೀಡಿಕೆಯ ರಹಸ್ಯವನ್ನು ಕಾಪಾಡಲು ಅದಕ್ಕಾಗಿ ಮರೆಯಾದ ಸ್ಥಳಗಳನ್ನು ನಿರ್ಮಿಸಲಾಗಿರುತ್ತದೆ. ಮತ ಪತ್ರ ಪಡೆದ ಮತದಾರ ಆ ಸ್ಥಳಕ್ಕೆ ಹೋಗಿ ತಾನು ಮತ ನೀಡಬಯಸುವ ಅಭ್ಯರ್ಥಿಗಳ ಹೆಸರು ಮತ್ತು ಚಿಹ್ನೆಯ ಮುಂದೆ ಆ ಕಟ್ಟೆಯ ಮುಖ್ಯಾಧಿಕಾರಿ ಕೊಟ್ಟ ಮುದ್ರೆಯನ್ನೊತ್ತಿ ಮುದ್ರೆಯ ಭಾಗ ಮಡಿಕೆಯ ಒಳಗಡೆ ಬರುವಂತೆ ಪತ್ರವನ್ನು ನಾಲ್ಕು ಮಡಿಕೆಗಳಾಗಿ ಅದನ್ನು ಮುಖ್ಯಾಧಿಕಾರಿಯ ಮುಂದೆ ಇಟ್ಟಿರುವ ಮತಪೆಟ್ಟಿಗೆಯೊಳಗೆ ಹಾಕುತ್ತಾನೆ. ಒಂದು ಸಾರಿ ಮತ ನೀಡಿದವನು ಮತ್ತೆ ಆ ಚುನಾವಣೆಯಲ್ಲಿ ಮತ ನೀಡುವುದನ್ನು ತಪ್ಪಿಸಲು, ಅವನ ಮತ ನೀಡಿಕೆಯಾಗಿದೆಯೆಂಬುದನ್ನು ಗುರುತಿಸಲು, ಶೀಘ್ರವಾಗಿ ಅಳಿಸಿಹೋಗದ ಶಾಯಿಯಿಂದ ಅವನ ತೋರುಬೆರಳಿನ ಮೇಲೆ ಗುರುತು ಮಾಡಲಾಗುತ್ತದೆ.

ಗ್ರೇಟ್ ಬ್ರಿಟಿನಿನಲ್ಲಿ ಪಾರ್ಲಿಮೆಂಟ್ ಮತ್ತು ಪೌರಸಭೆಗಳ ಚುನಾವಣೆಗಳಲ್ಲಿ ಗುಪ್ತಮತದಾನ ಪದ್ಧತಿಗಳನ್ನು 1872ರ ಕಾಯಿದೆಯ ಮೂಲಕ ಜಾರಿಗೆ ತರಲಾಯಿತು. 1913ರ ವರೆಗೂ ಫ್ರಾನ್ಸಿನ ಮತದಾನ ಪದ್ಧತಿ ಅಸಮರ್ಪಕವಾಗಿತ್ತು. ಅಭ್ಯರ್ಥಿಗಳು ಮತಪತ್ರಗಳನ್ನು ಮತದಾನ ಕೇಂದ್ರಗಳ ಹೊರಗಡೆ ಹಂಚುತ್ತಿದ್ದರು. ಮತದಾರರು ಪತ್ರಗಳನ್ನು ಮಡಿಸಿ, ಅದನ್ನು ಮತಪೆಟ್ಟಿಗೆಯಲ್ಲಿ ಹಾಕಲು ಮತಗಟ್ಟೆಯ ಮುಖ್ಯಾಧಿಕಾರಿಗೆ ಕೊಡುತ್ತಿದ್ದರು. ಅವನ್ನು ಲಕೋಟೆಗಳಲ್ಲಿ ಹಾಕುವ ಕ್ರಮವನ್ನು ಆ ವರ್ಷ ಜಾರಿಗೆ ತರಲಾಯಿತು. 1919ರಿಂದ ಮುಂದಕ್ಕೆ ಸರ್ಕಾರವೇ ಅಭ್ಯರ್ಥಿಗಳ ಖರ್ಚಿನಲ್ಲಿ ಮತಪತ್ರಗಳನ್ನು ಅಚ್ಚುಮಾಡಿ ಅವನ್ನು ಅಂಚೆಯ ಮೂಲಕ ಮತದಾರರಿಗೆ ಕಳುಹಿಸುತ್ತಿತ್ತು.

ಅಮೆರಿಕದ ಸಂಯುಕ್ತಸಂಸ್ಥಾನ 1884ರ ಅಧ್ಯಕ್ಷ ಚುನಾವಣೆಯ ಅನಂತರ ಗುಪ್ತಮತದಾನ ಪದ್ಧತಿಯನ್ನು ಜಾರಿಗೆ ತಂದಿತು. 1960ರಿಂದ ಈಚೆಗೆ ಸಾಮಾನ್ಯವಾಗಿ ಮತಪತ್ರಗಳನ್ನು ಸರ್ಕಾರದ ವೆಚ್ಚದಲ್ಲಿ ಅಚ್ಚುಮಾಡಿಸಿ, ಮತದಾನ ಕೇಂದ್ರಗಳಲ್ಲಿ ಹಂಚಲಾಗುತ್ತಿದೆ. ಮತನೀಡಿಕೆ ರಹಸ್ಯವಾಗಿ ನಡೆಯುತ್ತದೆ.

ಇಂಡೋನೇಷ್ಯದಲ್ಲಿ ಅನಕ್ಷರಸ್ಥರು ಅಧಿಕ ಸಂಖ್ಯೆಯಲ್ಲಿರುವುದರಿಂದ ಪ್ರತಿಯೊಂದು ಪಕ್ಷಕ್ಕೂ ಒಂದು ಚಿಹ್ನೆಯನ್ನು ಕೊಟ್ಟು ಅದನ್ನು ಮತ ಪತ್ರದ ಮೇಲೆ ಅಚ್ಚುಮಾಡಿರುತ್ತದೆ. ಮತಕೇಂದ್ರದಲ್ಲಿ ಮತನೀಡಿಕೆಗಾಗಿ ಇಟ್ಟಿರುವ ಮೊಳೆಯಿಂದ ಮತದಾರರ ಆ ಪತ್ರದ ಮೇಲೆ ರಂಧ್ರ ಮಾಡುತ್ತಾನೆ. ಭಾರತದಲ್ಲೂ ಮೊದಲನೆಯ ಮಹಾಚುನಾವಣೆಗಳಲ್ಲಿ ಪ್ರತಿಯೊಬ್ಬ ಅಭ್ಯರ್ಥಿಗೂ ಅವನ ಚಿಹ್ನೆಯಿರುವ ಪೆಟ್ಟಿಗೆಯನ್ನಿಡಲಾಗಿತ್ತು. ಮತದಾರ ತಾನು ಮತ ಕೊಡಬಯಸುವ ಅಭ್ಯರ್ಥಿಯ ಚಿಹ್ನೆಯಿರುವ ಪೆಟ್ಟಿಗೆಯೊಳಕ್ಕೆ ತನ್ನ ಮತ ಪತ್ರವನ್ನು ಹಾಕಬೇಕಾಗಿತ್ತು. ಭಾರತ, ಬ್ರಿಟನ್ ಮುಂತಾದ ಕಡೆ ಚುನಾವಣೆಯ ಸಮಯದಲ್ಲಿ ಮತಗಟ್ಟೆಗಳಲ್ಲಿ ಅಭ್ಯರ್ಥಿಗಳು ಅಥವಾ ಅವರ ಪ್ರತಿನಿಧಿಗಳು ಹಾಜರಿರುತ್ತಾರೆ. ಮತಗಳ ಎಣಿಕೆಯ ಕಾಲದಲ್ಲೂ ಅವರು ಹಾಜರಿರುತ್ತಾರೆ; ಕುಲಗೆಟ್ಟ ಅಥವಾ ನಿರ್ಣಯಿಸಲಾಗದ ಮತಗಳ ಬಗ್ಗೆ ಇರಬಹುದಾದ ತಕರಾರುಗಳನ್ನು ಸೂಚಿಸುತ್ತಾರೆ.

ಈಚೆಗೆ ಚುನಾವಣೆಗಳಲ್ಲಿ ಯಂತ್ರಗಳು ಬಳಕೆಗೆ ಬಂದಿವೆ. ಇವುಗಳಿಂದ ರಹಸ್ಯ ಪಾಲನೆಗೂ ತಪ್ಪಿಲ್ಲದ ಮತ್ತು ಪ್ರಾಮಾಣಿಕ ಮತ ಎಣಿಕೆಗೂ ಅವಕಾಶವುಂಟಾಗಿದೆ. ಮತಪತ್ರ ಮತ್ತು ಮತದಾನ ವಿಧಾನಗಳಲ್ಲಿ ಸುಧಾರಣೆಯ ಪ್ರಯತ್ನಗಳು ನಡೆಯುತ್ತಲೇ ಇದೆ. (ಬಿ.ಎಚ್.ಎಸ್.)

**ಗುಪ್ತರ ನಾಣ್ಯಗಳು :** ಭಾರತದ ಇತಿಹಾಸವನ್ನು ಪುನರ್ರಚಿಸುವಲ್ಲಿ ಸಹಕಾರಿಯಾಗಿರುವ ಮುಖ್ಯ ಚಾರಿತ್ರಿಕ ಮೂಲವಸ್ತುಗಳಲ್ಲೊಂದೆನಿಸಿಕೊಂಡಿರುವ ನಾಣ್ಯ ಸಾಮಗ್ರಿಗಳಲ್ಲಿ 4–6ನೆಯ ಶತಮಾನಗಳಲ್ಲಿ ಉತ್ತರ ಭಾರತದಲ್ಲಿ ಹೊರಡಿಸಲಾದ ಗುಪ್ತ ನಾಣ್ಯಗಳ ಸ್ಥಾನ– ಅವುಗಳ ಐತಿಹಾಸಿಕ ಹಾಗೂ ಕಲಾಮೌಲ್ಯಗಳ ದೃಷ್ಟಿಯಿಂದ– ಮಹತ್ವದ್ದು. 1783ರಿಂದೀಚೆಗೆ ಬಾಂಗ್ಲಾದೇಶದ ಮಹಮ್ಮದ್‍ಪುರ, ಪಶ್ಚಿಮ ಬಂಗಾಳದ ಕಾಲೀಘಟ್ಟ ಮತ್ತು ಹೂಗ್ಲಿ, ಉತ್ತರ ಪ್ರದೇಶದ ಭರ್ಸರ್, ಅಲಾಹಾಬಾದ್, ತಾಂಡ, ಕೋಟ್ವಾ, ಬಸ್ತಿ, ಟೇಕ್ರಿ ದೇಬ್ರಾ, ಕಸರ್ವಾ, ಜಾನ್‍ಪುರ, ಗೋಪಾಲಪುರ ಮತ್ತು ಝೂನ್ಸಿ, ಬಿಹಾರಿನ ಹಾಜೀಪುರ, ಪಂಜಾಬಿನ ಮೀತಾಥಾಲ್ ಮತ್ತು ರಾಜಸ್ತಾನದ ಬಯಾನಾ ಮುಂತಾದ ಸ್ಥಳಗಳಲ್ಲಿ ಆಕಸ್ಮಿಕವಾಗಿ ದೊರೆತ ಪ್ರಾಚೀನ ನಾಣ್ಯಗಳ ರಾಶಿಗಳಿಂದ ಗುಪ್ತ ಅರಸರು ಹೊರಡಿಸಿದ ನೂರಾರು ವರ್ತುಲಾಕಾರದ ಬಂಗಾರದ, ಬೆಳ್ಳಿಯ, ಬೆಳ್ಳಿ ಮುಲಾಮಿರುವ ತಾಮ್ರದ ಮತ್ತು ತಾಮ್ರದ ನಾಣ್ಯಗಳು ಬೆಳಕಿಗೆ ಬಂದಿವೆ.

ಶಾಸನಗಳಿಂದ ತಿಳಿದುಬರುವಂತೆ ಗುಪ್ತರ ಬಂಗಾರ ನಾಣ್ಯಗಳಿಗೆ ದಿನಾರವೆಂಬ ಹೆಸರಿತ್ತು. ಅವರ ಹಲವು ಬಂಗಾರ ನಾಣ್ಯಗಳ ಹಿಂಬದಿಯಲ್ಲಿ ಲಕ್ಷ್ಮೀ, ಗಂಗಾಮಾತೆ, ಗರುಡ, ಕಲಶ, ಮಯೂರವಾಹನ ಕಾರ್ತಿಕೇಯ, ಯಜ್ಞವೇದಿಕೆ ಇತ್ಯಾದಿ ಚಿತ್ರಣಗಳ ಮತ್ತು ಗುಪ್ತ ಬ್ರಾಹ್ಮೀ ಲಿಪಿಯ ಸಂಸ್ಕೃತ ಭಾಷೆಯ ಆಲೇಖ್ಯಗಳ ಜೊತೆಗೆ ಹಲವು ತೆರೆದ ಚಿಹ್ನೆಗಳಲ್ಲೊಂದನ್ನು ಚಿತ್ರಿಸಲಾಗಿದೆ. ಈ ಚಿಹ್ನೆಗಳಾವುವೂ ಅವರ ತಾಮ್ರ ನಾಣ್ಯಗಳಲ್ಲಿ ಕಂಡುಬರುವುದಿಲ್ಲ. ಗುಪ್ತರು ತಮ್ಮ ನಾಣ್ಯಗಳನ್ನು ರಚಿಸುವಲ್ಲಿ ಯಾವುದೇ ನಿರ್ದಿಷ್ಟ

ತೂಕ, ಸುತ್ತಳತೆಗಳನ್ನು ಅನುಸರಿಸಿದವರಲ್ಲ. ಅವರ ಬಂಗಾರದ ನಾಣ್ಯಗಳಲ್ಲಿ 112–146, ಬೆಳ್ಳಿ ನಾಣ್ಯಗಳಲ್ಲಿ 27–34, ತಾಮ್ರ ನಾಣ್ಯಗಳಲ್ಲಿ 18–87 ಗುಂಜಿ ತೂಕಗಳ ಅಂತರ ಕಂಡುಬರುತ್ತದೆ. ಇದರಲ್ಲಿ ಒಂದು ಗಮನೀಯ ಅಂಶವೆಂದರೆ, ಪ್ರತಿಯೊಬ್ಬ ಹೊಸ ಅರಸ ಪಟ್ಟಕ್ಕೆ ಬಂದಂತೆ ಗುಪ್ತರ ಬಂಗಾರ ನಾಣ್ಯಗಳ ತೂಕ ಹೆಚ್ಚುತ್ತ ಬಂದಿರುವುದು.

ಗುಪ್ತ ಸಾಮ್ರಾಟರ ಶಾಸನಗಳಲ್ಲಿ ನೀಡಲಾಗಿರುವ ವಂಶಾವಳಿಗಳಿಂದ ತಿಳಿದು ಬರುವಂತೆ ಶ್ರೀಗುಪ್ತನೂ (ಸು. 260–80) ಅವನ ಮಗನಾದ ಘಟೋತ್ಕಚನೂ (ಸು. 280–300) ಆ ಮನೆತನದ ಮೊದಲ ಇಬ್ಬರು ಅರಸರಾದರೂ, ಘಟೋತ್ಕಚನ ಮಗನೂ 319–20ರಲ್ಲಿ ಗುಪ್ತಶಕವನ್ನು ಪ್ರಾರಂಭಿಸಿದವನೂ ಆದ ಮಹಾರಾಜಾಧಿರಾಜ 1ನೆಯ



ಗುಪ್ತರ ಕಾಲದ ವಿವಿಧ ನಾಣ್ಯಗಳು: 1–5 ಚಂದ್ರಗುಪ್ತ; 6–7; ಕುಮಾರಗುಪ್ತ ; 8–11; ಬುಧಗುಪ್ತ ; 12. ವಿಷ್ಣುಗುಪ್ತ; 13– ವೈನ್ಯಗುಪ್ತ ; 14–15 ಸಮುದ್ರಗುಪ್ತ

ಚಂದ್ರಗುಪ್ತನೇ (ಸು. 320–35) ಗುಪ್ತರ ಪೈಕಿ ನಾಣ್ಯಗಳನ್ನು ಹೊರಡಿಸಿದ ಮೊದಲ ಅರಸ. ಅವನ ಆಳ್ವಿಕೆಯಲ್ಲಿ ಹೊರಡಿಸಲಾದ ಬಂಗಾರ ನಾಣ್ಯಗಳು ಆರಂಭದಲ್ಲಿ ಕುಷಾಣರ ನಾಣ್ಯಗಳ ಅನುಕರಣೆಗಳಂತೆಯೇ ಕಂಡುಬರುತ್ತವೆಯಾದರೂ, ಅಲ್ಪ ಕಾಲದಲ್ಲಿ ಅವು ಗುಪ್ತರಿಂದ ಆಗತಾನೆ ಪುನರುದ್ಧಾರಗೊಂಡಿದ್ದ ವೈದಿಕ ಧರ್ಮಕ್ಕನುಗುಣವಾಗಿ ರಾಮಾಯಣ, ಮಹಾಭಾರತ ಮಹಾಕಾವ್ಯಗಳಿಂದ ಪರಿಚಿತವಾಗಿರುವ ಪ್ರಾಚೀನ ಹಿಂದೂ ಸಂಸ್ಕೃತಿಯನ್ನು ಪ್ರತಿಬಿಂಬಿಸಲಾರಂಭಿಸಿದುವು. ಹೀಗಾಗಿ ಗುಪ್ತರ ನಾಣ್ಯಗಳು ಅಂದಿನ ಭಾರತೀಯರ ಕಲಾಕೌಶಲದ, ವಿನ್ಯಾಸದ, ಪ್ರಯೋಗತಂತ್ರದ ಉತ್ತಮ ನಿದರ್ಶನಗಳಾಗಿವೆ.

1. ಒಂದನೆಯ ಚಂದ್ರಗುಪ್ತ (ಸು.320–35) ತನ್ನ ಆಳ್ವಿಕೆಯ ಕಾಲದಲ್ಲಿ ಹೊರಡಿಸಿದ ಒಂದೇ ವಿಧದ ಬಂಗಾರ ನಾಣ್ಯಗಳ ಮುಂಬದಿಯಲ್ಲಿ ವಸ್ತ್ರಾಭರಣಗಳಿಂದ ಅಲಂಕೃತರಾದ ಚಂದ್ರಗುಪ್ತ ಮತ್ತು ಅವನ ರಾಣಿ ಲಿಚ್ಛವಿವಂಶದ ಕುಮಾರದೇವಿಯವರು ನಿಂತಿರುವ ಚಿತ್ರಣವೂ ಚಂದ್ರಗುಪ್ತ, ಶ್ರೀ ಕುಮಾರದೇವಿ ಅಥವಾ ಕುಮಾರ ದೇವಿಶ್ರೀ ಎಂಬ ಆಲೇಖ್ಯಗಳೂ ಹಿಂಬದಿಯಲ್ಲಿ ವಸ್ತ್ರಾಭರಣಗಳಿಂದ ಅಲಂಕೃತಳಾದ ದೇವತೆಯೊಬ್ಬಳ ಚಿತ್ರಣವೂ ಲಿಚ್ಛವಯಃ ಎಂಬ ಆಲೇಖ್ಯವೂ ಕಂಡುಬರುತ್ತದೆ.

2. ಸಮುದ್ರಗುಪ್ತನ (ಸು.335–75) ಬಂಗಾರದ ನಾಣ್ಯಗಳ ಮುಂಬದಿಯಲ್ಲಿ ಚಿತ್ರಿಸಿರುವ ದೃಶ್ಯಗಳ ಆಧಾರದ ಮೇಲೆ ಇವನ ಬೇರೆ ಬೇರೆ ರೀತಿಯ ನಾಣ್ಯಗಳನ್ನು ಧ್ವಜ, ಬಿಲ್ಲುಗಾರ, ಗಂಡುಗೊಡಲಿ, ಅಶ್ವಮೇಧ, ವ್ಯಾಘ್ರಾಂತಕ, ವೀಣಾಪಾಠಕ ಪ್ರರೂಪಗಳೆಂದು ಗುರುತಿಸಲಾಗಿದೆ. ಸಾಮಾನ್ಯವಾಗಿ ಇವನ ಬಂಗಾರ ನಾಣ್ಯಗಳ ಮುಂಬದಿಯಲ್ಲಿ ಸಮರ ಶತ ವಿತತ ವಿಜಯೋ ಜಿತರಿಪುರಜಿತೋ ದಿವಂ ಜಯತಿ, ರಾಜಾಧಿರಾಜಃ ಪೃಥ್ವಿವೀ ಮವಿತ್ವಾ ದಿವಂ ಜಯತ್ಯಾಹೃತ ವಾಜಿ ಮೇಧಃ, ರಾಜಾಧಿರಾಜಃ ಪೃಥ್ವಿವೀಂ ವಿಜಿತ್ಯ ದಿವಂ ಜಯತ್ಯಾಹೃತ ವಾಜಿಮೇಧಃ ಮಹಾರಾಜಾಧಿರಾಜ ಶ್ರೀ ಸಮುದ್ರಗುಪ್ತಃ, ಕೃತಾಂತ ಪರಶುರ್ಜಯ ತ್ಯಜಿತರಾಜ ಜೇತಾಜಿತಃ, ವ್ಯಾಘ್ರಪರಾಕ್ರಮಃ, ಅಪ್ರತಿರಥೋಜಿ ವಿಜಿತ್ಯ ಕ್ಷಿತಿಂ ಸುಚರಿತೈರ್ದಿವಂ ಜಯತಿ, ಅಪ್ರತಿರಥೋ ವಿಜಿತ್ಯಕ್ಷಿತಿಮವನೀಶೋ ದಿವಂ ಜಯತಿ ಎಂಬ ಅಲೇಖ್ಯಗಳಲ್ಲೊಂದನ್ನೂ ಹಿಂಬದಿಯಲ್ಲಿ ಲಕ್ಷ್ಮೀ, ಗಂಗಾಮಾತೆ ಅಥವಾ ಪಟ್ಟದ ರಾಣಿ ದತ್ತದೇವಿಯ ಚಿತ್ರದ ಜೊತೆಗೆ ಪರಾಕ್ರಮಃ, ಶ್ರೀವಿಕ್ರಮಃ ಅಪ್ರತಿರಥಃ, ಕೃತಾಂತಪರಶುಃ, ಅಶ್ವಮೇಧಪರಾಕ್ರಮಃ, ವ್ಯಾಘ್ರಪರಾಕ್ರಮಃ, ರಾಜಾ ಸಮುದ್ರಗುಪ್ತಃ, ಸಮುದ್ರಗುಪ್ತಃ ಎಂಬೀ ಅಲೇಖ್ಯಗಳಲ್ಲೊಂದನ್ನೂ ಕಾಣಬಹುದು.



ಗುಪ್ತರ ನಾಣ್ಯಗಳ ಮೇಲೆ ಕಂಡು ಬರುವ ವಿವಿಧ ಚಿಹ್ನೆಗಳು

3. ಎರಡನೆಯ ಚಂದ್ರಗುಪ್ತನ (ಸು.375–415) ಬಂಗಾರ ನಾಣ್ಯಗಳ ಪೈಕಿ ಕೆಲವು ನಾಣ್ಯಗಳ ಮುಂಬದಿಯಲ್ಲೂ ಇನ್ನು ಕೆಲವು ನಾಣ್ಯಗಳ ಹಿಂಬದಿಯಲ್ಲೂ ಇರುವ ಚಿತ್ರಗಳ ಆಧಾರದ ಮೇಲೆ ಈ ನಾಣ್ಯಗಳನ್ನು ಹಲವು ಬಗೆಗಳಾಗಿ ವಿಂಗಡಿಸಬಹುದು. ಬಿಲ್ಲುಗಾರ, ಸಿಂಹಾಂತಕ, ಅಶ್ವಾರೋಹಿ, ಛತ್ರ, ಮಂಚ, ಮಂಚದ ಮೇಲೆ ಆಸೀನರಾಗಿರುವ ರಾಜದಂಪತಿ, ಧ್ವಜ, ಚಕ್ರವಿಕ್ರಮ ಇವು ಈ ಬಗೆಗಳು. ಅಂತೆಯೇ ಇವನ ತಾಮ್ರನಾಣ್ಯಗಳಲ್ಲೂ ಛತ್ರ, ನಿಂತ ರಾಜ, ಬಿಲ್ಲುಗಾರ, ರಾಜನ ಎದೆ ವಿಗ್ರಹ, ಚಕ್ರ ಮತ್ತು ಕಲಶ ಪ್ರರೂಪಗಳಿವೆ. ಇವನ ಬಂಗಾರ ನಾಣ್ಯಗಳ ಮುಂಬದಿಯಲ್ಲಿ ದೇವಶ್ರೀ ಮಹಾರಾಜಾಧಿರಾಜ ಶ್ರೀ ಚಂದ್ರಗುಪ್ತಃ, ಮಹಾರಾಜಾಧಿರಾಜ ಶ್ರೀ ಚಂದ್ರಗುಪ್ತಃ, ಕ್ಷಿತಿಮವಜಿತ್ಯ ಸುಚರಿತೈರ್ದಿವಂಜಯತಿ ವಿಕ್ರಮಾದಿತ್ಯಃ, ಪರಮ ಭಾಗವತೋ ಮಹಾರಾಜಾಧಿರಾಜ ಶ್ರೀ ಚಂದ್ರಗುಪ್ತಃ, ದೇವಶ್ರೀ ನರೇಂದ್ರ ಚಂದ್ರಃ, ಪ್ರಥಿತರಣೋರಣೇ ಜಯತ್ಯಜಯ್ಯೋ ಭುವಿ ಸಿಂಹವಿಕ್ರಮಃ, ವಸುಧಾಂ ವಿಜಿತ್ಯ ಜಯತಿ ತ್ರಿದಿವಂ ಪೃಥ್ವಿವೀಶ್ವರಃ ಪುಣ್ಯೈಃ ಎಂಬೀ ಅಲೇಖ್ಯಗಳಲ್ಲೊಂದು ಹಿಂಬದಿಯಲ್ಲಿ ಲಕ್ಷ್ಮಿಯ ಚಿತ್ರದೊಂದಿಗೆ ಸಾಮಾನ್ಯವಾಗಿ ಶ್ರೀವಿಕ್ರಮಃ, ಸಿಂಹ ವಿಕ್ರಮಃ, ಅಥವಾ ಶ್ರೀಸಿಂಹವಿಕ್ರಮಃ, ಅಜಿತವಿಕ್ರಮಃ, ವಿಕ್ರಮಾದಿತ್ಯಃ, ಪರಮ ಭಾಗವತಃ, ಚಕ್ರ ವಿಕ್ರಮಃ ಎಂಬ ಅಲೇಖ್ಯಗಳಲ್ಲೊಂದೂ ಕಂಡುಬರುತ್ತವೆ.

ಎರಡನೆಯ ಚಂದ್ರಗುಪ್ತನ ಬೆಳ್ಳಿ ನಾಣ್ಯಗಳು ಪಶ್ಚಿಮ ಭಾರತದಲ್ಲಿ ಮಾತ್ರ ದೊರೆತಿವೆ. ಅವುಗಳ ಮುಂಬದಿಯಲ್ಲಿ ರಾಜನ ಎದೆ ಚಿತ್ರವೂ ಗುಪ್ತಶಕದ ವರ್ಷವೂ ಕೆಲವು ನಾಣ್ಯಗಳ ಹಿಂಬದಿಯಲ್ಲಿ ಗರುಡನ ಚಿತ್ರವೂ ಪರಮ ಭಾಗವತ ಮಹಾರಾಜಾಧಿರಾಜ ಶ್ರೀಚಂದ್ರಗುಪ್ತ ವಿಕ್ರಮಾದಿತ್ಯ (ಅಥವಾ ವಿಕ್ರಮಾಂಕಸ್ಯ) ಎಂಬ ಅಲೇಖ್ಯವೂ ಕಂಡುಬರುತ್ತವೆ. ಅದರಂತೆಯೇ ಅವನ ತಾಮ್ರನಾಣ್ಯಗಳ ಹಿಂಬದಿಯಲ್ಲಿ ದೇವತೆ ಅಥವಾ ಗರುಡನ ಚಿತ್ರವೂ ಮಹಾರಾಜ ಶ್ರೀಚಂದ್ರಗುಪ್ತಃ, ಶ್ರೀ ಚಂದ್ರಗುಪ್ತಃ ಅಥವಾ ಚಂದ್ರಗುಪ್ತಃ ಎಂಬ ಅಲೇಖ್ಯಗಳಲ್ಲಿ ಒಂದೂ ಇರುತ್ತವೆ.

4. ಒಂದನೆಯ ಕುಮಾರ ಗುಪ್ತನ (ಸು.415–55) ಆಳ್ವಿಕೆಯಲ್ಲಿ ಹೊರಡಿಸಲಾದ ಬಿಲ್ಲುಗಾರ, ಅಶ್ವಾರೋಹಿ, ಸಿಂಹಾಂತಕ, ವ್ಯಾಘ್ರಾಂತಕ, ಹಸ್ತ್ಯಾರೋಹಿ, ಹಸ್ತ್ಯಾರೋಹಿ–

ಸಿಂಹಾಂತಕ, ಖಡ್ಗಮೃಗಾಂತಕ, ಅಶ್ವಮೇಧ, ಕಾರ್ತಿಕೇಯ, ಛತ್ರ, ಅಪ್ರತಿಘ, ವೀಣಾಪಾಠಕ, ರಾಜದಂಪತಿ ಮತ್ತು ಗರುಡ ಬಂಗಾರ ನಾಣ್ಯಗಳು ದೊರೆತಿವೆ.

ಒಂದನೆಯ ಕುಮಾರಗುಪ್ತನ ಹಲವು ಬಗೆಯ ಅನೇಕ ಬೆಳ್ಳಿ ನಾಣ್ಯಗಳು ಅಂದಿನ ಗುಪ್ತ ಸಾಮ್ರಾಜ್ಯದ ಎಲ್ಲೆಡೆಗಳಲ್ಲೂ ಬೆಳಕಿಗೆ ಬಂದಿವೆ. ಸಾಮಾನ್ಯವಾಗಿ ಈ ನಾಣ್ಯಗಳ ಮುಂಬದಿಯಲ್ಲಿ ರಾಜನ ಎದೆವರೆಗಿನ ಅಥವಾ ಮುಖಮಾತ್ರದ ಚಿತ್ರವೂ ಗುಪ್ತಶಕದ ವರ್ಷವೂ ಕೆಲವು ಗ್ರೀಕ್ ಅಕ್ಷರಗಳೂ ಕಂಡುಬರುತ್ತವೆ; ಹಿಂಬದಿಯಲ್ಲಿ ಗರುಡನ ಚಿತ್ರವೂ ಪರಮ ಭಾಗವತ ಮಹಾರಾಜಾಧಿರಾಜ ಶ್ರೀ ಕುಮಾರಗುಪ್ತ ಮಹೇಂದ್ರಾದಿತ್ಯಸ್ಯ, ಪರಮ ಭಾಗವತ ರಾಜಾಧಿರಾಜ ಶ್ರೀ ಕುಮಾರಗುಪ್ತ ಮಹೇಂದ್ರಾದಿತ್ಯ, ಭಾಗವತ ರಾಜಾಧಿರಾಜ ಶ್ರೀಕುಮಾರಗುಪ್ತ ಮಹೇಂದ್ರಾದಿತ್ಯ, ವಿಜಿತಾವನಿರವನಿಪತಿ ಕುಮಾರಗುಪ್ತೋದಿವಂ ಜಯತಿ ಎಂಬೀ ಅಲೇಖ್ಯಗಳಲ್ಲೊಂದೂ ಕಂಡುಬರುತ್ತವೆ. ಇವನ ಬೆಳ್ಳಿ ಮುಲಾಮಿನ ತಾಮ್ರನಾಣ್ಯಗಳ ಹಿಂಬದಿಯಲ್ಲಿ ಗರುಡ ಅಥವಾ ನವಿಲಿನ ಚಿತ್ರವಿರುತ್ತದೆ. ತಾಮ್ರನಾಣ್ಯಗಳ ಮುಂಬದಿಯಲ್ಲಿ ನಿಂತ ರಾಜನ ಇಲ್ಲವೇ ಯಜ್ಞವೇದಿಕೆಯ ಚಿತ್ರವೂ ಹಿಂಬದಿಯಲ್ಲಿ ಗರುಡನ ಅಥವಾ ದೇವತೆಯೊಬ್ಬಳ ಚಿತ್ರವೂ ಮಹಾರಾಜಶ್ರೀ ಕುಮಾರಗುಪ್ತಃ, ಶ್ರೀಕುಮಾರ ಗುಪ್ತಃ ಅಥವಾ ಕುಮಾರಗುಪ್ತಃ ಎಂಬೀ ಅಲೇಖ್ಯಗಳಲ್ಲೊಂದೂ ಕಂಡುಬರುತ್ತವೆ.

5. ಸ್ಕಂದಗುಪ್ತ (ಸು. 455–68) ಹೊರಡಿಸಿದ ಬಂಗಾರ ನಾಣ್ಯಗಳಲ್ಲಿ ಬಿಲ್ಲುಗಾರ, ರಾಜದಂಪತಿ, ಛತ್ರ ಮತ್ತು ಅಶ್ವಾರೋಹಿ ನಾಣ್ಯಗಳು ದೊರೆತಿವೆ. ಇವುಗಳ ಮುಂಬದಿಯಲ್ಲಿ ನಿಂತ ರಾಜದಂಪತಿಗಳ ಅಥವಾ ರಾಜನ ಚಿತ್ರವೂ ಜಯತಿ ಮಹೀತಲಂ ಸ್ಕಂದಗುಪ್ತಃ ಸುಧನ್ವೀ, ಪರಹಿತಕಾರೀ ಎಂಬ ಅಲೇಖಗಳಲ್ಲೊಂದೂ ಹಿಂಬದಿಯಲ್ಲಿ ಲಕ್ಷ್ಮೀ ಚಿತ್ರವೂ ಶ್ರೀಸ್ಕಂದಗುಪ್ತಃ ಕ್ರಮಾದಿತ್ಯಃ ಎಂಬ ಅಲೇಖ್ಯಗಳ ಲ್ಲೊಂದೂ ಕಂಡುಬರುತ್ತವೆ.

ಇವನ ಬೆಳ್ಳಿ ನಾಣ್ಯಗಳ ಮುಂಬದಿಯಲ್ಲಿ ರಾಜನ ಎದೆವರೆಗಿನ ಅಥವಾ ಮುಖ ಮಾತ್ರದ ಚಿತ್ರವನ್ನೂ ಗುಪ್ತಶಕದ ವರ್ಷವನ್ನೂ ಕೆಲವು ಗ್ರೀಕ್ ಅಕ್ಷರಗಳನ್ನೂ ಹಿಂಬದಿಯಲ್ಲಿ ಗರುಡ, ನಂದಿ, ಯಜ್ಞವೇದಿಕೆ ಅಥವಾ ಚೈತ್ಯದ ಚಿತ್ರವನ್ನೂ ಪರಮ ಭಾಗವತ ಮಹಾರಾಜಾಧಿರಾಜ ಶ್ರೀಸ್ಕಂದಗುಪ್ತಕ್ರಮಾದಿತ್ಯಃ, ಪರಮ ಭಾಗವತ ಶ್ರೀವಿಕ್ರಮಾದಿತ್ಯ ಸ್ಕಂದಗುಪ್ತಃ, ಪರಮಭಾಗವತ ಶ್ರೀಸ್ಕಂದಗುಪ್ತಕ್ರಮಾದಿತ್ಯಃ, ವಿಜಿತಾವನಿರವನಿಪತಿರ್ಜಯತಿದಿವಂ ಸ್ಕಂದಗುಪ್ತಃ, ವಿಜಿತಾವನಿರವನಿಪತಿ ಶ್ರೀಸ್ಕಂದ ಗುಪ್ತೋದಿವಂ ಜಯತಿ, ಮಹಾರಾಜ ಕುಮಾರಗುಪ್ತ ಪರಮ ಮಹಾದಿತ್ಯ ಮಹಾರಾಜಸ್ಕಂದಗುಪ್ತಃ ಎಂಬ ಆಲೇಖ್ಯಗಳಲ್ಲೊಂದನ್ನೂ ಕಾಣಬಹುದಾಗಿದೆ.

ಮೇಲಣ ನಾಣ್ಯಗಳೆಲ್ಲವೂ ಗುಪ್ತ ಸಾಮ್ರಾಜ್ಯವನ್ನಾಳಿದ ಹೆಸರಾಂತ ಚಕ್ರವರ್ತಿಗಳು ಹೊರಡಿಸಿದವು. ಇತರ ಗುಪ್ತ ಅರಸರು ಹೊರಡಿಸಿದ ಹಲವು ಬಂಗಾರದ ಮತ್ತು ಕೆಲವು ಬೆಳ್ಳಿಯ ಹಾಗೂ ತಾಮ್ರದ ನಾಣ್ಯಗಳೂ ದೊರೆತಿವೆ. ಈ ನಾಣ್ಯಗಳ ವಿಚಾರವಾಗಿ ಇತಿಹಾಸಕಾರರಲ್ಲಿ ಭಿನ್ನಾಭಿಪ್ರಾಯಗಳಿವೆ. ಉದಾಹರಣೆಗೆ, ಮುಂಬದಿಯಲ್ಲಿ ಸಿಂಹದಂಥ ಒಂದು ಮೃಗದ ಚಿತ್ರವೂ ಹಿಂಬದಿಯಲ್ಲಿ ರಾಮಗುಪ್ತ ಎಂಬ ಆಲೇಖ್ಯವೂ ಇರುವ ಕೆಲವು ತಾಮ್ರ ನಾಣ್ಯಗಳು 4ನೆಯ ಶತಮಾನದಲ್ಲಿ ಆಳಿರಬಹುದಾದ 2ನೆಯ ಚಂದ್ರಗುಪ್ತನ ಅಣ್ಣ ರಾಮಗುಪ್ತನ ಆಳ್ವಿಕೆಯವೋ 5ನೆಯ ಶತಮಾನದಲ್ಲಿ ರಾಮಗುಪ್ತನೆಂಬ ಯಾವನೋ ತುಂಡರಸ ಹೊರಡಿಸಿದವೋ ಎಂಬ ಬಗ್ಗೆ ವಿದ್ವಾಂಸರಲ್ಲಿ ಒಮ್ಮತವಿಲ್ಲ. ಅಂತೆಯೇ ಸಮುದ್ರಗುಪ್ತನ ಧ್ವಜಪ್ರರೂಪಿ ನಾಣ್ಯಗಳ ಅನುಕರಣೆಗಳಂತೆ ಕಂಡುಬರುವ ಕೆಲವು ಬಂಗಾರ ನಾಣ್ಯಗಳ ಮುಂಬದಿಯಲ್ಲಿ ಚಕ್ರಧ್ವಜವನ್ನು ಹಿಡಿದು ನಿಂತಿರುವ ರಾಜನ ಚಿತ್ರವೂ ಕಾಚೋಗಾಮವಜಿತ್ಯ ದಿವಂ ಕರ್ಮಭಿರುತ್ತಮೈರ್ಜಯತಿ ಎಂಬ ಆಲೇಖವೂ ಹಿಂಬದಿಯಲ್ಲಿ ಸರ್ವ ರಾಜೋಚ್ಛೇತ್ತಾ ಎಂಬ ಆಲೇಖ್ಯವೂ ಇವೆ. ಆ ನಾಣ್ಯಗಳನ್ನು ಹೊರಡಿಸಿದ ಕಾಚ ಎಂಬ ರಾಜ ಸಮುದ್ರಗುಪ್ತನೇ ಇರಬೇಕೆಂದು ಕೆಲವು ವಿದ್ವಾಂಸರೂ ಸಮುದ್ರಗುಪ್ತನ ಅಣ್ಣನೋ ಮಗನೋ ಇರಬೇಕೆಂದು ಇತರರೂ ವಾದಿಸುತ್ತಾರೆ.

ಸ್ಕಂದಗುಪ್ತನ ಅನಂತರ ಗುಪ್ತ ಸಾಮ್ರಾಜ್ಯದ ಇಳಿಗಾಲದಲ್ಲಿ ರಾಜ್ಯವಾಳಿದ 1ನೆಯ ನರಸಿಂಹಗುಪ್ತ ಬಾಲಾದಿತ್ಯ (ಸು.470–72) 2ನೆಯ ಕುಮಾರಗುಪ್ತ (ಸು.472–75), ಬುಧಗುಪ್ತ (ಸು. 475–96), ಪ್ರಕಾಶಾದಿತ್ಯ (ಸು.496–500), ವೈನ್ಯಗುಪ್ತ (ಸು.500–510), 2ನೆಯ ನರಸಿಂಹಗುಪ್ತ ಬಾಲಾದಿತ್ಯ (ಸು.518–32), 3ನೆಯ ಕುಮಾರಗುಪ್ತ (ಸು.532–40), ಮತ್ತು ವಿಷ್ಣುಗುಪ್ತ ಎಂಬ ದೊರೆಗಳ ಬಂಗಾರ ನಾಣ್ಯಗಳೂ, ಬುಧಗುಪ್ತನ ಕೆಲವು ಬೆಳ್ಳಿ ನಾಣ್ಯಗಳೂ ಬೆಳಕಿಗೆ ಬಂದಿವೆ. ಗುಪ್ತರ ನಾಣ್ಯಗಳ ರಚನಾಶೈಲಿಯನ್ನನುಕರಿಸಿ 6–7ನೆಯ ಶತಮಾನಗಳಲ್ಲಿ ಉತ್ತರ ಭಾರತದ ಕೆಲವು ಅರಸರು ಹೊರಡಿಸಿದ ನಾಣ್ಯಗಳೂ ದೊರೆತಿವೆ. (ಕೆ.ವಿ.ಆರ್.)

**ಗುಪ್ತರ ವಾಸ್ತು ಮತ್ತು ಶಿಲ್ಪಕಲೆ :** ಗುಪ್ತರ ಕಾಲದಲ್ಲಿ ಅನೇಕ ದೇವಾಲಯಗಳು ನಿರ್ಮಾಣವಾದ ಬಗ್ಗೆ ಶಾಸನಗಳು ಉಲ್ಲೇಖಿಸುತ್ತವೆ. ಆದರೆ ದೇಗುಲ ವಾಸ್ತು ಉದಾಹರಣೆಗಳು ಉತ್ತರ ಭಾರತದ ಕೆಲವೆಡೆ ಮಾತ್ರ ಉಳಿದುಬಂದಿವೆ. ಇವಾವುದನ್ನೂ ಗುಪ್ತ ಅರಸರ ನೇರ ಪ್ರೋತ್ಸಾಹದಿಂದ ರಚಿತವಾದುದೆಂಬುದಾಗಿ ಗುರುತಿಸುವಂತಿಲ್ಲ. ಇವು ಇಟ್ಟಿಗೆ ಇಲ್ಲವೆ ಶಿಲೆಯಿಂದ ನಿರ್ಮಿತವಾಗಿವೆ. ಕಲ್ಲಿನ ನಿಕ್ಷೇಪಗಳ ಕೊರತೆಯಿರುವ ಮಧ್ಯದೇಶದಲ್ಲಿ (ಉತ್ತರ ಪ್ರದೇಶ ಮತ್ತು ಅದಕ್ಕೆ ಹೊಂದಿಕೊಂಡಿರುವ ಪ್ರದೇಶಗಳಲ್ಲಿ) ಇಟ್ಟಿಗೆಯ ದೇಗುಲಗಳು ನಿರ್ಮಾಣವಾದವು. ಇವುಗಳಲ್ಲಿ ಕೆಲವೇ ಕೆಲವು ಮಾತ್ರ ಉಳಿದಿವೆ. ಸಾಮ್ರಾಜ್ಯದ ದಕ್ಷಿಣ ಭಾಗದಲ್ಲಿ ಶಿಲಾನಿಕ್ಷೇಪಗಳು ಸಮೃದ್ಧವಾಗಿವೆ. ಆದುದರಿಂದ ಈ ಪ್ರದೇಶದಲ್ಲಿ ಕೆಲವು ಶಿಲಾ ದೇಗುಲ ವಾಸ್ತು ಉದಾಹರಣೆಗಳು ಲಭ್ಯವಾಗಿವೆ. ಆದರೆ ಇವುಗಳಲ್ಲಿ ಗುಪ್ತರ ಕಾಲದ ಉತ್ತರಾರ್ಧದ ಉದಾಹರಣೆಗಳೇ ಹೆಚ್ಚು. ಕಟ್ಟಡ ಅಥವಾ ರಚನ ವಾಸ್ತುವಿಗೆ ಈ ಕಾಲದಲ್ಲಿ ಪ್ರಾಧಾನ್ಯ ಬಂದು ದೇಗುಲಗಳಿಗೆ ಶಿಲಾಮಾಧ್ಯಮದ ಬಳಕೆ ಹೆಚ್ಚಾಯಿತು. ಹೀಗಾಗಿ ಮುಂಚಿನ ಕಟ್ಟಿಗೆಯ ವಾಸ್ತುವಿನ ಉದಾಹರಣೆಗಳ ಅನುಕರಣೆಯ ಬದಲು ವಾಸ್ತು ಶಿಲ್ಪಿಗಳು ದೃಢತೆ, ಪ್ರಮಾಣ ಮತ್ತು ಸಮತೋಲನದ ಸಮಸ್ಯೆಗಳ ಬಗ್ಗೆ ಹೆಚ್ಚು ಲಕ್ಷ್ಯವಹಿಸಿದ್ದು ಕಾಣುತ್ತದೆ.

ಗುಪ್ತರ ಕಾಲದ ದೇವಾಲಯಗಳು ಸ್ವರೂಪದಲ್ಲಿ ವೈವಿಧ್ಯಮಯವಾಗಿವೆ. ಈಗ ಉಳಿದುಬಂದಿರುವ ತೀರ ಸರಳ ಮತ್ತು ಜನಪ್ರಿಯ ರೀತಿಯ ದೇಗುಲಗಳಿಗೆ ಚೌಕ ವಿನ್ಯಾಸವುಳ್ಳ, ಸಮತಟ್ಟಾದ ಚಾವಣಿಯುಳ್ಳ ಗರ್ಭಗೃಹವಿದೆ. ಇದಕ್ಕೆ ಅಂಟಿಕೊಂಡಂತೆ ಮುಂದುಗಡೆ ಚಿಕ್ಕಗಾತ್ರದ ಕುಳ್ಳಗಿನ ತೆರೆದ ಮುಖಮಂಟಪವಿದೆ. ಗರ್ಭಗೃಹಕ್ಕೆ ಮುಖಮಂಟಪದ ಮೂಲಕ ಒಂದೇ ಪ್ರವೇಶವಿದ್ದು ಕಿಂಡಿಗಳಿರುವುದಿಲ್ಲ. ಮುಖಮಂಟಪದ ಕಂಬದ ಕೆಳಭಾಗ ಚೌಕವೂ ಅಲಂಕಾರರಹಿತವೂ ಆಗಿದ್ದು ಪೀಠದ ಅಭಾಸ ನೀಡುತ್ತದೆ. 8 ಇಲ್ಲವೇ 16 ಮುಖಗಳಿರುವ ಕಂಬದ ಕಾಂಡಭಾಗ ದುಂಡಗಿನ ದಂಡದಂತಹ ರೂಪು ಪಡೆದಿದೆ. ಕಾಂಡದ ಮೇಲ್ಗಡೆ ಘಟಪಲ್ಲವ ಅಲಂಕರಣವಿದ್ದು ಅದರ ಮೇಲಿರುವ ಗುರುತರ ಫಲಕ ಸಿಂಹಬೋದಿಗೆಯನ್ನು ಹೊತ್ತಿರುತ್ತದೆ. ಮುಖಮಂಟಪದ ಮುಖದಲ್ಲಿರುವ ನಾಲ್ಕು ಕಂಬಗಳ ಸಾಲಿನಲ್ಲಿ ಮಧ್ಯದ ಜೋಡಿಯ ನಡುವಿನ ಅಂತರ ಪಾರ್ಶ್ವದ ಜೋಡಿಗಳ ನಡುವಿನ ಅಂತರಕ್ಕಿಂತ ಹೆಚ್ಚಾಗಿರುತ್ತದೆ. ಸಾಲಂಕೃತ ದ್ವಾರಬಂಧದ ಮೇಲ್ಗಡೆ ಉತ್ತರಾಂಗವಿರುತ್ತದೆ. ಇಂತಹ ಸರಳ ವಿನ್ಯಾಸದ ವಾಸ್ತುವಿನಿಂದ ಕ್ರಮೇಣ ಭಾರತೀಯ ದೇಗುಲವಾಸ್ತು ಸಂಕೀರ್ಣರೂಪಪದ್ದಾಗಿ ಅಭಿವೃದ್ಧಿಹೊಂದಿದೆ. ಎತ್ತರವಾದ ಜಗತಿ, ಪ್ರದಕ್ಷಿಣಾಪಥದ ಸೇರ್ಪಡೆ ಮತ್ತು ಶಿಖರ ರಚನೆಗಳು ಮೊದಲ ಮಾರ್ಪಾಡುಗಳು. ಅನಂತರದ ಬೆಳವಣಿಗೆಯಲ್ಲಿ ಮೂಲ ದೇಗುಲದ ಸುತ್ತ ಉಪದೇಗುಲಗಳನ್ನು ರಚಿಸಲಾಗಿದೆ.

ಗುಪ್ತರ ಕಾಲದ ದೇಗುಲಗಳ ಬಹು ಅಲಂಕೃತ ಭಾಗವೆಂದರೆ ದ್ವಾರಬಂಧ. ಇದು ರೋಮನ್ (ಲ್ಯಾಟಿನ್) ಲಿಪಿಯ ಟಿ ಆಕಾರದಲ್ಲಿರುವುದು ಸಾಮಾನ್ಯ. ದ್ವಾರಬಂಧದ ಭುಜಗಳನ್ನು ಅನೇಕ ಶಾಖೆಗಳಾಗಿ ಅಲಂಕರಿಸಿದೆ. ಪ್ರಾಣಿ, ಹೂಬಳ್ಳಿ, ಮಿಥುನ, ಗಣ, ದೇವತೆಗಳ ಸಾಲುಗಳು ಶಾಖೆಗಳ ಅಲಂಕರಣಕ್ಕೆ ಬಳಕೆಯಾಗಿವೆ. ದ್ವಾರಬಂಧದ ಮೇಲ್ಭಾಗದ ಪಾರ್ಶ್ವಗಳಲ್ಲಿ ಇಲ್ಲವೇ ಭುಜಗಳ ಕೆಳ (ಪೇದ್ಯಾ) ಭಾಗದಲ್ಲಿ ಗಂಗಾ ಮತ್ತು ಯಮುನಾ ನದೀದೇವತೆಗಳ ವಿಗ್ರಹಗಳಿರುವುದು ಸಾಮಾನ್ಯವಾಗಿ ಈ ಕಾಲದ ದೇವಾಲಯಗಳ ವಿಶೇಷ, ಲಲಾಟದಲ್ಲಿ ದೇವತೆಯ ಬಿಂಬವನ್ನು ಅಳವಡಿಸಲಾಗಿರುತ್ತದೆ. ದೇಗುಲಗಳ ಸುತ್ತ ಬಿಡಿಯಾಗಿ ದೊರೆತಿರುವ ಜಾಲಂಧ್ರಗಳು, ಪ್ರನಾಲಗಳು, ಆಮಲಕಗಳು, ಅಲಂಕಾರಪೂರಿತ ವಾಸ್ತುಭಾಗಗಳು ಶುದ್ಧ ಗುಪ್ತ ಶೈಲಿಯ ಅಲಂಕಾರ ವಿನ್ಯಾಸದ ಪ್ರಮುಖ ಲಕ್ಷಣಗಳು. ಕೆಲವು ದೇವಾಲಯಗಳ ಗೋಡೆಗಳಲ್ಲಿ ಮಾತ್ರ ಕೋಷ್ಠಗಳಿದ್ದು ಇವು ದೊಡ್ಡ ಗಾತ್ರದ ದೇವತಾ ಶಿಲ್ಪಗಳನ್ನೊಳಗೊಂಡಿವೆ. ಇವುಗಳಲ್ಲಿ ಟಿ ಆಕಾರದ ದ್ವಾರಬಂಧ, ದ್ವಾರಬಂಧದ ಭುಜಗಳನ್ನು ಶಾಖೆಗಳಾಗಿ ಅಲಂಕರಿಸುವ ಪದ್ಧತಿ, ಹೂ–ಎಲೆ–ಬಳ್ಳಿಗಳ ವಿನ್ಯಾಸ, ಚೌಕಖಾನೆಗಳ ವಿನ್ಯಾಸಕ್ರಮ ಮುಂತಾದ ಹಲವು ಅಂಶಗಳ ಮೂಲವನ್ನು ಕುಷಾಣಕಾಲೀನ ಮಥುರ ಮತ್ತು ಗಾಂಧಾರ ಶಿಲ್ಪ ಪರಂಪರೆಯಲ್ಲಿ ಕಾಣಬಹುದು.

ಈ ಹಿನ್ನೆಲೆಯಲ್ಲಿ ಗುಪ್ತರ ಕಾಲದ ದೇಗುಲಗಳನ್ನು ಮೂರು ಗುಂಪುಗಳಾಗಿ ವರ್ಗೀಕರಿಸಬಹುದು: 1. ಸಮತಟ್ಟಾದ ಚಾವಣಿಯುಳ್ಳ, ಚೌಕ ಗರ್ಭಗೃಹವಿರುವ, ಚಿಕ್ಕ ಮುಖಮಂಟಪವನ್ನೊಳಗೊಂಡ ದೇಗುಲಗಳು. ಇದಕ್ಕೆ ಸಾಂಚಿಯ 17ನೆಯ ಗುಡಿ ಮತ್ತು ತಿಗಾವದ ಕಂಕಾಲೀದೇವಿ ಗುಡಿ ಉದಾಹರಣೆಗಳು. 2. ಗರ್ಭಗೃಹದ ಸುತ್ತ ಪ್ರದಕ್ಷಿಣಾಪಥ ವಿರುವ ದೇಗುಲಗಳು. ಇದಕ್ಕೆ ನಾಚ್ನಾ ಕುಠಾರದ ಪಾರ್ವತಿ ದೇವಾಲಯ ಹಾಗೂ ಭೂಮರಾದ ಶಿವ ದೇವಾಲಯ ಒಳ್ಳೆಯ ಉದಾಹರಣೆಗಳು.